ಕರ್ನಾಟಕ ವಿಧಾನ ಸಭೆ

ಬುಧವಾರ 28ನೇ ಮಾರ್ಚ್ 2007 ರಂದು

ಸದನವು ವಿಧಾನಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 10 · 30 ಗಂಟೆಗೆ ಸಮಾವೇಶಗೊಂಡಿತ್ತು

ಅಧ್ಯಕ್ಷರು ಶ್ರೀ ಕೃಷ್ಣರವರು ಪೀಠವನ್ನು ಅಲಂಕರಿಸಿದ್ದರು

(ಸದನದ ಕಲಾಪವು ಸಮಯ ಬೆಳಿಗ್ಗೆ 10 47 ಕ್ಕೆ ಪ್ರಾರಂಭವಾಯಿತು ಮಾನ್ಯ ಸಭಾಧ್ಯಕ್ಷರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ಅಧ್ಯಕ್ಷರು . ಮಾನ್ಯ ಈಗ ವಿತ್ತಿಯ ಕಾರ್ಯಕಲಾಪ, ಮಾನ್ಯ ವಿರೋಧಪಕ್ಷದ ನಾಯಕರೆ, ಪ್ರಾರಂಭ ಮಾಡಿ

1 ವಿತ್ತೀಯ ಕಾರ್ಯಕಲಾಪ

2007–08 ನೇ ಸಾಲಿನ ಆಯವ್ಯಯದ ಮೇಲೆ ಸಾಮಾನ್ಯ ಚರ್ಚೆ

ಶ್ರೀ ಎನ್ ಧರ್ಮಸಿಂಗ್(ವಿರೋಧ ಪಕ್ಷದ ನಾಯಕರು) – ಮಾನ್ಯ ಅಧ್ಯಕ್ಷರೆ, ನಾವು ನಿನ್ನೆ ಕೂಡ ಬಜೆಟ್ ಮೇಲೆ ಚರ್ಚೆ ಪ್ರಾರಂಭ ಮಾಡಬೇಕೆಂದು ಇದ್ದೆವು ಆದರೆ ಮಾನ್ಯ ಉಪ ಮುಖ್ಯಮಂತ್ರಿಯವರು, ಮೇಲ್ಮನೆಯಲ್ಲಿ supplementeary demand ಮೇಲೆ ಉತ್ತರವನ್ನು ಕೊಡುತ್ತಿದ್ದುದರಿಂದ, ನಿಯಮ 69 ರ ಮೇಲಿನ ಚರ್ಚೆಯನ್ನು ತೆಗೆದುಕೊಳ್ಳಲಾಯಿತು ನಾವು ಇನ್ನು ಬೇರೆ ಬೇರೆ ವಿಚಾರಗಳನ್ನು ಬಹಳಷ್ಟು ಪ್ರಸ್ತಾಪ ಮಾಡುವಂಥಾದ್ದು ಇದೆ ಆದರೂ ಕೂಡ ನಾವು ಮತ್ತು ಮಾನ್ಯ ಜಿ ವಿ ಶ್ರೀರಾಮರೆಡ್ಡಿಯವರು, ಮಾನ್ಯ ವಾಟಾಳ್ ನಾಗರಾಜ್‌ರವರು ಮತ್ತು ಮಾನ್ಯ ಕೆ ಆರ್ ರಮೇಶ್‌ಕುಮಾರ್‌ರವರು ಇವತ್ತು ಬಜೆಟ್ ಮೇಲೆ ಚರ್ಚೆ ಪ್ರಾರಂಭ ಮಾಡಬೇಕೆಂದು ನಿರ್ಣಯಕ್ಕೆ ಬಂದಿದ್ದೇವೆ ಈಗ ನಮ್ಮ ಪಕ್ಷದ ಕಡೆಯಿಂದ 20 ಜನ ಸದಸ್ಯರು ಚರ್ಚೆಯಲ್ಲಿ ಭಾಗವಹಿಸುವವರಿದ್ದಾರೆ ಬೇರೆ ವಿಚಾರಗಳ ಬಗ್ಗೆ ಮಾತನಾಡಲು ಇನ್ನು

ದಿನಾಂಕ 02–04–07, 03–04–07, 04–04–07, ಹಾಗೂ ದಿನಾಂಕ 05–04–07 ರಂದು ಸೆಷನ್ ಇದೆ ಆಗ ಮಾತನಾಡಬಹುದು ಈ ದಿವಸ ಬಜೆಟ್ ಮೇಲೆ ಚರ್ಚೆ ಪ್ರಾರಂಭವಾಗಲಿ ಎಂದು ಹೇಳಿದೇವು ಮಾನ್ಯ ಬಿ ಎಸ್ ಯಡಿಯೂರಪ್ಪನವರು ದಿನಾಂಕ 16–03–07 ರಂದು ಸದನದಲ್ಲಿ ಬಜೆಟ್ ಮಂಡಿಸಿದ್ದಾರೆ ಬಜೆಟ್ ಮಂಡನೆಯ ಪೂರ್ವದಲ್ಲಿ ಯಾವ್ಯಾವ ವಿಷಯಗಳ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ, ಅದು 3,4, ತಿಂಗಳುಗಳಿಂದ ಪತ್ರಿಕೆಯಲ್ಲಿ ಬರುತ್ತಿದೆ ಒಂದು ವಿಚಾರವನ್ನು ಮಾಡುವ ರೀತಿಯಲ್ಲಿ ತಮ್ಮದೇ ಆದಂತಹ ಧಾಟಿಯಲ್ಲಿ ಮಂಡನೆ ಮಾಡಿದ್ದಾರೆ ಮತ್ತು ಬಹಳ ದಿವಸಗಳಾದ ಮೇಲೆ ಅವರ ಕನಸು ನನಸಾಗಿದೆ ಅವರು ಸರ್ಕಾರದಲ್ಲಿ ಬಂದು, ಅದರಲ್ಲೂ ವಿಶೇಷವಾಗಿ ರಾಜ್ಯದ ಉಪ ಮುಖ್ಯಮಂತ್ರಿಗಳಾಗಿ, ಹಣಕಾಸಿನ ಮಂತ್ರಿಗಳಾಗಿ, ಇವತ್ತಿನ ದಿವಸ ಈ ರಾಜ್ಯದ ಜನತೆಯ ಕಷ್ಟವನ್ನು ಎದುರಿಗಿಟ್ಟುಕೊಂಡು, ಸಮಸ್ಯೆಗಳನ್ನು ಎದುರಿಗಿಟ್ಟುಕೊಂಡು, ಬಹಳ ದಿವಸಗಳಿಂದ ಕಾಡುತ್ತಿರುವಂಥ ರೈತರ ಸಮಸ್ಯೆಗಳನ್ನು ಎದುರಿಗಿಟ್ಟುಕೊಂಡು ಬಹಳಷ್ಟು ವಿಚಾರಗಳನ್ನು ಬಜೆಟ್‌ನಲ್ಲಿ ಹೇಳಿದ್ದಾರೆ ಈಗ ಏನಾದರೂ ಆಯಿತೆಂದರೆ, ಮಾನ್ಯ ಕೆ ಎಸ್ ಈಶ್ವರಪ್ಪನವರು ಎದ್ದು ಬಿಡುತ್ತಾರೆ ಅವರು ಪಕ್ಕದಲ್ಲೇ ಕುಳಿತಿರುತ್ತಾರೆ ಆದರೆ ಒಂದು ವಿನಂತಿ ಏನೆಂದರೆ, ಇವತ್ತು ಬಜೆಟ್ ಮೇಲೆ ಮಾತನಾಡುವಂಥ ಕಾಲದಲ್ಲಿ ಸ್ಪಷ್ಟವಾದ ವಿಚಾರಗಳನ್ನು ನಾವು ಪ್ರಕಟಮಾಡಬೇಕಾಗುತ್ತದೆ ಅದರಲ್ಲಿ ಯಾವ ಕಡೆಯೊಂದ ಕೂಡ ಆಘಾತ ಆಗಬಾರದು ನಿನ್ನೆ ಸ್ಥಳೀಯ ಸಂಸ್ಥೆಗಳ ಚುನಾವಣಾ ಬಗ್ಗೆ ಮಾತಾಗಿದ್ದು, ಇವತ್ತು ಬಿ ಜೆ ಪಿ ಬಜೆಟ್ ಇದೆ, ಇದನ್ನು ಸಾರಿ ಸಾರಿ ಎಲ್ಲಾ ಕಡೆ ನಾವು ಹೇಳಬೇಕೆನ್ನುವ ಮಾತನ್ನು ಹೇಳಿದ್ದಾರೆ ನಾನು ಕೂಡ ಈ ಸದನದಲ್ಲಿ 1978 ರಿಂದ ಕೆಲಸ ಮಾಡಿಕೊಂಡು ಬಂದಿದ್ದೇನೆ ಕೊನೆಯದಾಗಿ, ರಾಜ್ಯದ ಮುಖ್ಯಮಂತ್ರಿಯಾಗಿ ಸಹ ಕೆಲಸ ಮಾಡಿದ್ದೇನೆ 2006–07 ರ ಸಾಲಿನ ಬಜೆಟ್‌ನಲ್ಲಿ ಏನು ಪ್ರಕಟ ಮಾಡಿದ್ದೀರಿ, ಅದರಲ್ಲಿ ಹಣವೇ ಖರ್ಚಾಗಿಲ್ಲ ಎಂದು ನಾವು ಬಹಳಷ್ಟು ಸಲ ಬಹಿರಂಗವಾಗಿ ಹೇಳಿದ್ದೇವೆ ಆದರೆ, ಮಾನ್ಯ ಉಪ ಮುಖ್ಯಮಂತ್ರಿಗಳು –ಇಲ್ಲ 36% ಆಗಿದೆ, ನಂತರ 43% ಆಗಿದೆ, ಕಡೆಗೆ ಪ್ರತಿ ಶತ 53 ರಷ್ಟು ಹಣ ಖರ್ಚಾಗಿದೆ ಎನ್ನುವ ಮಾತನ್ನು ಹೇಳಿದರು ಪುನಃ 93% ಹಣವನ್ನು ನಾವು

ಖರ್ಚು ಮಾಡಿದ್ದೇವೆಂದು ಇವತ್ತು ಅವರು ಹೇಳುತ್ತಾರೆ ಮಾನ್ಯ ಅಧ್ಯಕ್ಷರೇ ಇದೆಲ್ಲಕ್ಕಿಂತಲೂ ಕೂಡ ಮುಖ್ಯವಾದದ್ದು ಇದ್ದು, ತಾವು ನಮ್ಮ ರಕ್ಷಣೆಗೆ ಬರಬೇಕು ರಾಜ್ಯದ ಬಜೆಟ್ ಮಂಡನೆ ಮಾಡತಕ್ಕಂಥ ಕಾಲದಲ್ಲಿ ಇಲ್ಲಿಯವರೆಗೆ ಮಾಡತಕ್ಕಂಥ ಖರ್ಚು ಎಷ್ಟಾಗಿದೆ? ಯಾವ್ಯಾವ ಖಾತೆಗಳಿಗೆ ಹಣವನ್ನು ಬಿಡುಗಡೆ ಮಾಡಿದ್ದೀರಿ? you have to submit performance Budget ನಾನು ನಗರಾಭಿವೃದ್ಧಿ ಮತ್ತು ವಸತಿ ಇಲಾಖೆಯ ಮಂತ್ರಿಯಾಗಿ ಕೆಲಸ ಮಾಡಿದ್ದೇನೆ ಆಗ ನಮ್ಮ ವಾಟಾಳ್ ನಾಗರಾಜ್‌ರವರು ಇದ್ದರು ದಿವಂಗತ ಗುಂಡೂರಾವ್‌ರವರು ರಾಜ್ಯದ ಮುಖ್ಯಮಂತ್ರಿಯಾಗಿದ್ದಾಗ ಒಂದೇ ಇಲಾಖೆಯ ಮೇಲೆ 3 ದಿವಸಗಳ ಕಾಲ ಚರ್ಚೆಯಾಗಿದೆ ಒಂದೊಂದು ಸಂದರ್ಭ ಹೀಗೆ ಬಂದಿದೆ ಪ್ರೊ॥ ಲಕ್ಷ್ಮಿಸಾಗರ್‌ರವರು ಈ ಕಡೆ ಇದ್ದರು ಇದು ಮಾನ್ಯ ರಮೇಶ್‌ಕುಮಾರ್‌ರವರಿಗೆ ಗೊತ್ತಿರಬಹುದು ಹಾಗಾಗಿ ಎಲ್ಲಾ ಕಡೆಯ ಸಂಶಯ ಹೋಗಲಾಡಿಸತಕ್ಕಂಥ ರೀತಿಯಲ್ಲಿ Performance Budget ತಾವು ಇಡದಿದ್ದರೆ ನಾವು ಹೇಗೆ ಮಾತನಾಡಬೇಕು? ಇವತ್ತು ನೀವು ಸಾರಾಸಗಟಾಗಿ ಸಾಲ ಮನ್ನಾ ಮಾಡುತ್ತಿದ್ದೇನೆ, ಮಾಡಿದ್ದೇನೆ ಎಂದು ಹೇಳುತ್ತೀರಿ ನಿನ್ನೆ ಮುಂಗಡಪತ್ರದಲ್ಲಿ ಅಲ್ಲಿ ಕೂಡ ಹೇಳಿಕೆ ಕೊಟ್ಟಿದ್ದೀರಿ ಅದರ ಬಗ್ಗೆ ನಂತರ ಹೇಳುತ್ತೇನೆ ಇವತ್ತು ನಮಗೆ Performance Budget ಒದಗಿಸಬೇಕಾಗಿತ್ತು ಆದರೆ, ಒದಗಿಸಿಲ್ಲ ಹಾಗೇಕೆ ಮಾಡಿದಿರಿ? ರಾಜ್ಯದ ಅಧಿಕಾರಿಗಳು ನಮ್ಮ ಹತೋಟಿಯಲ್ಲಿ ಇದ್ದಾರೆಯೋ, ಇಲ್ಲವೋ ಗೊತ್ತಿಲ್ಲ ಈ ಮಾತನ್ನು ಏಕೆ ಹೇಳಬೇಕಾಗುತ್ತದೆ ಎಂದರೆ, ರಾಜ್ಯದ ಹಣಕಾಸಿನ ಸಚಿವರಿಗೆ ಇಲ್ಲಿಯವರೆಗೆ ಇಲಾಖೆ ನೋಡಿಕೊಳ್ಳತಕ್ಕಂಥ Principal Secretary ಯವರನ್ನೇ ನೇಮಿಸಿಲ್ಲ Sri Subramanyam ರವರು ಇದ್ದಾರೆ He is also very competent man ಏಕೆಂದರೆ, ಅವರು 25 ವರ್ಷಗಳ ಹಿಂದೆ IAS Officer ಆಗಿ ಜೀವರ್ಗಿಯಲ್ಲಿ ಕೆಲಸ ಮಾಡಿದ್ದಾರೆ ಅಲ್ಲಿಂದಲೂ ಅವರು ನನಗೆ ಗೊತ್ತಿದೆ 35 ವರ್ಷಗಳಲ್ಲಿ ಸಾಕಷ್ಟು ಅಧಿಕಾರಿಗಳು ಯಾರು ಎಲ್ಲಿ ಕೆಲಸ ಮಾಡುತ್ತಿದ್ದಾರೆ ಎಲ್ಲಿ commitment ಇದೆ, ಇವೆಲ್ಲವೂ ಕೂಡ ನನಗೆ ಗೊತ್ತಿದೆ ಆದರೆ ಇನ್ನೂ ಸಹ ನಿಮಗೆ ಒಬ್ಬ Principal Secretary ಯವರನ್ನು ಕೊಟ್ಟಿಲ್ಲ ನಿಮಗೆ ಮತ್ತು ಅವರಿಗೆ ಏನಾದರೂ ಭಿನಾಭಿಪ್ರಾಯ ಇದೆ ಎನ್ನತಕ್ಕಂಥ ಮಾತು ಕೂಡ

ಬರುತ್ತದೆ ಈಗ ನಾನು ಬಜೆಟ್ ಮೇಲೆ ಮಾತನಾಡುವ ಪೂರ್ವದಲ್ಲಿ – "ನನ್ನ ಬಜೆಟ್ ಬಗ್ಗೆ ಮನೆ ಮನೆಯಲ್ಲಿ ಚರ್ಚೆಯಾಗುತ್ತಿದೆ, ರೈತರು ಮಾತನಾಡುತ್ತಿದ್ದಾರೆ, ನಿಮಗೆಲ್ಲ ಬಹಳ ಹೊಟ್ಟೆಯುರಿಯಾಗಿದೆ, ಯಡಿಯೂರಪ್ಪನವರ ಬಗ್ಗೆ ಬಜೆಟ್‌ನ ಬಗ್ಗೆ ಚರ್ಚೆಯಾಗುತ್ತಿದೆ" ಎಂದು ಹೇಳಿದರು I am getting the phone call from my constituency from outside the state "ವಿರೋಧ ಪಕ್ಷದಲ್ಲಿ ಕುಳಿತು ಏನು ಮಾಡುತ್ತಿದ್ದೀರಾ? ಸಾಲ ಮನ್ನಾದ ಬಗ್ಗೆ ಈಗ ನಾವೆಲ್ಲ ಕೊಡಬೇಕಾಗಿದೆ" ಎಂದು ಹೇಳುತ್ತಿದ್ದಾರೆ ಅವರ ಮನೆಯಲ್ಲಿರತಕ್ಕಂಥ ಹಂಡೆಪಂಡೆ ಏನೋ ಹೇಳುತ್ತೇವಲ್ಲ, ಇತ್ಯಾದಿ ಮಾರಿ ಕೊಡಬೇಕಾಗುತ್ತಿದೆ ಎಷ್ಟು ಇಕ್ಕಟ್ಟಿಗೆ ಸಿಲುಕಿಸಿದ್ದಾರೆನ್ನುವ ಮಾತು ಕೂಡ ಬರುತ್ತಿದೆ ಬೇರೆ ಕಡೆಗೆ ಬೇಕಾಗಿಲ್ಲ ನಿನ್ನೆ ಪ್ರಜಾವಾಣಿ editorial ಅನ್ನು ತಾವು ಓದಿರಿ ಪ್ರಜಾವಾಣಿ ಪ್ರಮುಖವಾದ ಪತ್ರಿಕೆ ಗುರುಸ್ವಾಮಿಯವರು ಪ್ರಾರಂಭ ಮಾಡಿರತಕ್ಕಂಥ ಪತ್ರಿಕೆ ಇದಾಗಿದೆ ಕನ್ನಡ ನಾಡಿನ ಜನರಿಗೆ ಪ್ರಜಾವಾಣಿ ಬಹಳಷ್ಟು ಸೇವೆ ಮಾಡಿದೆ ಪ್ರಜಾವಾಣಿ editorial ನೋಡಿ ಈ ಸರ್ಕಾರಕ್ಕೆ ಏನಾದರೂ ಮಾಡತಕ್ಕಂಥ ಮನಸ್ಸು ಇದೆಯೇ ಅಥವಾ ಇಲ್ಲವೇ? ಯಾವ ಸರ್ಕಾರ ಯಾವ ರೀತಿಯಾಗಿ ನಡೆದುಕೊಳ್ಳುತ್ತಿದ್ದಾರೆಂದು ಬಹಳ ಸ್ಪಷ್ಟವಾಗಿ ಹೇಳಿದ್ದಾರೆ ನಾನು ಹೇಳುತ್ತಿಲ್ಲ ಇದನ್ನು ಧರ್ಮಸಿಂಗ್ ಹೇಳುತ್ತಿಲ್ಲ ಅಥವಾ ವಿರೋಧ ಪಕ್ಷದ ಸ್ಥಾನದಲ್ಲಿ ಕುಳಿತಂಥ ಇತರ ಹಿರಿಯ ಸದಸ್ಯರು ಹೇಳುತ್ತಿಲ್ಲ ನಿನ್ನೆ ಪ್ರಜಾವಾಣಿಯಲ್ಲಿ ಬಂದಂಥ ಸಂಪಾದಕೀಯ ಏನಿದೆ, ಇವತ್ತು ವಿಜಯಕರ್ನಾಟಕದಲ್ಲಿ ಬಂದಂಥ ಸಂಪಾದಕೀಯವೇನಿದೆ, ಸೈಕಲ್ ಕೊಟ್ಟೆವು ಎಂದು ಹೇಳಿದರು, ಸೈಕಲ್ ಕೊಳ್ಳುವಾಗ ಅದಕ್ಕೆ ಟೆಂಡರ್ ಏನೂ ಕರೆದಿಲ್ಲ ಸೈಕಲ್‌ಗಳ ಸ್ಕ್ರ್ಯೂ ಎಲ್ಲ ಮುರಿದು ಹೋಗಿದೆ ಎನ್ನುವ ಬಗ್ಗೆ ವಿಜಯ ಕರ್ನಾಟಕ ಪತ್ರಿಕೆಯಲ್ಲಿ ಬಂದಿದೆ ಈ ಪತ್ರಿಕೆ ಅವರದು, ನಮ್ಮದಲ್ಲ_ ಕಾಂಗ್ರೆಸ್‌ನವರದು ಒಂದು ಪೇಪರ್ ಸಹ ಇಲ್ಲ ನಾವು ಅದರ ಮೇಲೆ ಏನೂ ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ ನಿನ್ನೆ ಪ್ರಜಾವಾಣಿ ಪತ್ರಿಕೆ ಸಮ್ಮಿಶ್ರ ಸರ್ಕಾರದ ಬಗ್ಗೆ ಸಾಕಷ್ಟು ಹೊಗಳಿದ್ದಾರೆ, ಚೆನ್ನಾಗಿ ಕೆಲಸ ಮಾಡುತ್ತೀರೆನ್ನುವ ರೀತಿಯಲ್ಲಿ ಹೇಳಿದಾಗ, ಇವತ್ತು ಪ್ರಜಾವಾಣಿ ಪೇಪರ್ ನಲ್ಲಿ –ಬರಗಾಲಕ್ಕೆ ತುತ್ತಾಗಿ ಜನ ಸಾಯುತ್ತಿದ್ದಾರೆ, ಈ ರಾಜ್ಯದಲ್ಲಿ ನೀರಿಲ್ಲದೆ ಹಾಹಾಕಾರ ಇದೆ, ಈ ರಾಜ್ಯದಲ್ಲಿ

ವಿದ್ಯಾರ್ಥಿಗಳ ಸಮಸ್ಯೆ ಇದೆ, ಇವರಿಗೇನಾದರೂ ಕೂಡ ಎಕನಾಮಿಕ್ ಪ್ರಜ್ಞೆ ಇದೆಯೇ ಅಥವಾ ಇಲ್ಲವೇ? ಕೇವಲ ಮತ ಸಂಪಾದನೆ ಮಾಡತಕ್ಕಂಥ ರೀತಿಯಲ್ಲಿ ನಾನು ಕೊಟ್ಟಿದ್ದೇನೆ, ಇಲ್ಲಿ ಹಣ ಕೊಟ್ಟಿದ್ದೇನೆ, ಎಲ್ಲಾ ಕಡೆಗೆ ನೀವು ಕೊಡಲಾರದಂಥ ಹಣ ಕೊಟ್ಟಿದ್ದೇವೆ, ಮಾನಸ ಸರೋವರಕ್ಕೆ ಹೋಗುವ ರೀತಿಯಲ್ಲಿ ವ್ಯವಸ್ಥೆ ಮಾಡಿದ್ದೇವೆ ಎಂದು ಬಜೆಟ್‌ನಲ್ಲಿ ಹೇಳಿದ್ದೀರಿ ಮಾನಸ ಸರೋವರಕ್ಕೆ ಯಾರು ಹೋಗುತ್ತಾರೆ? ಈ ರಾಜ್ಯದಲ್ಲಿ ಹೊಟ್ಟೆಗಿಲ್ಲತಕ್ಕಂಥ ರೀತಿಯಲ್ಲಿ, ನಿನ್ನೆ ಶ್ರೀರಾಮರೆಡ್ಡಿಯವರು ಬಹಳ ಒಳ್ಳೆಯ ಪ್ರಶ್ನೆ ಎತ್ತಿದ್ದಾರೆ ತಮ್ಮ ಜಿಲ್ಲೆಯಾದ ಮಂಡ್ಯಾ ಜಿಲ್ಲೆಯಲ್ಲಿ ಪ್ರತಿಭಟನೆಯಾಗಿದೆ ಹಳದಿ ಕಾರ್ಡಿನ ಸಲುವಾಗಿ ಯಾವ ರೀತಿಯಾಗಿ ಬಡಿದಾಡುತ್ತಿದ್ದಾರೆ ಎಸ್‌ಸಿ / ಎಸ್‌ಟಿ ಜನರು, ಮಹಿಳೆಯರು, ಇವತ್ತು ಟಿ ವಿ ನೋಡಿದರೆ ಗೊತ್ತಾಗುತ್ತದೆ ಅಂಥವಕ್ಕೆ ಏನು ಮಾಡಿದಿರಿ? ನಾನು ಆಡಳಿತ ಸ್ಥಾನದಲ್ಲಿ ಕುಳಿತಿದ್ದಾಗ ಇವತ್ತಿನ ಉಪ ಮುಖ್ಯಮಂತ್ರಿಗಳು ಆಗ ಎಂದೂ ಈ ವಿರೋಧ ಪಕ್ಷದ ನಾಯಕನ ಕುರ್ಚಿಯ ಮೇಲೆ ಒಂದು ನಿಮಿಷ ಸಹ ಕುಳಿತುಕೊಳ್ಳುತ್ತಿರಲಿಲ್ಲ ಪಡಿತರ ಚೀಟಿ ಯಾವಾಗ ಕೊಡುತ್ತೀರಿ ಎಂದು ಕೇಳುತ್ತಿದ್ದರು ಯಾವಾಗಲೂ ಕೂಡ ನಾವು ಆದಷ್ಟು ಮಟ್ಟಿಗೆ ಅದಕ್ಕೆ ಸಮಾಧಾನ ಮಾಡತಕ್ಕಂಥ ರೀತಿಯಲ್ಲಿ at that time ನಾವು decision ತೆಗೆದುಕೊಂಡಿದ್ದೇವೆ 1 ಕೋಟಿ 29 ಲಕ್ಷ ಜನರಿಗೆ ಪಡಿತರ ಚೀಟಿ ವಿತರಣೆ ಮಾಡತಕ್ಕಂಥ ರೀತಿಯಲ್ಲಿ ಇನ್ನೂ demand survey ಆಗುತ್ತಿದೆ " ಇನ್ನೂ ಸಹ ನಾವು ಮಾಡುತ್ತಿದ್ದೇವೆ" ಎಂದು ಹೇಳಿಕೆ ಕೊಡುತ್ತಾರೆ ಇವತ್ತು ರಾಜ್ಯದ ಬಜೆಟ್ ಕೊಡತಕ್ಕಂಥ ರೀತಿಯಲ್ಲಿ ನಿಮ್ಮ resources mobilization ಅನ್ನು ಯಾವ ರೀತಿಯಾಗಿ ಭರಿಸುತ್ತಿದ್ದೀರಿ? ಮತ್ತು ಮಾಡತಕ್ಕಂಥ ಕಾರ್ಯಕ್ರಮಗಳೇನು? ವಿಶೇಷವಾಗಿ core sector ಗಳಾದ Energy ಇದೆ, ನೀರಾವರಿ ಇದೆ, ಕೃಷಿ ಇದೆ, ಇವೆಲ್ಲದರ ಬಗ್ಗೆ ಕೂಡ ಯಾವ ರೀತಿಯಾಗಿ ಮಾಡಬೇಕೆಂದು ಒಂದು ವ್ಯವಸ್ಥಿತ ರೀತಿಯಲ್ಲಿ ಮಾಡಬೇಕು ನಿನ್ನೆ ಕೂಡ ನಾನು ಹೇಳಿದ್ದೇನೆ ದಿವಂಗತ ದೇವರಾಜ ಅರಸುರವರು 8 ವರ್ಷಗಳ ಕಾಲ ಈ ರಾಜ್ಯದ ಮುಖ್ಯಮಂತ್ರಿಗಳಾಗಿ ಕೆಲಸ ಮಾಡಿದ್ದಾರೆ ಮೊಟ್ಟಮೊದಲನೆಯದಾಗಿ, ಕರ್ನಾಟಕ ರಾಜ್ಯದಲ್ಲಿ ಶೋಷಣೆಗೆ ಒಳಗಾದಂಥ ಬಡತನ ರೇಖೆಗಿಂತ ಕೆಳಗಿನ ಜನತೆಗೆ ಒಂದು ವಿಶ್ವಾಸ ಮೂಡಿಸತಕ್ಕಂಥ ರೀತಿಯಲ್ಲಿ ಈ

ರಾಜ್ಯವನ್ನು ನಡೆಸಿಕೊಂಡು ಹೋಗಿದ್ದಾರೆ ಕರ್ನಾಟಕ ರಾಜ್ಯದಲ್ಲಿ ಬಹಳಷ್ಟು ಜನರಿಗೆ 8 ವರ್ಷಗಳ ಕಾಲ ಮುಖ್ಯಮಂತ್ರಿಯಾಗಿ ಕೆಲಸ ಮಾಡತಕ್ಕಂಥ ಸೌಭಾಗ್ಯ ಸಿಗಲಿಲ್ಲ ಜನರಿಗೆ ಕೇವಲ ಹೇಳಿಕೆ ಮುಖಾಂತರವಲ್ಲ, ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರತಕ್ಕಂಥ ರೀತಿಯಲ್ಲಿ ಕರ್ನಾಟಕ ರಾಜ್ಯದಲ್ಲಿ ಮೊಟ್ಟಮೊದಲನೆ ಮುಖ್ಯಮಂತ್ರಿ ಮಾಡಿದ್ದಾರೆ ಮಾನ್ಯ ವಾಟಾಳ್ ನಾಗರಾಜ್‌ರವರು ಯಾವತ್ತೂ ಕೂಡ ಹೊಗಳುತ್ತಾರೆ ವಿಶಾಲ ಕರ್ನಾಟಕ ಆಗಬೇಕಾದರೆ ದೇವರಾಜ ಅರಸುರವರೇ ಕಾರಣವೆಂದು ಹೇಳಿದ್ದಾರೆ ಅಂಥ ಕಾಲ ಕೂಡ ನಾವು ನೋಡಿದ್ದೇವೆ ಏನೋ ಒಂದು ನಮಗೆ ಆಶೀರ್ವಾದದಿಂದ 36 ವರ್ಷಗಳ ಕಾಲ ಸದನದಲ್ಲಿ ಕೆಲಸ ಮಾಡಿಕೊಂಡು ಬಂದಿದ್ದೇನೆ ಆದರೆ, ಇಂಥ ಒಂದು ಬಜೆಟ್ ಕರ್ನಾಟಕ ರಾಜ್ಯದಲ್ಲಿ ಮೊಟ್ಟಮೊದಲನೆಯದಾಗಿ ನಾವು ನೋಡುತ್ತಿದ್ದೇವೆ ಎಲ್ಲೆಲ್ಲಿ ಕೇಳುತ್ತಾರೆ, ಅಲ್ಲಿಗೆ ಆಶ್ವಾಸನೆಗಳನ್ನು ಕೊಡತಕ್ಕಂಥ ರೀತಿಯಲ್ಲಿ ಆಗಿದೆ ನೀವು ಮತ್ತು ರಾಜ್ಯದ ಮುಖ್ಯಮಂತ್ರಿಗಳು ಎಷ್ಟು ಆಶ್ವಾಸನೆಗಳನ್ನು ಕೊಟ್ಟಿದ್ದೀರಿ? **"ಆಶ್ವಾಸನೆಗಳ ಮಹಾಪೂರ"** ಎಂದು ಪತ್ರಿಕೆಯಲ್ಲಿ ಬಂದಿದೆ **ಶ್ರೀ ಸತ್ಯ** ಅವರು ಬಹಳ ದೊಡ್ಡ ಅನುಭವಿ ಒಬ್ಬ ಪತ್ರಕರ್ತರಾಗಿದ್ದು, ಕನ್ನಡಪ್ರಭದಲ್ಲಿ ಕೂಡ ಬಂದಿದೆ ಇವತ್ತು ಪತ್ರಿಕೆ ಓದುತ್ತೀರಿ ಎನ್ನತಕ್ಕಂಥ ರೀತಿಯಲ್ಲಿ ಇಲ್ಲ ಇವತ್ತು ನನ್ನ ಬಜೆಟ್‌ನಲ್ಲಿ ಕರ್ನಾಟಕ ರಾಜ್ಯದಲ್ಲಿ ಎಲ್ಲಾ ಕಡೆಗೆ ಜನಾಭಿಪ್ರಾಯ ಮೂಡಿದೆ ಪತ್ರಿಕೆಗಳಲ್ಲಿ ಏನು ಹೇಳುತಾರೆ? ರಾಷ್ಟ್ರ, ರಾಜ್ಯ ಮಟ್ಟದಲ್ಲಿ ಜನರ ಅಭಿಪ್ರಾಯಗಳನ್ನು ಮೂಡಿಸತಕ್ಕಂಥ ರೀತಿಯಲ್ಲಿ ಕೆಲಸ ಮಾಡತಕ್ಕಂಥ ಪತ್ರಿಕೆಗಳು ಯಾವ ರೀತಿಯಾಗಿ ಹೇಳಿವೆ ಎನ್ನುವುದನ್ನು ನೋಡಬೇಕು ಏಕೆಂದರೆ, ಯಡಿಯೂರಪ್ಪನವರಿಗೆ ಸಮಯವಿಲ್ಲ 16 ನೇ ತಾರೀಖು ಬಜೆಟ್ ಮಂಡನೆ ಮಾಡಿದ್ದಾರೆ ನೀವು ಅವರ ಭರಾಟೆಯನ್ನು ನೋಡಬೇಕು ವಿಧಾನ ಪರಿಷತ್ತಿನಿಂದ ಬರಬೇಕಾದರೆ ಎಷ್ಟು ಭರಾಟೆ, ಏನೋ ಒಂದು ದೊಡ್ಡ ಸಾಧನೆ ಮಾಡಿದ್ದೇವೆ ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ ಸಾಧನೆ ಮಾಡಿದ್ದೀರಿ ours is democratic political party ಇವತ್ತು ಸಮಯ ಬಂದಿದೆ, ನಾವಿಲ್ಲಿ ಕುಳಿತಿದ್ದೇವೆ ಆದರೆ ಬಜೆಟ್ ರಾಜ್ಯದ ಬಜೆಟ್ ಆಗಬೇಕು, ಜನಸಾಮಾನ್ಯರ ಬಜೆಟ್ ಆಗಬೇಕು ಇವತ್ತು ಬಜೆಟ್ ಮಂಡನೆ ಮಾಡತಕ್ಕಂಥ ರೀತಿಯಲ್ಲಿ ಏಕ ಪಕ್ಷವಾದಂಥ ಬಜೆಟ್ ಆಗಬಾರದು ಇವತ್ತು ಚುನಾವಣೆಯಲ್ಲಿ ನಿಮಗೆ, ನಮಗೆ

ಅವರಿಗೂ mandate ಸಿಗಲಿಲ್ಲ ಅವರು ಬಹಳ ಮೇಧಾವಿಗಳು ಜೆಡಿ(ಎಸ್) ನ ಜನರು ಯಾವ ರೀತಿಯಾಗಿ ನಿಮ್ಮ ಕಡೆ ಬಂದರು, ನೀವು ಯಾವ ರೀತಿಯಾಗಿ ಹೋಗಿದ್ದೀರಿ, ಹಿಂದಿನ ಬಾಗಿಲಿನಿಂದ ಬಂದು, ಜನರ ಮನ್ನಣೆ, ಆಶೀರ್ವಾದ ಪಡೆಯಲಾರದೇ ರಾಜ್ಯದಲ್ಲಿ ಬಂದಾಗ ನಿಮಗೇನೋ ಒಂದು ಅವಕಾಶ ಸಿಕ್ಕಿದೆ " ನಾವು ಇದನ್ನು ಉಪಯೋಗ ಮಾಡಿಕೊಳ್ಳಬೇಕು " ಅದಕ್ಕೆ ನಿನ್ನೆ ಸದಾನಂದಗೌಡರು, ಅವರು ಲೋಕಸಭಾ ಸದಸ್ಯರಾಗಿದ್ದಾರೆ ಅವರು, ಯಡಿಯೂರಪ್ಪನವರು ಬಜೆಟ್ ಏನು ಕೊಟ್ಟಿದ್ದಾರೆ" ಇದು ಬಿಜೆಪಿ ಬಜೆಟ್ ಎಂದು ಹೇಳಿದ್ದಾರೆ ಅದಕ್ಕೆ ನಾವೆಲ್ಲ ಆ ಕಡೆಗೆ ಹೋಗಬೇಕು ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಅವರ ನೇತೃತ್ವದಲ್ಲಿ ಎಲ್ಲ ಕಡೆಗೆ ಮತ್ತೆ ವಿಕಾಸ ಯಾತ್ರೆ ಹೋಗಬೇಕೆಂದು ಹೇಳಿದ್ದಾರೆ ಈ ದೇಶದಲ್ಲಿ ರಥಯಾತ್ರೆ ಮುಗಿಯಿತು ಅಲ್ಲಿ ಲಾಲೂ ಪ್ರಸಾದ್ ಯಾದವ್ ಎಂಬ ಗಂಡಸಿದ್ದರು, ರಥಗಳನ್ನು ನಿಲ್ಲಿಸಿದರು ಬಹಳಷ್ಟು ರಥ ಯಾತ್ರೆಗಳನ್ನು ಇವರೇಕೆ ಮಾಡತಕ್ಕಂಥದ್ದು ಇದೆ? ಕಳೆದ ಚುನಾವಣೆಯಲ್ಲಿ ಅಡ್ವಾಣಿಯವರು ರಥ ಯಾತ್ರೆಗಳನ್ನು ಸೋನಿಯಾಗಾಂಧಿಯವರು ನಿಲ್ಲಿಸಿಬಿಟ್ಟರು 2004 ರ ಚುನಾವಣೆಯಲ್ಲಿ ಇವತ್ತು ದೇಶದಲ್ಲಿ ಪ್ರತಿಕ್ರಿಯವಾದಿ ಶಕ್ತಿಯಗಳಿಗೆ ಅವಕಾಶ ಕೊಡಲಾರದಂಥ ರೀತಿಯಲ್ಲಿ ಇವತ್ತು ಮನಮೋಹನ ಸಿಂಗ್‌ರವರಂಥ ಆರ್ಥಿಕ ತಜ್ಞರ ನೇತೃತ್ವದಲ್ಲಿ ರಾಷ್ಟ್ರ ಮಟ್ಟದಲ್ಲಿ ಪ್ರಧಾನ ಮಂತ್ರಿಗಳಾಗಿ ಕೆಲಸ ಮಾಡುತ್ತಿದ್ದಾರೆ ಅಟಲ್ ಬಿಹಾರಿ ವಾಜಪೇಯಿಯವರ ಬಗ್ಗೆ ಗೌರವವಿದೆ ಆ ಮಾತು ಪ್ರಸ್ತಾಪ ಮಾಡುತ್ತಿಲ್ಲ ಮೊನ್ನೆ ಬಿಜೆಪಿಯ ರಾಷ್ಟ್ರೀಯ ಸಮಾವೇಶದಲ್ಲಿ ರಾಜನಾಥ್‌ಸಿಂಗ್‌ರವರು, ನಮಗೆ ರಾಮನ ಹೆಸರು ಬಿಟ್ಟು ಮತ್ತೆ ಗತ್ಯಂತರವಿಲ್ಲವೆಂದು ಹೇಳುತ್ತಾರೆ ಇವತ್ತು ನೀವು ಕರ್ನಾಟಕ ರಾಜ್ಯದಲ್ಲಿ ಘೋಷಣೆ ಕೂಗತಕ್ಕಂಥ ರೀತಿಯಲ್ಲಿ Karnataka is a Congress based State ಇಲ್ಲಿ ಕೂಡ ಕಾಂಗ್ರೆಸ್ ಪಾರ್ಟಿ philosophy ಏನಿದೆ, vote bank ಏನಿದೆ, ಕರ್ನಾಟಕ ರಾಜ್ಯದಲ್ಲಿ ಇನ್ನೂ ದೂರ ಹೋಗಿಲ್ಲ ಇವತ್ತು ನೀವು ತುಳಿಯತಕ್ಕಂಥ ಪ್ರಯತ್ನ ಮಾಡುತ್ತಿದ್ದೀರಿ ಇವತ್ತು ಎಲ್ಲ ಕಡೆಗಳಿಗೆ, ಮಂದಿರುಗಳಿಗೆ , ಮರಗಳಿಗೆ, ನಮ್ಮ ಕಾಲದಲ್ಲಿ ನಾವೆಷ್ಟು ಸಹಾಯ ಮಾಡಿದ್ದೇವೆ ಎಂದು ಗೊತ್ತಿದೆ ಅದರ ಬಗ್ಗೆ ಹೇಳುವುದಕ್ಕೆ ನಾನು ಇಚ್ಛೆ ಪಡುತ್ತಿಲ್ಲ ಬಜೆಟ್ ಮಂಡಿಸುವ ರೀತಿಯಲ್ಲಿ ರಾಜ್ಯದ ಉಪಮುಖ್ಯಮಂತ್ರಿಗಳಾಗಿ

ಪ್ರಶ್ನೆ ಇರಲಾರದೇ, ರಾಜ್ಯದ ಜನತೆಯ ಸಮಸ್ಯೆಗಳಿರಲಾರದೇ ಬಜೆಟ್ ಮಂಡಿಸುತ್ತೀರಲ್ಲ, ನನಗೆ ಬಹಳ ದುಃಖವಾಗುತ್ತಿದೆ ಸಿದ್ಧರಾಮಯ್ಯನವರೂ ಕೂಡ ಉಪಮುಖ್ಯಮಂತ್ರಿಗಳಾಗಿದ್ದರು, ಹಣಕಾಸಿನ ಮಂತ್ರಿಗಳಾಗಿದ್ದರು ನಾವು ಎರಡು ಬಜೆಟ್ ಮಂಡನೆ ಮಾಡಿದ್ದೇವೆ ನಾವು Planning Commission ಗೆ ಹೋದಾಗ planning Commission appreciated that this is the only Budget in the country Resource mobilization ನಲ್ಲಿ ಮುಂದೆ ಬಂದಿದ್ದೀರಿ, ಆರ್ಥಿಕ ಪ್ರೋಗ್ರಾಂ ದಲ್ಲಿ ಮುಂದೆ ಬಂದಿದ್ದೀರಿ, ರಾಜ್ಯದ ಹಿತದೃಷ್ಟಿಯಿಂದ ಕೆಲಸ ಮಾಡುತ್ತಿದ್ದೀರಿ ಎಂದು, they have given appreciation ಇವತ್ತು ಪೈಪೋಟಿ ಇದೆ ಶೇಕಡ 4 ರ ಬಡ್ಡಿ ದರದಲ್ಲಿ ಸಾಲ ನೀಡುತ್ತೇವೆಂದರು ಶೇಕಡ 4 ನಂತರ 6 ಎಂದರು ಇದರಲ್ಲೇ ಭಿನ್ನಾಭಿಪ್ರಾಯ ಬಂತು ಜನತಾದಳದ ಸುಪ್ರೀಮೋ ಹೆಚ್ ಡಿ ದೇವೇಗೌಡರವರು ಹೇಳುತ್ತಾರೆ, ಹೇಗಾಗುತ್ತದೆಂದು ಅವರೂ ಹೇಳುತ್ತಾರೆ ಅದನ್ನು ನಾನು ಹೇಳುವುದಕ್ಕೆ ಇಚ್ಛೆಪಡುತ್ತಿಲ್ಲ ಇವತ್ತು ಕೊನೆಯದಾಗಿ ಮಾಡಿದ್ದೀರಿ ಅದನ್ನು ಮಾಡತಕ್ಕಂಥ ಕಾಲದಲ್ಲಿ ನಾವು ಹೇಳಿದ್ದೇವೆ ಇವತ್ತೂ ನಿಮ್ಮ expenditure ಇಲ್ಲ ಕಳೆದ ಸಲದ ಬಜೆಟ್‌ನಲ್ಲಿ ಸರಿಯಾದ ರೀತಿಯಲ್ಲಿ ಹಣವನ್ನು ಬಿಡುಗಡೆ ಮಾಡಿಲ್ಲ ಇವತ್ತು ನೀವು ಸಾಲ ಮನ್ನಾ ಮಾಡತಕ್ಕಂಥದ್ದು ಹೇಳಿದ್ದೀರಿ ಸಾರಾಯಿ ನಿಷೇಧದ ಬಗ್ಗೆ ಹೇಳಿದ್ದೀರಿ ಒಟ್ಟಾರೆ 7,612 ಕೋಟಿ ರೂಪಾಯಿ ಎಲ್ಲಿಂದ ತರುತ್ತೀರಿ? ನಾವು ಅದಕ್ಕೆ ಕೇಳಿದ್ದೇವೆ ನಾವು ರಮೇಶ್‌ಕುಮಾರ್ ನಮ್ಮ ಪಾರ್ಟಿ ಮೀಟಿಂಗ್‌ನಲ್ಲಿ ಮಾತನಾಡಿ ಹೊರಗಡೆ ಕೂಡ ಹೇಳಿದ್ದೇವೆ ನಾವು ಇದರ ಬಗ್ಗೆ ಮೊಟ್ಟ ಮೊದಲನೆಯದಾಗಿ ಮಾತನಾಡುತ್ತಿಲ್ಲ ಇವತ್ತಿನ ದಿವಸ ಧಾರಾಳವಾಗಿ ಜನರನ್ನು ಮುಗ್ಧರನ್ನಾಗಿ ಮಾಡುವ ರೀತಿಯಲ್ಲಿ ನೀವು ಈ ಬಗ್ಗೆ ಹೇಳಿದ್ದೀರಿ ಜನರು ಮಾತನಾಡುತ್ತಾರೆ ಅದನ್ನು ನಾನು ಒಪ್ಪುತ್ತೇನೆ ಇವತ್ತು ಎಷ್ಟೋ ಜನ Communist Party card holders ನನಗೆ ಬಹಳ ಸ್ನೇಹಿತರಾಗಿದ್ದಾರೆ ಶ್ರೀರಾಮರೆಡ್ಡಿಯವರಿಗೆ ಗೊತ್ತಿದೆ ನಾನು ಹೈದರಾಬಾದ್‌ನಲ್ಲಿದ್ದಾಗ ಕಮ್ಯೂನಿಸ್ಟ್ ಪಕ್ಷಕ್ಕೆ ಸಂಬಂಧಪಟ್ಟಂಥ ಜನರಿದ್ದರು ಅವರು "ಕೊಟ್ಟಿದ್ದಾರಲ್ಲ, ನೀವೇಕೆ ಮಾತನಾಡುತ್ತೀರಿ" ಎಂದು ಕೇಳುತ್ತಾರೆ ಸುಮ್ಮನೆ ಆಶ್ವಾಸನೆ ಕೊಡುತ್ತಾರೆ ಹೇಗೆ ಮಾಡಲಿಕ್ಕಾಗುತ್ತದೆ ಎಂದು ಹೇಳಿದೆವು 7612

ಕೋಟಿ ರೂಪಾಯಿ ಕೊರತೆ ಉಂಟಾಗುತ್ತದೆ ಸಾರಾಯಿ ನಿಷೇಧ, ಸಾಲ ಮನ್ನಾ ಹೇಗೆ ಮಾಡುತ್ತೀರಿ ಹೇಳಿ? ಎಂದರೆ ಇಲ್ಲ, ನಾವು ಮಾಡುತ್ತೇವೆನ್ನುತ್ತಾರೆ ಇಲ್ಲಿಯವರೆಗೇನು ಮಾಡಿದ್ದೀರಿ? ಎಲ್ಲೆಲ್ಲಿ ಹಣ ಬಿಡುಗಡೆ ಮಾಡಿದ್ದೀರಿ? ಯಾವ್ಯಾವ ಬಾಬ್ತಿಗೆ ಬಿಡುಗಡೆ ಮಾಡಿದ್ದೀರಿ? ಅಧ್ಯಕ್ಷರೇ, ಇದೆಲ್ಲ ಏನಾಗುತ್ತದೆಂದು ತಮಗೂ ಗೊತ್ತಿದೆ ಹಣ ಎಲ್ಲಿ ಬರುತ್ತದೆಂದು ನಾವು ಕೇಳುತ್ತಿದ್ದೇವೆ ಮೊಟ್ಟಮೊದಲನೆಯದಾಗಿ, ಬಜೆಟ್ ಮೇಲೆ ಚರ್ಚೆಯೇ ಪ್ರಾರಂಭವಾಗಿಲ್ಲ ಬಜೆಟ್ ಮೇಲೆ ಚರ್ಚೆ ಪ್ರಾರಂಭವಾಗಿ pass ಆದ ನಂತರ Supplementary Demands ಬರಬೇಕು ಏಕೋ ಒಳಗೆ ಭುಗಿಲೆದ್ದಿದೆ ಈ ಬಜೆಟ್ ಪಾಸ್ ಆಗುತ್ತದೆಯೋ, ಇಲ್ಲವೋ ಎನ್ನುವ ಅನುಮಾನ ನಮ್ಮ ಕಡೆಯಿಂದ ಅಲ್ಲ, ನಿಮ್ಮ ಕಡೆಯಿಂದ ಬರುತ್ತಿದೆ ಸಮ್ಮಿಶ್ರ ಸರ್ಕಾರ ಎರಡೂ ಪಕ್ಷಗಳು ಸೇರಿ ಆಗಿದೆ There is a Co-ordination Committee ರೈತರ ಸಾಲ, ಬಡ್ಡಿ ಮನ್ನಾ ವಿಚಾರದ ಬಗ್ಗೆ ಅವರು ಕೂಡ, ನಾವು ಕೂಡಿ 4 ದಿನಗಳ ಕಾಲ ಚರ್ಚೆ ಮಾಡಿದ್ದೇವೆ ಈ ರಾಜ್ಯದಲ್ಲಿರುವ ಅಲ್ಪಸಂಖ್ಯಾತರಿಗೆ, ಹಿಂದುಳಿದವರ ಬಗ್ಗೆ ಬೇರೆ ಬೇರೆ ವಿಚಾರಗಳು ಪ್ರಸ್ತಾಪವಾಗಿವೆ ಮೊನ್ನೆ Co-ordination Committee meeting ಇತ್ತು cancel ಮಾಡಿದ್ದರೆ ಮೊನ್ನೆ ಇಲ್ಲಿ ಧರಣಿ ಇತ್ತು ನಾವು ಕೂಡಲಿಲ್ಲ ನಾವು support ಮಾಡಿದ್ದೇವೆ ವಿರೋಧ ಪಕ್ಷದಲ್ಲಿ ಕುಳಿತು ಸದನದ ಹಿರಿಯ ಸದಸ್ಯರಾದ ಮಾಧುಸ್ವಾಮಿ, ವಾಟಾಳ್ ನಾಗರಾಜ್, ಶ್ರೀರಾಮರೆಡ್ಡಿ, ಜಯಪ್ರಕಾಶ್ ಹೆಗ್ಡೆಯವರು ಧರಣಿ ಮಾಡುವ ಕಾಲದಲ್ಲಿ ನಾವು, ರಮೇಶ್‌ಕುಮಾರ್, ಪಕ್ಷದ ಎಲ್ಲ ಶಾಸಕರು ಬೆಂಬಲ ವ್ಯಕ್ತ ಮಾಡಿದ್ದೇವೆ ಆ ಬಗ್ಗೆ ತಮ್ಮ ಕೊರಡಿಯಲ್ಲಿ ಚರ್ಚೆಯಾಯಿತು ಇದರ ಬಗ್ಗೆ ನಾನು ಇವತ್ತು ಸಭೆಗೆ ಹೇಳಿಕೆ ಕೊಡುತ್ತೇನೆ ಎಂದರು ಎಲ್ಲಿದೆ ಸಭೆ? ಇವತ್ತು ಮತ್ತೆ ಆ ವಿಚಾರಗಳ ಬಗ್ಗೆ ಸದನವೇ ನಡೆಯುವುದಿಲ್ಲ ಕಾಂಗ್ರೆಸ್ ಪಕ್ಷದವರು ಯಾವಾಗಲೂ ಕೂಡ ಬಜೆಟ್ ಮೇಲೆ ಮಾತನಾಡಲಿಕ್ಕೆ ತಯಾರಿಲ್ಲ ಎನ್ನುತ್ತಾರೆ ಈಗ ನಮ್ಮ ಬಜೆಟ್ ಏನಿದೆ, ಅದು ಭಗವದ್ಗೀತೆ ಇದೆ, ರಾಮಾಯಣ ಇದೆ ಎಂದು ಹೇಳುತ್ತಾರೆ ಚಲುವರಾಯಸ್ವಾಮಿ ಬಿಜೆಪಿಯ ಅಜೆಂಡಾವೆಂದು ಹೇಳಿದರು ಬಂಡೆಪ್ಪ ಕಾಶೆಂಪುರ್‌ರವರು ಕೃಷಿಗೆ ಮಹತ್ವ ಕೊಟ್ಟಿಲ್ಲವೆಂದು ಹೇಳಿದರು ರೇವಣ್ಣನವರು ಈ ಬಜೆಟ್ ನಮ್ಮ ರಾಜ್ಯದ ಜನರ ಸಮಸ್ಯೆಯನ್ನು ಬಗೆಹರಿಸುವ ಬಜೆಟ್ ಅಲ್ಲವೆಂದು

ಹೇಳಿದ್ದಾರೆ ಏಕೆಂದರೆ core sector ಗೆ ಹೆಚ್ಚಿನ ರೀತಿಯಲ್ಲಿ ಹಣದ ಆದ್ಯತೆ ಇಲ್ಲ ಇವತ್ತು ನಿಜವಾಗಿಯೂ ಕೂಡ ರಾಜ್ಯದ ಅಭಿವೃದ್ಧಿಯಾಗಬೇಕಾಗಿದೆ ನಿಜವಾಗಿ ಕೂಡ ಬಡತನ ರೇಖೆಗೆ ಒಳಗಾಗಿರತಕ್ಕಂಥ ಜನರಿಗೆ ಇವತ್ತು ಸರಿಯಾದ ರೀತಿಯಲ್ಲಿ ನಾವು ಪರಿಹಾರ ಕಂಡುಹಿಡಿಯಬೇಕಾದರೆ ಅದರ ಕಡೆಗೆ ನಿಗಾ ಇಟ್ಟು ತಾವು ಬಜೆಟ್ ಮಂಡನೆ ಮಾಡಬೇಕು ಈ ಬಜೆಟ್ ಮಂಡನೆ ಮಾಡಿದ ಮರುದಿವಸವೇ ತಮ್ಮ ಅಂಗಪಕ್ಷಗಳು ಇವತ್ತು ಹೊರಗಡೆ ಹೇಳಿ, ಈ ತರಹದ ಭಿನ್ನಾಭಿಪ್ರಾಯ ಮಧ್ಯದಲ್ಲಿ ಬಂದು, ನಿಮ್ಮ ಪಕ್ಷದಲ್ಲೇ ಇವತ್ತು ಒಮ್ಮತವಿಲ್ಲ ಏನಿದೆ ಎಂದು ನಮಗೆಲ್ಲ ಕೂಡ ಗೊತ್ತಿದೆ ಮತ್ತೆ, ನಾವೇನು ಹೇಳುತ್ತಿದ್ದೇವೆ, ಅಂದರೆ ಯಡಿಯೂರಪ್ಪನವರು ಬಜೆಟ್ ಮಂಡನೆ ಮಾಡಿದ್ದಾರೆ, ಅದು ರಾಜ್ಯದ ಬಜೆಟ್ ಆಗಬೇಕು ರಾಜ್ಯದ ಅಭಿವೃದ್ಧಿಗೋಸ್ಕರ ಮಾಡತಕ್ಕಂಥ ಬಜೆಟ್ ಆಗಬೆಕು ನಿಮ್ಮದು ಸದಾನಂದಗೌಡರದು ಬಜೆಟ್ ಆಗಬಾರದು ನಿಮ್ಮದು ಬಿಜೆಪಿಯ ಬಜೆಟ್ ಆಗಬಾರದು ಇವತ್ತು ರಾಷ್ಟ್ರ ಮಟ್ಟದಲ್ಲಿ ಯಡಿಯೂರಪ್ಪನವರ ಬಜೆಟ್ ಮುಂದೆ ಬರುವ ದಿವಸಗಳಲ್ಲಿ ಪಕ್ಷವನ್ನು ಶಕ್ತಿಶಾಲಿಯನ್ನಾಗಿ ಮಾಡುವ ಕನಸನ್ನೇನು ಕಾಣುತ್ತಿದ್ದೀರಿ, ಅದು ಸರಿಯಾದ ರೀತಿಯಲ್ಲಾಗುವುದಿಲ್ಲ ಪ್ರತಿ ಪಕ್ಷ ಕೂಡ ಇನ್ನೂ ಜೀವಂತವಿದೆ ನಾವು ಜೆ ಹೆಚ್ ಪಟೇಲ್‌ರವರ ಕಾಲದಲ್ಲಿ ಪ್ರತಿಭಟನೆ ಮಾಡಿದ್ದೇವೆ ಯಾವ ರೀತಿಯಾಗಿ ಪ್ರಜಾಪ್ರಭುತ್ವದಲ್ಲಿ ಹೋದಂಥ ಶಕ್ತಿಯನ್ನು ಸಂಪಾದನೆ ಮಾಡಬೇಕೆಂಬುದನ್ನು ಕೂಡ ಹೇಳಿದ್ದೇವೆ ನಿನ್ನೆ ನಿಯಮ 69 ರ ಮೇಲೆ ಚರ್ಚೆಯಾದಾಗ ಏನು ಹೇಳುತ್ತಾರೆ, ಆಗ ಈಗ ಎಂದು ಕುಳಿತರು ಯಡಿಯೂರಪ್ಪನವರ ಹತ್ತಿರ ಒಂದು ಸಣ್ಣ ಡೈರಿ ಇದೆ, ಅದರಲ್ಲಿ ಬರೆದುಕೊಳ್ಳುತ್ತಿರುತ್ತಾರೆ ನಿನ್ನೆ ಶಿವಕುಮಾರ್‌ರವರು ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಿದರು ಅದನ್ನು ಕೇಳಿ ಅವರು ಗಪ್ ಆದರು stun ಆದರು ಇವತ್ತು 50 ಸಾವಿರ ಜನರ ಮೇಲೆ ಕೇಸ್ ಹಾಕಲಾರದೇ vindictive type of politics ಏನು ಕರ್ನಾಟಕದಲ್ಲಿ ನಡೆಯುತ್ತಿದೆ ಎಂದು ಹೇಳಿದಾಗ ಅವರು stun ಆದರು ಇವತ್ತು CBI enquiry ಮಾಡಬೇಕೆಂಬುದು ನಮ್ಮ ವಾದವಿದೆ ಅದು ಆಗಲಿ, ಬಿಡಲಿ, ಆದರೆ, ಇವತ್ತು ಕಮಿಷನ್ ಮಾಡಿದ್ದು, ರದ್ದತಿಗೆ ಅಷ್ಟೇ ವಿಷಯಗಳ ಬಗ್ಗೆ ಪ್ರಸ್ತಾಪ ಮಾಡಿದ್ದೇವೆ ಇರಲಿ ಇವತ್ತು ಕೂಡ ಪತ್ರಿಕೆಯಲ್ಲಿ ಈ ತರಹದ ವಿಷಯಗಳು

ಕೂಡ ಬಂದಿವೆ ಅದನ್ನು ನಾನು ಎಲ್ಲಾ ಹೇಳಿ, ಒಟ್ಟಾರೆಯಾಗಿ ಪ್ರಜಾವಾಣಿಯಲ್ಲಿ ಕೂಡ ಈ ವಿಷಯಗಳು ಬಂದಿವೆ ಕುಮಾರ್ ಸ್ವಾಮಿಯವರು ಕೊಟ್ಟಿದ್ದ ಭರವಸೆ 49, ಈಡೇರಿಸಿದ್ದು 13 ಇದು Times of India ದಲ್ಲಿ ಬಂದಿದೆ ಯಡಿಯೂರಪ್ಪನವರು 2006 ಮತ್ತು 2007 ರಲ್ಲಿ ಬಜೆಟ್ ನಲ್ಲಿ ಮಾಡಿದ ಆಶ್ವಾಸನೆಗಳು 121 ನಮ್ಮದು ಹೇಳುತ್ತಿಲ್ಲ, ಪತ್ರಿಕೆಯಲ್ಲಿ ಬಂದಿದ್ದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ ಅನುಷ್ಠಾನವಾಗಿರುವುದು ಕೇವಲ 42 ಯಡಿಯೂರಪ್ಪನವರು 2006–07 ರಲ್ಲಿ ಬಜೆಟ್‌ನಲ್ಲಿ 121 ಭರವಸೆಗಳನ್ನು ನೀಡಿದ್ದರೆ, 2007–08 ರಲ್ಲಿ 273 ಭರವಸೆಗಳ ಮಹಾಪೂರವನ್ನೇ ನೀಡಿದ್ದಾರೆಂದು ಬಂದಿದೆ ಕೆಲವು ಕಾರ್ಯಕ್ರಮಗಳು ನಮ್ಮದೇ ಸರ್ಕಾರದ ಕಾರ್ಯಕ್ರಮವಾಗಿದ್ದು, ಈಗ ಹೊಸ ಗಡಿಗೆಯಲ್ಲಿ ಇಟ್ಟಿದ್ದೀರಿ ಇದು ನೀವು ರಾಜ್ಯಕ್ಕೆ ಕೊಡತಕ್ಕಂಥ ಭರವಸೆ ಈ ಸಮ್ಮಿಶ್ರ ಸರಕಾರಕ್ಕೆ ರಾಜ್ಯದ ಜನತೆ ಯಾವ ರೀತಿಯ ಆಶೀರ್ವಾದ ಮಾಡುತ್ತಾರೆನ್ನತಕ್ಕಂಥದ್ದು, ತಾವು ನೋಡಬೇಕು ಸೆಪ್ಟೆಂಬರ್ 10 ನೇ ತಾರೀಖಿನವರೆಗೆ ನನಗೆ ತಿಳಿದ ಮಟ್ಟಿಗೆ ಫಾರ್‌ಫಾರಮೆನ್ಸ್ ಬಗ್ಗೆ ಹೇಳಿದ್ದೇನೆ ನಾನು ಮುಖ್ಯ ಕಾರ್ಯದರ್ಶಿಯವರಿಗೆ ಪತ್ರ ಬರೆದೆ ಮುಖ್ಯಕಾರ್ಯದರ್ಶಿಯವರಿಗೆ ಧರ್ಮಸಿಂಗ್‌ರವರು ಕೂಡ ಕರ್ನಾಟಕದ ಮುಖ್ಯಮಂತ್ರಿಯಾಗಿದ್ದರೆನ್ನುವ ನೆನಪಿಲ್ಲ ನಮ್ಮ ಹಿರಿಯ ನಾಯಕರಾದ ರಮೇಶ್‌ಕುಮಾರ್‌ರವರು ಅವರಿಗೆ ಗೊತ್ತಿಲ್ಲ ಮುಖ್ಯಕಾರ್ಯದರ್ಶಿಯವರು ಎಲ್ಲಾ ಕಡೆಗೆ ಫೈಲ್ ಹಿಡಿದುಕೊಂಡು ಎಲ್ಲೋ ಹೋಗುತ್ತಿರುತ್ತಾರೆ ನಾನು ಅವರಿಗೆ ಪತ್ರ ಬರೆದೆ ನಿಮ್ಮ ಕಾರ್ಯದರ್ಶಿಗಳಿಗೆ ಪತ್ರ ಬರೆದಿದ್ದೇನೆ ಎಷ್ಟೆಷ್ಟು ಬಾಬ್ತು ಖರ್ಚಾಗಿದೆ ಎಂದು ಪತ್ರ ಬರೆದಿದ್ದೇನೆ ಇನ್ನೂ ಕೂಡ ತಮ್ಮ ಕಛೇರಿಯಿಂದ ಒಂದು ಪತ್ರ ಬಂದಿಲ್ಲ ಅಲ್ಲಿ ಹೇಳುತ್ತಾರೆ ನಾವು ಹೇಳಬಾರದು ನಮಗೆ ಫೈನಾನ್ಸ್ ಡಿಪಾರ್ಟ್‌ಮೆಂಟ್ ನಿಂದ strict instruction ಇದೆ ವಿರೋಧ ಪಕ್ಷದವರಿಂದ ಯಾವುದಾದರೂ ಪತ್ರ ಬರೆದರೆ ಉತ್ತರ ಕೊಡಬೇಕು ಆದರೆ ಇದುವರೆವಿಗೂ ಯಾವ ಪತ್ರಗಳು ಬಂದಿಲ್ಲ ನನ್ನ ಹತ್ತಿರ ದಾಖಲೆಗಳು ಇವೆ ಆಗ ಏನು ಹೇಳಿದ್ದಾರೆ, ಸೆಪ್ಟೆಂಬರ್ 10 ರವರೆಗೆ 39% ಡಿಸೆಂಬರ್ 10 ರವರೆಗೆ 43% ಫೆಬ್ರವರಿ ಕೊನೆಗೆ 53% ಮಾರ್ಚ್ 15 ಕ್ಕೆ 60% ಇವು ಯಡಿಯೂರಪ್ಪನವರೇ ಒಪ್ಪಿಕೊಂಡ ಅಂಕಿಅಂಶಗಳು ಅದಕ್ಕೆ ಇವತ್ತು ಪರ್‌ಫಾರ್‌ಮೆನ್ಸ್ ಬಜೆಟ್ ಕೊಡುವಲ್ಲಿ

ತಾವು ಹಿಂಜರಿಯುತ್ತಿದ್ದೀರಿ 2007–08 ರ ಜಮಾ–ಅಂದಾಜು, tax and non-tax revenue ರೂ 40,762 ಕೋಟಿ Loan and borrowings ರೂ 7,165 ಕೋಟಿ ಇದರಲ್ಲಿ ಕೇಂದ್ರದಿಂದ ಬರುವಂಥ ಪಾಲು, ಮಾನ್ಯ ಯಡಿಯೂರಪ್ಪನವರೆ, ಇದು ಬಹಳ ಮುಖ್ಯವಾಗಿದೆ ಕೇಂದ್ರದಿಂದ ಬಂದಂಥ ಪಾಲು ಎಂದು ನೀವು ಹೇಳದಿದ್ದರೂ, ನಾವಾದರೂ ಹೇಳಬೇಕಲ್ಲವೇ? ನಾನೇನು ಹಾಗೆ ಬಾಯಿಯಿಂದ ಹೇಳಿಲ್ಲ, ಎಲ್ಲಾ ಅಂಕಿ–ಅಂಶಗಳಿವೆ ಸ್ವಲ್ಪ exercise ಮಾಡಿದ್ದೇವೆ, speed work ಮಾಡಿದ್ದೇವೆ, home work ಮಾಡಿ ಬಂದಿದ್ದೇವೆ 2006–07 ರಲ್ಲಿ ತೆರಿಗೆಯ ಪಾಲು 5009 ಕೋಟಿ, ಅನುದಾನ 4801 ಕೋಟಿ ಈ ರೀತಿಯಾಗಿ ಒಟ್ಟು 9811 ಕೋಟಿ ಇದು ರಾಜ್ಯದ ಒಟ್ಟು ಆದಾಯದ 12 ಪ್ರತಿಶತ 47 ಸಾವಿರ ಕೋಟಿ ನಿಮ್ಮ ಅಂದಾಜು ಏನು ಇದೆ, ಇದರಲ್ಲಿ 12% ಹಣ ಕೇಂದ್ರದಿಂದ ಬಂಧಂಧದ್ದು ಇದೆ ಅದನ್ನು ತಾವು ಬಿಡುಗಡೆ ಮಾಡುತ್ತಿಲ್ಲ ಇದರ ಜೊತೆಗೆ ಭಾರತ ಸರ್ಕಾರದ ಸಾಲ 1990 ಕೋಟಿ ರೂಪಾಯಿ LIC, RBI, GCI, NCDC, ಸಂಸ್ಥೆಗಳಿಂದ ಪಡೆದ ಸಾಲ 1200 ಕೋಟಿ ಹೀಗಾಗಿ ನಿಮ್ಮ ಒಟ್ಟು ಜಮೆಯಲ್ಲಿ 15204 ಕೋಟಿ ರೂಪಾಯಿಗಳು ರಾಜ್ಯದ ಹೊರಗಡೆಯಿಂದ ಬಂದಿದೆ ಇದು ಕೇಂದ್ರದಿಂದ ತೆರಿಗೆಯ ಪಾಲು, ಬರಗಾಲದ ಪರಿಸ್ಥಿತಿ ಬಂತು ಕರ್ನಾಟಕ ರಾಜ್ಯದಲ್ಲಿ 128 ತಾಲ್ಲೂಕುಗಳಲ್ಲಿರುವ ಬರಪೀಡಿತ ಪ್ರದೇಶಕ್ಕೆ ಹಣ ಬಿಡುಗಡೆ ಮಾಡುತ್ತಿಲ್ಲ ಬರಗಾಲದ ಉಸ್ತುವಾರಿಯನ್ನು ವಹಿಸಿಕೊಂಡಿರತಕ್ಕಂಥ ಪ್ರಕಾಶ್‌ರವರೇ PD acount ನಲ್ಲಿ ಇನ್ನು ಹಣ ಇದೆ, ಬಾಕಿ ಕೊಡುತ್ತಾ ಇಲ್ಲ ಇನ್ನು 243 ಕೋಟಿ ಬಿಡುಗಡೆ ಮಾಡಬೇಕಾಗಿದೆ ಇದನ್ನು ಖರ್ಚು ಮಾಡುತ್ತಿಲ್ಲ ಪದೇ ಪದೇ ಇವರು ಮತ್ತು ಜಗದೀಶ್ ಶೆಟ್ಟರ್ ರವರು, "ಕೇಂದ್ರದಿಂದ ಹಣ ಬರುತ್ತಿಲ್ಲ" ಎಂದು ಹೇಳುತ್ತಾರೆ We requested the Home Minister, ಶಿವರಾಜ್ ಪಾಟೀಲ್‌ರವರಿಗೆ, Sir, lot of galata is there, ಅವರೆಲ್ಲಾ Coalition Government ಮಾಡುತ್ತಿದ್ದಾರೆ ತಾವು ಬರಲೇ ಬೇಕೆಂದು ಹೇಳಿದ್ದಕ್ಕೆ ಅವರು ಬಂದರು ನಾನೊಬ್ಬನೇ ಹೋಗಲಿಲ್ಲ ನಾನು ಖರ್ಗೆಯವರು, ಯಡಿಯೂರಪ್ಪನವರು, ಜಗದೀಶ್ ಶೆಟ್ಟರ್, ಕೃಷಿ ಸಚಿವರಾದ ಬಂಡೆಪ್ಪ ಕಾಶೆಂಪೂರ್ ರವರು ಇದ್ದರು ಎಲ್ಲಾ ಕಡೆಗೆ ಹೋಗಿ ನೋಡಿಕೊಂಡು ಬಂದೆವು Really,

drought is there, drinking water problem is there ಮೂರನೇ ಮಹಡಿಯಲ್ಲಿ ಸಭೆ ಇತ್ತು ಆಗ ಪ್ರಕಾಶ್ ರವರು ಮುಖ್ಯಮಂತ್ರಿಗಳು ಇರಲಿಲ್ಲ ಯಾವುದೋ ಒಂದು ಕಾರ್ಯಕ್ರಮಕ್ಕೆ ಹೋಗಿದ್ದರು ಕೊನೆಗೆ 3-00 ಗಂಟೆಗೆ ಆಗತಕ್ಕಂಧ ಸಭೆಗೆ ಬಂದರು ಆಗ ಕೇಂದ್ರದ ಗೃಹ ಸಚಿವರು, 250 ಕೋಟಿ ರೂಪಾಯಿ ಕೊಟ್ಟಿದ್ದಾರೆ ಮೊದಲಿನಿಂದಲೂ ಕೇಂದ್ರದಿಂದ ಏನು ಹಣ ಬಂದಿಲ್ಲವೆಂದು ಇತ್ತು ವಿದರ್ಭದಲ್ಲಿ ಏನು ಆಗಿದೆ ಎಂಬುದನ್ನು ಗಮನಿಸಿದ್ದೇವೆ ಈ ಸರ್ಕಾರ ಬಂದ ಮೇಲೆ ರೈತರ ಆತ್ಮಾಹುತಿಯಾಗಿ 172 ಜನ ಸತ್ತಿದ್ದಾರೆ ಅದಕ್ಕೆ ಸರಿಯಾದ ರೀತಿಯಲ್ಲಿ ತಾವು ನಿರ್ವಹಣೆ ಮಾಡಲಿಲ್ಲ ಇದೇ ರೀತಿಯಾಗಿ ಪದೇ ಪದೇ ರೈತರ ಆತ್ಮಾಹುತಿಯಾಗತಕ್ಕಂಧ ವಿದರ್ಭ that is a very drought area ಅಲ್ಲಿಗೆ ಪ್ರಧಾನ ಮಂತ್ರಿಗಳು ಮತ್ತು ನಮ್ಮ ಶರದ್ ಪವಾರ್ ಕೂಡ ಹೋಗಿದ್ದರು ಅಲ್ಲಿಗೆ ಹೋಗಿ ನೋಡಿಕೊಂಡು ಬಂದ ಮೇಲೆ ಎಲ್ಲೆಲ್ಲಿ ರೈತರ ಆತ್ಮಾಹುತಿಯಾಗುತ್ತಿದೆ, ಅಲ್ಲಿಗೆ ವಿಶೇಷವಾದ ಪ್ಯಾಕೇಜ್ ಪ್ರಕಟಿಸಿ, ರೈತರಿಗೆ ಕಡಿಮೆ ಬಡ್ಡಿ ದರದಲ್ಲಿ ಸಾಲ ಕೊಡುವುದು, ರೈತರಿಗೆ ಗೊಬ್ಬರ-ಬೀಜ ಕೊಡುವುದು, ಇವೆಲ್ಲವನ್ನು ಮಾಡಿದ್ದಾರೆ ಈ ನಿಟ್ಟಿನಲ್ಲಿ ಕರ್ನಾಟಕ ರಾಜ್ಯದಲ್ಲಿ ಬೆಳಗಾವಿಯಾಗಲಿ, ದಾವಣಗೆರೆ, ತುಮಕೂರು, ಹಾಸನ, ಕೊಡಗು, ಚಿಕ್ಕಮಗಳೂರು, ಈ ಆರು ಜಿಲ್ಲೆಗಳಿಗೆ 2670 ಕೋಟಿ ಕೊಟ್ಟಿದ್ದಾರೆ ಇವತ್ತು ತಮ್ಮ ಪಾಲನ್ನು ಕೊಡಬೇಕಾಗಿದೆ ಮಾನ್ಯ ಕೆ ಬಿ ಶರಣಪ್ಪನವರು ರಾಜ್ಯ ಸಭಾ ಸದಸ್ಯರು ಅವರು ಪಾರ್ಲಿಮೆಂಟ್‌ನಲ್ಲಿ ರೈತರಿಗೆ ವಿದರ್ಭ ಪ್ಯಾಕೇಜ್ ಎಂದು ಹೇಳಿದ್ದೀರಲ್ಲ, ಕರ್ನಾಟಕ ರಾಜ್ಯಕ್ಕೆ ಎಷ್ಟು ಹಣ ಕೊಟ್ಟಿದ್ದೀರಿ? ಅದರಲ್ಲಿ ಅವರು 1345 ಕೋಟಿ ಕೊಟ್ಟಿದ್ದೇವೆಂದು ಹೇಳಿದ್ದಾರೆ ನಮಗೆ ಕೇಂದ್ರದಿಂದ ಏನೂ ಹಣ ಇಲ್ಲ ರೈತರಿಗೆ ಸಹಾಯ ಮಾಡಬೇಕಾಗಿದೆ ಈ ರಾಜ್ಯದಲ್ಲಿ ಆತ್ಮಾಹುತಿ ನಡೆಯುತ್ತಿದೆ ಅದನ್ನು ತಡೆಗಟ್ಟಬೇಕು ಎನ್ನುವ ನಿಟ್ಟಿನಲ್ಲಿ ಹಣ ಆರು ತಿಂಗಳ ಹಿಂದೆಯೇ ಬಂದಿದೆ ಆ ಹಣ ಆರು ತಿಂಗಳ ಹಿಂದೆ ಬಂದಾಗ ಕಂದಾಯ ಮಂತ್ರಿಗಳೇ ಕ್ಯಾಬಿನೆಟ್ ಸಬ್ ಕಮಿಟಿಯ ಛೇರ್ಮನ್ ಆಗಬೇಕು ಅದೇನೊ ಒಳಜಗಳದ ಪರಿಣಾಮವಾಗಿ ರೇವಣ್ಣನವರಿಗೆ ಅದರ ಅಧ್ಯಕ್ಷತೆಯನ್ನು ಕೊಟ್ಟಿದ್ದಾರೆ ಬರಗಾಲ ಉಸ್ತುವಾರಿ ಸಮಿತಿಗೆ ತಾವು ಅಧ್ಯಕ್ಷರಾಗಿದ್ದೀರಿ, ನಾನು ಈ ಮಾತನ್ನು ತಾವು ಬರುವುದಕ್ಕಿಂತ ಮುಂಚೆ ಹೇಳಿದ್ದೇನೆ ವಿದರ್ಭ ಪ್ಯಾಕೇಜ್‌ನಲ್ಲಿ ಕೇಂದ್ರ ಸರ್ಕಾರದಿಂದ

ಹಣ ಬಂತು ರಾಜ್ಯ ಸಭೆಯಲ್ಲಿ ಕೆ ಬಿ ಶಾಣಪ್ಪನವರಿಗೆ ಶರದ್ ಪವಾರ್‌ರವರು ಇಷ್ಟು ಹಣ ಕೊಟ್ಟಿದ್ದೇವೆಂದು ಹೇಳಿದರು you have not prepared action plan ಕೇಂದ್ರದಿಂದ ಬಂದಂಥ ಹಣವನ್ನು ನೀವು ಉಪಯೋಗ ಮಾಡಿಕೊಂಡರೆ ಬಹುಶಃ ನಿಮಗೆ ಅವಮಾನ ಏನು ಆಗುತ್ತದೆ why you are hesitating? ಎಲ್ಲೆಲ್ಲಿ ಕೇಂದ್ರದಿಂದ ಹಣ ಬರುತ್ತದೆ, ಎಲ್ಲೆಲ್ಲಿ action plan prepare ಆಗಬೇಕಾಗುತ್ತದೆ ಇನ್ನುವರೆಗೆ ಮಾಡಿಲ್ಲ ಶರದ್‌ಪವಾರ್ ರವರು ಹೇಳಿದ್ದಾರೆ ಬೆಳಗಾಂದಲ್ಲಿ ಅಧಿವೇಶನ ಆಯಿತು ನಮ್ಮ ವಾಟಾಳ್ ನಾಗರಾಜ್‌ರವರಿಗೆ ಬಹಳ ತೃಪ್ತಿ ತಂದಿದೆ ಕನ್ನಡದ ಏಕೀಕರಣಕ್ಕಾಗಿ ಕನ್ನಡದ ಗಡಿನಾಡು ಭಾಗದಲ್ಲಿ ಅಧಿವೇಶನ ನಡೆಯಿತು ಆವೇಶಭರಿತರಾಗಿ ಅವರು ಹೇಳಿದರು ಏಕೆಂದರೆ ಕನ್ನಡದ ಬಗ್ಗೆ ಅವರು ಹೆಚ್ಚಿನ ಸೇವೆಯನ್ನು ಮಾಡಿದ್ದಾರೆ ವಾಟಾಳ್ ನಾಗರಾಜ್ ರವರು ಇದ್ದಾರೆ ಮತ್ತು ಅದೇರೀತಿಯಾಗಿ ಎಂ ಪಿ ಪ್ರಕಾಶ್ ರವರು ಕೂಡ ಸಾಕಷ್ಟು ಗಡಿಸಮಸ್ಯೆಗಳ ಬಗ್ಗೆ ಹೆಚ್ಚಿನ ರೀತಿಯಲ್ಲಿ ಕೆಲಸ ಕಾರ್ಯಗಳನ್ನು ಮಾಡಿದ್ದಾರೆ ನೀವು ಬೆಳಗಾವಿಯಲ್ಲಿ ಅಧಿವೇಶನ ನಡೆಸಿದಿರಿ ನಾವು ಕೂಡ ಏನು ಹೇಳಿದೆವು, ಬೆಳಗಾವಿಯಲ್ಲಿ ಅಧಿವೇಶನ ಮಾಡುತ್ತಿದ್ದೀರಿ ನಮ್ಮದೇನೂ ತೊಂದರೆಯಿಲ್ಲ ಕನ್ನಡದ ಬಗ್ಗೆ ನಿಮ್ಮ ಅನುಕಂಪ ಎಷ್ಟು ಇದೆ, ನಮ್ಮದೂ ಕೂಡ ಅಷ್ಟೇ ಇದೆ ಯಾವಾಗ ಬೆಳಗಾವಿಯ ಮಹಾಪೌರರು, ಬೆಳಗಾವಿ ಮಹಾರಾಷ್ಟ್ರಕ್ಕೆ ಸೇರಬೇಕು ಎಂದು ಹೇಳಿದಾಗ I was the first Chief Minister ವಾಟಾಳ್ ನಾಗರಾಜ್ ರವರು ಬಂದು ಅದನ್ನು ಸೂಪರ್‌ಸೀಡ್ ಮಾಡಬೇಕೆಂದು ಹೇಳಿದರು ಅವರು ಒಮ್ಮೆ ಮಾತ್ರ ಹೇಳುತ್ತಾರೆ, ಬೇರೆ ಬೇರೆ ಹೇಳುವುದಿಲ್ಲ ಅವರು ಹಿಂದಿನ ಕಥೆ ಸತ್ತವರದು ಹೇಳುತ್ತಾರೆ, ಇದ್ದವರದು ಅವರು ಹೇಳುವುದಿಲ್ಲ

ಶ್ರೀ ವಾಟಾಳ್ ನಾಗರಾಜ್ – ಇನ್ನೂ ನಾನು ಮಾತನಾಡಿಲ್ಲ ನನ್ನ ಭಾಷಣ ಬಂದಾಗ ಹೇಳುತ್ತೇನೆ

ಶ್ರೀ ಎನ್ ಧರ್ಮಸಿಂಗ್ – ಅವರದೆಲ್ಲಾ ಹೇಳುತ್ತೀರಿ, ಆದರೆ ನಾವು ಮಾಡಿರುವುದನ್ನು ನೀವು ಹೇಳುವುದಿಲ್ಲವೆಂದು ನಾನು ಹೇಳಿದೆ ನನಗೆ ಮಹಾರಾಷ್ಟ್ರ ರಾಜ್ಯದ ಮುಖ್ಯಮಂತ್ರಿಗಳು ಫೋನ್ ಮಾಡಿ ಈ ರೀತಿಯಾದ ತೀರ್ಮಾನವನ್ನು

ತೆಗೆದುಕೊಂಡಿರಿ ಎಂದು ಕೇಳಿದರು ಕನ್ನಡ ನಾಡಿನಲ್ಲಿ ಬೆಳಗಾಂ ಮಹಾನಗರ ಪಾಲಿಕೆ ಇದೆ ಅವರು ಚರಂಡಿ ಮತ್ತು ನೀರಿನ ಬಗ್ಗೆ ಚರ್ಚೆ ಮಾಡಬೇಕು ಅದನ್ನು ಬಿಟ್ಟು ಬೆಳಗಾಂ ಮಹಾರಾಷ್ಟ್ರಕ್ಕೆ ಹೋಗಬೇಕೆಂದು ನಿರ್ಣಯ ಮಾಡುತ್ತಾರೆ ಆ ಸಂದರ್ಭದಲ್ಲಿ ನನಗೆ ಸಾಕಷ್ಟು ಒತ್ತಡ ಬಂದರೂ ಕೂಡ I was the first Chief Minister, I have taken the decision ಇದನ್ನು ಯಾರು ಮಾಡುವುದಕ್ಕೆ ಆಗುವುದಿಲ್ಲ ನನಗೆ ಅಪ್ರಿಸಿಯೇಶನ್ ಬೇಕಾಗಿಲ್ಲ ಆದರೆ, ಈಗ ಹೇಳತಕ್ಕಂಥ ಸಂದರ್ಭ ಬಂದಿದ್ದರಿಂದ ಈ ಮಾತನ್ನು ಹೇಳುತ್ತಿದ್ದೇನಷ್ಟೆ ಈಗ ಮಾನ್ಯ ಎಂ ಪಿ ಪ್ರಕಾಶ್‌ರವರೂ ಸಹ ನಮ್ಮ ಜೊತೆಯಲ್ಲಿದ್ದ, ಅವರೂ ಕೂಡ ಅದರಲ್ಲಿ ಭಾಗಿಯಾಗಿದ್ದರು It was the decesion of coalition Government ಆದ್ದರಿಂದ ಅದು ನನ್ನದೇ ಎಂದು ಹೇಳುತ್ತಿಲ್ಲ 20 ತಿಂಗಳ ಕಾಲ ನಾನು ಸಮ್ಮಿಶ್ರ ಸರ್ಕಾರದ ಮುಖ್ಯಮಂತ್ರಿಯಾಗಿದ್ದಂಥ ಸಂದರ್ಭದಲ್ಲಿ ಈ ಒಂದು ನಿರ್ಧಾರ ತೆಗೆದುಕೊಂಡಿದ್ದೇನೆ ಮುಖ್ಯಮಂತ್ರಿಗಳು ಎಲ್ಲಿಗೆ ಹೋಗಿದ್ದಾರೆಂದು ಬೆಳಗಾಂನಲ್ಲಿ ಕೇಳಿದ್ದಕ್ಕೆ ಕಬ್ಬಿನ ಬೆಳೆಗಾರರ ಜೊತೆ ಮಾತನಾಡುವುದಕ್ಕೆ ಹೋಗಿದ್ದರೆಂದು ಹೇಳಿದರು ಈ ಭಾಗದಲ್ಲಿರತಕ್ಕಂಥ ಕಬ್ಬು ಬೆಳೆಗಾರರಿಗೆ ಬಹಳ ತೊಂದರೆ ಇದೆ ಎಂದು ಹೇಳಿದರು ಆದರೆ, ಆ ಭಾಗದಲ್ಲಿರತಕ್ಕಂತಹ ಸಕ್ಕರೆ ಕಾರ್ಖಾನೆಗಳು ಮುಚ್ಚುವಂಥ ಪರಿಸ್ಥಿತಿ ಇದೆ ರಾಷ್ಟ್ರ ಮಟ್ಟದಲ್ಲಿ ಕೂಡ ಬಹಳಷ್ಟು ತೊಂದರೆಯಾಗಿದೆ ಎಂಬ ಮಾತನ್ನು ಮೊನ್ನೆ ದಿವಸ ಮಾನ್ಯ ಶರದ್ ಪವಾರ್‌ರವರು ಇಲ್ಲಿಗೆ ಬಂದಾಗ ಸಹ ಹೇಳಿದರು ಮಾನ್ಯ ಬಿ ಆರ್ ಪಾಟೀಲ್‌ರವರು ಇಲ್ಲಿ ಕುಳಿತುಕೊಂಡಿದ್ದಾರೆ ಇವತ್ತಿನ ದಿವಸ ಅವರಿಗೆ ಮತ್ತು ನಮಗೆ ಇದರಿಂದ ತೊಂದರೆಯಾಗಿದೆ ಆದರೆ ಎಂ ವೈ ಪಾಟೀಲ್‌ನವರಿಗೆ ತೊಂದರೆ ಇದ್ದರೂ ಸಹ ಕೇಳುವುದಿಲ್ಲ ಸುಮ್ಮನೆ ತಿರುಗಾಡುತ್ತಿರುತ್ತಾರೆ ಇವತ್ತಿನ ದಿವಸ ಸರ್ಕಾರ ಕಬ್ಬಿಗೆ ಸಬ್ಸಿಡಿ ಕೊಡಬೇಕಾಗಿದೆ ಮಹಾರಾಷ್ಟ್ರದಲ್ಲಿ ಏನಾಗಿದೆ ಎಂದರೆ, ಅವರು 100 ರೂಪಾಯಿಯನ್ನು ಜಾಸ್ತಿ ಮಾಡಿದ್ದಾರೆ ಆದರೆ, ನಮ್ಮಲ್ಲಿ ಮಾಡುತ್ತಿಲ್ಲ ಮತ್ತೆ ಎಲ್ಲೆಲ್ಲಿ ಶುಗರ್ ಫ್ಯಾಕ್ಟರಿ ಕೆಲಸ ಮಾಡುತ್ತಿದೆಯೋ ಅಲ್ಲಿ ಅವುಗಳಿಗೆ ಲೈಸೆನ್ಸ್ ಕೊಡುತ್ತಿಲ್ಲ ನಾನು ಯಾವತ್ತೂ ಕೂಡ ಹಗುರವಾಗಿ ಮಾತನಾಡುವುದಿಲ್ಲ ನಾನು ಈಗ ತಾನೆ ಮಾನ್ಯ

ರವೀಂದ್ರನಾಥ್‌ರವರ ಜೊತೆ ಮಾತನಾಡಿದ್ದೇನೆ Ugar Sugar factory, that is one of the best factory in the Karnataka State ಅಲ್ಲಿ 1000 ಟನ್ ಪ್ರತಿದಿನಾ ಕ್ರಶಿಂಗ್ ಮಾಡುತ್ತಾರೆ ಅವರು ಫ್ಯಾಕ್ಟರಿ ಮಾಡಿದ್ದಾರೆ ಆದರೆ, ಅವರಿಗೆ ಇವರು ಕೊಡುತ್ತಿಲ್ಲ ಮಾನ್ಯ ದರ್ಶನಾಪುರ ಬೇಡವೆಂದು ಹೇಳುತ್ತಿದ್ದಾರೆಯೋ ಅಥವಾ ಮಾನ್ಯ ರವೀಂದ್ರರವರು ಬೇಡವೆಂದು ಹೇಳುತ್ತಿದ್ದಾರೆಯೋ ಅಥವಾ ಬೇರೆ ಯಾರಾದರೂ ಬೇಡವೆಂದು ಹೇಳುತ್ತಿದ್ದಾರೆಯೋ ಗೊತ್ತಿಲ್ಲ ಅದು ನನ್ನ ಕ್ಷೇತ್ರದಲ್ಲಿ ಇಲ್ಲ ಅದು ಜೇವರ್ಗಿ, ಶಹಪುರ, ಸುರಪುರ, ಬಾರ್ಡರ್‌ನಲ್ಲಿದೆ ಇವತ್ತಿನ ದಿವಸ ಅಲ್ಲಿಗೆ ಕೊಡುತ್ತಿಲ್ಲ ಇವತ್ತು ರೇಣುಕಾ ಶುಗರ್ ಫ್ಯಾಕ್ಟರಿಗೆ ಕೊಟ್ಟಿದ್ದೇವೆ ಆದರೆ ಅಲ್ಲಿ ಹಳೆಯ ಮಷಿನರಿಗಳನ್ನು ತಂದಿದ್ದಾರೆ ಆದರೂ ಅಲ್ಲಿ ಮಾಡುವುದಕ್ಕೆ ಆಗುತ್ತಿಲ್ಲ ಇವತ್ತಿನ ದಿವಸ ಕಬ್ಬು ಬೆಳೆಯತಕ್ಕಂಥ ನೂರಾರು ರೈತರು, ಅವರದೇ ಪಕ್ಷದ ಕೇದರ್ ಲಿಂಗಯ್ಯನವರು ಜೇವರ್ಗಿಯಲ್ಲಿ ಇವತ್ತು ಉಪವಾಸ ಸತ್ಯಾಗ್ರಹ ಮಾಡುತ್ತಿದ್ದಾರೆ ತಾವು ರೈತರಿಗೆ ಈಗ ಸಹಾಯ ಮಾಡುವುದಕ್ಕೆ ಹೊರಟಿದ್ದೀರಿ, ಆದರೆ ನಾನು ಹೇಳುವುದೇನೆಂದರೆ, ಕಬ್ಬು ಬೆಳೆದಿರತಕ್ಕಂಥ ರೈತರ ಅವಸ್ಥೆಯನ್ನು ತಾವು ನೋಡಿ ತಾವು you try to ascertain from the Maharashtra Government ಅವರನ್ನು ಕೇಳಿ ಅಲ್ಲಿನ ಕೋ-ಅಪರೇಟಿವ್ ಮಿನಿಸ್ಟರ್ ಹತ್ತಿರ ಮಾತನಾಡಿ ಅಲ್ಲಿ ಅವರು ಒಂದು ಟನ್‌ಗೆ 100 ರೂಪಾಯಿ ಹೆಚ್ಚಿಸಿದ್ದಾರೆ ಕಬ್ಬು ಬೆಳೆಯುವುದಕ್ಕೆ ಗೊಬ್ಬರ ಹಾಕಬೇಕು ಮತ್ತೆ ಹೆಚ್ಚು ನೀರನ್ನು ಸಹ ಕೊಡಬೇಕಾಗುತ್ತದೆ ಆದರೆ, ಇದರ ಬಗ್ಗೆ ತಮ್ಮ ಬಜೆಟ್‌ನಲ್ಲಿ ಏನೂ ಪ್ರಸ್ತಾಪ ಮಾಡಿಲ್ಲ ಕಬ್ಬು ಬೆಳೆಗಾರರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಸಮಾಲೋಚನೆ ಮಾಡುತ್ತಾರೆಂದು ಬೆಳಗಾಂನಲ್ಲಿ ಹಾರಾಡಿ ಹೇಳುತ್ತಿದ್ದೀರಿ ಮುಖ್ಯಮಂತ್ರಿಗಳು ಎಲ್ಲಿ ಸಮಾಲೋಚನೆ ಮಾಡುತ್ತಾರೆಂದು ಗೊತ್ತಿಲ್ಲ ಈ ಸದನದಲ್ಲಿ ಮಹತ್ವವಾದ ಚರ್ಚೆಯಾಗುತ್ತಿದೆ ಆದರೆ ಈ ಒಂದು ಬಜೆಟ್ ಸೆಷನ್‌ನಲ್ಲಿ ಮಾನ್ಯ ಮುಖ್ಯಮಂತ್ರಿಗಳು ಎರಡು ದಿನಗಳಿಂದ ಇಲ್ಲ ನಾವು ಇದರ ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ಹೋದರೆ, ನೀವು ತಕರಾರು ಮಾಡುವುದರಿಂದ, ನಾವು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ ರಾಜ್ಯದ ರೈತರಿಗೆ ಸಹಾಯ ಮಾಡುತ್ತೇವೆಂಬ ಮಾತನ್ನು ಹೇಳುತ್ತಿದ್ದೀರಿ 1980

ರಲ್ಲಿ ನಾನು ಲೋಕಸಭೆಗೆ ಆರಿಸಿ ಹೋಗಿದ್ದೆ ಮತ್ತೆ ಸಿ ಎಂ ಸ್ಟೀಫನ್‌ರವರು ಮಾನ್ಯ ಅಟಲ್ ಬಿಹಾರಿ ವಾಜಪೇಯಿಯವರ ವಿರುದ್ದ ಕಂಟೆಸ್ಟ ಮಾಡಿ ಸೋತರು ಮತ್ತೆ ನಮ್ಮ ಪಕ್ಷದ ಪರವಾಗಿ ಅಭ್ಯರ್ಥಿಯಾಗಿ ಬಂದರು ಆಗ ದಿವಂಗತ ಗುಂಡೂರಾವ್‌ರವರು ಈ ರಾಜ್ಯದ ಮುಖ್ಯಮಂತ್ರಿಯಾಗಿದ್ದರು ನಾವು ಎಲ್ಲಾ ಕಡೆ ಹೋದಾಗ ರೀಜನಲ್ ಇಂಬ್ಯಾಲೆನ್ಸ್ ನೀಗಿಸಬೇಕೆಂದು ಅಳಲು ಎಲ್ಲಾ ಕಡೆ ಇತ್ತು ಹೈದರಾಬಾದ್ ಪ್ರಾಂತ್ಯದಲ್ಲಿರತಕ್ಕಂಥ ಗುಲ್ಬರ್ಗಾ, ರಾಯಚೂರು ಮತ್ತು ಬೀದರ್ ಜಿಲ್ಲೆಗೆ ಹೆಚ್ಚಿನ ಆದ್ಯತೆ ಕೊಡಬೇಕು ನಮ್ಮ ರಾಜ್ಯದ ಹಿರಿಯ ಅಧಿಕಾರಿಗಳಾಗಿದ್ದ ಬಾಲಸುಬ್ರಮಣಿಯನ್‌ರವರು ಈಗ ನಿವೃತ್ತರಾಗಿದ್ದಾರೆ ಅವರು ಒಂದು ಕಮಿಟಿ ಮಾಡಿದ್ದೀರಿ ನಾನೂ ಕೂಡ ಒಂದು ಕೋ-ಆರ್ಡಿನೇಷನ್ ಕಮಿಟಿ ಮಾಡಿ ಅದಕ್ಕೆ ಅಧ್ಯಕ್ಷನಾಗಿದ್ದೆ ಮತ್ತು ಮಾನ್ಯ ಮಲ್ಲಿಕಾರ್ಜುನ್ ಖರ್ಗೆಯವರು ಹಾಗೂ ಆ ಭಾಗದ ಎಲ್ಲಾ ಮಂತ್ರಿಗಳಿದ್ದರು ಮತ್ತೆ ನಾವು ವೆಸ್ಟ್‌ಬೆಂಗಾಲ್‌ನ ಬುಂದೇಲ್ ಖಂಡ್ ಗೆ ಹೋಗಿದ್ದೇವು ಮತ್ತು ಯು ಪಿ ಯಲ್ಲಿ ಮಾನ್ಯ ವಿ ಪಿ ಸಿಂಗ್‌ರವರು ಮುಖ್ಯಮಂತ್ರಿಯಾಗಿದ್ದರು ಮತ್ತೆ ವಿದರ್ಭಾಗೆ ಹೋಗಿದ್ದೇವು, ಅಲ್ಲಿ ಸಿ ಎನ್ ಜೈನ್‌ರವರು ಮುಖ್ಯಮಂತ್ರಿಯಾಗಿದ್ದರು 1968 ರಲ್ಲಿ ಮಾನ್ಯ ಚೆನ್ನಾರೆಡ್ಡಿಯವರ ನೇತೃತ್ವದಲ್ಲಿ ನಮಗೆ ಪ್ರತ್ಯೇಕವಾದ ಪ್ರಾಂತ್ಯಬೇಕೆಂದು ಆಗ ದೊಡ್ಡ ಗಲಾಟೆ ಮತ್ತು ಚಳುವಳಿ ಆಯಿತು ಮತ್ತೆ ಅದೇ ರೀತಿಯಾದ ಚಳುವಳಿ 1950 ರಲ್ಲಿ ಆಯಿತು ಇದು ಮಾನ್ಯ ಶ್ರೀರಾಮರೆಡ್ಡಿಯವರಿಗೆ ಗೊತ್ತಿದೆ ಬೂದಾನದ ಚಳುವಳಿ ಅಲ್ಲಿಯೇ ಪ್ರಾರಂಭವಾಯಿತು ಅಲ್ಲಿ ಭೂ ಮಾಲೀಕರ ಒಂದು ದೊಡ್ಡ ಕ್ರಾಂತಿಯೇ ಆಯಿತು ಶ್ರೀಮತಿ ಇಂದಿರಾಗಾಂಧಿಯವರು ಈ ರಾಷ್ಟ್ರದ ಪ್ರಧಾನ ಮಂತ್ರಿಯಾಗಿದ್ದಂತಹ ಸಂದರ್ಭದಲ್ಲಿ 100 ಕೋಟಿ ರೂಪಾಯಿಗಳನ್ನು ತೆಲಂಗಾಣ ಡೆವಲಪ್‌ಮೆಂಟ್‌ಗೆ ಕೊಟ್ಟರು ಅದೇ ರೀತಿಯಾಗಿ ರಾಜ್ಯದಲ್ಲಿ ನಾವೂ ಕೂಡ ಒಂದು ಪ್ರಿಪರೇಟರಿ ಕಮಿಟಿ ಮಾಡಿಕೊಂಡು ಎಲ್ಲ ಕಡೆ ಹೋಗಿ we had discussions with Planning Commission members ನಾವು ಚರ್ಚೆ ಮಾಡಿ ಬಂದ ಮೇಲೆ ಈ ರಾಜ್ಯದ ಹಿಂದುಳಿದ ಪ್ರದೇಶಗಳ ಅಭಿವೃದ್ಧಿಗೆ ಸಂಬಂಧಪಟ್ಟಂತೆ ಹೈದ್ರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿಯನ್ನು ಪ್ರಾರಂಭ ಮಾಡಲಾಯಿತು ಅದಕ್ಕೆ

ಹಣ ಕೊಡುತ್ತಾ ಬಂದೆವು, ಆನಂತರ ಬಂದ್ ಆಯಿತು, ಮತ್ತೆ ಮಾನ್ಯ ರಾಮಕೃಷ್ಣ ಹೆಗಡೆಯವರು ಬಂದಾಗ ಅದನ್ನು ಡಿಸ್ಟ್ರಿಕ್ಟ್ ಲೆವೆಲ್‌ನಲ್ಲಿ ಮಾಡಬೇಕೆಂದು ಮತ್ತು ಮೈದಾನ ಏರಿಯಾ ಡೆವಲಪ್‌ಮೆಂಟ್ ಮತ್ತು ಮಲೆನಾಡು ಏರಿಯಾ ಡೆವಲಪ್‌ಮೆಂಟ್ ಮಂಡಳಿಯನ್ನು ಮಾಡಲಾಯಿತು ಮಾನ್ಯ ಪ್ರಕಾಶ್‌ರವರ ಗಮನಕ್ಕೆ ತರುವುದೇನೆಂದರೆ, ಮಾನ್ಯ ಎಸ್ ಎಂ ಕೃಷ್ಣರವರು ಮುಖ್ಯ ಮಂತ್ರಿಯಾಗಿದ್ದಂಥ ಸಂದರ್ಭದಲ್ಲಿ, ಬೀದರ್‌ನಿಂದ ಬೆಳಗಾಂನವರೆಗೆ ಅಂದರೆ ಉತ್ತರ ಕರ್ನಾಟಕ ಭಾಗದ ಸಮಸ್ಯೆಗಳ ಬಗ್ಗೆ ಒಂದು ಸಮಗ್ರವಾದ ವರದಿ ಕೊಡಬೇಕೆಂದು ನುಂಜುಂಡಪ್ಪನವರಿಗೆ ವಹಿಸಿದರು ನಂಜುಂಡಪ್ಪನವರು ವರದಿ ಕೊಟ್ಟ ಮೇಲೆ ಏನಾಯಿತೆಂದರೆ, ಮಾನ್ಯ ಎಸ್ ಎಂ ಕೃಷ್ಣರವರು ಅದನ್ನು ಅನುಷ್ಠಾನಕ್ಕೆ ತರತಕ್ಕಂಥ ರೀತಿಯಲ್ಲಿ ಕಾರ್ಯಕ್ರಮ ಕೈಗೊಂಡರು ಬಿಜಾಪುರದಲ್ಲಿ ಮಹಿಳಾ ಕಾಲೇಜು ಆಗಬೇಕೆಂದು ಹೇಳಿದಾಗ ಇಲ್ಲಿನ ಹೆಣ್ಣು ಮಕ್ಕಳು ಬಿಜಾಪುರಕ್ಕೆ ಹೇಗೆ ಹೋಗುವುದಕ್ಕೆ ಆಗುತ್ತದೆಂದು ಹೇಳಿದಾಗ ಅಲ್ಲಿನ ಹೆಣ್ಣು ಮಕ್ಕಳು ಇತ್ತ ಕಡೆ ಬರಬೇಕೆಂದು ನಾನು ಮತ್ತು ಖರ್ಗೆಯವರು ಹೇಳಿದ್ದೆವು ಆದ್ದರಿಂದ ಮಹಿಳಾ ವಿಶ್ವವಿದ್ಯಾಲಯ ಮಾಡಿ ಮತ್ತೆ ಪಶು ವಿಶ್ವವಿದ್ಯಾನಿಲಯವನ್ನು ಬೀದರ್‌ನಲ್ಲಿ ಆಗಲಿ ಹಾಗೆಯೇ, ಹನಿ ನೀರಾವರಿ ನಿಗಮ ಹುಬ್ಬಳ್ಳಿಯಲ್ಲಿ ಆಗಲಿ, ಅಂದರೆ ಒಂದು ವರದಿ ಕೊಟ್ಟಮೇಲೆ ಅನುಷ್ಠಾನಕ್ಕೆ ತರತಕ್ಕಂಥ, ಕೆಲಸವನ್ನು ಮಾನ್ಯ ಎಸ್ ಎಂ ಕೃಷ್ಣರವರು ತಮ್ಮ ಕಾಲದಲ್ಲಿ ಮಾಡಿದರು ಆದರೆ, ಇವತ್ತಿನ ದಿವಸ ನಂಜುಂಡಪ್ಪರವರ ವರದಿ ಏಕೆ ಅನುಷ್ಠಾನವಾಗುತ್ತಿಲ್ಲ? ಕಬ್ಬು ಬೆಳೆಗಾರರಿಗೆ ಹೆಚ್ಚಿನ ಹಣ ಕೊಡ್ತಕ್ಕಂಥ ಕೆಲಸ ಆಗಬೇಕು ನಂಜುಂಡಪ್ಪನವರ ವರದಿ ಸಮಗ್ರವಾಗಿ ಅನುಷ್ಠಾನಕ್ಕೆ ತರತಕ್ಕಂಥ ರೀತಿಯಲ್ಲಿ ನಾವೆಲ್ಲ ಅದರ ಬಗ್ಗೆ ನಿರ್ಧಾರ ತೆಗೆದುಕೊಳ್ಳಬೇಕಾಗುತ್ತದೆ ಈಗ ನಂಜುಂಡಪ್ಪನವರ ವರದಿ ಹೋಯಿತು ಈಗ ಏನು ಮಾಡಿದ್ದಾರೆಂದರೆ, ನಿವೃತ್ತ ಮುಖ್ಯ ಕಾರ್ಯದರ್ಶಿಯಾಗಿದ್ದ ರವೀಂದ್ರರವರ ನೇತೃತ್ವದಲ್ಲಿ ಒಂದು ಕಮಿಟಿ ಮಾಡಿದ್ದೀರಿ ತಾವು ಎಷ್ಟು ಕಮಿಟಿ ಮಾಡುತ್ತೀರಿ? ಎಕನಾಮಿಸ್ಟ್ ಆಗಿರುವ ನಂಜುಂಡಪ್ಪನವರು ಈಗಾಗಲೇ ಒಂದು ಸಮಗ್ರವಾದ ವರದಿಯನ್ನು ಕೊಟ್ಟಿದ್ದಾರೆ ಇವತ್ತು ಬೆಳಗಾಂ ಸೆಷನ್‌ನಲ್ಲಿ ಕೇವಲ ಜಿಲೇಬಿ ಊಟ ಆಯಿತು, ಬೇರೇನು ಅಲ್ಲಿ ಆಗಲಿಲ್ಲ ನಂಜುಂಡಪ್ಪನವರ ವರದಿ

ಪ್ರಕಾರ ಅಭಿವೃದ್ಧಿ ಮಾಡುವುದಕ್ಕೆ ಹಣ ಕೊಟ್ಟಿದ್ದೀರಾ? ಮಾನ್ಯ ಯಡಿಯೂರಪ್ಪನವರು ಬಹಳ ಹಣ ಕೊಡುತ್ತಾರೆಂದು ನಾವು ತಿಳಿದುಕೊಂಡಿದ್ದೆವು ಆದರೆ, ಕೊಡಲಿಲ್ಲ ನಂಜುಂಡಪ್ಪನವರ ವರದಿ ಪ್ರಕಾರ 1575 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಬೇಕಾಗಿತ್ತು ಆದರೆ, ಈಗ ಎಷ್ಟು ಹಣ ಬಿಡುಗಡೆ ಮಾಡಿದ್ದೀರಿ? ದೇವಾಲಯಕ್ಕೆ ಮತ್ತು ಮರಕ್ಕೆ ಹೆಚ್ಚು ಹಣ ಕೊಟ್ಟಿದ್ದೇನೆಂದು ದೊಡ್ಡದಾಗಿ ಹೇಳಿದ್ದೀರಿ ಮಾನ್ಯ ನಾಗರಾಜ ಶೆಟ್ಟಿಯವರು ಮಾತನಾಡಿದ್ದನ್ನು ಟಿ ವಿ ಯಲ್ಲಿ ನೋಡಿದೆ ಇವತ್ತಿನ ದಿವಸ ಮರಗಳ ಜೀರ್ಣೋದ್ಧಾರ ಮಾತಕ್ಕಂಧದ್ದು ನಮ್ಮ ಕೆಲಸ, ಭಕ್ತಿ ಪೂರ್ವಕವಾಗಿ ಕೊಟ್ಟಿದ್ದಾರೆಂದು ನಿಮ್ಮ ಶಿಷ್ಯರು ಹೇಳುತ್ತಿದ್ದಾರೆ ಆದರೆ, ಅದು ಆಗುವುದಿಲ್ಲ ನಾವು ಇಂಧವುಗಳೆಲ್ಲವನ್ನು ಬಹಳ ನೋಡಿದ್ದೇವೆ ರಾಷ್ಟ್ರಮಟ್ಟದಲ್ಲಿ ಈ ರೀತಿ ಆದ ಘೋಷಣೆ ಕೊಟ್ಟಿದ್ದರಿಂದ ನಿಮ್ಮ ಪಕ್ಷ ಏನಾಗಿದೆ ಎಂಬುದು ತಮಗೆ ಗೊತ್ತಿದೆಯೇ? ಇವತ್ತಿನ ದಿವಸ ಎಲ್ಲದಕ್ಕೂ ಒಂದ ಬೇಸ್ ಬೇಕು ಇವತ್ತು ಆ ರೀತಿ ಮಾಡಿದ್ದರೆ ರಾಷ್ಟ್ರಕ್ಕೆ ಶ್ರೀರಾಮ ನವಮಿ ಮಾಡುವುದಕ್ಕೆ ಬರುತ್ತಿರಲಿಲ್ಲ ನಮ್ಮ ಕ್ಷೇತ್ರಕ್ಕೆ ಎಷ್ಟು ದುಡ್ಡು ಕೊಟ್ಟಿದ್ದೀರಿ ಎಂಬುದನ್ನು ಕೇಳಿ ರಾಜ್ಯದ ಸಂಪನ್ಮೂಲವನ್ನು ಅಭಿವೃದ್ಧಿಗಾಗಿ ಎಷ್ಟು ಬಿಟ್ಟು ಹೋಗಿದ್ದೆವು ಕೇಳಿ, ಇವರು ನಮ್ಮ ಖಜಾನೆ ತುಂಬಿದೆ ಅಂತ ಹೇಳುತ್ತಾರೆ, ಆದರೆ ಈ ರಾಜ್ಯದ SC/ST ಜನರಿಗೆ ಫೀ ತುಂಬಲು ನಿಮಗೆ ಆಗುತ್ತಾ ಇಲ್ಲ ಆ ವರ್ಗದ ವಿದ್ಯಾರ್ಥಿಗಳಿಗೆ ಎಲ್ಲ ಕಡೆ ನೋಟಿಸ್ ಇಶ್ಯೂ ಆಗಿದ್ದು ಪಾಪ ಅವರು ಬಂದು ಗೋಳಾಡುತ್ತಿದ್ದಾರೆ, ವಿಧಾನಪರಿಷತ್ತಿನಲ್ಲಿ ಹೇಳಿದರು, 25 ಕೋಟಿ ಇವತ್ತೇ ಬಿಡುಗಡೆ ಮಾಡುತ್ತೇನೆ ಎಂದು ಶಂಕರಮೂರ್ತಿ ಅಂತಹ ಕೆಲಸ ಮಾಡುವುದಿಲ್ಲ ಏನು ನಿಮ್ಮದು, ಎಲ್ಲಿಗೆ ಬಂದಿದೆ? ಇವತ್ತು ನಿಮಗೆ ಯಾವುದರ ಕಾಳಜಿಯೂ ಇಲ್ಲ ಘೋಷಣೆ ಮಾಡಿದ ರೀತಿ ಕೆಲಸಗಳು ಆಗುತ್ತಿಲ್ಲ ಇನ್ನು ನೀರಾವರಿಯ sector outlay ಮೊನ್ನೆ ಸಿದ್ಧರಾಮಯ್ಯನವರು ಬಹಳ ಪರಿಣಾಮಕಾರಿಯಾಗಿ ಮಾತನಾಡಿದರು ಯಾಕೆಂದರೆ he is the only man who has presented 7 budgets ಮಹಾರಾಷ್ಟ್ರದಲ್ಲಿ ಸುಶೀಲಕುಮಾರ ಶಿಂಧೆ 11 ಬಜೆಟ್ ಕೊಟ್ಟಿದ್ದಾರೆ ನಿಮ್ಮ ಎರಡನೇ ಬಜೆಟಿಗೇ ನಿಮ್ಮ ಪರಿಸ್ಥಿತಿ ಹೀಗಾಗುತ್ತಿದೆ ನೀರಾವರಿಗೆ, ಎನರ್ಜಿಗೆ, ಕೃಷಿಗೆ ಆದ್ಯತೆ ಕೊಡಬೇಕು 2005–06ರಲ್ಲಿ ನಾವು

ಕೊಟ್ಟಿದ್ದು 29%, ನೀವು ಬಂದ ಮೇಲೆ 2006–07ರಲ್ಲಿ that has been reduced to 26% 2007-08 ರಲ್ಲಿ 17%, ಎಲ್ಲಿದೆ ಆದ್ಯತೆ? ಎನರ್ಜಿಗೆ 2005–06 ರಲ್ಲಿ 13%, 2006–07 ರಲ್ಲಿ 10%, 2007–08 ರಲ್ಲಿ 11 82% ರಾಜ್ಯದ ವಿದ್ಯುತ್ ಬೇಡಿಕೆಗೆ ಇಷ್ಟು ಸಾಕಾ? ನಮ್ಮ ಸುಶೀಲಕುಮಾರ ಶಿಂಧೆ 4 power projects ನಲ್ಲಿ ತದಡಿ ಕೂಡ ಒಂದು ತದಡಿಯಲ್ಲಿ ಪರಿಶಿಷ್ಟ ಜನರು ಸ್ವಾಮಿಗಳು ವಿರೋಧ ಮಾಡಿದ್ದಾರೆ ಪರಿಸರ ಹಾಳಾಗುತ್ತದೆ ಎಂಬ ವಾದವಿದೆ ನಾನು ಸಿದ್ಧರಾಮಯ್ಯ ಪತ್ರಿಕೆಗೆ ಏನು ಹೇಳಿದ್ದೇವೆ ಅಂದರೆ ರಾಜ್ಯದ ವಿದ್ಯುತ್ ಬಳಕೆದಾರರಿಗೆ ಇವತ್ತು ತೊಂದರೆಯಾಗುತ್ತಿದೆ, ಇದನ್ನು ಸರಿಯಾದ ರೀತಿ ನಿರ್ವಹಣೆ ಮಾಡಬೇಕು ಸುಶೀಲಕುಮಾರ ಶಿಂಧೆ "ನೀವು ಮಾಡಲಾರದೇ ಹೋದರೆ ಬೇರೆ ಕಡೆಗೆ shift ಮಾಡುತ್ತೇನೆ" ಅಂದರು ಇವತ್ತು ನಾಗಾರ್ಜುನ ಹಾಗೇ ನಿಂತುಬಿಟ್ಟಿದೆ ಅವರೇ ಪ್ರತಿಭಟನೆ ಮಾಡುತ್ತಿದ್ದಾರೆ ನಾವು ಮಂಗಳೂರಿಗೆ ಹೋದಾಗ ನಾಗಾರ್ಜುನ ಮಾಡಬಾರದು, ಪರಿಸರ ಹಾಳಾಗುತ್ತದೆ ಅಂತ ದೊಡ್ಡ ಪ್ರತಿಭಟನೆ ನಡೆಯಿತು ಮತ್ತೊಂದು ಕಡೆ ನಾವು ಮಾಡೇ ತೀರುತ್ತೇವೆ ಎಂಬ ಹರಮಾರಿತನ ಇದೆ ಪ್ರಜಾಪ್ರಭುತ್ವದಲ್ಲಿ ಹರಮಾರಿತನ ನಡೆಯುವುದಿಲ್ಲ ಇಂತಹ ಸಮಸ್ಯೆಗಳು ಬಂದಾಗ ಸಮಾಲೋಚನೆ ಮಾಡಬೇಕು ವಿವಾದ ಇತ್ಯರ್ಥ ಮಾಡಬೇಕು ತದಡಿ ಹೋಯಿತು, ಎಲ್ಲಿಂದ ವಿದ್ಯುತ್ ತರುತ್ತೀರಿ? ಇನ್ನು ಕೃಷಿ ಕ್ಷೇತ್ರದಲ್ಲಿ 2005–06 ರಲ್ಲಿ 6 33%, 2006–07 ರಲ್ಲಿ 5 79%, ಕೃಷಿಯನ್ನು ಅಭಿವೃದ್ಧಿ ಮಾಡುವ ತಮ್ಮ vision ಗೆ ಧಕ್ಕೆಯಾಗುತ್ತಿದೆ Fiaance Minister must have a vision about the state progress ಎಲ್ಲಿದೆ? 2007–08ರಲ್ಲಿ 7 6%ಗೆ ಈಗ ಬಂದಿದ್ದಾರೆ ಆದರೆ plan outlay ನಲ್ಲಿ ತಾವು ಎಡವಿದ್ದೀರಿ ಇನ್ನು ಉದ್ಯೋಗ ಖಾತರಿ 1970ರ ದಶಕದಲ್ಲಿ ದೇಶಕ್ಕೆ 14 ವರ್ಷ ಕಾಲ ಪ್ರಧಾನಮಂತ್ರಿಯಾಗಿ ಕೆಲಸ ಮಾಡಿದ ಶ್ರೀಮತಿ ಇಂದಿರಾಗಾಂಧಿ ಗರೀಬಿ ಹರಾವೋ ಘೋಷಣೆ ಮಾಡಿದರು ಎಷ್ಟರ ಮಟ್ಟಿಗೆ ಗರೀಬಿ ಹೋಯಿತು ಎಂಬ ಚರ್ಚೆ ಬೇರೆ, she was the first Prime Minister of this country ದೇಶದ ಬಡವರ ಮನಸ್ಸಿಗೆ, " here is a prime minister ನಮ್ಮ ಬಡತನ ನಿರ್ಮೂಲನ ಬಗ್ಗೆ ಮಾತನಾಡುವರು" ಎಂಬ ವಿಶ್ವಾಸ ಮೂಡಿಸಿದರು ಬ್ಯಾಂಕ್ ರಾಷ್ಟ್ರೀಕರಣವಾಯಿತು ಎಷ್ಟೊಂದು ಕ್ರಾಂತಿಕಾರಿಕ

ಕೆಲಸ ಮಾಡಿದರು ಇವತ್ತೂ UPA chairman ಶ್ರೀಮತಿ ಸೋನಿಯಾ ಗಾಂಧಿ, ಪ್ರಧಾನಿ ಮನಮೋಹನಸಿಂಗ್ have introduced Employment Guarantee Scheme in the state ಈಗ ಒಬ್ಬ ಕೂಲಿಕಾರನಿಗೆ 68 ರೂ ಕೊಡುತ್ತಾರೆ ಕರ್ನಾಟಕಕ್ಕೆ 108 ಕೋಟಿ ಬಂದಿದೆ ಚಿತ್ರದುರ್ಗ, ಬೀದರ್, ರಾಯಚೂರು, ಗುಲ್ಬರ್ಗಗಳ utilization certificate ಕೊಟ್ಟರೆ ಇನ್ನೂ ಹೆಚ್ಚಿನ ಹಣ ಕೊಡುತ್ತಾರೆ ಉದಾಸಿಯವರಿಗೆ ಹೇಳಿದ್ದೇನೆ ಇದು ಕೇಂದ್ರದ ಕಾರ್ಯಕ್ರಮದಂತೆ ಅಲ್ಲ, ಇದು ದೇಶದ ಬಡವರ ಕಾರ್ಯಕ್ರಮ ಈ ದೇಶದ ಸಂಪತ್ತಿಗಾಗಿ ದುಡಿಯುವ ಬೆವರು ಸುರಿಸುವವರ ಕಾರ್ಯಕ್ರಮ ನಿಮ್ಮ ಅಧಿಕಾರಿಗಳು ಒಬ್ಬರಾದರೂ ಹೋಗಿದ್ದಾರಾ? ಈ ಕಾರ್ಯಕ್ರಮ ನಡೆದಿರುವ ಜಿಲ್ಲೆಗಳಲ್ಲಿ ಕೊರತೆಯೇನು, ಸಮಸ್ಯೆಯೇನು, ಎಂದು ನಿರ್ವಹಣೆ ಮಾಡಿದ್ದೀರ? ರಿವ್ಯೂ ಮಾಡಿದ್ದೀರ? ಈ ದೇಶದ ಬಡವರ ಬಗ್ಗೆ ನೀವು ಲೋಹಿಯಾವಾದಿಯಾಗಿ M P ಪ್ರಕಾಶ್ ಅವರೇ, ರಾಜಕೀಯ ಪ್ರವೇಶಿಸಿದ್ದೀರಿ ಲೋಹಿಯಾ ಏನು ಹೇಳಿದರು ಮೊತ್ತ ಮೊದಲ ಪ್ರಧಾನಿ ಜವಾಹರಲಾಲ್ ನೆಹರೂ ಆಮ್‌ದಾನಿ ಮತ್ತು ಖರ್ಚು ಅಂತ ಹೇಳಿದ್ದಾರೆ ನಾನೂ ಶಿಕ್ಷಣ ಪಡೆಯುವಾಗ Mankind, ಚೌಕಂಬ ಪತ್ರಿಕೆಗಳನ್ನು ಓದಿದ್ದೇನೆ ಲೋಹಿಯ ಈ ದೇಶದ ಆರ್ಥಿಕತೆಗೆ ಹೊಸ ನೀತಿ ಕೊಟ್ಟರು ಅದನ್ನೆಲ್ಲ ಮರೆತು ಕೊನೆಗೆ ಈ ಸಮ್ಮಿಶ್ರ ಸರ್ಕಾರದ ಜಗಳ ಬಗೆಹರಿಸುವ ಮಟ್ಟಕ್ಕೆ, ಪ್ರಕಾಶರಿಗೆ ಏನೊಂದು political philosophy ಇತ್ತು ಅದು ಮರೆತುಹೋಗಿದೆ, ಪುನಃ ಜಾಗ್ರತರಾಗುತ್ತಾರಾ? BPL card ಬಗ್ಗೆ ಹೇಳುವುದಾದರೆ ನಿನ್ನೆ ಮಂಡ್ಯದಲ್ಲಿ ದಲಿತ ಮಹಿಳೆಯರ ಮೇಲೆ ಯಾವ ರೀತಿ ಲಾರಿ ಚಾರ್ಜಾಗಿದೆ, ಹೆಣ್ಣು ಮಕ್ಕಳಿಗೆ ಹೊಡೆದಿದ್ದಾರೆ, BPL card ಬಗ್ಗೆ ನೀವು ಸಾಕಷ್ಟು ಸಲ ಇಲ್ಲಿ ಕೂತು ಎದ್ದೆದ್ದು ಪ್ರತಿಪಾದನೆ ಮಾಡಿದ್ದೀರಿ ಇವತ್ತು 1 29 ಕೋಟಿ ಹೆಚ್ಚು ಜನರಾಗಿದ್ದಾರೆ ಅಂತ ಕಾರ್ಜೋಳ ಹೇಳುತ್ತಾರೆ ನಮ್ಮ ಕಾಲದಲ್ಲಿ ಸಿದ್ಧರಾಮಯ್ಯನವರು ಉಪಮುಖ್ಯಮಂತ್ರಿಯಿದ್ದಾಗ ನಾವು 3 ರೂ ಗೆ ಕೆಜಿ ಅಕ್ಕಿ ಕೊಡುತ್ತಿದ್ದೆವು ಆದರೆ ನೀವು ರಾಜ್ಯದ ಬಡವರಿಗೆ ಹೊಟ್ಟೆಗೆ ಅನ್ನ ನೀಡುವ ಕೆಲಸ ಮಾಡುತ್ತಿಲ್ಲ, ತಾವು ಏನು ಮಾಡುತ್ತಿದ್ದೀರಿ? ಏನು ಹಿಂದು ಸಮಾಜೋತ್ಸವ ಮೂಲಕ ಮಾಡುತ್ತೀರ? ಬಡವರ ಬಳಿಗೆ ಕಳಕಳಿಯಿಂದ ಯಾವ ಉಸ್ತುವಾರಿ ಸಚಿವರು ಹೋಗುತ್ತಾರೆ? ಪ್ರತಿಯೊಂದರ ಬಗ್ಗೆ ತಾವು

ಟಿ ವಿ ಯನ್ನು ಹಾಕಿಕೊಂಡು ನೋಡಿದರೆ ಗೊತ್ತಾಗುತ್ತದೆ ಇವತ್ತು ಎಲ್ಲಾ ಕಡೆಗಳಲ್ಲೂ ಕೂಡ ಈ ತರಹದ ಪ್ರತಿಭಟನೆಯೂ ಕೂಡ ನಡೆಯುತ್ತಿದೆ ಅದರ ಬಗ್ಗೆ ಈ ಸರ್ಕಾರದಲ್ಲಿ ಯಾವ ಕಾಳಜಿಯು ಇಲ್ಲವೆಂದು ನಾನು ಹೇಳುತ್ತೇನೆ ಮಾನ್ಯ ಸಚಿವರಾದ ಶ್ರೀ ಡಿ ಟಿ ಜಯಕುಮಾರ್‌ರವರು ಸದನದಲ್ಲಿ ಕುಳಿತಿದ್ದಾರೆ ಈಗ ನಿಮ್ಮ ರಾಜ್ಯದಲ್ಲಿ 1972ರಲ್ಲಿ ಮಾನ್ಯ ದೇವರಾಜ್ ಅರಸುರವರು ಮುಖ್ಯಮಂತ್ರಿಗಳಾಗಿದ್ದಾಗ ಅವರು ಜನತಾಮನೆಗಳನ್ನು ಕಟ್ಟಿಸಿಕೊಟ್ಟರು ಎಲ್ಲಾ ಕಡೆಗೆ ನಿವೇಶನಗಳನ್ನು ಕೊಡುವುದನ್ನು ಮಾಡಿದರು ಆಗ ಈ ಕೆಲಸವು ಪ್ರಾರಂಭವಾಯಿತು ಇಂತಹ ಒಂದು ಕೆಲಸ ಯಾವ ಕಾಲದಲ್ಲಿಯೂ ಪ್ರಾರಂಭವಾಗಲಿಲ್ಲ ರಾಜ್ಯದಲ್ಲಿ ನಿವೇಶನ ರಹಿತರು 12 ಲಕ್ಷ, ವಸತಿ ಹೀನರು 13 ಲಕ್ಷ, ಅಂಬೇಡ್ಕರ್ ವಸತಿ ಯೋಜನೆ 2 ಲಕ್ಷ, ರಾಜೀವ್‌ಗಾಂಧಿ ವಸತಿ ಯೋಜನೆ 1 ಲಕ್ಷದ 48 ಸಾವಿರ, ಆಶ್ರಯ ಯೋಜನೆ 97 ಸಾವಿರ, ಇಂದಿರಾ ಅವಾಸ್ ಯೋಜನೆ 1 ಲಕ್ಷದ 10 ಸಾವಿರ, 2007–08 ರಲ್ಲಿ ಒದಗಿಸಿಕೊಟ್ಟಂತಹ 370 ಕೋಟಿ ರೂಪಾಯಿಗಳು ಇನ್ನು ಉಪಯೋಗಿಸಲಿಲ್ಲ ಆದರೆ ವಸತಿ ಸಚಿವರು ಇನ್ನು ಉಳಿದಿರುವ ಮಾರ್ಚ್ ಅಂತ್ಯಕ್ಕೆ 3 ಲಕ್ಷ ಮನೆಯನ್ನು ಕೊಡುವ ಗುರಿಯನ್ನು ಇಟ್ಟುಕೊಂಡಿದ್ದಾರೆ ಅದು ಒಳ್ಳೆಯದು, ಅವರು ಕೆಲಸವನ್ನು ಮಾಡಿದ್ದಾರೆ, ಅವರಿಗೆ commitment ಇದೆ, ಇಲ್ಲವೆಂದು ನಾನು ಹೇಳುವುದಿಲ್ಲ ಮುಖ್ಯಮಂತ್ರಿ 2008–09 ಉಳಿದ ಎಲ್ಲಾ ಮನೆಗಳನ್ನು ಕೊಡಲಾಗುವುದು, ಎಂದು ಹೇಳಿದ್ದಾರೆ ಈ ಬಜೆಟ್‌ನಲ್ಲಿ ಒದಗಿಸಿಕೊಟ್ಟಿರುವ ಹಣ 600 ಕೋಟಿ ರೂಪಾಯಿಗಳು ಆದರೆ ಇರುವ ಫಲಾನುಭವಿಗಳನ್ನು ಗುರುತಿಸುವ ಪ್ರಕ್ರಿಯೆಯನ್ನು ವಿಧಾನಸಭಾ ಸದಸ್ಯರಿಗೆ ಹೈಕೋರ್ಟ್ ಕೊಟ್ಟಿದೆ ಈಗ ತಾವು 600 ಕೋಟಿ ರೂಪಾಯಿಗಳನ್ನು ತಾವು ಕೊಡಬೇಕಾಗಿತ್ತು ಬೇರೆ ಬಾಬ್ತಿಗೆ ಕೊಡುವಂತಹದ್ದನ್ನು ಬಿಟ್ಟು ಮಹತ್ವಕಾಂಕ್ಷಿಯಾದಂತಹ ಈ ವಸತಿಯನ್ನು ಒದಗಿಸಿಕೊಡುವ ಕೆಲಸ ಆಗಬೇಕು ಮಾನ್ಯ ಡಿ ಟಿ ಜಯಕುಮಾರ್‌ರವರು ಉಡುಪಿ ಜಿಲ್ಲೆಯ ಉಸ್ತುವಾರಿ ಸಚಿವರಾಗಿದ್ದರು ಈಗ ಜಿಲ್ಲಾ ಉಸ್ತುವಾರಿ ಸಚಿವರಾಗಿ ಡಾ॥ ವಿ ಎಸ್ ಆಚಾರ್ಯರವರು ಇದ್ದಾರೆ ನಾನು ಮೊನ್ನೆ 4ನೇ ತಾರೀಖು ಉಡುಪಿಗೆ ನಾನು ಹೋಗಿದ್ದೆ ಉಡುಪಿಯಲ್ಲಿ ಆ ಜಿಲ್ಲೆಯಲ್ಲಿರುವಂತಹ 84 ಮನೆಗಳನ್ನು ನೆಲಸಮ ಮಾಡಿದ್ದಾರೆ ಅಲ್ಲಿ ನಾನು

ಹೋಗಿ ನೋಡಿದಾಗ ಅಲ್ಲಿಗೆ ಜಿಲ್ಲಾಧಿಕಾರಿಗಳು ಬರಲಿಲ್ಲ, ನಾನು ಕರೆಸಿ ಅವರ ಜೊತೆಯಲ್ಲಿ ಮಾತನಾಡಿದೆ 84 ಗುಡಿಸಲುಗಳನ್ನು ನೆಲಸಮ ಮಾಡಲು ಕಾರಣವೇನು? ನೆಲಸಮ ಮಾಡುವುದಕ್ಕೆ ಮುಂಚೆ ಅವರಿಗೆ ನೋಟೀಸ್‌ನ್ನು ಕೊಡಬೇಕು ಅವರಿಗೆ ಸ್ಥಳಾಂತರ ಮಾಡುವ ಬಗ್ಗೆ ಅವರ ಮನವನ್ನು ಒಲಿಸಬೇಕು ಮುಂಜಾನೆ ಹುಡುಗರು ಎಲ್ಲರೂ ಶಾಲೆಗೆ ಹೋಗಿದ್ದಾರೆ 4 ಗಂಟೆಗೆ ಮಾನ್ಯ ಆಚಾರ್ಯರವರ ನೇತೃತ್ವದಲ್ಲಿ ಎಲ್ಲಾ ಗುಡಿಸಲುಗಳನ್ನು ನೆಲ ಸಮ ಮಾಡಿದ್ದಾರೆ ಉಡುಪಿಗೆ ಮಾನ್ಯ ಮುಖ್ಯಮಂತ್ರಿಗಳು ಹಾಗೂ ಉಪಮುಖ್ಯಮಂತ್ರಿಗಳು ಕೂಡ ಹೋಗಿದ್ದರು ಅವರು ಅಲ್ಲಿಗೆ ಹೋದಾಗ ನಾನು ಗುಡಿಸಲುಗಳನ್ನು "ನೆಲ ಸಮ ಮಾಡುವುದಕ್ಕೆ ಬಿಡುವುದಿಲ್ಲ" ಎಂದು ಆಶ್ವಾಸನೆಯನ್ನು ಸಹ ಕೊಟ್ಟಿದ್ದಾರೆ ನಿಮ್ಮನ್ನು ಅಲ್ಲಿಯೇ ಉಳಿಸುವಂತಹ ಪ್ರಯತ್ನವನ್ನು ನಾವು ಮಾಡುತ್ತೇವೆ ಅಲ್ಲಿಯ ಅಧಿಕಾರಿಗಳು ಮುಖ್ಯಮಂತ್ರಿಗಳು ಹೇಳಿದರೂ ಕೂಡ ಕೇಳಲಿಲ್ಲ ಯಾರು ಆ ಅಧಿಕಾರಿಗಳೆಲ್ಲ? ಅಲ್ಲಿ ಆಚಾರ್ಯರವರು ಅಂದರೆ ಉಸ್ತುವಾರಿ ಸಚಿವರ ಮಾತನ್ನ ಕೇಳುವುದಿಲ್ಲ ಅವರಿಗೆ ಬಡವರ ಬಗ್ಗೆ ಕಾಳಜಿ ಇಲ್ಲ, ಏಕೆಂದರೆ ಇದೇ ಮನೆಯನ್ನು ಕಟ್ಟಿಸಿ ನಮ್ಮ ಗತಿ ಇಲ್ಲಿಯವರೆಗೆ ಹೀಗೆ ಆಗಿದೆ ಇದು ದೇವರಾಜ ಅರಸುರವರ ಕಾಲದಲ್ಲಿ ಪ್ರಾರಂಭವಾಗಿ ಶೋಷಿತ ಜನರಿಗೆ ಎಸ್‌ಸಿ ಎಸ್‌ಟಿ ಜನರಿಗೆ ಈ ತರಹ ಕೊಟ್ಟಿರುವುದರ ಬಗ್ಗೆ ಅವರಿಗೆ ಮನಸ್ಸು ಇಲ್ಲ ನಂತರ ನಾನು ಕಾರ್ಕಳಕ್ಕೆ ಬಂದೆ, ನಮ್ಮ ವೀರಪ್ಪ ಮೊಯಿಲಿಯವರು ರಾಜ್ಯದ ಮುಖ್ಯಮಂತ್ರಿಯಾಗಿ ಕೆಲಸವನ್ನು ಮಾಡಿದ್ದಾರೆ ಅವರು ಮುಖ್ಯಮಂತ್ರಿಗಳಾಗಿ ಕೆಲಸ ಮಾಡುವಂತಹ ಕಾಲದಲ್ಲಿ 500 ಜನರಿಗೆ ನಿವೇಶನವನ್ನು ಕೊಟ್ಟಿದ್ದರು ಈಗಿನ ಸರ್ಕಾರದವರು ಅದನ್ನು cancel ಮಾಡಿದ್ದಾರೆ ಮಾನ್ಯ ಸಚಿವರು ಇದನ್ನು ಬರೆದುಕೊಳ್ಳಬೇಕು 500 ಮನೆಗಳನ್ನು ಮಾನ್ಯ ವೀರಪ್ಪಮೊಯಿಲಿಯವರು ಕೊಟ್ಟಿದ್ದಾರಲ್ಲಾ, ಅವೆಲ್ಲವನ್ನು ಕ್ಯಾನ್ಸಲ್ ಮಾಡಿದ್ದಾರೆ, ನಾನು ಆ ಸ್ಥಳಕ್ಕೆ ಹೋಗಿದ್ದೆ, ಆದರೆ ನೀವು ಏನು ಇಲ್ಲಿ ವಸತಿಯನ್ನು ಕೊಡುವ ಕಾರ್ಯಕ್ರಮದ ಬಗ್ಗೆ ಏನುಮಾತನಾಡುತ್ತೀರಿ, ಆದರೆ ನಿಮಗೆ commitment ಇಲ್ಲ ಆ philosophy ಮೇಲೆ ನಂಬಿಕೆ ಇಲ್ಲ ನಿಮ್ಮ ಮನಸ್ಸಿನಲ್ಲಿ ಆ ಭಾವನೆಗಳು ಇಲ್ಲ

ಶ್ರೀ ಕೆ ಜಯಪ್ರಕಾಶ್ ಹೆಗ್ಡೆ – ಮಾನ್ಯ ವಿರೋಧ ಪಕ್ಷದ ನಾಯಕರು ಒಂದು ನಿಮಿಷ ಯೀಲ್ಡ್ ಆದರೆ ನಾನು ಮಾತನಾಡುತ್ತೇನೆ ಕಾರ್ಕಳದಲ್ಲಿ ಒಂದು ಕಡೆ ಈ ತರಹ ಆದರೆ, ಇವತ್ತು ಬೆಳಿಗ್ಗೆ ನನ್ನ ಕ್ಷೇತ್ರದಲ್ಲಿರುವ ಕೋಟಾದಲ್ಲಿ ರೋಡ್ ಮಾರ್ಜಿನ್‌ನಲ್ಲಿ ಗೂಡು ಅಂಗಡಿಗಳನ್ನು ಹಾಕಿಕೊಂಡಿದ್ದಾರೆ pick &choose ಮಾಡಿ ಕೆಲವನ್ನು ಮಾತ್ರ ಅಲ್ಲಿ ತೆಗೆಯುತ್ತಿದ್ದಾರೆ ಇಡೀ ರಾಷ್ಟ್ರೀಯ ಹೆದ್ದಾರಿ ಮತ್ತು ರಾಜ್ಯದಲ್ಲಿರುವ ರೋಡ್ ಮಾರ್ಜಿನ್‌ನಲ್ಲಿರುವ ಎಲ್ಲಾವನ್ನು ತೆಗೆಯುವ ಬಗ್ಗೆ ಒಂದೇ ಕಡೆ ಆದೇಶವನ್ನು ಮಾಡಿದರೆ ಆ ಬಗ್ಗೆ ನಮ್ಮ ಅಭ್ಯಂತರವಿಲ್ಲ ಆದರೆ ಕೆಲವು ಕಡೆಗಳಲ್ಲಿ ಮಾತ್ರ ಕೆಲವುಗಳನ್ನು ಮಾತ್ರ ಗುರುತಿಸಿ ತೆಗೆಯುತ್ತಿದ್ದಾರೆ ನಾವೇನು ಸಿಂಗಾಪೂರ, ಅಮೇರಿಕಾ ಆಗಲಿಲ್ಲ ಹೊಟ್ಟೆಪಾಡಿಗೋಸ್ಕರ ಗೂಡು ಅಂಗಡಿಗಳನ್ನು ಇಟ್ಟುಕೊಂಡು ಇರುತ್ತಾರೆ ಅದನ್ನು ತಕ್ಷಣದಲ್ಲಿ ತೆಗೆಯುವಂತಹ ಆದೇಶವನ್ನು ಜಿಲ್ಲಾ ಆಡಳಿತದವರು ಏಕೆ ಮಾಡಬೇಕು? ಅಲ್ಲಿ ಡಿ ಸಿ ಕಛೇರಿಯ ಹತ್ತಿರು ಇರುವ ಪೆಟ್ಟಿಗೆ ಅಂಗಡಿಗಳನ್ನು ತೆಗೆಸುವುದಿಲ್ಲ ಇದನ್ನು ಏತಕ್ಕಾಗಿ ತೆಗೆಸುತ್ತೀರೆಂದು ನನಗೆ ಅರ್ಥವಾಗುವುದಿಲ್ಲ ನಾವು ಇನ್ನೂ ಸೀದಾ ಯೂರೋಪ್ ಹಾಗೂ ಅಮೇರಿಕಾ ತರಹದ ರೀತಿ ಆಗಿಲ್ಲ

ಶ್ರೀ ಎನ್ ಧರ್ಮಸಿಂಗ್ – ನಮ್ಮ ಜಯಪ್ರಕಾಶ್ ಹೆಗ್ಡೆಯವರು ಕೂಡ ಆ ಭಾಗದಿಂದ ಬಂದವರಾಗಿದ್ದಾರೆ ಅವರು ಮತ್ತು ನಾವು ಕೂಡ ಮಾತನಾಡಿದ್ದೇವೆ ಇವೆಲ್ಲವೂ ಕೂಡ ರಾಜ್ಯದಲ್ಲಿ ನಡೆಯುತ್ತಿದೆ ವಿಶ್ವಬ್ಯಾಂಕ್, ಜಪಾನ್ ಬ್ಯಾಂಕ್ ನೆರವಿನ ಯೋಜನೆಗಳ ನಿರ್ವಹಣೆ ಬಗ್ಗೆ ಹೇಳುವುದಾದರೆ ಮೊನ್ನೆ ಎ ಕೃಷ್ಣಪ್ಪನವರು "ಬೆಂಗಳೂರು ನಗರದಲ್ಲಿ ಹಾಹಾಕಾರವಾಗುತ್ತಿದೆ, ನೀರಿಗೆ ತೊಂದರೆ ಇದೆ" ಎಂದು ಹೇಳಿದ್ದಾರೆ ಈ ಬಗ್ಗೆ ನಾನು ಹೇಳಿದ್ದೇನೆ ಇಡೀ ವಿಶ್ವದಲ್ಲಿ ಬೆಂಗಳೂರು 6 ನೇ ಪಟ್ಟಣವಾಗಿದೆ ಇಲ್ಲಿ ನೀರು lower level to higher level ಗೆ 1500 ಅಡಿ ಎತ್ತರಕ್ಕೆ ಪಂಪ್ ಆಗಬೇಕು ಬಹಳ rock area ಇದೆ ಏಕೆಂದರೆ, ಇವತ್ತು Bangalore Development Authority ಅವರು layout ಮಾಡುತ್ತಾರೆ There is no co-ordination ಶ್ರೀಮಾನ್ ದಿವಂಗತ ಗುಂಡೂರಾವ್‌ರವರ ಕಾಲದಲ್ಲಿ ಇದಕ್ಕೆ co-ordination ಮಾಡಬೇಕು Metropolitan Author-

ity ಆಗಲೇಬೇಕು ಬಾಂಬೆ ಕೊಲ್ಕತ್ತ ಹಾಗೂ ಮದ್ರಾಸ್ ಹಾಗೂ ಹೈದರಾಬಾದ್‌ನಲ್ಲಿದೆ ಇವತ್ತು Bangalore Metropolitan Authority ಆಗಬೇಕು Electricity Board ಇದೆ water supply Board ಇದೆ ಇವೆಲ್ಲವನ್ನೂ Co-ordination ಮಾಡಿ BDA ದವರು ನಾವು ಇಷ್ಟು ಲೇಔಟ್ ಮಾಡುತ್ತೇವೆ, ಇಷ್ಟು ಮನೆಗಳನ್ನು ಕಟ್ಟಿಸುತ್ತೇವೆ, ಅಷ್ಟು ನೀರನ್ನು ಕೊಡುವ ಸಾಮರ್ಥ್ಯದ ಬಗ್ಗೆ ನಾವು ಅವರನ್ನು ಕೇಳಬೇಕಾಗುತ್ತದೆ ಇವತ್ತು ಅವೆಲ್ಲವನ್ನು ಕಂಡುಹಿಡಿದು, ನಮ್ಮ ಕಾಲದಲ್ಲಿ ನಾವು ಮತ್ತು ನಮ್ಮ ಹಣಕಾಸಿನ ಸಚಿವರಾದ ಸಿದ್ಧರಾಮಯ್ಯನವರು, ಜಪಾನ್ ಬ್ಯಾಂಕಿನ ಜೊತೆಯಲ್ಲಿ ಸಮಾಲೋಚನೆಯನ್ನು ಮಾಡಿದೆವು We have taken Rs 3384 crores, for the Bangalore City ನೀವು ಗ್ರೇಟರ್ ಬೆಂಗಳೂರು ಮಾಡುತ್ತೇವೆಂದು ನಿತ್ಯ ಹೇಳಿಕೆಯನ್ನು ಕೊಟ್ಟು ನಾವು ಪ್ರಾರಂಭ ಮಾಡಿರುವಂತಹ ಫ್ಲೈಓವರ್ ಉದ್ಘಾಟನೆಯನ್ನು ಮಾಡಿ "ಇದು ನಮ್ಮ ಕಾಲದಲ್ಲಿ ಆಯಿತು" ಎಂದು psychological atmospehere you are creating That is not correct ಇವತ್ತು ನಾವು ಎಲ್ಲಾ ಕಡೆ ಪ್ರತಿಭಟನೆಯನ್ನು ಮಾಡಿ ಹೇಳುತ್ತೇವೆ ಮಾನ್ಯ ರಾಮಲಿಂಗಾರೆಡ್ಡಿಯವರ ಕ್ಷೇತ್ರದಲ್ಲಿ ಕೇಂದ್ರದ ಅರ್ಬನ್ ಡೆವಲಪ್‌ಮೆಂಟ್ ಮಿನಿಸ್ಟರ್‌ರವರಾದ ಶ್ರೀ ಗುಲಾಂ ನಬಿ ಆಜಾದ್‌ರವರನ್ನು ಕರೆಸಿ ನಾವು ಶಂಕುಸ್ಥಾಪನೆಯನ್ನು ಮಾಡಿದೆವು What is the result ? ಇವತ್ತು ತಾವು ಜಪಾನ್‌ನಿಂದ ತಂದಂತಹ ಹಣವನ್ನು ಸಹ ಇಡಿ ಎಲ್ಲವನ್ನು ಹಾಕಿ ನಮ್ಮ ಕಡೆ ಬೇರಿಸ್ ಎಂದು ಒಂದು ಲೆಕ್ಕವನ್ನು ಹಾಕುತ್ತಾರೆ ಅದೇನೆಂದರೆ ಕೂಡಿಸುವುದು ಮತ್ತು ಕಳೆಯುವುದು ಬೆಂಗಳೂರು ಜನತೆಗೆ ಗ್ರೇಟರ್ ಬೆಂಗಳೂರು ಎಂದು ಹೇಳಿಕೊಂಡು ತಾವು ಏನು ಕೆಲಸವನ್ನು ಮಾಡುತ್ತಿದ್ದೀರಿ? ಒಟ್ಟು ಆಯವ್ಯಯದಲ್ಲಿ ಅಂದಾಜು 2016 ಕೋಟಿ ರೂಪಾಯಿಗಳು 2007 ರ ಡಿಸೆಂಬರ್‌ವರೆಗೆ ಸಾಧಿಸಲು ಇಟ್ಟುಕೊಂಡಿದ್ದ 1252 ಕೋಟಿ ರೂಪಾಯಿಗಳು ಡಿಸೆಂಬರ್ ಕೊನೆಯವರೆಗೆ actual ವೆಚ್ಚ ಎಷ್ಟು ಆಗಿದೆ ಎಂದರೆ, 875 ಕೋಟಿ ರೂಪಾಯಿಗಳು ಇವತ್ತು ಡಿಸೆಂಬರ್‌ವರೆಗೆ actual ವೆಚ್ಚ 875 ಕೋಟಿ ರೂಪಾಯಿಗಳಾದರೆ ಮುಖ್ಯ ಕಾರ್ಯಕ್ರಮಗಳಿಗೆ ಹಣ ಎಲ್ಲಿದೆ? ನಿಮ್ಮ performance ಎಲ್ಲಿದೆ? ಈ ಯೋಜನೆಗಳಿಗೆ ಎಲ್ಲ ಹಣವನ್ನು ಇಟ್ಟಿದ್ದೀರಿ? ಅತ್ಯಂತ ವಿಷಾದವೆಂದರೆ ಬೆಂಗಳೂರಿಗೆ ನೀವು

ಕುಡಿಯುವ ನೀರಿಗಾಗಿ ಹಣವನ್ನು ಒದಗಿಸಿಲ್ಲವೆನ್ನುವಂತಹ ಮಾತನ್ನು ಹೇಳುತ್ತೇನೆ ಇವತ್ತು ಹೊರಗಡೆಯಿಂದ ಬರುವಂತಹ ನಮ್ಮ ಏಡ್ – 2006–07 ಕ್ಕೆ ರಾಜ್ಯದ ಅಂದಾಜು 216 ಕೋಟಿ ರೂಪಾಯಿಗಳು, 2006–07 ಡಿಸೆಂಬರ್‌ವರೆಗೆ ಗುರಿ1252 ಕೋಟಿ ರೂಪಾಯಿಗಳು ಈವರೆಗೆ ಆಗಿರುವಂತಹ ವೆಚ್ಚದ ಬಗ್ಗೆ ನಾನು ಈಗಾಗಲೇ ಹೇಳಿದ್ದೇನೆ ಇದು ನೀವು ಮಾಡತಕ್ಕಂತಹ ಕೆಲಸವೆಂದು ನಾನು ಹೇಳುತ್ತೇನೆ ನಮ್ಮ ವಾರ್ಷಿಕ ಹಣಕ್ಕೆ ಇಲಾಖಾ ಮುಖ್ಯಸ್ಥರು ಇನ್ನೂ ಕಾರ್ಯಸೂಚಿ ರೂಪಿಸಬೇಕು ನೀವು ಹಣ ಬಿಡುಗಡೆ ಮಾಡುತ್ತೀರಿ, where is the action plan? ಎಲ್ಲಾ ಇಲಾಖಾವಾರು ಏನಾದರೂ ಆ್ಯಕ್ಷನ್ ಪ್ಲಾನ್ ಮಾಡಿದ್ದೀರಾ? ಯೋಜನೆ ಬಂದರೆ ಸಾಲದು, ಉಸ್ತುವಾರಿ ಸಮಿತಿಗೆ effective ಆಗಿ implement ಮಾಡುವ ಬದ್ಧತೆ ಬೇಕು ಒಟ್ಟಾರೆ ರಾಜ್ಯಕ್ಕೆ, ಸರ್ಕಾರಕ್ಕೆ ಇಚ್ಛಾಶಕ್ತಿ ಬೇಕು, ಬದ್ಧತೆ ಬೇಕು, that is nil, it requires a political will, political commitment ಈ ಸರ್ಕಾರದಲ್ಲಿ ಅದು ಇಲ್ಲ ಎನ್ನತಕ್ಕಂಥ ಮಾತನ್ನು ಹೇಳುತ್ತೇನೆ ಇವತ್ತು ಉತ್ತರ ಕರ್ನಾಟಕ ಜಿಲ್ಲೆಗೆ ಯಡಿಯೂರಪ್ಪನವರು ಕೊಟ್ಟಿದ್ದು paper plan document ಅಷ್ಟೇ ಇದೇ ರೀತಿಯಾಗಿ ನಮ್ಮ ವೈಜನಾಥ್ ಪಾಟೀಲ್‌ರು ಇದ್ದಾರೆ ಆ ಭಾಗದ ಜನರಲ್ಲಿ ಪ್ರತ್ಯೇಕತೆ ಬೇಕು, ನಾನು ಅದಕ್ಕೆ ಒಪ್ಪುವುದಿಲ್ಲ, ನಾವು ಇದೇ ರಾಜ್ಯದಲ್ಲಿರುವವರು, ಆರ್ಟಿಕಲ್ 371 ಬಗ್ಗೆ ಯಡಿಯೂರಪ್ಪನವರಿಗೆ ಗೊತ್ತು, ಯಾವಾಗ ನಮಗೆ ಅಟಲ್ ಬಿಹಾರಿ ವಾಜಪೇಯಿ ಅವರು ಪ್ರಧಾನಮಂತ್ರಿಗಳಾದಾಗ, ಶ್ರೀ ಅಡ್ವಾಣಿಯವರು ಉಪ ಪ್ರಧಾನಮಂತ್ರಿಗಳು ಹಾಗು ಗೃಹ ಮಂತ್ರಿಗಳಾದಾಗ ಕೂಡ we have represented ಈ ಭಾಗಕ್ಕೆ ವಿಶೇಷವಾದಂತಹ ಒಂದು ಸ್ಥಾನಮಾನ ಕೊಡಬೇಕು ಉದ್ಯೋಗದ ಬಗ್ಗೆ ಆ ಭಾಗದ ಜನರ ಬಗ್ಗೆ ಅಭಿವೃದ್ಧಿ ಆಗಬೇಕೆಂದು ಹೇಳಿದೆವು ಸಭಾಧ್ಯಕ್ಷರೆ ನಾನು ಮುಖ್ಯಮಂತ್ರಿಯಾದಾಗ ಶಿವರಾಜ್ ಪಾಟೀಲ್‌ರವರು ಒಂದು ಪತ್ರ ಬರೆದರು ವಿದರ್ಭ ಮಾದರಿಯಲ್ಲಿ ಮಾಡಿದರೆ ಆಗುತ್ತದೆಯೇ ಎಂದು ಕೇಳಿದರು I was the Chief Minister at that time, Central ನಲ್ಲಿದ್ದರೂ ಕೂಡ ಪ್ರಧಾನ ಮಂತ್ರಿಗಳಿಗೆ, ಶಿವರಾಜ್ ಪಾಟೀಲ್‌ರವರಿಗೆ ಪತ್ರ ಬರೆದೆವು ಏನೆಂದರೆ " ಆ ರೀತಿ ಆಗುವುದಿಲ್ಲ" "ನಾವು

ಒಪ್ಪಲಿಕ್ಕೆ ಸಾಧ್ಯವಿಲ್ಲ" ಆರ್ಟಿಕಲ್ 371 ಕ್ಕೆ ತಿದ್ದುಪಡಿ ಆಗಬೇಕು ಎಂದು" ಹೇಳಿದೆವು ಯಾವ ರೀತಿಯಾಗಿ ಬೇರೆ ಕಡೆ ಅಸ್ಸಾಂ ಮತ್ತಿತರ ಕಡೆಗಳಲ್ಲಿ ಮಾಡಿದ್ದೀರಿ, ಅದೇ ರೀತಿ ಇಲ್ಲಿಯೂ ಕೂಡ ಹೋರಾಟ ನಡೆದಿದೆ ಮೊನ್ನೆ ಕೂಡ ನಾನು ಬಿ ಆರ್ ಪಾಟೀಲ್ ವೈಜನಾಥ ಪಾಟೀಲ್ ಗುಲ್ಬರ್ಗಾದಲ್ಲಿ ಪಕ್ಷಭೇದ ತೊರೆದು 371 ಆರ್ಟಿಕಲ್ ಬಗ್ಗೆ ಮತ್ತೆ ಕೇಂದ್ರಕ್ಕೆ ಹೋಗಿ ರೆಪ್ರೆಸೆಂಟೇಷನ್ ಮಾಡಬೇಕೆಂಬ ನಿರ್ಧಾರಕ್ಕೆ ಬಂದಿದ್ದೇವೆ ಇವತ್ತು ರಾಜ್ಯದಲ್ಲಿ ಹೋರಾಟವಿದೆ ಅಸಮತೋಲನದ ಬಗ್ಗೆ ಹೋರಾಟವಿದೆ Regional imbalances ಬಗ್ಗೆ ಕೂಡ ಇವತ್ತು ನಾವು ಚರ್ಚೆ ಮಾಡಬೇಕಾಗುತ್ತದೆ

ಶ್ರೀ ಎಂ ವೈ ಪಾಟೀಲ್ – ಮಾನ್ಯ ಅಧ್ಯಕ್ಷರೇ, ಕೇಂದ್ರದಲ್ಲಿ ಕಾಂಗ್ರೆಸ್ ಸರ್ಕಾರವಿದೆ, ತಾವು ಆರ್ಟಿಕಲ್ 371 ಕ್ಕೆ ತಿದ್ದುಪಡಿ ಮಾಡಿಸಬೇಕು ನಿಮ್ಮದೇ ಸರ್ಕಾರ ಕೇಂದ್ರದಲ್ಲಿದೆ

ಶ್ರೀ ಎನ್ ಧರ್ಮಸಿಂಗ್ – ಈಗ ನಮ್ಮದೇ ಸರ್ಕಾರವಿದೆ, ಆಗ ನಿಮ್ಮದು ಸರ್ಕಾರವಿತ್ತು ಅದು ಮುಖ್ಯ ಅಲ್ಲ, ನೀವು ಆ ರೀತಿ ಮಾತನಾಡಬೇಡಿ ನಾವು ಸಮಯ ಬಂದರೆ ಹೋರಾಟ ಮಾಡುತ್ತೇವೆ, ಈಗಲೂ ಶಿವರಾಜ್ ಪಾಟೀಲ್‌ರಿಗೆ ಹೇಳಿದ್ದೇವೆ, ಅಲ್ಲಿಗೆ ಹೋಗಲಿಕ್ಕೂ ತಯಾರಾಗಿದ್ದೇವೆ ನೀವು ನಮ್ಮ ಜೊತೆ ಬನ್ನಿ

ಶ್ರೀ ಎಂ ವೈ ಪಾಟೀಲ್ – ಆಯಿತು ನಾವು ಬರುತ್ತೇವೆ

ಶ್ರೀ ಹೆಚ್ ಎಸ್ ಮಹದೇವಪ್ರಸಾದ್ – ಅವರ ಮಾತಿಗೆ ನೀವು ಇಷ್ಟೊಂದು ಸಿಟ್ಟು ಮಾಡಿಕೊಂಡು ಬಿಟ್ಟರೆ ಹೇಗೆ?

ಶ್ರೀ ಎನ್ ಚೆಲುವರಾಯಸ್ವಾಮಿ – ಎಂ ವೈ ಪಾಟೀಲ್‌ರವರು ಬಹಳ ರಿಕ್ವೆಸ್ಟ್ ಮಾಡಿಕೊಂಡು ತಮ್ಮ ಹತ್ತಿರ ಹೇಳುತ್ತಿದ್ದಾರೆ

(ಗೊಂದಲ)

ಶ್ರೀ ಎನ್ ಧರ್ಮಸಿಂಗ್ – ಅವರು ನಮ್ಮ ಸ್ನೇಹಿತರು ಆತ್ಮೀಯತೆ ಹೇಳುತ್ತಿದ್ದೇನೆ, ನಿಮಗ್ಯಾಕೆ?

3/5

(ಗೊಂದಲ)

ಮಾನ್ಯ ಸದಸ್ಯರು – ತಾವೇ ಮುಖ್ಯಮಂತ್ರಿಗಳಿದ್ದಿರಿ, ಸರ್ಕಾರ ಕೂಡ ತಮ್ಮದೇ ಇತ್ತು ಆರ್ಟಿಕಲ್ 371 ರ ಬಗ್ಗೆ ಕಾಳಜಿ ವಹಿಸಿ

(ಗೊಂದಲ)

ಅಧ್ಯಕ್ಷರು – ದಯಮಾಡಿ ಕುಳಿತುಕೊಳ್ಳಿ, ಅವರು ಮಾತನಾಡುತ್ತಿದ್ದಾರೆ

ಶ್ರೀ ವೈಜನಾಥ್ ಪಾಟೀಲ್ – ಹೊಸ ಸರ್ಕಾರ ಬಂದಾಗ ಕೇಂದ್ರದಲ್ಲಿ ಈ ವಿಷಯದ ಬಗ್ಗೆ ಯಾವುದೇ ಒತ್ತಾಯ ತರುತ್ತಿಲ್ಲ ನೀವು ರಾಜ್ಯ ಸರ್ಕಾರದವರು ಕೇಂದ್ರ ಸರ್ಕಾರಕ್ಕೆ ಒತ್ತಾಯ ಮಾಡಿದರೆ ನಾವು ಕೇಳಬಹುದು ನೀವು ಅದರ ಬಗ್ಗೆ ಡೆಲಿಗೇಷನ್ ಹೋಗುವದಿಲ್ಲ, ಬಜೆಟ್‌ನಲ್ಲಿಯಾಗಲಿ, ರಾಜ್ಯಪಾಲರ ಭಾಷಣದಲ್ಲಿಯಾಗಲಿ ಆರ್ಟಿಕಲ್ 371 ರ ಬಗ್ಗೆ ಒಂದು word ಕೂಡ ಇಲ್ಲ ನಿಮಗೆ ಮಾತನಾಡಲಿಕ್ಕೆ ಇನ್ನಾವ ನೈತಿಕ ಅಧಿಕಾರವಿದೆ?

(ಗೊಂದಲ)

ಶ್ರೀ ಎನ್ ಧರ್ಮಸಿಂಗ್ – 2005–06 ರಲ್ಲಿ National Calamity Relief, Contingency fund ನಿಂದ 358–00 ಕೋಟಿ ರೂ ಗಳು ಒದಗಿಸಲಾಗಿತ್ತು 2006–07 ರಲ್ಲಿ 384 ಕೋಟಿ ರೂ 2007 ರಲ್ಲಿ ಕೃಷಿ ಮಂತ್ರಾಲಯದಿಂದ 361–00 ಕೋಟಿ ರೂ ಜಾನುವಾರು ಮೇವಿಗಾಗಿ 50 00 ಕೋಟಿ ರೂ employment generation and drought relief ಗೆ 108–00 ಕೋಟಿ ರೂ flood relief ಗಾಗಿ 63 00 ಕೋಟಿ ರೂ ಕುಡಿಯುವ ನೀರಿಗಾಗಿ 376 00 ಕೋಟಿ ರೂ ಇವತ್ತು 1700 ಕೋಟಿ ರೂ ಕೇಂದ್ರಸರ್ಕಾರದ ಹಣ ಬರ ಪೀಡಿತ ಪ್ರದೇಶಕ್ಕೆ ಇದೆ ಯಾವ್ಯಾವ ಜಿಲ್ಲೆಗಳಿಗೆ ಎಷ್ಟೆಷ್ಟು ಹಣ ಬಿಡುಗಡೆ ಮಾಡಿದ್ದೀರಿ? ಎಲ್ಲಾ ಕಡೆಗಳಲ್ಲಿ ಹಾಹಾಕಾರ ಇದೆ, ಇವೆಲ್ಲ ಬಿಟ್ಟು ನೀವು ಗುಡಿ ಗುಂಡಾರಗಳಿಗೆ ಹಣ ಕೊಟ್ಟರೆ ಹೇಗೆ ? ಸಭಾಧ್ಯಕ್ಷರೆ, ಒಂದು ಮಾತು ಹೇಳಿದರೆ ತಪ್ಪು ತಿಳಿಯಬಾರದು, ಮಹಮದ್ ಘಜ್ನಿ ಸೋಮೇಶ್ವರದ

ದೇವಾಲಯದ ಮೇಲೆ 17 ಸಲ ದಾಳಿ ಮಾಡಿದರು ರಾಹುಲ್ ಸಾಂಕ್ರಂತ್ ಒಂದು ಪುಸ್ತಕವನ್ನು ಬರೆದಿದ್ದಾರೆ ಅದರಲ್ಲಿ " **ವೋಲ್ಗ ಟು ಗಂಗಾ**" ಎಂದು ಆ ಪುಸ್ತಕದಲ್ಲಿ ಹೇಳಿದ್ದಾರೆ ಈ ದೇಶದ ಸಂಸ್ಕೃತಿ, ಸಭ್ಯತೆ, ಏನು ನಡುವಳಿಕೆ ಇದೆ, ಜನರು ಸಾವಿರಾರು ಕೂಡ ಹಾಲು ತೆಗೆದುಕೊಂಡು ಹೋಗಿ ಆ ಸೋಮೇಶ್ವರ ಮೂರ್ತಿ ಮೇಲೆ ಅಭಿಷೇಕ ಮಾಡುತ್ತಿದ್ದರು ಅದೇ ಹಾಲು ಮಕ್ಕಳಿಗೆ ಫೈಟ್ ಮಾಡುತ್ತೀರಾ ಎಂದು ಬರೆದಿದ್ದಾರೆ ಅದಕ್ಕೆ ಇವತ್ತಿನ ದಿವಸ ದೇಶದ ಸ್ಥಿತಿಗತಿ ಬಗ್ಗೆ ಸಾಮಾಜಿಕ ಸ್ಥಿತಿಗತಿಗಳ ಬಗ್ಗೆ ಬರಗಾಲಕ್ಕೆ ತುತ್ತಾದ ಜನರ ಬಗ್ಗೆ ಪ್ರವಾಹ ಪ್ರದೇಶಗಳಿಗೆ ಹಣ ಕೊಡಿ ನೀವೆಲ್ಲಾ ಕಡೆ ಗುಡಿ ಗುಂಡಾರಗಳಿಗೆ ಹಣ ಕೊಟ್ಟು ನಮಗೇನು ಬೇಕು, ನಿಮಗೇನು ಬೇಕು ಎಂದರೆ ಹೇಗೆ? ನಾವು ಖರ್ಗೆಯವರು 35 ವರ್ಷಗಳ ಕಾಲದಿಂದ ಜೊತೆಯಲ್ಲಿದ್ದೇವೆ ಎಂದೂ ಕೂಡ ಹಣವನ್ನು ಗುಡಿಗುಂಡಾರಗಳಿಗೆ ನಾವು ಕೊಟ್ಟಿಲ್ಲ ಆ ಭಾಗದ ಅಭಿವೃದ್ಧಿಗಾಗಿ ಕೆಲಸ ಮಾಡಿದ್ದೇವೆ ಮೊನ್ನೆ ಕೂಡ ಮುಖ್ಯಮಂತ್ರಿಗಳು ಬೆಣ್ಣೆತೊರಾ ಪ್ರಾಜೆಕ್ಟ್‌ನಲ್ಲಿ ಹೋಗಿ ಭಾಷಣ ಮಾಡಿದರು ನಮ್ಮ ವಿಶ್ವನಾಥ್ ಪಾಟೀಲ್‌ರು ಇದ್ದರು ಆಯಿತು, ಯಾರು ಮಾಡಿದ್ದು? ದೇವರಾಜ್ ಅರಸುರವರು ಪ್ರಾರಂಭ ಮಾಡಿದ್ದರು ನಾವು 391 ಕೋಟಿ ರೂ ಖರ್ಚು ಮಾಡಿದ್ದೇವೆ, ನಮ್ಮ ಪಕ್ಷದವರು ಇರಿಗೇಷನ್ ಮಂತ್ರಿಗಳಾದಾಗ 3,024 ಕೋಟಿ ರೂ ಗಳನ್ನು ಕೊಟ್ಟಿದ್ದೇವೆ ಮಾನ್ಯ ಸಿದ್ಧರಾಮಯ್ಯನವರು ಉಪ ಮುಖ್ಯಮಂತ್ರಿಗಳಾಗಿ, Upper Krishna ಭಾಗದಲ್ಲಿ incomplete project ಅನ್ನು ಕಂಪ್ಲೀಟ್ ಮಾಡಬೇಕೆಂದು ಹೇಳಿ We have increased 900 crores ಈಶ್ವರಪ್ಪನವರೇ 3,924 ಕೋಟಿ ರೂ ಗಳನ್ನು ನಾವು increase ಮಾಡಿದ್ದೇವೆ ಕೃಷ್ಣಾ ಭಾಗದಲ್ಲಿರತಕ್ಕಂಥ incomplete project complete ಆಗಬೇಕೆಂದು ಇವತ್ತು ನಾನು ಹೇಳುವುದು, ಪ್ರವಾಹ ಪೀಡಿತ ಪ್ರದೇಶದ ಬಗ್ಗೆ ನಿನ್ನೆ ಕೂಡು ಹೇಳಿದ್ದೆ ಮತ್ತೆ ಅದನ್ನು ರಿಪೀಟ್ ಮಾಡುವುದಿಲ್ಲ ನಾನು ಮತ್ತು ಆಗಿನ ಉಪ ಮುಖ್ಯಮಂತ್ರಿಗಳು ಪ್ರಕಾಶ್‌ರವರು, ಖರ್ಗೆಯವರು, ನಾವೆಲ್ಲಾ ಆಲಮಟ್ಟಿಗೆ ಹೋಗಿ ಪ್ರಧಾನಮಂತ್ರಿಗಳೊಂದಿಗೆ 9 30 ಗಂಟೆಯಲ್ಲಿ ಮಾತನಾಡಿದೆವು, " ಸಾರ್ ಇಲ್ಲಿ situation is very bad, you must visit " ಅವರು ಬಂದರೂ ಅಲ್ಲಿಗೆ

ಬರಲಿಕ್ಕಾಗಲಿಲ್ಲ ಶರದ್ ಪವಾರ್‌ರವರನ್ನು ಕಳುಹಿಸಿಕೊಟ್ಟರು ನಂತರ ಅವರು 400 ಕೋಟಿ ರೂ ಗಳನ್ನು ಬಿಡುಗಡೆ ಮಾಡಿದರು ಕೇಂದ್ರದಿಂದ ಯಾವಾಗಲೂ ಸಹ ಪ್ರವಾಹ ಪೀಡಿತ ಪ್ರದೇಶಗಳಿಗೆ ಸಹಾಯ ಮಾಡಲಿಕ್ಕೆ ಹಣ ಬಂದಿಲ್ಲ ನಮ್ಮ ಕಾಲದಲ್ಲಿ ಹಣ ಬಂದಿದೆ ಇವತ್ತು ನೀವು ಹೇಳಿ, ರಾಜ್ಯದ ಬರಗಾಲ ಪ್ರವಾಹ ಪೀಡಿತ ಪ್ರದೇಶಗಳಿಗೆ ತುತ್ತಾದ ಜನರಿಗೆ ಏನೇನು ತಾವು ಕೆಲಸಗಳನ್ನು ಮಾಡುತ್ತಿದ್ದೀರಿ, 1700 ಕೋಟಿ ರೂ ಗಳ ಬಗ್ಗೆ ವಿವರಣೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ ಇವತ್ತು ನೀವು action plan prepare ಮಾಡಿಲ್ಲ ದಿನಾಂಕ 6–03–2007 ರಲ್ಲಿ ಪ್ರಕಾಶ್‌ರವರ ನೇತೃತ್ವದಲ್ಲಿ ಬರ ಪರಿಸ್ಥಿತಿ ಬಗ್ಗೆ ಚರ್ಚೆ ಆಯಿತು ಅಲ್ಲಿ ಕ್ರಿಯಾ ಯೋಜನೆಗಳಿನ್ನೂ ತಯಾರಾಗಿಲ್ಲ ಜಿಲ್ಲಾಧಿಕಾರಿಗಳ P D ಖಾತೆಯಲ್ಲಿ ಮಾತ್ರ ಹಣವಿದೆ ಇವತ್ತು ಮೂರು ಜಿಲ್ಲೆಗಳಿಂದ ನೋಡಲ್ ಆಫೀಸರ್ ರಿಪೋರ್ಟ್ ಕಳುಹಿಸಿದ್ದಾರೆ ಕುಡಿಯುವ ನೀರು 4,463 ಗ್ರಾಮಗಳಲ್ಲಿದೆ ಅದಕ್ಕೆ ಏನೂ ಕೂಡ ಪರಿಹಾರ ಕಂಡುಹಿಡಿಯುತ್ತಿಲ್ಲವೆನ್ನುವ ಮಾತನ್ನು ಕೂಡ ಹೇಳುತ್ತಿದ್ದೇನೆ ಕೇಂದ್ರದ ಮಂತ್ರಿಗಳು ರಾಜ್ಯಕ್ಕೆ ಪತ್ರ ಬರೆದಿದ್ದಾರೆ ಕೊಟ್ಟಂಥ ಹಣವನ್ನು ತಾವೇ ಖರ್ಚು ಮಾಡುತ್ತಿಲ್ಲವೆನ್ನುವ ಮಾತನ್ನು ಹೇಳಿದ್ದಾರೆ ಅದಕ್ಕೆ ತಾವೆಲ್ಲರೂ ಕೂಡ ಇವತ್ತಿನ ದಿವಸ ಇದರ ಬಗ್ಗೆ ಹೆಚ್ಚಿನ ಒತ್ತನ್ನು ಕೊಡಬೇಕೆಂದು ನಾನು ಕೇಳಿಕೊಳ್ಳುತ್ತಿದ್ದೇನೆ ಕೊನೆಯದಾಗಿ ನಾನು ಸಾಲ ಮನ್ನಾ ವಿಷಯದ ಬಗ್ಗೆ ಬರುತ್ತೇನೆ ತಾವು ಹೇಳಿದಿರಿ "ಸಾಲ ಮನ್ನಾ ಮಾಡುತ್ತೇನೆ", "ಸಾರಾಯಿ ತೆಗೆದುಹಾಕುತ್ತೇನೆ" ಎಂದು ಸಂಪನ್ಮೂಲವನ್ನು ಯಾವ ರೀತಿಯಾಗಿ ಭರಿಸುತ್ತೀರಿ? ಮೊನ್ನೆ ಕೂಡ ಮುಂಗಡ ಪತ್ರ ಮಾಡತಕ್ಕಂಥ ಕಾಲದಲ್ಲಿ 31 ನೇ ತಾರೀಖಿನೊಳಗಾಗಿ ಎಲ್ಲಾ ಕಡೆಗೆ ಹಣ ಕೊಡಬೇಕೆಂಬ ಮಾತನ್ನು ಹೇಳಿದ್ದೀರಿ, ನಮಗೆ ಇವತ್ತು 31–02–2007 ರವರಗೆ ಸಾಲ ಪಡೆದ ರೈತರು 16 78 ಲಕ್ಷ ನೆರವಿನ ನಿರೀಕ್ಷೆಯಲ್ಲಿ ಇದರಿಂದ ಸಾಲ ಬಡ್ಡಿ ಸೇರಿ ಬಾಕಿ 5,011 ಕೋಟಿ ರೂ ಗಳು ಆದರೆ ಸಾಲ ಮನ್ನಾ ಲಾಭ ಸಿಕ್ಕಿದ್ದು 5 95 ಲಕ್ಷ ರೈತರಿಗೆ, ಒಟ್ಟಾರೆ17 00 ಲಕ್ಷ ರೈತರಲ್ಲಿ 5 00 ಲಕ್ಷ ಜನರಿಗೆ ಮಾತ್ರ ಸಾಲ ಮನ್ನಾ ಲಾಭ ಸಿಕ್ಕಿದೆ ರಾಜ್ಯದಲ್ಲಿ 32,382 ಸಹಕಾರ ಸಂಸ್ಥೆಗಳಿವೆ, ಪಾಪ, ಸಹಕಾರ ಮಂತ್ರಿಗಳಾದ ಜಿ ಟಿ ದೇವೆಗೌಡರಿಗೆ ಆಕ್ಸಿಡೆಂಟ್ ಆಗಿದೆ ಅವರು

ರೆಸಾರ್ಟ್‌ನಲ್ಲಿದ್ದರು, ಅಲ್ಲಿಂದಲೇ ಫೋನ್ ಮಾಡುತ್ತಾರೆ ಸ್ವಾಮಿ ನಮ್ಮೆಲ್ಲಾ ಬ್ಯಾಂಕುಗಳನ್ನು ಹಾಳು ಮಾಡಿದ್ದಾರೆ, ಈ ಸದನದಲ್ಲಿ ಈ ವಿಷಯವನ್ನು ಎತ್ತಿ ನನಗೆ ನಡೆಯಲಿಕ್ಕಾಗುವುದಿಲ್ಲ, ಆದ್ದರಿಂದ ನನಗೆ ಬರಲಿಕ್ಕಾಗುವುದಿಲ್ಲ ಎಂದು ಹೇಳಿದ್ದಾರೆ ರಾಜ್ಯಕ್ಕೆ ಸಂಬಂಧಪಟ್ಟದ್ದು ಇದೆ, ಹೇಳಲೇಬೇಕಾಗುತ್ತದೆ ಈಗ defunct ಆಗಿರುವುದು 2,310–00 ಲಿಕ್ವಿಡೇಟ್ ಆಗಿರುವುದು 2,659, ಸಹಕಾರ ಚಳುವಳಿ ಜವಾಹರ್‌ಲಾಲ್ ನೆಹರುರವರ ಕಾಲದಲ್ಲಿ ಪ್ರಾರಂಭವಾಯಿತು co-operative forming S K day ಅವರು ಇದನ್ನು ಮುನ್ನಡೆಸಿದರು ಇದಕ್ಕೆ ಇತಿಹಾಸವಿದೆ, ಎಲ್ಲಾ ರೈತರಿಗೆ ಸಾಲ ಕೊಡತಕ್ಕಂಥ ರೀತಿಯಲ್ಲಿ ಸಹಕಾರಿ ಬ್ಯಾಂಕಿನ ಮೂಲಕ ಕೊಡಬೇಕೆನ್ನುವಂಥದ್ದು, ನೀವು ಏನಿಲ್ಲ, ಸಾಲ ಮನ್ನಾ ಮಾಡಬೇಕು, ಯಡಿಯೂರಪ್ಪನವರು ಪೋಸ್ಟರ್ ಹಚ್ಚಿ ಚುನಾವಣೆಗೆ ಹೋಗಬೇಕು

ಅಧ್ಯಕ್ಷರು – ಯಡಿಯೂರಪ್ಪನವರು ನಿಮ್ಮ ಮಾತಿಗೆ ನಗುತ್ತಿದ್ದಾರೆ ನೋಡಿ

ಶ್ರೀ ಎನ್ ಧರ್ಮಸಿಂಗ್ – ನಗುತ್ತಾರೆ, ನಗದೇ ಏನು ಮಾಡುತ್ತಾರೆ? ಅದಕ್ಕೇನೆಂದರೆ ಇವತ್ತು ಸಾಲ ಮನ್ನಾ ಮಾಡತಕ್ಕಂಥ ರೀತಿಯಲ್ಲಿ ಆಯವ್ಯಯವನ್ನು ಮಾಡಿ ಎಂದು ಹೇಳುತ್ತೇವೆ, ಈಗ ನೀವು ಲಾಸ್ಟ್ ಟೈಮ್ ಸಾಲ ಮನ್ನಾ ಮಾಡಿ ಬಜೆಟ್‌ನಲ್ಲಿ ಎಷ್ಟು ಹಣವಿಟ್ಟಿದ್ದಿರಿ? ಇವತ್ತು ಸಾಲ ಮನ್ನಾ ಮಾಡಬೇಕಾದರೆ 1594 ಕೋಟಿ ಇಟ್ಟು, ನಿನ್ನೆ ವಿಧಾನಪರಿಷತ್ತಿನಲ್ಲಿ 50,000–00 ಎಂದು ಹೇಳುತ್ತೀರಿ, ಅಂದರೆ ಅದಕ್ಕೆ 2,000 ಕೋಟಿ ರೂ ಗಳು ಬೇಕು, ನಾವು ಕೇಳುತ್ತಿರುವುದು ಸಂಪನ್ಮೂಲವನ್ನು ಹೇಗೆ ಭರಿಸುತ್ತೀರಿ? ಹೋದ ಸಲ ಘೋಷಣೆ ಮಾಡಿದ್ದಿರಿ, ವ್ಯವಸ್ಥಿತ ರೀತಿಯಲ್ಲಿ ರಾಜ್ಯದ ಉಪ ಮುಖ್ಯಮಂತ್ರಿಗಳಾಗಿ ಹಣಕಾಸಿನ ಸಚಿವರಾಗಿ ರೈತರಿಗೆ ಮೋಸ, ವಂಚನೆ ಮಾಡಬಾರದು, ರೈತರ ಹಿತವಾಗುವ ರೀತಿಯಲ್ಲಿ ಮಾಡಬೇಕು ಕೇವಲ ಬಜೆಟ್ ಪುಸ್ತಕದಲ್ಲಿ ಓದಿ ಮನೆಗೆ ಹೋದರೆ ಆಗುವುದಿಲ್ಲ

ಶ್ರೀ ಬಿ ಎಸ್ ಯಡಿಯೂರಪ್ಪ – ನಾನು ನಿಮ್ಮ ಮಾತಿನ ಮಧ್ಯೆ ಸಾಮಾನ್ಯವಾಗಿ ಪ್ರವೇಶ ಮಾಡುವುದಿಲ್ಲ 2006–07 ರಲ್ಲಿ ಪ್ರಮುಖವಾದಂತಹ ಕಾರ್ಯಕ್ರಮಗಳಿಗೆ ನಾನೇನು ಘೋಷಣೆ ಮಾಡಿದ್ದೇ, ಯಾವ ಕಾರ್ಯಕ್ರಮ ಆಗಿದೆ, ಯಾವ ಕಾರ್ಯಕ್ರಮ ಆಗಿಲ್ಲ, ನಾನು ಆಯವ್ಯಯದಲ್ಲಿ ಹೇಳಿರುವಂಥಾದ್ದು,

ದಯಮಾಡಿ ತಾವು ಅದನ್ನು enlighten ಮಾಡಿ Last year 2006–07 ರಲ್ಲಿ ಹೇಳಿದಂಧ ಕಾರ್ಯಕ್ರಮಗಳನ್ನು ಮಾಡಲೇ ಇಲ್ಲವೆಂದು ಹೇಳಿದಿರಿ, 4% ಗೆ ಬಡ್ಡಿಸಾಲ ಕೊಡಲಿಲ್ಲವೇ? ಎತ್ತು ಗಾಡಿ ಕೊಡಲಿಲ್ಲವೇ? ಭಾಗ್ಯಲಕ್ಷ್ಮಿ ಯೋಜನೆಯನ್ನು ಜಾರಿಗೆ ತರಲಿಲ್ಲವೇ? ಹೆಣ್ಣು ಮಕ್ಕಳಿಗೆ, ಗಂಡು ಮಕ್ಕಳಿಗೆ ಬೈಸಿಕಲ್ ಕೊಡಲಿಲ್ಲವೇ? ಏನು ಮಾಡಿಲ್ಲವೆಂದು ಹೇಳಿ ದಯವಿಟ್ಟು ಲೀಸ್ಟ್ ನಾನು ಅದನ್ನು ತಿದ್ದುಕೊಳ್ಳಲಿಕ್ಕೆ ಸರಿಹೋಗುತ್ತದೆ ದಯಮಾಡಿ ವಿವರವನ್ನು ಕೊಡಿ ನೀರಾವರಿ ಯೋಜನೆಗೆ 39 ಪೂರ್ಣಮಾಡುತ್ತೇವೆಂದು ಹೇಳಿ 37 ಯೋಜನೆಗಳನ್ನು ಪರ್ಣ ಮಾಡಲಿಲ್ಲವೇ? ಯಾವುದು ಮಾಡಲಿಲ್ಲ? ದಯವಿಟ್ಟು ನಿಮಗೂ ನಮಗೂ compare ಮಾಡಿ ಹೇಳಿ

ಶ್ರೀ ಎನ್ ಧರ್ಮಸಿಂಗ್ – ಭಾಗ್ಯಲಕ್ಷ್ಮಿ ಯೋಜನೆ ಬಗ್ಗೆ ವಿಜಯ ಕರ್ನಾಟಕ ಪತ್ರಿಕೆಯಲ್ಲಿ ಬಂದಿದೆ ಈ ಯೋಜನೆಯ ಬಗ್ಗೆ ಸರ್ಕಾರ ಏನು ತೀರ್ಮಾನ ಕೈಗೊಂಡಿದೆ ಮತ್ತು ಸೈಕಲ್ ಬಗ್ಗೆ ಏನಾಗಿದೆ, ಸೈಕಲ್ ಮುರಿದು ಬಿದ್ದಿವೆ ಎಂದು ಪತ್ರಿಕೆಯವರು ಹೇಳಿದ್ದಾರೆ ನಾವು ಹೇಳಿಲ್ಲ ನಿಮ್ಮ ಪತ್ರಿಕೆ ಹೇಳಿದ್ದು ನಾವು ಹೇಳುತ್ತಿಲ್ಲ, ಪತ್ರಿಕೆಯಲ್ಲಿರುವುದನ್ನು ಹೇಳುತ್ತಿದ್ದೇವೆ ಯಡಿಯೂರಪ್ಪನವರು ಬಜೆಟ್ ಅನ್ನು ಮಂಡಿಸಿದರಿ, ತೆರಿಗೆ ವಸೂಲಿ ಸಮರ್ಪಕ ಎಂದು ಹೇಳಿದ್ದೀರಿ, ಇರಲಿ 2008 ಒಟ್ಟು ಜಮೆ 47,927 ಕೋಟಿ ರೂ ವೆಚ್ಚ ಕೂಡ ಅಷ್ಟೇ ಎಂದು ಹೇಳಿದ್ದೀರಿ, ಕಾರ್ಯಕ್ರಮಗಳಿಗೆ ಹಣ ಹಂಚಿಕೆಯಾಗಿದೆಯೆಂದು ಹೇಳಿದ್ದೀರಿ, ಪ್ರಕಟಿಸಿರುವ ಯೋಜನೆಗಳಿಗೆ ಇನ್ನೂ ಹಣಕಾಸಿನ ಹೊಂದಾಣಿಕೆ ಮಾಡಿಕೊಳ್ಳಬೇಕಾಗಿದೆ ರೈತರ ಸಾಲ ಮನ್ನಾಕ್ಕೆ 1,950 ಕೋಟಿ ರೂ ಗಳು ಬೇಕು ನಿನ್ನೆ ಮತ್ತೆ ವಿಧಾನಪರಿಷತ್ತಿನಲ್ಲಿ ಹೇಳಿದ್ದೀರಿ, ಅದಕ್ಕೆ ಮತ್ತೆ ಹಣ ಸೇರಿಸಬೇಕಾಗುತ್ತದೆ ಹಿಂದೆ ಮಾಡಿರುವ ಬಡ್ಡಿ ಮನ್ನಾದಿಂದ ಡಿ ಸಿ ಸಿ ಬ್ಯಾಂಕ್‌ಗಳಿಗೆ ಇನ್ನೂ 475–00 ಕೋಟಿ ರೂಗಳನ್ನು ಕೊಡಬೇಕು ನೇಕಾರರ ಸಾಲ ಬಡ್ಡಿ ಬಗ್ಗೆ ನೇಕಾರರಿಗೆ ಹೇಳಿದ್ದೇ ಹೇಳಿದ್ದು, ಸ್ವಾಗತ ಮಾಡಿಸಿಕೊಂಡಿದ್ದೀರಿ ಅದಕ್ಕೆ ಇನ್ನೂ 10 00 ಕೋಟಿ ರೂಗಳನ್ನು ಕೊಡಬೇಕಾಗಿದೆ ಅದನ್ನೇ ಇನ್ನೂ ಕೊಟ್ಟಿಲ್ಲ ನೇಕಾರರ ಸಾಲ ಬಡ್ಡಿ ಮನ್ನಾ ಮಾಡುವಂಧದ್ದು ಹೇಳಿ, ಇವತ್ತು ಹತ್ತು ಕೋಟಿ

ಎಂಭತ್ತೊಂಭತ್ತು ಲಕ್ಷ ರೂ ಗಳನ್ನು ಕೊಡಬೇಕಾಗಿದೆ, ಕೊಟ್ಟಿಲ್ಲ ಮೀನುಗಾರರ ಸಾಲದ ಬಡ್ಡಿ ಮನ್ನಾಕ್ಕೆ ಎರಡು ಕೋಟಿ ಎಂಟು ಲಕ್ಷ ರೂ ಗಳನ್ನು ಕೊಡಬೇಕಾಗಿದೆ ಸಾರಾಯಿ ಮಾರಾಟ ನಿಷೇಧದಿಂದ ಅಬಕಾರಿ ಆದಾಯದಲ್ಲಿ ಕೊರತೆ ಶೇಕಡ 43%, ಅಂದರೆ 1,905 ಕೋಟಿ ರೂ ಗಳಾಗಿವೆ, ಲಾಟರಿ ನಿಷೇಧದಿಂದ ಆಗುವ ನಷ್ಟ 250 ಕೋಟಿ ರೂ ಗಳಾಗಿವೆ, Regional imbalance ಹೋಗಲಾಡಿಸಲಿಕ್ಕೆ 1,571 ಕೋಟಿ ರೂ ಗಳು ಬೇಕು ವೇತನ ಆಯೋಗಕ್ಕೆ 1,000–00 ಕೋಟಿ ರೂ ಗಳು, 7,164,69 ಕೋಟಿ ರೂಗಳನ್ನು alternative ಆಗಿ ಯಾವ ರೀತಿಯಾಗಿ ಭರಿಸುತ್ತೀರಿ ಎಂಬುದನ್ನೂ ಸಹ ಈ ಸಭೆಗೆ ಹೇಳಬೇಕಾಗಿದೆ ನಮ್ಮ ಪಕ್ಷದ ಅಧ್ಯಕ್ಷರು, ಮಾನ್ಯ ಸಿದ್ಧರಾಮಯ್ಯನವರು, ಮಾನ್ಯ ದೇಶಪಾಂಡೆಯವರು, ಬಹಳಷ್ಟು ಜನ ಇವತ್ತು ಇದನ್ನು ಉದ್ದೇಶಿಸಿ ಮಾತನಾಡಲಿದ್ದಾರೆ ಸುಮಾರು 22 ಜನ ಚರ್ಚೆಯಲ್ಲಿ ಭಾಗವಹಿಸಲಿದ್ದಾರೆ ಇವತ್ತು ನಾನು ಇನ್ನೂ ಕೂಡ ಹೆಚ್ಚಿನ ಕಾಲಾವಕಾಶ ತೆಗೆದುಕೊಳ್ಳಲಿಕ್ಕೆ ಆಗುವುದಿಲ್ಲ ಈ ಬಜೆಟ್ ಸರಿಯಾದ ಬಜೆಟ್ ಅಲ್ಲ ಈ ಬಜೆಟ್ ಸಮ್ಮಿಶ್ರ ಸರ್ಕಾರದ ಬಜೆಟ್ ಅಲ್ಲ, ಇದು ಬಿಜೆಪಿ ಅಜೆಂಡಾ ಬಜೆಟ್ಟಿದೆ ಇವತ್ತು ಜನರಿಗೆ ವಂಚನೆ ಮಾಡತಕ್ಕಂಥ ರೀತಿಯಲ್ಲಿ ವಿಕಾಸ ಯಾತ್ರೆಗೆ ಹೊರಟು ಮತವನ್ನು ಗಳಿಸುವಂಥ ಬಜೆಟ್ ಇದಾಗಿದೆ ಸರಿಯಾದ ರೀತಿಯಲ್ಲಿ ಕಾರ್ಯನಿರ್ವಹಣೆ ಆಗಿಲ್ಲ Action Plan ತಯಾರು ಮಾಡಿಲ್ಲ ಇಲ್ಲಿಯವರೆಗೆ 13 ತಿಂಗಳುಗಳ ಅವಧಿಯಲ್ಲಿ ಕರ್ನಾಟಕ ರಾಜ್ಯದಲ್ಲಿ ಯಾವ ಅಭಿವೃದ್ಧಿ ಕೆಲಸಗಳಿಗೂ ಕೂಡ ಒಂದು ನಯಾ ಪೈಸೆ ಬಿಡುಗಡೆ ಮಾಡಿಲ್ಲ ಇದು ಜನವಿರೋಧಿ ಬಜೆಟ್, ಈ ಬಜೆಟ್ ಸಮ್ಮಿಶ್ರ ಸರ್ಕಾರದ ಬಜೆಟ್ ಅಲ್ಲ, ಇದು ಕೇವಲ ಬಿ ಜೆ ಪಿ ಬಜೆಟ್ ಆಗಿದೆ ಇದು ರಾಜ್ಯದ ಬಜೆಟ್ ಆಗಿಲ್ಲ, ಇದಕ್ಕೆ ನಾನು ವಿರೋಧಿಸಿ ನನ್ನ ಮಾತನ್ನು ಮುಗಿಸುತ್ತೇನೆ

ಅಧ್ಯಕ್ಷರು – ಬಹಳಷ್ಟು ಜನ ಈ ಬಜೆಟ್ ಮೇಲೆ ಮಾತನಾಡುವವರಿದ್ದಾರೆ

ಶ್ರೀ ಜೆ ಸಿ ಮಾಧುಸ್ವಾಮಿ – ಬೇಡ ಎಂದರೆ ನಿಲ್ಲಿಸಿಬಿಡುತ್ತೇವೆ

ಅಧ್ಯಕ್ಷರು – ಬೇಡವೆನ್ನುವುದಿಲ್ಲ briefಆಗಿ ಮಾತನಾಡಬೇಕು ಎಂದು ಎಲ್ಲರಿಗೂ ವಿನಂತಿ ಮಾಡಿಕೊಳ್ಳುತ್ತೇನೆ

ಶ್ರೀ ಎಸ್ ಸಿದ್ಧರಾಮಯ್ಯ – ಅಧ್ಯಕ್ಷರೇ ಇವತ್ತು ಪ್ರಾರಂಭವಾಗಿದೆ, ನಾಳೆ ಸಾಯಂಕಾಲದವರೆಗೆ ಚರ್ಚೆ ಆಗುತ್ತದೆ

ಅಧ್ಯಕ್ಷರು – ಹೌದು ನಾಳೆ ಸಾಯಂಕಾಲದವರೆಗೆ ಚರ್ಚೆಗೆ ಅವಕಾಶವನ್ನು ಕೊಡುತ್ತೇನೆ, ಆದರೆ ಈಗಾಗಲೇ ಬಹಳಷ್ಟು ಜನ ಹೊಸಬರಿಗೂ ಮಾತನಾಡಲಿಕ್ಕೆ ಅವಕಾಶ ಕೊಟ್ಟಿದ್ದೇನೆ

ಶ್ರೀ ಎಸ್ ಮಲ್ಲಿಕಾರ್ಜುನ ಖರ್ಗೆ – ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ ಹಾಗೆ ಈ ಬಜೆಟ್ ಬಿ ಜೆ ಪಿ ಬಜೆಟ್ ಅಧ್ಯಕ್ಷರೇ, ಈ ವಿಷಯದಲ್ಲಿ ಜೆ ಡಿ ಎಸ್ ನವರದ್ದು ಒಪ್ಪಿಗೆ ಇಲ್ಲ ಅವರೆಲ್ಲಾ ನಮ್ಮ ಜೊತೆಯಲ್ಲಿದ್ದಾರೆ ಅದಕ್ಕೆ ಸುಮ್ಮನೆ ಏಕೆ ಇದನ್ನು ಇಷ್ಟು insist ಮಾಡುತ್ತೀರಿ?

ಶ್ರೀ ಜೆ ಸಿ ಮಾಧುಸ್ವಾಮಿ (ಚಿಕ್ಕನಾಯಕನ ಹಳ್ಳಿ) – ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಹಣಕಾಸಿನ ಸಚಿವರೇನು ಶಾಸನ ಸಭೆಯ ಮುಂದೆ ಈ ಆಯವ್ಯಯವನ್ನು ಮಂಡಿಸಿದ್ದಾರೆ ಅವರು ಒಳ್ಳೆಯ ಆಯವ್ಯಯವನ್ನು ಮಂಡಿಸಿದ್ದೇನೆಂದು ಭಾವಿಸಿದ್ದಾರೆ ತನ್ಮೂಲಕ ನನ್ನ ಕನಸೆಲ್ಲಾ ನನಸಾಗುವ ಕಾಲ ಬಂದಿದೆ ನಾನೇನು 30 ವರ್ಷಗಳ ಕಾಲ ಜನಗಳ ಮಧ್ಯೆ ಹೋರಾಟ ಮಾಡಿಕೊಂಡು ರೈತರ ಕುಟುಂಬದಿಂದ ಬಂದಿದ್ದೇನೆ, ಅದನ್ನು ಸಾಧಿಸುವ ಕಾಲಕ್ಕೆ ಬಂದು ನಿಂತಿದ್ದೇನೆ, ನನ್ನ Complacence ಅನ್ನು reach ಆಗಿದ್ದೇನೆಂದು ಭಾವಿಸಿಕೊಂಡ ಹಾಗೆ ಇದೆ ಆದರೆ ದುರ್ದೈವದಿಂದ ಹೇಳಬೇಕಾಗುತ್ತದೆ ಅವರು ತಿಳಿದುಕೊಂಡಿರುವುದಕ್ಕಿಂತ ವಿರುದ್ಧ ದಿಕ್ಕಿನಲ್ಲಿ ಈ ರಾಜ್ಯವನ್ನು ನಡೆಸಿಕೊಂಡು ಹೋಗುವಂಥ ಬಜೆಟ್ ಇದಾಗಿದೆ ನಾನು ಹೋದ ಸಲವು ಇಲ್ಲಿ ಮಾತನಾಡುತ್ತಾ ಹೇಳಿದ್ದೆ, ರಾಜ್ಯದ ಹಣಕಾಸಿನ ಸಚಿವರು programme ಗೂ ಪ್ರೋಜೆಕ್ಟ್ ಗೂ ನಡುವೆ ಇರುವ ವ್ಯತ್ಯಾಸವನ್ನು ಅರ್ಥಮಾಡಿಕೊಳ್ಳಬೇಕು, project oriented budget ಯಾವಾಗ ಇಡಬೇಕೆಂದು ಅವತ್ತು ನಾನು ಆಕಸ್ಮಾತ್ ಆಗಿ ಸನ್ಮಾನ್ಯ ಎಸ್ ಎಂ ಕೃಷ್ಣರವರನ್ನು , ಮಾನ್ಯ ಸಿದ್ಧರಾಮಯ್ಯನವರನ್ನು ಮೆಚ್ಚಿ ಮಾತನಾಡಿದ್ದೆ, ಇದು ರಾಜಕಾರಣವಲ್ಲ, ಅವರಿಗೆ ನೋವು ಮಾಡಬೇಕೆಂದಲ್ಲ Fiscal responsibility Act ಅನ್ನು ಕರ್ನಾಟಕ

ರಾಜ್ಯ ಒಪ್ಪಿಕೊಂಡಾಗ ಬಜೆಟ್ ಅನ್ನು ರೈಲ್ವೇ ಹಳಿಯ ಮೇಲೆ ತರಬೇಕಾದರೆ ನಿಗದಿತ ಕಾಲಕ್ಕೆ Fiscal deficit ಇಲ್ಲದ ಹಾಗೆ non revenue deficit ಬಜೆಟ್ ಅನ್ನು ಮಂಡಿಸುವ ಕಡೆ ಕಠಿಣ ಕ್ರಮಗಳನ್ನು ಆ ಸರ್ಕಾರ ತೆಗೆದುಕೊಳ್ಳುವುದು ಅನಿವಾರ್ಯವಾಯಿತು ಕೆಲ ಮಟ್ಟಿಗೆ ಅದು unpopular ಸಹ ಆಗುತ್ತದೆ ಯಾವಾಗ ನೀವು ಆರ್ಥಿಕವಾಗಿ ಶಿಸ್ತಿನ ಕ್ರಮ, ಕಠಿಣ ಕ್ರಮಗಳನ್ನು impose ಮಾಡುತ್ತೀರಿ, ರಾಜ್ಯದ ಒಟ್ಟಾರೆ ಹಿತಾಸಕ್ತಿಯಲ್ಲಿ, ಆ ಕಾಲಕ್ಕೆ ಸ್ವಲ್ಪ ಜನಗಳಿಗೆ "ಈ ಬಜೆಟ್ ಚೆನ್ನಾಗಿಲ್ಲ, restrictions ಜಾಸ್ತಿಯಾಯಿತು, allocations ಕಡಿಮೆಯಾಯಿತು, ಏನಿವರು ರೈತರ ಪರವಾಗಿಲ್ಲ" ಹಾಗೆ ಹೀಗೆ ಎನ್ನುವ ಭಾವನೆ ಬರುವುದು ಸ್ವಾಭಾವಿಕ ಆದರೆ ಅದರ ಎಫೆಕ್ಟ್ ಅದು ಆಗಿ ಐದು ವರ್ಷಕ್ಕೋ, ಆರು, ಏಳು, ಎಂಟು ವರ್ಷಕ್ಕೋ ಆಗುವುದು ಅನಿವಾರ್ಯ ಮರ ಬೆಳೆದ ಹಾಗೆ, ಇವತ್ತು ಯಾರಾದರೂ ಒಂದು ಪ್ರಾಜೆಕ್ಟ್ ಅನ್ನು ಮಾಡುತ್ತೇವೆಂದು ಅಥವಾ ಒಂದು ಯೋಜನೆಯನ್ನು ಪ್ರಾರಂಭ ಮಾಡುತ್ತೇವೆಂದು, ಒಂದು ತೋಟಗಾರಿಕೆ ಕೆಲಸ ಆರಂಭ ಮಾಡುತ್ತೇವೆಂದರೆ, ಮೊದಲ 5 ವರ್ಷ, ಆರು ವರ್ಷ ಅವರು ಲಾಭ ಕಾಣಲಿಕ್ಕಾಗುವುದಿಲ್ಲ ಅವರು ಲಾಭ ಕಾಣುವುದಕ್ಕಾಗುವುದೇ ಇಲ್ಲ ಏಕೆ ಅಂದರೆ ಆ ವರ್ಷಗಳು investment, ಅದು ಯೀಲ್ಡ್ ಕೊಡುವ ಕಾಲಕ್ಕೆ ಲಾಭ whether you work or not, ಅದು ಫಲ ಕೊಡುತ್ತದೆ ನಮ್ಮಂಪದಿರು ತೆಂಗಿನಮರ ಬೆಳೆದುಹೋಗಿದ್ದಾರೆ ನಾನು ಬರೀ ಕಾಯಿ ಕೆಡವುತ್ತಿದ್ದೇನೆ ಎಂದು ನಾನು ಅಚ್ಚುಕಟ್ಟಾಗಿ ಹೇಳಿಕೊಳ್ಳಬಹುದು ನನಗೆ ವರವಾನ ಇಷ್ಟರಿಂದ ಇಷ್ಟಕ್ಕೆ ಜಾಸ್ತಿಯಾಯಿತು ನಾನಿದನ್ನು ಇಂಪ್ರೂವ್ ಮಾಡಿದೆ ಅಂತ ಹೇಳಬಹುದು ವಾಸ್ತವವಾಗಿ ಹಾಗೆ ಆಗಿಲ್ಲ ನಾನು ಯಡಿಯೂರಪ್ಪನವರಲ್ಲಿ ಮನವಿ ಮಾಡುತ್ತೇನೆ ನೀವೇನು ರೈತರ ಪರವಾಗಿ ಭಾಷಣದಲ್ಲಿ ಮಾತನಾಡುತ್ತೀರಿ, ಆದರೆ ಅವರಿಗೆ ಪೂರಕವಾಗಿ ಯೋಜನೆ ಕಾರ್ಯಕ್ರಮಗಳಲ್ಲಿ ತಾವು ಹಾಗೆ ಇಡಲಿಲ್ಲ ನಿಮ್ಮ ಆರ್ಥಿಕ ಸಮೀಕ್ಷೆಯನ್ನು ತೆಗೆದು ಓದಬೇಕು Creation of jobs, ಪ್ರಥಮ ವಲಯದಲ್ಲಿ ಕಡಿಮೆಯಾಗಿದೆ ಕೆಲಸವಿಲ್ಲದೇ ನಿರೋದ್ಯೋಗಿಗಳು ಸೃಷ್ಟಿಯಾಗಿದ್ದಾರೆ ಕೃಷಿ ವಲಯದಲ್ಲಿ 70% geographical area ಇದೆ ಇದರಲ್ಲಿ job

creation or existing jobs ಕಡಿಮೆಯಾಗಿದೆ ಅದರರ್ಥವೇನು? ಅಂದರೆ ಆ ಕಸಬು ವ್ಯವಹಾರಿಕವಲ್ಲ ಲಾಭದಾಯಕವಲ್ಲ ಆ ಕಸುಬು ಮಾಡುವುದರಿಂದ ನಾನು ಬದುಕುವುದಿಲ್ಲವೆಂಬ ಭಾವನೆ ಮೇಲೆ ಜನ ಆ ಕೆಲಸ ಮಾಡುವುದು ಬಿಟ್ಟುಬಿಡುತ್ತಾರೆ ಅಥವಾ ಇನ್ನೊಂದು ಕಡೆ ವಲಸೆ ಹೋಗುತ್ತಾರೆ ಇದಕ್ಕೆ ಮೊದಲೇ ತಾವು ಯೋಚನೆ ಮಾಡಿದ್ದರೆ ಆ ಕಸುಬಿನವರಿಗೆ ಒಂದು ಶಕ್ತಿ ಕೊಡುವ ಕೆಲಸ ಈ ಬಜೆಟ್ನಲ್ಲಿ ಮಾಡುತ್ತಿದ್ದೀರಿ ನೀವೇನು ರಾಜ್ಯದ ಅಭಿವೃದ್ಧಿ ಆಗುತ್ತದೆ ಅನ್ನುತ್ತೀರಿ, ರಾಜ್ಯದ ಪ್ರತಿಯೊಬ್ಬ ಮನುಷ್ಯನ ಅಭಿವೃದ್ಧಿಯಾದರೆ ಮಾತ್ರ ರಾಜ್ಯದ ಅಭಿವೃದ್ಧಿ ರಸ್ತೆಗಳಿಂದ ಕಟ್ಟಡಗಳಿಂದ ಕಾರ್ಯಕ್ರಮಗಳಿಂದ ಅಭಿವೃದ್ಧಿಯಾಗುತ್ತದೆಂದು ನಾವು ತಿಳಿದುಕೊಳ್ಳುವುದಕ್ಕಾಗುವುದಿಲ್ಲ ರಾಜ್ಯದ ಒಬ್ಬನ ತಲಾದಾಯದ ಬಗ್ಗೆ ನೀವೇನು ಮಾಡಿದ್ದೀರಿ ಎಂದು ಪ್ರಶ್ನಿಸಬೇಕಾಗುತ್ತದೆ ಆ ಕಡೆ ನಿಮ್ಮ ಬಜೆಟ್ ಪ್ರಪೋಸಲ್ಸ್ ಇಲ್ಲ, ಇದು ನಮ್ಮ ದುರ್ದೈವ ನೀವೇನು ಕೃಷಿ ವಲಯದಲ್ಲಿ ಹೇಳಿದ್ದೀರಿ, ನೀವು ಒಂದೊಂದೇ ಆಲೋಚನೆ ಮಾಡಿಕೊಂಡು ಹೋಗಬೇಕು ಈಗ ನಾನು ಹೋಲಿಕೆ ಮಾಡುತ್ತೇನೆ ತಾವು ಇವತ್ತು ಅನೇಕ ಕಾರ್ಯಕ್ರಮಗಳನ್ನು ಕೊಟ್ಟಿದ್ದೀರಿ ತಮಗೆ ಇವತ್ತು ಭಗವಂತನ ಕೃಪೆಯಿದೆ ಯಾವ ಶ್ರೀರಾಮಚಂದ್ರನನ್ನು ನಂಬಿ ರಾಜಕೀಯ ಮಾಡಿಕೊಂಡು ಬಂದಿರಿ, ಆತನ ಆಶೀರ್ವಾದ ಇದೆ ದಿಢೀರ ಅಂತ ನಿಮಗೆ ನಿರೀಕ್ಷೆ ಮೀರಿ fiscal growth ರಾಜ್ಯದಲ್ಲಿ ಆಗಿದೆ we have to appreciate Mr Chidambaram ಎರಡು ಮೂರು ವರ್ಷದಿಂದೀಚೆಗೆ ಅವರಿಗೇ ಜ್ಞಾನೋದಯವಾಗಿದೆ ಎಲ್ಲಿಯವರೆಗೆ state sectorಗೆ capital investment ಒಂದಿಷ್ಟು ಕೊಡುವುದಿಲ್ಲವೋ ಅಲ್ಲಿಯವರೆಗೆ ರಾಜ್ಯಗಳ ಅಭಿವೃದ್ಧಿ ಕೂಡ ಮೇಲೆ ಬರುವುದಿಲ್ಲ ಕೇಂದ್ರ ಸರ್ಕಾರ ಇವತ್ತು ಬದುಕುವುದಿಲ್ಲ ಅಂತ ಅವರಿಗೆ ಗೊತ್ತಾಗಿದೆ plan size ಜಾಸ್ತಿ ಮಾಡುತ್ತಿದ್ದರೆ ಅವರ ಅನುದಾನ allocations ಜಾಸ್ತಿ ಮಾಡುತ್ತಿದ್ದಾರೆ ಈ ಸಲ ಅವರು 40 ಸಾವಿರ ಕೋಟಿಯ SBI Share ಕೊಳ್ಳುತ್ತಿದ್ದಾರೆ ನಾವೂ ಕ್ಯಾಪಿಟಲ್ ಇನ್ವೆಸ್ಟ್ಮೆಂಟ್ ಮಾಡಲೇಬೇಕು, ನಾಳೆ non tax revenues ಜಾಸ್ತಿಯಾಗಲೇಬೇಕು ನನ್ನದು issue based, ಯಾವುದೇ ವ್ಯಕ್ತಿಯನ್ನು ಪೂಜಿಸಲು ಹೋಗುವುದಿಲ್ಲ I was

shocked, 40 ಸಾವಿರ ಕೋಟಿ shares purchase ಗೆ ಇಟ್ಟುಕೊಳ್ಳುತ್ತಾರೆ ಇದೇ ಮನಮೋಹನ್‌ಸಿಂಗ್‌ರ ಹಿಂದಿನ ಸರ್ಕಾರದ ಅರುಣ್‌ಶೌರಿಯವರು ಒಂದು ಮಂತ್ರಿ ಖಾತೆಯನ್ನೇ ಶುರು ಮಾಡಿತ್ತು ನಮ್ಮ sheres, capitals ನ್ನು disinvest ಮಾಡು ಅಂದರು ಇವತ್ತು I have to go to securities, I have to go for share holdings ಅಂತ 40 ಸಾವಿರ ಕೋಟಿ ಎಸ್ ಬಿ ಐ ಶೆರ್ಸ್ ಕೊಳ್ಳಲು ನಿಗದಿ ಮಾಡಿದ್ದೇನೆ ಅಂತ ಭಾಷಣ ಮಾಡುತ್ತಾರೆ ಯಾಕೆ? He has to compete and he has to see that the ratio is maintained ನಿಮಗೆ ಆ ಆಲೋಚನೆಗಳೇ ಇಲ್ಲ ಇವತ್ತು ಈ ರಾಜ್ಯದಲ್ಲಿ ಕ್ಯಾಪಿಟಲ್ ಇನ್ವೆಸ್ಟ್‌ಮೆಂಟ್ ಕಡಿಮೆ ಮಾಡುತ್ತಿದ್ದೇವೆ, ಏನು ಆರ್ಥಿಕ ಪರಿಸ್ಥಿತಿ ವೃದ್ಧಿಯಾಗುತ್ತಿದೆ, ಆ ಪ್ರಮಾಣದಲ್ಲಿ ಬಂಡವಾಳ ವಿನಿಯೋಗವಾಗುತ್ತಿಲ್ಲ ಬಂಡವಾಳ ವಿನಿಯೋಗ ಮಾಡುವ ಏರಿಯಾಗಳನ್ನು ನಾವು ಉದಾಸೀನ ಮಾಡಿದ್ದೇವೆ ಬಂಡವಾಳ ವಿನಿಯೋಗವಾಗದಿದ್ದರೆ ಮುಂದಿನ ತಲೆಮಾರುಗಳಿಗೆ ನಾವು ಶಾಪ ಕೊಟ್ಟ ಹಾಗಾಗುತ್ತದೆ ಯಾಕೆ ? There is Constraint, ನಿಮ್ಮ tax and non tax area ಗಳಿಗೆ ಮಿತಿಯಿದೆ ನೀವು ವರ್ಷವರ್ಷ ಜಾಸ್ತಿ ಮಾಡಿಕೊಂಡು ಹೋಗಲಾಗುವುದಿಲ್ಲ ವ್ಯಾಟ್ ಬಂದ ಮೇಲಂತೂ ನಿಮ್ಮ ಇಚ್ಛೆ ಪ್ರಕಾರವೂ ನೀವು ಹಾಕಲು ಬರುವುದಿಲ್ಲ you have to compete with other states ನಾನು ಮಾನ್ಯ ಸಿದ್ದರಾಮಣ್ಣನವರಿದ್ದಾಗ ಒಂದು ಮಾತು ಕೇಳಿದ್ದೆ, ಅವರು ಅವತ್ತು concede ಆಗಿದ್ದರು ಸಾರ್ ಟೀ ಕಾಫಿಗಳನ್ನು ಹೋಲಿಸಿ ಟೀಗೆ ನಿಮ್ಮವರು CST ತೆಗೆಯುತ್ತಾರೆ, ಕಾಫಿಗೆ impose ಮಾಡಿದ್ದಾರೆ ಅಂತ ಯಾಕೆ? ಕಾಫಿ ಇದೊಂದೇ ರಾಜ್ಯದ ಪ್ರೊಡಕ್ಟ್ ನಮ್ಮ ಮೇಲೆ ಎಂಥ ಸವಾರಿ ನಡೀತಿದೆ? ಕಾಫಿಗೆ ಇವತ್ತು 12 ಚಿಲ್ಲರೆ ಪರ್ಸೆಂಟ್ ತೆರಿಗೆ ಹಾಕಿದ್ದರು ಟೀಗೆ 4% ನಲ್ಲಿಟ್ಟಿದ್ದರು ನಿಮ್ಮ empowerment committee ನವರು ನಾನು ಹೋಗಿ ಹೇಳಿದಾಗ ಅವರು ಒಪ್ಪಿಕೊಂಡರು ಇಲ್ಲ ಇದನ್ನು solve ಮಾಡುತ್ತೇನೆ, ನನಗೆ ಎಲ್ಲೋ ಗೊತ್ತಾಗಿರಲಿಲ್ಲ ಅಂತ ಹೇಳಿದರು ಯಾಕೆಂದರೆ ಕಾಫಿ ನಮ್ಮ ಪ್ರೊಡಕ್ಟ್ ತೆಂಗು ಕೊಬ್ಬರಿ ನಮ್ಮ ಪ್ರೊಡಕ್ಟ್ ಅಡಿಕೆ ನಮ್ಮ ಉತ್ಪನ್ನ ಇವತ್ತು ಧರ್ಮಸಿಂಗ್‌ರಿಗೆ ತಾವು ಒಂದು ಪ್ರಶ್ನೆ ಕೇಳಿದರಿ ಸಾಲ ಮನ್ನಾ ಮಾಡಿದ್ದಕ್ಕೆ ನೀವು ವಿರೋಧಿಯೇ ಅಂತ ನನ್ನ ಕೇಳಿದರೆ

ನಾನು "yes" ಅನ್ನುತ್ತೇನೆ ಕೃಷಿ ಕಸುಬು ಒಂದನ್ನೇ ನಂಬಿಕೊಂಡಿರುವ ನಾನು "yes" ಅನ್ನುತ್ತಿದ್ದೇನೆ you can enquire ನನಗೆ ಬೇರೆ source of income ಇಲ್ಲವೇ ಇಲ್ಲ ಕೃಷಿ ಆದಾಯ ಬಿಟ್ಟರೆ ಇಲ್ಲಿ ತಗೊಳೋ ಭತ್ಯೆ ಸಂಬಳ ಅಷ್ಟೇ ನನಗೆ ವರಮಾನವಿರುವುದು ಆದರೆ ನೀವು ಕೃಷಿ ಉಳಿಸಬೇಕಾಗಿದ್ದರೆ production subsidy ಗಳನ್ನು ಆರಂಭಿಸಬೇಕಾಗಿತ್ತು cost of prudustion ಕಡಿಮೆ ಮಾಡಬೇಕಾಗಿತ್ತು ಇವತ್ತು ನೀವು cost of index ಪ್ರಕಾರ TA DA ಜಾಸ್ತಿ ಮಾಡುತ್ತೀರಿ, ರೈತರಿಗೇನು ಜಾಸ್ತಿ ಮಾಡುತ್ತೀರಿ? ಒಂದು ಕಡೆ subsidise ಮಾಡಿ ದವಸಧಾನ್ಯ ಕೊಡಿಸುತ್ತೀರಿ ಇನ್ನೊಂದು ಕಡೆ every year DA ಜಾಸ್ತಿ ಮಾಡಿಕೊಂಡು ಹೋಗುತ್ತೀರಿ ಬೆಳೆಯುವ ರೈತನಿಗೆ ಯಾವ index ಪ್ರಕಾರ ತಾವು subsidise ಮಾಡಿದ್ದೀರಿ ಹೇಳಿ? At what investment we are doing all this ಅಂತ ಹೇಳಬೇಕು? ರೈತರಿಗೆ ಯಾಕೆ ಈ ಸ್ಥಿತಿ ನಿರ್ಮಾಣವಾಯಿತು ಯಡಿಯೂರಪ್ಪನವರೇ, ನಿಮ್ಮ ಹತ್ತಿರ ಕೈಕಟ್ಟಿ ಸಾಲ ಮನ್ನಾ ಮಾಡಿ ಅಂತ ಬೇಡುವ ಸ್ಥಿತಿ ನಿರ್ಮಾಣ ಮಾಡಿದ್ದೀರಿ ತಾವು ನಮ್ಮ production cost ಕಡಿಮೆ ಮಾಡಬೇಕಾಗಿತ್ತು ಎರಡನೆಯದು ನಾವು ಎಲ್ಲರಿಗೂ ಸಾಲ ಮನ್ನಾ ಮಾಡಿ ಅಂತ ಒತ್ತಾಯ ಮಾಡಿದೆವು We are justified ನಾನು ರಾಜಕೀಯಕ್ಕಾಗಿ ಮಾತನಾಡುವುದಿಲ್ಲ production ನಲ್ಲಿ ಯಾರು large scale produce ಮಾಡುತ್ತಾರೆ ಅದರಿಂದ ನಿಮ್ಮ ರಾಜ್ಯಕ್ಕೆ ಅನುಕೂಲ ಬೈನ್ ಹೇಗೆ progress ಮಾಡಿತು? ಬೇರೆ ರಾಷ್ಟ್ರಗಳು ಹೇಗೆ progress ಆಗುತ್ತವೆ? ನಮ್ಮಲ್ಲಿ ಇವತ್ತು ಒಂದು ಸ್ವಂತ consumption ಗೆ ಇನ್ನೊಂದು market consumption ತರಬೇಕಾಗಿದೆ ಮಾರ್ಕೆಟ್‌ಗೆ ತರುವವರು ಯಾರು? 2,3, 4, 5, ಎಕರೆ ಯೊಳಗೆ ಬೆಳೆದು ರಾಜ್ಯದ ಎಲ್ಲರ ಕಿಟ್ಟಿ ತುಂಬಲು ನಿಮಗೆ ಆಗುವುದೇ? ಹೊಟ್ಟೆಗೆ ದವಸ ಕೊಡಲು ಆಗುವುದೇ? ಇವತ್ತು ನಾವು ಏನೇ ಭಜನೆ ಮಾಡಿಕೊಂಡಿದ್ದರೂ until and unless ನಾವು inflation ಕಡಿಮೆ ಮಾಡುವವರೆಗೆ I am a successful Finance Minister ಅಂತ ಹೇಳಲು ಸಾಧ್ಯವೇ ಇಲ್ಲ ಎಲ್ಲಿಯವರೆಗೆ inflation rate ಏರುತ್ತಿದೆ ಮುಂದೆಮುಂದಕ್ಕೆ ನೀವೇನು ಆರ್ಥಿಕ ಸಚಿವರಾಗಿ

ಸಾಧಿಸಬಲ್ಲಿರಿ? valume of money not turn over is important ನೀವು ಇಷ್ಟು ಕೋಟಿ ಇಟ್ಟೆ, ಅಷ್ಟು ಕೋಟಿ ಇಟ್ಟೆ ಅನ್ನುತ್ತೀರಲ್ಲ, ಅಷ್ಟು ಕೋಟಿ ಎಲ್ಲಿಂದ ಬಂತು ನಿಮಗೆ? Money value decrease ಆದಂತೆ Money valume ಜಾಸ್ತಿಯಾಗುತ್ತಾ ಹೋಗುತ್ತದೆ that means to say ನಿಮ್ಮ money value decrease ಆಗಿದೆ ಹಾಗಾದಾಗ ಕೃಷಿಯನ್ನು ನಂಬಿಕೊಂಡಿರುವವರು ಏನು ಮಾಡಬೇಕು? ಅಧ್ಯಕ್ಷರೇ ತಮ್ಮನ್ನೇ ಕೇಳುತ್ತೇನೆ, ಕೃಷಿಯನ್ನು ನಂಬಿರುವವರು ಏನು ಮಾಡಬೇಕು? ಪ್ರೈಮರಿ ಸೆಕ್ಟರ್ ಅಂತ ತಾವೇನು ನಮ್ಮನ್ನು ಕರೆದಿದ್ದೀರಿ, ಈ ಪೈಪೋಟಿಯಲ್ಲಿ ನಾವು ಯಾವ ರೀತಿ ಬದುಕಲು ನೀವು ಅವಕಾಶ ಮಾಡಿಕೊಟ್ಟಿದ್ದೀರಿ? there are many things, ನೀವು 117 ಲಕ್ಷ ಮಿಲಿಯನ್ ಟನ್ ಆಹಾರ ಉತ್ಪಾದನೆಯಾಗುವ ಕಡೆ ಉತ್ಪಾದನೆ 74 ಲಕ್ಷ ಟನ್‌ಗೆ ಇಳಿದಿದೆ ಸಕ್ಕರೆ ಬೆಳೆಯುವವರಿಗೆ ಇವತ್ತು workout ಆಗುತ್ತಾ ಇಲ್ಲ ತೆಂಗು ಬೆಳೆಯುವವರಿಗೆ work out ಆಗುತ್ತಾ ಇಲ್ಲ ಅಡಿಕೆ ಬೆಳೆಯುವವರಿಗೆ ವರ್ಕೌಟ್ ಆಗುತ್ತ ಇಲ್ಲ ಕಾಫಿ ಬೆಳೆಯುವವರು ನೆಲ ಕಚ್ಚಿದ್ದಾರೆ per day wage ನ್ನು ಜಾಸ್ತಿ ಮಾಡಿಕೊಂಡು ಹೋಗುತ್ತಿದ್ದೀರಿ Fertilize cost ಜಾಸ್ತಿಯಾಗುತ್ತಿದೆ man power ಇಲ್ಲ ಇವತ್ತು ಗ್ರಾಮೀಣ ಪ್ರದೇಶದಲ್ಲಿ ಕೆಲಸ ಮಾಡುವ ಜನರು ಇಲ್ಲ ಎಲ್ಲ ಬಂದು ನಿಮ್ಮ ಗಾರ್ಮೆಂಟ್ ಫ್ಯಾಕ್ಟರಿಯಲ್ಲಿ ಕೆಲಸ ಮಾಡುತ್ತಿದ್ದಾರೆ 1200 ರಿಂದ 1400 ರೂ ವರೆಗೆ ಕೆಲಸ ಮಾಡುವ ಸ್ಥಿತಿಗೆ ಹಳ್ಳಿಯ ಜನರು ಬಂದು ಬೆಂಗಳೂರಿಗೆ ವಲಸೆ ಹೋಗಿದ್ದಾರೆ ಆತ್ಮಸಾಕ್ಷಿಯಾಗಿ ನಾವು ನೋಡಬೇಕು ನಮ್ಮ ನಮ್ಮ ಕ್ಷೇತ್ರಗಳಿಂದ ಐದು ಸಾವಿರ ಜನ, ಆರು ಸಾವಿರ ಜನ, ಏಳು ಸಾವಿರ ಜನರು ಇವತ್ತು ಬೆಂಗಳೂರಿಗೆ, ಮರ್ಯಾದಸ್ಥರು ಬಂದು ವಾಸ ಮಾಡುವ ಸ್ಥಿತಿ ನಿರ್ಮಾಣವಾಗಿದೆ ಊರಿನಲ್ಲಿ ಬದುಕುವುದೇ ಆಗಲೇ ಇಲ್ಲ ಬದುಕುವುದಕ್ಕೆ ಸಾಧ್ಯವೇ ಇಲ್ಲದ ಸ್ಥಿತಿಯನ್ನು ನಾವು ಸರ್ಕಾರವನ್ನು ನಡೆಸುವವರು ನಿರ್ಮಾಣ ಮಾಡಿದ್ದೇವೆ ಭಾಷಣ ಮಾಡಿಕೊಂಡು ಬರುತ್ತಿದ್ದೇವೆ under ground water level 700 ರಿಂದ ಒಂದು ಸಾವಿರ ಅಡಿಗೆ ಹೋಗಿದೆ Rejuvenation ಗೆ ನಮ್ಮ ಹತ್ತಿರ ಸ್ಕೀಮ್ ಇಲ್ಲ Afforestation ಮಾಡುವುದಕ್ಕೆ ನಮ್ಮ ಹತ್ತಿರ ಸ್ಕೀಮ್ ಇಲ್ಲ ನಾಡು ಬರಡಾಗುತ್ತಿದೆ ಆಕಸ್ಮಾತ್ ತಂಪು ಇದ್ದಿದ್ದರೆ ಹರ್ಟಿಕಲ್ಚರ್

ಇಳುವರಿ ಜಾಸ್ತಿ ಇರುತ್ತಿತ್ತು ತಂಪು ಇಲ್ಲ ತಂಪು ಇದ್ದಿದ್ದರೆ ಮಳೆ requirement ಕಡಿಮೆ ಇದ್ದರೂ ನಮಗೆ ಇಳುವರಿ ಬರುತ್ತಿತ್ತು ತಂಪು ಇಲ್ಲ Atmospheric humility has mounted ಇದಕ್ಕೆ ನಿಮ್ಮ ಕಾರ್ಯಕ್ರಮಗಳೇನು? ಉಪ ಮುಖ್ಯಮಂತ್ರಿಗಳಾಗಿ ರೈತರ ಪರವಾಗಿ ವಾತನಾಡಿರುವ ಯಡಿಯೂರಪ್ಪನವರು ಇವತ್ತು ಏನು ಕಾರ್ಯಕ್ರಮಗಳನ್ನು ಗ್ರಾಮೀಣ ಜನರಿಗೆ ಕೊಟ್ಟಿದ್ದೀರಿ? ಎತ್ತು ಗಾಡಿ ಕೊಟ್ಟಿದ್ದೀರಿ, ಟ್ರ್ಯಾಕ್ಟರ್ ಸಬ್ಸಿಡಿ ಕೊಟ್ಟಿದ್ದೀರಿ ಸಾಲಮನ್ನಾ ಮಾಡುತ್ತೀರಿ ನಾನು ಕೇಳುತ್ತೇನೆ, tractor subsidy, power tiller subsidy, ಇದರ ಬಗ್ಗೆ ಕುಳಿತುಕೊಂಡು ಕೇಂದ್ರ ಸರ್ಕಾರದವರು ಒಂದು ಆಲೋಚನೆಯನ್ನು ಮಾಡಿದರು It is a centrally sponsored scheme ನೀವು ಕೊಡುತ್ತಿದ್ದೀರಿ ಎತ್ತು ಗಾಡಿಯನ್ನು ನೀವು ಕೊಡುತ್ತೀದ್ದೀರಿ ನಾನು ನಿಮಗೆ honest ಆಗಿ ಹೇಳುತ್ತಿದ್ದೇನೆ ಎತ್ತಿನ ಸಂಖ್ಯೆ ಏನು ಜಾಸ್ತಿಯಾಗುವುದಿಲ್ಲ ಜಯಪ್ರಕಾಶ್ ಅವರ ಹತ್ತಿರ ಇರುವ ಎತ್ತನ್ನು ನಾನು ತೆಗೆದುಕೊಳ್ಳಬಹುದು ಅಷ್ಟೇ ಕರ್ನಾಟಕದಲ್ಲಿ cattle population ಅನ್ನು ನೀವು ಹೇಗೆ ಜಾಸ್ತಿ ಮಾಡುತ್ತೀರಿ? ಮಹಾರಾಷ್ಟ್ರದಿಂದ ಎತ್ತನ್ನು ಕೊಡಿಸುತ್ತೀರಾ? ತಮಿಳುನಾಡಿನಿಂದ ಕೊಡಿಸುತ್ತೀರಾ? ಆಂಧ್ರದಿಂದ ಎತ್ತನ್ನು ಕೊಡಿಸುತ್ತೀರಾ? ಅಲ್ಲಿರುವ ಎತ್ತೇ ಇಲ್ಲಿಗೆ ಬರುತ್ತದೆ ಇಲ್ಲ ಅವರ ಎತ್ತನ್ನೇ ಸಂತೆಗೆ ತೆಗೆದುಕೊಂಡು ಹೋಗಿ ಹತ್ತು ಸಾವಿರ ರೂ ಸಬ್ಸಿಡಿಯನ್ನು ಕೇಳುತ್ತಾರೆ never feel proud of this programme ನಿಮ್ಮ ಇಲಾಖೆಯವರನ್ನು ಕರೆದು ಕೇಳಿ ಈ ಕಾರ್ಯಕ್ರಮ ಯಶಸ್ವಿನಾ ಎಂದು ನಾವು ಹೃದಯ ಮುಟ್ಟಿ ನಿಮಗೆ ಹೇಳುತ್ತಿದ್ದೇವೆ, ಅದು ಯಶಸ್ವಿ ಕಾರ್ಯಕ್ರಮವಲ್ಲ ಎತ್ತುಗಳು ಇರುವವರೆಗೆ, ನಮಗೆ ಬೇಕಾದ ಕಾರ್ಯಕರ್ತರಿಗೆ ನಿಮ್ಮ ಕೃಪೆಯಿಂದ ನಾವು ಯುಗಾದಿ ಹಬ್ಬವನ್ನು ಮಾಡಿಸಿದ್ದೇವೆ ನೀವು ಎತ್ತುಗಳ ಸಂಖ್ಯೆಯನ್ನು ರಾಜ್ಯದಲ್ಲಿ ಜಾಸ್ತಿ ಮಾಡುವುದಕ್ಕಾಗುತ್ತದೆಯೇ? ಎತ್ತುಗಳ ಸಂಖ್ಯೆಯನ್ನು ಜಾಸ್ತಿ ಮಾಡಿದ ಮೇಲೆ ಈ ಸಬ್ಸಿಡಿ ಯನ್ನು ಯಾರಿಗೆ ಕೊಡುತ್ತೀರಿ? ನಾವು ಹೇಳಿದಷ್ಟು ಪ್ರ್ಯಾಕ್ಟಿಕಲ್ ಆಗಿ ಏನಾಗುತ್ತದೆ ಎಂದು ತಾವು ನೋಡಬೇಕಲ್ಲ ಸಂತೆಯಲ್ಲಿ ಹೋಗಿ ತೆಗೆದುಕೊಂಡು ಬನ್ನಿ ಎಂದು ಹೇಳುತ್ತಾರೆ ನಾನು ಕರೆದು ಹೇಳಿದೆ

ಬಿಡಿ, ಸಂತೆಯಲ್ಲೋ, ಊರಲ್ಲೋ, ಎಲ್ಲೋ, ಒಂದು ಕಡೆ ತೆಗೆದುಕೊಳ್ಳುತ್ತಾರೆ ಎಂದು ಲಾರಿಯಲ್ಲಿ ತೆಗೆದುಕೊಂಡು ಹೋಗಿ ಲಾರಿಯಲ್ಲಿ ತರುವುದಕ್ಕೆ ನಾಲ್ಕು ಸಾವಿರ ರೂಪಾಯಿ ಖರ್ಚಾಗುತ್ತದೆ ನೀವು ಅವರಿಗೆ ಸಬ್ಸಿಡಿ ಏನು ಕೊಡುತ್ತೀರಿ? ಜಾತ್ರೆಗೆ ಹೋಗಿ ತರಬೇಕೆಂದು ನಿಯಮ ಮಾಡಿದರಲ್ಲ, Four thousand rupees ಅವರಿಗೆ transportation cost ಬರುತ್ತೆ ಅದನ್ನು ತೆಗೆದುಕೊಂಡು ಹೋಗಿ ತರುವುದಕ್ಕೆ 30–40–50 ಕಿ ಮೀ ಅದನ್ನು ನಡೆಸಿಕೊಂಡು ಬರಲು ಆಗುವುದಿಲ್ಲ ಯಡಿಯೂರಪ್ಪನವರೇ, transportation ಗಾಗಿ ನಾಲ್ಕು ಸಾವಿರ ರೂಪಾಯಿ ಖರ್ಚು ಬರುತ್ತದೆ ಈ ಕಾರ್ಯಕ್ರಮಗಳಿಗಿಂತ ಆಚೆ ಹೋಗಿ ತಾವೇನು ಇವತ್ತು ತಮ್ಮ ಭಾಷಣದಲ್ಲಿ ಹೇಳಿದಿರಿ ಹೋದ ಸಲ ನಿಮ್ಮ ಬಗ್ಗೆ ಬಹಳ ಖುಷಿ ಇತ್ತು ನೀರಾವರಿ ವಲಯಕ್ಕೆ ಆದ್ಯತೆಯನ್ನು ಕೊಟ್ಟಿದ್ದೀರಿ ಈಶ್ವರಪ್ಪನವರೇ, ನಾವು ಭಾಷಣವನ್ನು ಎಷ್ಟಾದರೂ ಮಾಡಬಹುದು ನೀರಾವರಿ ವಲಯಕ್ಕೆ ಆದ್ಯತೆ ಕಡಿಮೆಯಾಗಿದೆ ನೀರಾವರಿಗೆ ಕೊಡಬೇಕಾದ allocation ನಿಮಗೆ ಇರುವ ಹಣಕ್ಕೆ ಹೋಲಿಸಿದರೆ ಕಡಿಮೆ ಮಾಡಲಾಗಿದೆ ನಾನು ನಿಮಗೆ ಸಾಲ ತೀರಿಸುವ ಕಡೆ ಇಟ್ಟಿರುವ ಹಣವನ್ನು ಲೆಕ್ಕಕ್ಕೆ ತೆಗೆದುಕೊಳ್ಳುವುದಿಲ್ಲ ಅಥವಾ non-plan ನಲ್ಲಿ ಕೊಟ್ಟಿದ್ದೇವೆಂದು ಹೇಳುತ್ತಿದ್ದಾರೆ, ಆದ್ದರಿಂದ potential create ಆಗುತ್ತೆ ಎಂದು ನಾವು ನಂಬುವರಲ್ಲ potential create ಆಗಿಲ್ಲ, ಆಗುವುದಿಲ್ಲ ನೀವು ಕನಿಷ್ಟ ನಿಮ್ಮ revised SR ಪ್ರಕಾರ ಹೋದ ವರ್ಷ ಕೊಟ್ಟಿದ್ದಕ್ಕಿಂತ 15 ರಿಂದ 20% ಜಾಸ್ತಿ ಮಾಡಿದರೆ ಹೋದ ವರ್ಷ ತಾವೇನು Target ಅನ್ನು ಇಟ್ಟುಕೊಂಡಿದ್ದೀರಿ, ಆ Target ನಂತೆ potential ಅನ್ನು create ಮಾಡಬಹುದಾಗಿತ್ತು your SR has revised three times ಎರಡು ಕಿಲೋ ಮೀಟರ್ ಹೋಗುತ್ತಿದ್ದ ನಾಲೆಯನ್ನು ಒಂದು – ಒಂದೂವರೆ ಕಿಲೋಮೀಟರ್ ಮಾಡುವುದಕ್ಕಾಗುತ್ತದೆಯೇ? ಇವತ್ತು ಸಿಮೇಂಟ್, ಸ್ಟೀಲ್,ಲೇಬರ್, ಆ ರೇಟ್ ಗೆ ಹೋಲಿಸಿದರೆ ನಿಮಗೆ ಹಣ ಬರೀ ಕೂಡುವುದು, ಕಳೆಯುವುದು ಎರಡರಲ್ಲಿ ಕೆಲಸವಾಗುತ್ತದೆಂದು ಭಾವಿಸಬಾರದು ನಿಮಗೆ ಇವತ್ತು ಲೇಬರ್ ಸಿಗುವುದಿಲ್ಲ ಮತ್ತೆ ನೀವು potential create ಮಾಡುವ ಕಡೆ ಇವತ್ತು ಕರ್ನಾಟಕಕ್ಕೆ ಪರ್ವಕಾಲ ಇವತ್ತು ನಿಮಗೆ ಕಾವೇರಿ tribunal decision ಬಂದಿದೆ ಈಗ

ನಿಮಗೆ ಬಚಾವತ್ ಅವಾರ್ಡ್‌ದು ಕೃಷ್ಣಾದು decision ಆಗುವ ಕಾಲ ಇದೆ 120 tmc ಕೃಷ್ಣದಲ್ಲಿ ಜಾಸ್ತಿ ಸಿಗುವ ಸ್ಥಿತಿ ಇದೆ At least ನಮಗೆ ಒಂದು ಮನಸ್ಸಿನಲ್ಲಿದೆ 100–120 tmc ನೀರು ನಮಗೆ scheme-B ನಲ್ಲಿ ಸಿಗಬಹುದು ಅಂತ ಇಲ್ಲಿ ನಾವು ಇಷ್ಟೆಲ್ಲಾ ಮಾತನಾಡುತ್ತೇವೆ, ಈಗ ಹೋರಾಟ ಮಾಡುವುದು ಒಂದು ಕಡೆ ನಿಮ್ಮ potential of storing and distributing water in Cauvery basin 176 tmc ತಾವು ಒಪ್ಪಿಕೊಳ್ಳಬೇಕಲ್ಲ 176 ಟಿಎಂಸಿ ಯ ಉಪಯೋಗ ಮಾಡುವುದಕ್ಕೆ as on 1990 ನೀವು potential create ಮಾಡಿಕೊಂಡಿದ್ದೀರಿ ಅಥವಾ storing facility ಯನ್ನು ಮಾಡಿಕೊಂಡಿದ್ದೀರಿ ಇನ್ನು 100 ಟಿಎಂಸಿ ಗೆ ನೀವೇನು ಮಾಡುತ್ತೀರಿ? ಯಾವ ಪ್ರೊಜೆಕ್ಟ್ ತಾವು ಪ್ರಾರಂಭ ಮಾಡಿದ್ದೀರಿ? ಯಾವ ಪ್ರೊಜೆಕ್ಟ್‌ಗೆ ಇಂಬು ಕೊಟ್ಟು distribution ಅನ್ನು ತಂದಿದ್ದೀರಿ? ಎರಡನೆಯದು ಸೋರುವಿಕೆ, distribution loss ಈಗಾಗಲೇ Irrigation project ನಿಮ್ಮದೇನು ಇತ್ತು, distribution loss ಕಡಿಮೆ ಮಾಡುವುದಕ್ಕೆ ನೀವೇನು ಹಣವನ್ನು ಇಟ್ಟುಕೊಂಡಿದ್ದೀರಿ? ಅಧ್ಯಕ್ಷರೇ, ತಾವು ನಮ್ಮ ಜೊತೆ ಬನ್ನಿ, ಯಾವುದೇ ನಾಲೆ, ಕಾವೇರಿ ಬೇಸಿನ್ ನಲ್ಲಿ ಇರಬಹುದು, ಕೃಷ್ಣ ಬೇಸಿನ್‌ನಲ್ಲಿರಬಹುದು, ಯಾವುದೇ ನಾಲೆ ಲೈನಿಂಗ್ ಡ್ಯಾಮೇಜ್ ಆಗದಂತೆ ಇಲ್ಲ, ನೀರು ಲೀಕ್ ಆಗದೇ ಇಲ್ಲ, ನೀವೇನು ನಿರೀಕ್ಷೆ ಮಾಡುತ್ತೀರಿ? 1200 ಕ್ಯೂಸೆಕ್ಸ್ ಹೇಮಾವತಿ ನಾಲೆ, 700 ಕ್ಯೂಸೆಕ್ಸ್ ದಾಟಿದರೆ ಒಡೆದುಹೋಗುತ್ತದೆಂದು ಅಲ್ಲಿ ಕುಳಿತುಕೊಂಡು ಮುಖ್ಯ ಇಂಜೀನಿಯರ್ ಅವರು ಹೇಳುತ್ತಾರೆ ಇವತ್ತು ನೀವೇನು ನಿರೀಕ್ಷೆ ಮಾಡುತ್ತೀರಿ? ತುಂಗಭದ್ರ ಹಿಂದುಗಡೆ, ಭದ್ರಾ ಹಿಂದುಗಡೆ, ಯಾವ ನಾಲೆಯಲ್ಲೂ ನೀರು hundred percent utilization on land ಆಗುತ್ತಿಲ್ಲ, ಸೋರಿಕೆ ಜಾಸ್ತಿ ಇದೆ ನಾನು ಇಲ್ಲಿ ಹೇಳಿದೆ ಒಂದು ದಿವಸ ಮುಶ್ರಫ್ ಎನ್ನುವ ಒಬ್ಬ dictator ನಾನೇನು ಮಾಡದಿದ್ದರೆ ಪಾಕಿಸ್ಥಾನಕ್ಕೆ ಆ ನಾಲೆಗಳ ಲೈನಿಂಗ್‌ನ ಇಟ್ಟಿಗೆ ಉಪಯೋಗಿಸಿ ಮಾಡಿ, brick lining ಮಾಡಿ, ಇರುವಷ್ಟು ನೀರಿನಲ್ಲಿ 12 ಲಕ್ಷ ಹೆಕ್ಟೇರ್ ಇರಿಗೇಷನ್ ಜಾಸ್ತಿ ಮಾಡಿದೆ ಎಂದು ಬರೆದುಕೊಳ್ಳುತ್ತಾನೆ ನಮ್ಮ ಮುಂದೆ ಇವತ್ತು ಎರಡು ಪ್ರಶ್ನೆ ಇತ್ತು ಒಂದು, ಹೆಚ್ಚು

ನೀರನ್ನು ರಾಜ್ಯಕ್ಕೆ ಕೇಳಿಕೊಳ್ಳುವುದು, ಇನ್ನೊಂದು ಇರುವ ನೀರನ್ನು ಸದ್ಬಳಿಕೆ ಮಾಡಿಕೊಳ್ಳುವುದು, ಇರುವ ನೀರನ್ನು ಸದ್ಬಳಕೆ ಮಾಡಿಕೊಳ್ಳುವುದಕ್ಕೆ ನೀವು ಸನ್ಮಾನ್ಯ ಈಶ್ವರಪ್ಪನವರಿಗೆ ಎಷ್ಟು ಹಣವನ್ನು ಕೊಟ್ಟಿದ್ದೀರಿ ಎಂದು ಹೇಳಬೇಕಲ್ಲ you are the Finance Minister of Karnataka ನೀವು ನಿಮ್ಮ ಭಾಷಣದಲ್ಲಿ ಹೇಳುತ್ತೀರಿ ಪೇಜ್ ಸಂಖ್ಯೆ 7 ಅವರ ಭಾಷೆಯನ್ನು ಹೇಳುತ್ತೇನೆ " ಕೃಷಿ ವಲಯವು ಮಾತ್ರ ಯಾವುದೇ ಪ್ರಮುಖ ಹೂಡಿಕೆಯನ್ನು ಆಕರ್ಷಿಸಿಲ್ಲ" ಈ ಹಿನ್ನೆಲೆಯಲ್ಲಿ ನಾವು ಕೃಷಿ ವಲಯಕ್ಕೆ ಹೆಚ್ಚಿನ ಬಂಡವಾಳವನ್ನು ಹರಿಸಲು ಬೆಂಬಲ ನೀಡಲೇಬೇಕು ಏನು ಮಾಡಿದಿರಿ ಸಾರ್? you have accepted you yourself, ಇದನ್ನು ನಾನು ಹೇಳುತ್ತಿಲ್ಲ ನೀವು ನಿಮ್ಮ ಭಾಷಣದಲ್ಲಿ ಹೇಳುತ್ತೀರಿ, "ಕೃಷಿ ವಲಯವು ಮಾತ್ರ ಯಾವುದೇ ಪ್ರಮುಖ ಹೂಡಿಕೆಯನ್ನು ಆಕರ್ಷಿಸಿಲ್ಲ " ನಿಮ್ಮ ಪ್ರೊಗ್ರ್ಯಾಮ್ ಏನು ಸಾರ್? ನಾನು ಕೇಳಬೇಕಾಗಿದೆ, " ಕೃಷಿ ವಲಯದಲ್ಲಿನ ವಾಸ್ತವಿಕ ಬೆಳವಣಿಗೆಯು ಶೇ 2 ರಷ್ಟಿದ್ದು, ತೃಪ್ತಿದಾಯಕವಾಗಿರುವುದಿಲ್ಲ "ಸನ್ಮಾನ್ಯ ಯಡಿಯೂರಪ್ಪನವರ ಭಾಷಣವನ್ನೇ ನಾನು quote ಮಾಡುತ್ತಿದ್ದೇನೆ " ಕೃಷಿ ವಲಯದ ಕೊಡುಗೆ ಶೇ 19 2 ರಷ್ಟಿದ್ದು ಇಳಿಕೆಯಾಗಿದ್ದರೂ ಸಹಾ "ಇಳಿಕೆಯಾಗಿದೆ" ಎಂದು ನೀವು ಒಪ್ಪಿಕೊಳ್ಳುತ್ತಿದ್ದೀರಿ ನಿಮ್ಮ ಭಾಷಣದಲ್ಲಿ ಒಪ್ಪಿಕೊಂಡಿದ್ದೀರಿ "ಕೃಷಿ ವಲಯದ ಕೊಡುಗೆ ಶೇ 19 2 ರಷ್ಟು ಇಳಿಕೆಯಾಗಿದ್ದರೂ ಸಹಾ ರಾಜ್ಯದ ಶೇ 64 ರಷ್ಟು ಜನ ಸಮುದಾಯದ ಜೀವನ ನಿರ್ವಹಣೆಗೆ ಕೃಷಿ ವಲಯವನ್ನೇ ಅವಲಂಬಿಸಿದೆ ನಿಜ ಹೇಳುವ ಅರ್ಥದಲ್ಲಿ ಕೃಷಿ ಅವಲಂಬಿತ ಜನಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ ಕೃಷಿ ವಲಯದಲ್ಲಿನ ನಿರಾಶಾದಾಯಕ ಬೆಳವಣಿಗೆ ಗ್ರಾಮೀಣ ಪ್ರದೇಶದ ಜೀವನ ಜನರ ಜೀವನ ಗುಣಮಟ್ಟಕ್ಕೆ ಧಕ್ಕೆ ತಂದಿದೆ "ಪೇಜ್ 16 ರಲ್ಲಿ ತಾವು ಯಡಿಯೂರಪ್ಪನವರಾಗಿ ವರ್ತಿಸಿದ್ದೀರಿ ಫೈನಾನ್ಸ್ ಮಿನಿಸ್ಟರ್ ಆಗಿ ಅಲ್ಲ ಭಾವನೆಗಳನ್ನು ಸ್ಪಷ್ಟವಾಗಿ ಹೇಳಿದ್ದೀರಿ ಭಾವನೆಗಳಿಗೆ ಪೂರಕವಾಗಿ ಬಜೆಟ್ ಇಟ್ಟಿದ್ದರೆ ನಾನುಬಹಳ ಸಂತೋಷಪಡುತ್ತಿದ್ದೆ ನಿಮ್ಮ ಭಾವನೆ ಏನು ಇಲ್ಲಿತ್ತು, ಇದಕ್ಕೆ ಪೂರಕವಾಗಿ ಬಜೆಟ್‌ನಲ್ಲಿ figures ಬಂದು ಬಿಟ್ಟಿದ್ದರೆ ಬಹಳ ಸಂತೋಷಪಡುತ್ತಿದ್ದೆ ಆದರೆ ಬರಲಿಲ್ಲ ಕೃಷಿ ವಲಯ

ಅಥವಾ ಇಂಡಸ್ಟ್ರೀಯಲ್ ಏರಿಯಾ ಈ ಬಗ್ಗೆ ಇವತ್ತು ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುತ್ತಿದ್ದರು core area ಅಥವಾ core subject ಯಾವುದು ಎಂದು ? Irrigation ಅಥವಾ Electricity ಇಂಧನ, ಇವತ್ತು ಇರಿಗೇಷನ್ ಗೆ

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ – core subject ನಲ್ಲಿ ಹಣವನ್ನು ಇಟ್ಟಿಲ್ಲವೆಂದು ಹೇಳಿ ನಾವು ಹೇಳುತ್ತಿದ್ದೇವೆ ಅವರು ನಾನು ಬಹಳ ಹೆಚ್ಚಿಗೆ ಇಟ್ಟಿದ್ದೇನೆ, ಅದನ್ನು ನಿಮಗೆ ತೆಗೆದು ತೋರಿಸುತ್ತೇನೆಂದು ಹೇಳುತ್ತಾರೆ ಅವರು ಪುಸ್ತಕವನ್ನು ಯಾವಾಗ ತೆಗೆಯುತ್ತಾರೋ ಗೊತ್ತಿಲ್ಲ ಮೊನ್ನೆ ನೀವು ನೋಡಿರಬಹುದು 'ಹಿಂದೂ' ಪತ್ರಿಕೆಯಲ್ಲಿ 11th Finance Commission allocation ಬಗ್ಗೆ ಅದರಲ್ಲೂ particular ಆಗಿ Irrigation, Agriculture, Health ಇದರ ಬಗ್ಗೆ ಒಂದು ಆರ್ಟಿಕಲ್ ಬಂದಿತ್ತು ನಮ್ಮ ಒಂದೇ ರಾಜ್ಯಕ್ಕೆ ಈ 5 ವರ್ಷಗಳಿಗೆ ಸುಮಾರು 24 ಸಾವಿರ ಕೋಟಿ ರೂಪಾಯಿ allocation ತೋರಿಸಲಾಯಿತು ಅಂದರೆ, ಸರಾಸರಿ 4,800 ಕೋಟಿ ರೂಪಾಯಿಗಳಷ್ಟು ಹೆಚ್ಚು ಕಡಿಮೆ ಬರುತ್ತದೆ 5 ವರ್ಷಕ್ಕೆ 24 ಸಾವಿರ ರೂಪಾಯಿಗಳು ಎಂದರೆ, ಹೆಚ್ಚು ಕಡಿಮೆ ಅಲ್ಲಿದೆ ಆದರೆ, ಇವೆರಡೂ ಹಣ ನೋಡಿದಾಗ, ಇಲ್ಲಿ allocation ಕೊಟ್ಟದ್ದನ್ನು ನೋಡಿದರೆ, 3,000 ಕೋಟಿ ರೂಪಾಯಿಗಳ ಸಮೀಪ ಇದೆ ಉಳಿದಿದ್ದೆಲ್ಲಾ ಬೇರೆ ಕಡೆ ಇಟ್ಟಿದ್ದೇವೆ ಬಡ್ಡಿಗಾಗಿ ಇಟ್ಟಿದ್ದೇವೆ ಎಂದರೆ ಆ ಮಾತು ಬೇರೆ ಆದರೆ ಅದನ್ನು ಹೋಲಿಸಿ ನೋಡಿದಾಗ, ಕನಿಷ್ಟ ಪಕ್ಷ ಅದನ್ನು ಹೊಂದಾಣಿಕೆ ಮಾಡುವುದಕ್ಕೋಸ್ಕರ ನಾಳೆ ಏನು ಬರುತ್ತದೆಂದು ತಿಳಿದುಕೊಂಡಾದರೂ ಆ core sector ನಲ್ಲಿ ಹೆಚ್ಚು allocation ಇಡಬೇಕಾಗಿತ್ತು ರೈತನ ಮಗ, ನಾನು ರೈತನೆಂದು 35 ವರ್ಷಗಳಿಂದಲೂ ಬಡಿದುಕೊಂಡು ಏನು ಹೇಳುತ್ತಿದ್ದಿರಲ್ಲ, ಅದು ಸಾರ್ಥಕವಾಗುತ್ತಿತ್ತು ಮಾಧುಸ್ವಾಮಿಯವರೇ convince ಆಗಿಲ್ಲವೆಂದರೆ, ಇನ್ನು ಬೇರೆಯವರು convince ಆಗುತ್ತಾರೆಯೇ?

ಶ್ರೀ ಜೆ ಸಿ ಮಾಧುಸ್ವಾಮಿ – ನಾವು convince ಆಗಿಲ್ಲವೆಂದು ಅವತ್ತೇ ಹೇಳಿಬಿಟ್ಟಿದ್ದೇವೆ ಆದರೆ, ಹೇಗೆ convince ಆಗಿಲ್ಲವೆಂದು ಇವತ್ತು ಅವರಿಗೆ

ಹೇಳಬೇಕಾಗುತ್ತದೆ ನಾವು convince ಆಗಿದ್ದೇವೆಂದು ಎಂದೂ ಹೇಳಿಲ್ಲ ಅದಕ್ಕೋಸ್ಕರ, ನಿಮ್ಮ Economy survey Report ನಲ್ಲಿ ನೋಡಿ ಯಡಿಯೂರಪ್ಪನವರೆ, ಇವತ್ತು ನೀವು ಯಾವ ಕ್ಷೇತ್ರದಲ್ಲಿ ಬಂಡವಾಳ ತೊಡಗಿಸುತ್ತಿದ್ದೀರಿ? ಬಂಡವಾಳ ತೊಡಗಿಸಲಿಲ್ಲ ನಾನು core area ಬಗ್ಗೆ ಮಾತನಾಡುತ್ತಿದೆ ಈ core subject ನಲ್ಲಿ ನಾವು ಬಹಳ ಇನ್ವೆಸ್ಟ್‌ಮೆಂಟ್ ಮಾಡಬೇಕಾಗಿತ್ತು what is the power requirement of Karnataka todey? Unit wise, kilowatt wise ಹೇಳಿ ಸರ್ ನಾನು ಇಲ್ಲಿ ಓದುತ್ತಿದ್ದೆ 70,000 ಮಿಲಿಯನ್ ಮೆಗಾವ್ಯಾಟ್ ನೀವು ಮಾಡಬಹುದಂತೆ, ಈಗ 7,750 ಮೆಗಾವ್ಯಾಟ್ ಸಾಮರ್ಥ್ಯವಿದ್ದು, ಅದನ್ನು ಪೂರ್ತಿಯಾಗಿ ಉಪಯೋಗಿಸಲು ಇನ್ನೂ ಬಹಳ ದೂರ ಸಾಗಬೇಕಾಗಿದೆ ಪವರ್ ಬಗ್ಗೆ ನಿಮ್ಮ ಆರ್ಥಿಕ ಸಮೀಕ್ಷೆ ವರದಿ "2006–07ರಲ್ಲಿ ಸಾರ್ವಜನಿಕ ವಲಯದಲ್ಲಿ ಸ್ಥಾಪನಾ ಸಾಮರ್ಥ್ಯ 4,994 83 ಮೆಗಾವ್ಯಾಟ್ ನಿರೀಕ್ಷಿಸಲಾಗಿದೆ ಅದರಲ್ಲಿ ಜಲ ವಿದ್ಯುತ್‌ನಿಂದ 3,392 95 ಮೆಗಾವ್ಯಾಟ್ ಉತ್ಪಾದನೆ ಮಾಡಬಹುದು ರಾಜ್ಯವು ತನ್ನ ಜಲ ವಿದ್ಯುತ್ 7,750 ಮೆಗಾ ವ್ಯಾಟ್ ಸಾಮರ್ಥ್ಯವಿದ್ದು, ಇನ್ನು ಅದನ್ನು ಪೂರ್ತಿ ಉಪಯೋಗಿಸಲು ಇನ್ನು ಬಹಳ ದೂರ ಸಾಗಬೇಕಾಗಿದೆ" ಸರ್, ನಾವು ಏಕೆ ಈ ಬಗ್ಗೆ ಮಾತನಾಡುತ್ತಿದ್ದೇವೆ? ಉಷ್ಣ ವಿದ್ಯುತ್, ಜಲ ವಿದ್ಯುತ್, Production Cost ಅನ್ನು ತಾವು compare ಮಾಡಬೇಕು ಯಾವುದೇ ರಾಜ್ಯಕ್ಕೆ ಜಲ ವಿದ್ಯುತ್ ಮಾಡುವುದಕ್ಕೆ ಸ್ಕೋಪ್ ಇದ್ದರೆ, ಅದನ್ನು ಆ ರಾಜ್ಯ exploit ಮಾಡಲಿಲ್ಲವೆಂದರೆ, ಆ ರಾಜ್ಯವು ತನ್ನ ಜನರಿಗೆ ದ್ರೋಹ ಮಾಡುತ್ತಿದೆಯೆಂದು ಭಾವಿಸಬೇಕು ಇದರಲ್ಲಿ ಎರಡನೇ ಮಾತಿಲ್ಲ If at all you have failed to exploit that capacity, ಮತ್ತೆ ನೀವು ಅದಕ್ಕೆ ಪೇಮೆಂಟ್ ಮಾಡಿ ಪವರ್ ತೆಗೆದುಕೊಳ್ಳುತ್ತಿದ್ದೇನೆಂದರೆ, ಪರ್ಚೇಸ್ ಮಾಡುತ್ತಿದ್ದೀರೆಂದರೆ, ಪವರ್ ಕಟ್ ಇದ್ದರೂ ತಾವು ಜವಾಬ್ದಾರಿ ತೆಗೆದುಕೊಳ್ಳುವುದಿಲ್ಲವೆಂದರೆ, ಇವತ್ತು ಹಳ್ಳಿಯಿಂದಿಡಿದು ಬೆಂಗಳೂರಿನವರೆಗೂ ಎಲ್ಲಾ ವಲಯಗಳೂ dearth of electricity, shortage of power, stagnate ಆಗುತ್ತಿದೆ, ನಿಂತು ಹೋಗುತ್ತಿದೆ ಎಂದರೆ, ನಾವು growth ಅನ್ನು ಎಲ್ಲಿ

improvement ಮಾಡಬಹುದು? ಹೇಳಿ ಸರ್? ಯಾರಾದಾರೂ growth ಅಥವಾ Industrial growth ಇರಬಹುದು, agricultural growth ಇರಬಹುದು, ಇವತ್ತು ಮಾಡಲೇಬೇಕೆಂದರೆ, your requirement is fuel, energy ಇವತ್ತು ನಿಮಗೆ ಮೊದಲನೇ ಆದ್ಯತೆ ಇದೇ ಆಗಿದೆ ನೀವು ಅದನ್ನೇ ಕಚ್ಚಾ ಪದಾರ್ಥದಿಂದ final product ಮಾಡಬೇಕೆಂದರೆ, ಇವತ್ತು ಅದೇ ನಿಮಗೆ catalyst ಅದಕ್ಕೆ ಏನು ಆದ್ಯತೆ ಕೊಟ್ಟಿದ್ದೀರಿ? ರಾಜ್ಯಕ್ಕೆ ಹೂಡಿಕೆದಾರರು ಬರಬೇಕೆಂದರೆ, ಹೇಗೆ ಬರುತ್ತಾರೆ? Where are you providing them power? ಎರಡನೆಯದಾಗಿ, ಎಲ್ಲಾದರೂ ನೀವು parallel ಆಗಿ ದೊಡ್ಡ ದೊಡ್ಡ industrialist ಬೇರೆ ಕಡೆ generate ಮಾಡಿ, ನಮಗೆ exchange ಕೊಡಿ ಎಂದು ಕೇಳಿದ್ದಾರೆಯೇ? ಅದಕ್ಕೆ ಸ್ಕೋಪ್ ಕೊಟ್ಟಿದ್ದೀರಾ? Non-conventional power ಎಲ್ಲಾದರೂ raise ಮಾಡುವುದಕ್ಕೆ ನಿಮ್ಮ contribution ಇದೆಯೇ? ಕೇಂದ್ರ ಸರ್ಕಾರದ contribution ಜೊತೆ ಸೌದೆಯಲ್ಲಿ, ಕಟ್ಟಿಗೆಯಲ್ಲಿ ಇವತ್ತು ಜನರೇಟ್ ಮಾಡಬಹುದು Community gober gas plant ಮಾಡಬಹುದು ಒಂದೊಂದು ಊರಿಗೆ ಒಂದೊಂದು ಪ್ಲಾಂಟ್ ಹಾಕಬಹುದು ಹರಿಯಾಣ ರಾಜ್ಯ ಮಾಡಿತ್ತು ಒಂದೊಂದು ಊರಿಗೆ ಒಂದೊಂದು Bio-gas plant ಮಾಡಬಹುದು ಒಂದೊಂದು ಭಾಗದಲ್ಲಿನ ಒಂದೊಂದು ಸಮಸ್ಯೆಯನ್ನು ಈ ಮೂಲಕ ನೀವು ಕಡಿಮೆ ಮಾಡಿಕೊಂಡು ಬರಬಹುದಾಗಿತ್ತು Where is your money for all that? Where is your programme for all that? ನಮ್ಮ ತಾಲ್ಲೂಕಿನಲ್ಲಿ ನೀವು ಒಂದು ಪ್ರೋಗ್ರಾಂ ಕೊಡಬಹುದಾಗಿತ್ತು ಸೌದೆ ಬಳಸಿ, ಕಟ್ಟಿಗೆ ಬಳಸಿ ಒಂದು ವಿದ್ಯುತ್ ಘಟಕ ಮಾಡುವುದಕ್ಕೆ ನಾನು ಹಣ ಇಟ್ಟಿದ್ದೇನೆಂದು ಹೇಳಬಹುದಾಗಿತ್ತು ಏಕೆ? ತೆಂಗಿನದು, ಹಸಿಗೆಯಿಂದಿಡಿದು ಕುರಂಬಳೆ ಎಂದು ನಾವೇನು ಕರೆಯುತ್ತಿದ್ದೇವೆ, demand ಇಲ್ಲ ಎಲ್ಲರ ಮನೆಯಲ್ಲೂ Gas cylinder ಇದೆ ಅದನ್ನೆಲ್ಲಾ ತುಂಬಿ energy ಆಗಿ power ಆಗಿಯಾದರೂ ನಾವು ಜನರೇಟ್ ಮಾಡಿಕೊಳ್ಳುತ್ತಿದ್ದೆವು ಕಬ್ಬು ಬೆಳೆಯುವ ಕಡೆ ನೀವು ಮಾಡಬಹುದಾಗಿತ್ತು ಮೇಜರ್ ಆಗಿ ನಿಮ್ಮ ಪುರಸಭೆಗಳು ಬಹಳ ವೇಸ್ಟ್‌ನಲ್ಲೇ

ಮಾಡಬಹುದಾಗಿತ್ತು If at all you had concern about rural area, ನೀವು Capital Investment ಗೆ ಹಣವಿಡಬೇಕಾಗಿತ್ತು, ಇಡಲಿಲ್ಲ ಇನ್ನು 10–15 ವರ್ಷ ರಾಜ್ಯದ ಅಭಿವೃದ್ಧಿ ಏನು ಆಗಬೇಕಾಗಿತ್ತು, ಇವತ್ತಿನ situation ನಲ್ಲಿ ನೀವು ಅದನ್ನು ದಾಟಬೇಕಾಗಿತ್ತು ಮಾನ್ಯ ಸಿದ್ಧರಾಮಯ್ಯನವರಿಗೆ ಇದು ಪಾಸ್ ಮಾಡುವುದಕ್ಕೆ ಆಗುತ್ತಿರಲಿಲ್ಲ ಒಳ್ಳೆಯ ಕಾಲದಲ್ಲಿ ನಿಮ್ಮ ಹತ್ತಿರ ರೆವಿನ್ಯೂ ಜಾಸ್ತಿ ಇದ್ದಾಗಲೂ ನೀವು ಮಾಡುವುದಿಲ್ಲವೆಂದರೆ, ಇನ್ನು ಯಾವಾಗ ಮಾಡುತ್ತೀರಿ? Yes We cannot comment ನಿಮ್ಮ ಹತ್ತಿರ ಹಣವಿದ್ದಾಗ ನೀವು ಯೋಜನೆಗಳಿಗೆ ಹಾಕಲಿಲ್ಲವೆಂದರೆ, ನೀವು ರಾಜ್ಯದ ಹಿತಾಸಕ್ತಿಯನ್ನು ಎಷ್ಟರ ಮಟ್ಟಿಗೆ ಮನಸ್ಸಿನಲ್ಲಿಟ್ಟುಕೊಂಡಿದ್ದೀರಿ? ನಿಮಗೆ advise ಮಾಡುವವರು ಎಷ್ಟರ ಮಟ್ಟಿಗೆ ಮಾಡಿದ್ದಾರೆ ಎಂದು ನಾವು ಕೇಳಲೇಬೇಕಾಗುತ್ತದೆ ನಾವು ಕೇಳಲೇಬೇಕು ಸರ್ ಪ್ರಾಥಮಿಕ ವಲಯವನ್ನೇ ನೀವು ಇಷ್ಟೊಂದು ಉದಾಸೀನ ಮಾಡಿಬಿಟ್ಟರೆ ಹೇಗೆ?

ಶ್ರೀ ಬಿ ಎಸ್ ಯಡಿಯೂರಪ್ಪ – ಮಾಧುಸ್ವಾಮಿಯವರೆ, ಇಲ್ಲಿ ತಾವೇ ಹೇಳಬೇಕು ಸರ್ಕಾರಿ ನೌಕರರದು 5th Pay Commission ಭಾರ ಬೀಳುತ್ತದಲ್ಲ, ಅವರುಗಳಿಗೆ ಸಂಬಳ ಕೊಡುವುದು ಬೇಡವೇ? ವಾಟಾಳ್ ನಾಗರಾಜ್‌ರವರು ಇಲ್ಲಿ ಧರಣಿ ಕುಳಿತರಲ್ಲ, ಆತ ಹತ್ತು ಲಕ್ಷ ತೆಗೆದುಕೊಂಡಿದ್ದರೂ ಪರವಾಗಿಲ್ಲ, ಮೊದಲು 25,000 ರೂಪಾಯಿಗಳಷ್ಟು ಸಾಲ ಮನ್ನಾ ಮಾಡಿ ಎಂದು ಹೇಳಿ, ಸಾಲ ಮನ್ನಾ ಮಾಡುವುದನ್ನು ಕೈಬಿಡುವಂತಹ ಸಲಹೆ ಕೊಡುತ್ತೀರಿ ಜನರಿಗೆ ಅನುಕೂಲವಾಗಲೆಂದು ಲಾಟರಿ ಬ್ಯಾನ್ ಮಾಡಿದ್ದೇವೆ ಅದರಿಂದ 550 ಕೋಟಿ ರೂಪಾಯಿಗಳು ಬರುತ್ತಿತ್ತು 'ಬೇಡ, ಯಡಿಯೂರಪ್ಪನವರೆ, ಲಾಟರಿ ಬ್ಯಾನ್ ಮಾಡಬೇಡಿ, ಮನೆ ಹಾಳು ಮಾಡಿಕೊಳ್ಳಲಿ' ಎಂದು ಹೇಳುತ್ತೀರಾ? ಹೇಳಿ ಎಲ್ಲಿಂದ ಹಣ ತರಬೇಕು? ಹೇಗೆ ಮಾಡಬೇಕೆಂದು ಹೇಳಿ Arrack ನಿಂದ 1,950 ಕೋಟಿ ರೂಪಾಯಿಗಳು ಬರುತ್ತಿತ್ತು ಸುಮಾರು ಒಂದೂವರೆ ಸಾವಿರ ಕೋಟಿ ರೂಪಾಯಿಗಳನ್ನು ಹಣ ಹೋದರೂ ಪರವಾಗಿಲ್ಲವೆಂದು ಕುಡಿತದಿಂದಾಗಿ ಲಕ್ಷಾಂತರ ಮನೆಗಳು ಸರ್ವನಾಶವಾಗುತ್ತಿತ್ತಲ್ಲ, ಅದನ್ನು ರದ್ದು ಮಾಡಿದ್ದೇನೆ ಅದ್ಯಾವುದೂ ಬೇಡ ಎಂದರೆ ಹೇಳಿ ನನಗೆ ನೋವಿದೆ ಕೃಷಿ ಯಾವ ರೀತಿ

ಹಿನ್ನಡೆಯಾಗಿದೆಯೆಂದು ನಾನು ನನ್ನ ಭಾಷಣದಲ್ಲಿ ಹೇಳಿದ್ದೇನೆ ಕೇವಲ ಕರ್ನಾಟಕದಲ್ಲಲ್ಲ, ಇಡೀ ದೇಶದಲ್ಲಿ ಯಾವ ರೀತಿ ಕೃಷಿ ಹಿನ್ನಡೆಯಾಗಿದೆಯೆಂದು ಹೇಳಿದ್ದೇನೆ ಕೇಂದ್ರ ಸರ್ಕಾರ ಸಹ ಇದನ್ನು ಒಪ್ಪಿಕೊಂಡಿದೆ ಬರಗಾಲದಲ್ಲಿ ಯಾವ ಸ್ಥಿತಿ ಎದುರಿಸಿದ್ದೇವೆ, ಕೃಷಿ ಎಲ್ಲಿಂದ ಅಭಿವೃದ್ಧಿಯಾಗಬೇಕು? ಇತಿಹಾಸದಲ್ಲಿ ಕಾಣದಿದ್ದ, ಕಳೆದ ಒಂದು ವರ್ಷದಿಂದ ನಾವು ಬರಗಾಲದ ದುಸ್ಥಿತಿಯಲ್ಲಿರಬೇಕಾದರೆ, ಸಲಹೆ ಕೊಡಿ ಸ್ವಾಮಿ, ಸರಿ ಇದ್ದರೆ, ತಿದ್ದಿಕೊಳ್ಳುತ್ತೇನೆ

ಶ್ರೀ ಮಲ್ಲಿಕಾರ್ಜುನ ಖರ್ಗೆ – ಈಗ dispassionately ಯೋಚನೆ ಮಾಡುತ್ತೀರೆಂದರೆ, ನಾನು ಹೇಳುವುದನ್ನು ಕೇಳುತ್ತೇನೆ ಎನ್ನುವುದಾದರೆ ಹೇಳುತ್ತೇನೆ ಈಗ ಇಲ್ಲಿ ರಾಜೀವ್‌ಗಾಂಧಿ ಯೂನಿವರ್ಸಿಟಿ ಇದೆ ಇಲ್ಲಿಂಗ ರಾಮನಗರಕ್ಕೆ ಶಿಫ್ಟ್ ಮಾಡುವುದಕ್ಕೆ ಪ್ರೈಯಾರಿಟಿ ಕೊಡುವುದು ಉತ್ತಮವೋ, ಆ ಪವರ್ ಪ್ಲಾಂಟ್ ಮಾಡುವುದು ಉತ್ತಮವೋ? ಶಿರಾಳಕೊಪ್ಪಕ್ಕೆ 100 ಕೋಟಿ 50 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿಕೊಂಡು improvement ಮಾಡುವುದು ಉತ್ತಮವೋ? ಗಂಗಾಕಲ್ಯಾಣಕ್ಕೆ ಹಣ ಕೊಡುವುದು ಉತ್ತಮವೋ? 63 ಕೋಟಿ ರೂಪಾಯಿ discretionary amount ಅನ್ನು ನೀವು ಮನಸ್ಸು ಬಂದಂತೆ ಎಲ್ಲರಿಗೂ ಹಂಚಿಕೊಡತಕ್ಕಂಥಾದ್ದು ಒಳ್ಳೆಯದೇ? Minor Irrigation ಗೆ 63 ಕೋಟಿ ರೂಪಾಯಿಗಳನ್ನು ಕೊಡುವುದು ಉತ್ತಮವೋ? ನೀವು ಯೋಚನೆ ಮಾಡಿ ಇಂತಹ ನೂರಾರು ಉದಾಹರಣೆಗಳನ್ನು ನಾನು ಕೊಡುತ್ತೇನೆ ಆದರೆ, ಇವೆಲ್ಲವೂ ಕೂಡ ನಿಮಗೂ ಗೊತ್ತಿದೆ Non-plan, non-productive ಇವೆಲ್ಲವೂ ಗೊತ್ತಿದೆ ಆದರೂ ಕೂಡ ನೀವು ಖುಷಿ ಪಡಿಸಬೇಕಲ್ಲ, ನಿಮಗೂ ಅದೇ ಚಿಂತೆ ನಿನ್ನೆಯೇ ಹೇಳಿದೆ ನೀವು ಇದ್ದಿರೋ, ಇಲ್ಲವೋ, ಗೊತ್ತಗಲಿಲ್ಲ ಈ ಪುಣ್ಯಾತಿಗಿತ್ತಿ ಎಂದೂ ದಾನ ಕೊಡದವಳು ಇಂದು ಕೊಡುವವಳು ರಂಡೆಯಾದಳು ಹಾಗಾಗಿದೆ, ಇವತ್ತಿನ ಪರಿಸ್ಥಿತಿ! ಎಂದೂ ಇಲ್ಲದಿದ್ದ ನೀವು ಒಂದು ಸಲ ಬಂದು ಹಂಚಿದ್ದೇ ಹಂಚುವುದು, 10 ಕೋಟಿ, 5 ಕೋಟಿ, 50 ಲಕ್ಷ, 20 ಲಕ್ಷ, 5 ಲಕ್ಷ, 2 ಲಕ್ಷ ಹೀಗೆ "ಹುಚ್ಚು ಮುಂಡೇಗಂಡನ ಲಗ್ನದಲ್ಲಿ ಉಂಡವನೇ ಜಾಣ" ಎಂಬಂತಾಗಿದೆ

ಶ್ರೀ ಜೆ ಸಿ ಮಾಧುಸ್ವಾಮಿ – ಸನ್ಮಾನ್ಯ ಯಡಿಯೂರಪ್ಪನವರೆ, ನಾವು ಹುಡುಗಾಟಕ್ಕೆ ಮಾತನಾಡಿ ಕುಳಿತುಕೊಳ್ಳುವುದಿಲ್ಲ Suggestions ಕೊಟ್ಟೇ ಕುಳಿತುಕೊಳ್ಳುತ್ತೇವೆ ಇದರ ಜೊತೆಗೆ ಇವತ್ತು ಒಂದೊಂದಾಗಿ ಮೊದಲು ಪ್ರಾಥಮಿಕ ವಲಯ ಮುಗಿಸಿ ಬರುತ್ತೇನೆ Horticulture ಈ ರಾಜ್ಯದ Horticulture ಸ್ಥಿತಿ ಏನಾಗಿದೆಯೆಂದು ಯಾವತ್ತಾದರೂ ಯೋಚನೆ ಮಾಡಿದ್ದೀರಾ? ಇದರಿಂದ ರಾಜ್ಯಕ್ಕೆ ಎಷ್ಟು income ಬರಬಹುದಾಗಿತ್ತೆಂಬುದನ್ನು ಯೋಚನೆ ಮಾಡಿದ್ದೀರಾ? So, What is your job? Generation of income to individuals ಅವರು ಮಾತನಾಡುತ್ತಿದ್ದರು Per capita income ಎಷ್ಟಾಗಿದೆ? Per capital expenditure ಎಷ್ಟಾಗಿದೆ? ಅದನ್ನು ನಾವು ಲೆಕ್ಕಕ್ಕೆ ತೆಗೆದುಕೊಳ್ಳಬೇಕಲ್ಲ University production ಗೆ

ಶ್ರೀ ಬಿ ಎಸ್ ಯಡಿಯೂರಪ್ಪ – ಇತಿಹಾಸದಲ್ಲಿ ಮೊದಲ ಬಾರಿಗೆ Horticulture ಅನ್ನು encourage ಮಾಡಬೇಕೆಂದು Horticulture University ಅನ್ನು ಬಾಗಲಕೋಟೆಯಲ್ಲಿ ಪ್ರಾರಂಭ ಮಾಡುತ್ತಿದ್ದೇನೆ ಇದು ಇತಿಹಾಸದಲ್ಲಿ ಹಿಂದೆ ಯಾರೂ ಮಾಡಲಿಲ್ಲ

ಶ್ರೀ ಜೆ ಸಿ ಮಾಧುಸ್ವಾಮಿ – ಆ thinking level ನಲ್ಲೇ ವ್ಯತ್ಯಾಸವಾಗಿರುವುದು ಎಂದು ನಾನು ಹೇಳುತ್ತಿರುವುದು ನೀವು horticulture university ಮಾಡುತ್ತೀರಿ ಆಲೂಗಡ್ಡೆ, ಈರುಳ್ಳಿ, ಕೊಬ್ಬರಿ, ಕಬ್ಬು, ಸ್ಪೈಸ್ ಮಾರಿಸುತ್ತಿಲ್ಲ ಕಾಫಿ ಏನು pride of Karnataka ಎಂದು ಹೇಳುತ್ತಿದ್ದೇವೋ ಅದು ನಿರ್ನಾಮವಾಗಿಬಿಟ್ಟಿದೆ ಕಿತ್ತಲೆ ನಾಶವಾಗುತ್ತಿದೆ ಕೊಡಗಿನ ಕಿತ್ತಲೆ ಇಲ್ಲಿದೆಯೆಂದು ಹುಡುಕಬೇಕಾದ ಸ್ಥಿತಿಗೆ ನಾವು ಇವತ್ತು ಬರುತ್ತಿದ್ದೇವೆ ಇದಕ್ಕೆಲ್ಲಾ ಯಾರು ಜವಾಬ್ದಾರರು? 4 ವರ್ಷದಿಂದ ಸತತವಾಗಿ ನುಸಿಪೀಡೆ ತೆಂಗಿನ ಮರಕ್ಕೆ ಇತ್ತು ಅದಕ್ಕೆ ನೀವು ಕೊಟ್ಟಿರುವ ದುಡ್ಡು ಎಷ್ಟು ಎಂಬುದನ್ನು ನೋಡಬೇಕಲ್ಲಾ? ಕಾಫಿ ಬೆಳಗಾರರು ನಮಗೆ ದುಂಬಾಲು ಬಿದ್ದಿದ್ದಾರೆ, ಬೇಡಿದ್ದಾರೆ ನೀವು ಮಾಡಿದ್ದೇನು? ನಾವು ಕನಿಷ್ಟ CST ತೆಗೆಯಿರಿ ಕೊಬ್ಬರಿ ಆಚೆ ಹೋಗಲು ಬಿಡಿ ಸಾರ್ ಎಂದು ಕೇಳಿದೆವು If you are interested in agricultural prod-

ucts of Karnataka ತಾವೇನು ಮಾಡಬೇಕು? Any product which goes out of Karnataka ಮುಕ್ತ ಮಾಡಬೇಕು ಇವತ್ತು ನೀವು ಟ್ಯಾಕ್ಸ್‌ನ್ನು ತೆಗೆಯಬೇಕು ಈ ರಾಜ್ಯದ ವಸ್ತು, agricultural products ಆಚೆ ಹೋಗುತ್ತದೆಂದರೆ ಸಿಎಸ್‌ಟಿ ಹಾಕುತ್ತೀರಿ, C-Form impose ಮಾಡುತ್ತೀರಿ ನೂರು ಸಲ ಹೇಳಿದ್ದೇವೆ, ನಿಮ್ಮ ಪಕ್ಕದ ಕೇರಳಾ, ತಮಿಳುನಾಡಿನವರು ಕೇಳುವುದಿಲ್ಲ ಕೊಬ್ಬರಿ ವ್ಯಾಪಾರ ಕರ್ನಾಟಕ ರಾಜ್ಯದಿಂದ ಅಲ್ಲಿಗೆ shift ಆಗಿದೆ Subsidy ಕೊಡತಕ್ಕ ಪರಿಸ್ಥಿತಿ ನಿರ್ಮಾಣವಾಗಿದೆ ಆ 4 ಪರ್‌ಸೆಂಟ್ ಟ್ಯಾಕ್ಸ್‌ನ್ನು ನೀವು ತೆಗೆದಿದ್ದರೆ ಇವತ್ತು ತಿಪಟೂರಿನಲ್ಲಿ 100–120 ಜನರು trading ಮಾಡಿರುತ್ತಿದ್ದರು ಯಾವಾಗ tax ಇಟ್ಟಿರಿ ಇಬ್ಬರೋ ಮೂರು ಜನರೋ ಯಾರೋ ಕದ್ದು ವ್ಯಾಪಾರ ಮಾಡುವವರು ಮಾತ್ರ ಟ್ರೇಡ್ ಮಾಡಿ ಇವತ್ತು ಟ್ರೇಡ್ ಹಾಳಾಗಿಹೋಗಿರುವುದು There is no investment ಇವತ್ತು investors ಇಲ್ಲ ನಾನು ಕೊಬ್ಬರಿಯನ್ನು 2–3 ಲಕ್ಷ ಕ್ವಿಂಟಾಲ್ ಮಾರುಕಟ್ಟೆಯಲ್ಲಿ ಕೊಂಡು ಹಾಕಬಹುದು ಆದರೆ, investors ಆಗದಿದ್ದಂತೆ ಆದರು ಗೌರವಯುತವಾಗಿ ವ್ಯಾಪಾರ ಮಾಡುವವರು ದಿವಾಳಿಯಾಗುತ್ತಿದ್ದಾರೆ ಏಕೆ? ಯಾರಿಗೆ ಸಾಮರ್ಥ್ಯವಿದೆ, ಯಾರಿಗೆ ಶಕ್ತಿ ಇದೆ, ನಂಬರ್ ಟೂ ನಲ್ಲಿ ಕೊಬ್ಬರಿ ಹೋಗಿಬಿಡುತ್ತದೆ ಯಾರು ಮರ್ಯಾದೆಗೆ, ಗೌರವಕ್ಕೆ ಅಂಜಿಕೊಂಡು ವ್ಯಾಪಾರ ಮಾಡುತ್ತಾನೆ ಅವನು ಇವತ್ತು ವ್ಯಾಪಾರ ಮಾಡುವಂತಿಲ್ಲ ನೀವು ಅದನ್ನು ರೆಗ್ಯುಲೇಟ್ ಮಾಡಲು ಆಗುವುದಿಲ್ಲ ನಿಮ್ಮ ಪಕ್ಕದಲ್ಲೇ ಕುಳಿತುಕೊಂಡು ನಂಬರ್ ಟೂ ಮಾಡುತ್ತೇನೆಂದರೂ ನಿಮಗೆ ಅದನ್ನು Control ಮಾಡಲು ಆಗುವುದಿಲ್ಲ ಟ್ಯಾಕ್ಸ್ ತೆಗೆಯಿರಿ ನಮಗೆ ಅದರಿಂದ ಎಷ್ಟು ಆದಾಯ ಬಂದಿತು? ಎಷ್ಟು ಬರುತ್ತಿತ್ತು ಹೇಳಿ? ಇವತ್ತು subsidy ಎಷ್ಟು ಕೊಟ್ಟಿದ್ದೀರಿ ಹೇಳಿ? ನಾನು ಒಬ್ಬ ಕೊಬ್ಬರಿ ಉತ್ಪಾದಕ ಮತ್ತು ಬೆಳೆಗಾರನಾಗಿ ಹೇಳುತ್ತಿದ್ದೇನೆ ನಮ್ಮದೇನಾದರೂ 3% ಟ್ಯಾಕ್ಸ್ ಇರದಿದ್ದರೆ, ಈಗೇನು ವ್ಯಾಟ್ ಪ್ರಕಾರ 3% ಇಳಿಸುತ್ತಿದ್ದೀರಿ, ಅದು ಇಲ್ಲದಿದ್ದರೆ ಕೊಬ್ಬರಿಗೆ ತಿಪಟೂರಿನಲ್ಲಿ ಈ ಸ್ಥಿತಿ ನಿರ್ಮಾಣವಾಗುತ್ತಿರಲಿಲ್ಲ ಸಿದ್ಧರಾಮಯ್ಯನವರನ್ನು ನಾವು ಏಕೆ ಇಷ್ಟಪಡುತ್ತಿದ್ದೇವೆಂದರೆ, ನಾವು ಬಂದು ದಿವಸ Chief Secretary ಹತ್ತಿರ ಕುಳಿತುಕೊಂಡು ಚರ್ಚೆ ಮಾಡಿದಾಗ he was able to remove that and

see that situation was eased ನಾನು ಸುಮ್ಮಸುಮ್ಮನೆ ಮಾತನಾಡುತ್ತಿಲ್ಲ ನಾನು ಆವತ್ತು ಸೋತಿದ್ದೆ ಈ ರೀತಿ ಮಾರುಕಟ್ಟೆ ಹಾಳಾಗಿ ಹೋಗುತ್ತಿದೆಯೆಂದು ನಾನು ಬಂದು ಅವರಿಗೆ convince ಮಾಡಿದಾಗ ತಕ್ಷಣ meeting ಕರೆಸಿ 4% tax ನ್ನು ಹಿಂದಕ್ಕೆ ತೆಗೆದುಕೊಂಡರು ಆಗ ನಮ್ಮ ಮಾರುಕಟ್ಟೆ ಚೇತರಿಸಿಕೊಂಡಿತು ಆದರೆ, ಇವತ್ತು ನೀವೇನು ಮಾಡುತ್ತಿದ್ದೀರಿ? ಕಾಫಿಯ ಮೇಲಿನ tax ನ್ನು ತೆಗೆಯಲಿಲ್ಲ 15 ಲಕ್ಷದೊಳಗೆ ವ್ಯಾಪಾರ ಮಾಡಿದವನಿಗೆ 4% ಟ್ಯಾಕ್ಸ್, 15 ಲಕ್ಷ ರೂಪಾಯಿಗಿಂತ ಹೆಚ್ಚು ವ್ಯಾಪಾರ ಮಾಡಿದವರಿಗೆ 12% tax ಕಾಫಿಯ ಮೇಲಿರುವುದು ತಮಗೆ ಗೊತ್ತೇ? ಒಬ್ಬನೇ ಒಬ್ಬ ವ್ಯಾಪಾರ ಮಾಡುತ್ತಿರುವವನು ಹತ್ತು ಅಕೌಂಟ್ ಇಡುತ್ತಿದ್ದಾನೆ ಎಂದು ತಮಗೆ ಗೊತ್ತೇ? ಅದರಿಂದ ನಿಮಗೆಷ್ಟು tax ಲಾಸ್ ಆಗುತ್ತಿದೆ ನಿಮಗೆ ಗೊತ್ತೆ? ಇದನ್ನೇಕೆ Simplify ಮಾಡುತ್ತಿಲ್ಲ ನೀವು? ಯಾರು ನಿಮಗೆ ಈ advice ಕೊಟ್ಟವರು ದಯಮಾಡಿ ನಮ್ಮ ತೋಟಗಾರಿಕಾ ಬೆಳೆಗಳು, ನಮ್ಮ ಸ್ಪೈಸ್ ಉಳಿದುಕೊಳ್ಳಬೇಕೆಂದು ಏನಾದರೂ ನಿಮಗೆ ಮನಸ್ಸಿದ್ದರೆ ದಯಮಾಡಿ ಯಾವ್ಯಾವ Items ರಫ್ತಾಗುತ್ತದೆ don't bother about CST CST ಯಿಂದ ನಮಗೇನು ಆಗಬೇಕಾಗಿಲ್ಲ ಅದರಿಂದ ಬರುವ ಒಂದಿಷ್ಟು ಹಣ ಬಾರದಿದ್ದರೆ ಇಷ್ಟೊಂದು ದುಡ್ಡು ನಿಮಗೆ ಬರಬೇಕಾದರೆ ಈ ರಾಜ್ಯಕ್ಕೇನು ಅನ್ಯಾಯವಾಗುವುದಿಲ್ಲ ನಮಗೆ ಬರೇ 4% ಸಿಎಸ್ಟಿ ಬರುತ್ತಿಲ್ಲವೆಂದು ತಿಳಿದುಕೊಳ್ಳಬೇಡಿ ಅವನು ಅಲ್ಲಿ turnover tax ಕೊಡಬೇಕು ಅವನು ಅದನ್ನು ಕೊಡಲು ಇವತ್ತು ಇಷ್ಟಪಡುವುದಿಲ್ಲ ಮಹಾರಾಷ್ಟ್ರದಲ್ಲೋ ಕುಳಿತುಕೊಂಡು ವ್ಯಾಪಾರ ಮಾಡುವವನು ನಮಗೆ ಸಿ-ಫಾರಂ ಕೊಟ್ಟು ಅಲ್ಲಿ ಟ್ಯಾಕ್ಸ್‌ನ್ನು ಕೊಡಲು ಇಷ್ಟಪಡುವುದಿಲ್ಲ ದಂಧೆ ದಂಧೆಯೇ ಇವತ್ತು ಆಗುತ್ತಿದೆ ಎಲ್ಲಾದರೂ ಒಂದು ಕಡೆ mind apply ಮಾಡಿ ಹಾಕಿರುವ tax ನ್ನು ಕಡಿಮೆ ಮಾಡಿ ಎಂದರೆ ಮಾಡಲಿಲ್ಲ ನಿಮಗೆ ಅದರ ಬಗ್ಗೆ ಜನರು ಯಾರೂ ಹೇಳಲಿಲ್ಲ ಏಕೆಂದರೆ ನೀವು ನನಗೆ ಜನರು ಹೇಳಿದರು, ನನಗೆ ಜನರು ಹೇಳಿದರೆಂದು ಹೇಳಿಕೊಂಡು ಬರುತ್ತೀರಲ್ಲಾ, ಅದನ್ನು ನಾನು ಈ ಶಾಸನ ಸಭೆಯ ಸದಸ್ಯನಾಗಿ ಹೇಳಬೇಕೋ ಬೇಡವೋ ಅರ್ಥವಾಗುತ್ತಿಲ್ಲ ತಾವು ಡೈರಿ ಸೆಕ್ಟಾರ್‌ಗೆ ಹಣವನ್ನು ಕೊಡುತ್ತಿದ್ದೀರಿ ನಾನೂ ಕೆ ಎಂ ಎಫ್ ಅಧ್ಯಕ್ಷನಾಗಿದ್ದವನು ಅದು ತಮಗೆ ಗೊತ್ತೋ ಇಲ್ಲವೋ ನನಗೆ ಗೊತ್ತಿಲ್ಲ ಆ ಸೆಕ್ಟರ್‌ನಿಂದಲೇ

ಬೆಳೆದುಬಂದವನು ನಾವು ಡೈರಿ ಸೆಕ್ಟಾರ್‌ಗೆ ಅಟಾನಮಿಯನ್ನು ಡಿಕ್ಲೇರ್ ಮಾಡಿದ್ದೆವು ಇಲ್ಲಿಂದ ಮುಂದಕ್ಕೆ ಸರ್ಕಾರದವರು ನಮಗೇನು ಕೇಳಲು ಅಧಿಕಾರವಿಲ್ಲ ಏಕೆಂದರೆ, ನಾವು ಸರ್ಕಾರದ ಯಾವುದೇ ನೆರವನ್ನು ಬಯಸುವುದಿಲ್ಲ ಎಂದು ಬೋರ್ಡ್ ರೆಸಲ್ಯೂಷನ್ ಮಾಡಿ ಬರೆದುಕೊಟ್ಟಿದ್ದೆವು ಈ ಡೈರಿ ಸೆಕ್ಟಾರ್‌ಗೆ ಹೋದ ವರ್ಷದಿಂದ, ಈ ವರ್ಷದಿಂದ ಹಣವನ್ನು ಕೊಡಲು ನೀವು ಶುರು ಮಾಡಿದಿರಿ ಹೋದ ವರ್ಷವೂ ಸುಮಾರು ಕೊಟ್ಟಿದ್ದೀರಿ ಈ ವರ್ಷ 50 ಸಾವಿರ ಜಾನುವಾರುಗಳನ್ನು ಅದು ಹಸು ಇರಬಹುದು, ಎಮ್ಮೆ ಇರಬಹುದು ಕೊಡುತ್ತೇವೆಂದು ಹೇಳಿದ್ದೀರಿ ನಾನು ಅದನ್ನು welcome ಮಾಡುತ್ತೇನೆ ನಾನು ಎಲ್ಲವನ್ನೂ ವಿರೋಧ ಮಾಡಲು ಬಂದಿಲ್ಲ ಆದರೆ, ಕರು ಕೊಳ್ಳಲು ಏನಾದರೂ ಮಾಡಿ ಹಸು ತೆಗೆದುಕೊಳ್ಳಲು ಅವನು 20 ಸಾವಿರ ಖರ್ಚು ಮಾಡುವುದನ್ನು ಎರಡು, ಒಂದೂವರೆ ಸಾವಿರಕ್ಕೆ ಒಂದು ಕರುವನ್ನು ತೆಗೆದುಕೊಂಡು ಒಂದು ವರ್ಷ ಸಾಕಿದರೆ 20 ಸಾವಿರ ಅಸೆಟ್‌ನ ಮಾಲೀಕನಾಗುತ್ತಾನೆ ಇವತ್ತು ಇಡೀ ರಾಜ್ಯದ ಕರುಗಳು ಕೊಯಮತ್ತೂರು, ಸೇಲಂಗೆ ಹೋಗುತ್ತಿದೆ ಅದರಲ್ಲೂ ಬೆಂಗಳೂರಿನಲ್ಲೇನು ಕರುಗಳನ್ನು ಹಾಕುತ್ತಾರೆ ಅವರು ಇಟ್ಟುಕೊಳ್ಳಲು ಹೋಗುವುದಿಲ್ಲ ಅವರಿಗೆ workout ಆಗುವುದಿಲ್ಲ ಹಾಲು ಕರೆಯುವುದನ್ನು ಇಟ್ಟುಕೊಳ್ಳುತ್ತಾರೆ ಹಾಲು ಕರೆಯಲಿಲ್ಲವೆಂದಾಗ ಹೋದಷ್ಟಕ್ಕೆ ಮಾರಿಬಿಡುತ್ತಾರೆ ಈ ಕರುವನ್ನೇ ನಮ್ಮ ಗ್ರಾಮೀಣ ಪ್ರದೇಶಕ್ಕೆ ಕಳುಹಿಸಿ ಮೇವನ್ನು ಬೆಳೆಯಲು subsidy ಕೊಡಿ ಒಂದು ಕರು ಸಾಕಿದರೆ ಅವನಿಗೆ ಗೊತ್ತಿಲ್ಲದಂತೆ ಬಂಡವಾಳ ಬರುತ್ತದೆ ಕುರಿ ಮತ್ತು ಕುರಿ ಉತ್ಪನ್ನ ಮಂಡಳಿ ಎಂದು ಇಟ್ಟಿದ್ದೀರಿ ನಾನು ತಮಗೆ honest ಆಗಿ ಕೇಳುತ್ತಿದ್ದೇನೆ, ಈ ಮಂಡಳಿಗೆ ದುಡ್ಡನ್ನೇಕೆ ಇಟ್ಟಿರಿ ನಮಗೆ ಹೇಳಬೇಕು ಮಾನ್ಯ ಸಿದ್ಧರಾಮಯ್ಯನವರೆ ನಮ್ಮ ಗಮನವನ್ನು ಸೆಳೆಯುತ್ತೇನೆ ಇಡೀ ಕರ್ನಾಟಕ ರಾಜ್ಯದಲ್ಲಿ ಉಣ್ಣೆ ಪ್ರೋಸೆಸ್ ಆಗುತ್ತಿಲ್ಲ ಕುರಿ ಭಂಡ ಕತ್ತರಿಸಲು, ಉಣ್ಣೆ ಕತ್ತರಿಸಲು ಒಬ್ಬರೂ ಬರುತ್ತಿಲ್ಲ, We have two varieties ಒಂದು ಉಣ್ಣೆ ವರೈಟಿ, ಇನ್ನೊಂದು ಮಾಂಸದ ವರೈಟಿ ಕುರಿಗಳನ್ನು ಇಲ್ಲಿ develop ಮಾಡಿ ಬಿಡಿಬಿಟ್ಟೆವು ಇಡೀ ರಾಜ್ಯದ ಉಣ್ಣೆ ಕಂಬಳಿ, ರಗ್ಗು, ಶಾಲು ಏನು ಆಗುತ್ತಿತ್ತೋ ಇವತ್ತು ಅದು ವೇಸ್ಟ್ ಆಗುತ್ತಿದೆ ಚಿಕ್ಕನಾಯಕನಹಳ್ಳಿ 400 ಕಂಬಳಿ ಮಗ್ಗಗಳಿತ್ತು ಇವತ್ತು ಅದರಲ್ಲಿ ಒಂದೂ

ಕೆಲಸ ಮಾಡುತ್ತಿಲ್ಲ ಏಕೆ? ಅವನಿಗೆ technology ಕೊಟ್ಟು ಮಾರುಕಟ್ಟೆಯಲ್ಲಿ compete ಮಾಡುವುದನ್ನು ಕಲಿಸಲಿಲ್ಲ ಉಣ್ಣೆಯನ್ನು ಎಲ್ಲಿಗಾದರೂ ರಫ್ತು ಮಾಡುತ್ತೇವೆ, ಅದರಿಂದೇನಾದರು ಪ್ರಯೋಜನವಾಗುತ್ತದೋ ಅದನ್ನೂ ಕಲಿಸಲಿಲ್ಲ ಒಂದು agricultural activity ಮಾಡಿದರೆ ಆ activity ಮೇಲೆ main occupation subsidiary occupation ಎರಡೂ ಲೆಕ್ಕಕ್ಕೆ ಇಟ್ಟುಕೊಂಡು ಮಾಡಬೇಕಾಗುತ್ತದೆ ಅದರ ಜೊತೆಗೆ ಮಾಂಸದಿಂದ ಇಷ್ಟು ದುಡ್ಡು ಬಂದರೆ ಉಣ್ಣೆಯಿಂದ ಎಷ್ಟು ದುಡ್ಡು ಬರುತ್ತದೆ ಎಂಬುದನ್ನು ನೋಡಬೇಕಾಗುತ್ತದೆ ಆಗ ಅದು ಏನಾದರೂ breakeven point ಗೆ ಬರುತ್ತದಾ ಎಂದು ಚರ್ಚೆ ಮಾಡಬೇಕಾಗುತ್ತದೆ ತಾವೇನು ಉಣ್ಣೆ ಮಂಡಳಿಗೆ ದುಡ್ಡನ್ನು ಕೊಡುತ್ತಿದ್ದೀರಿ, animal husbandry ಯಿಂದ ತೆಗೆದು ಇಲ್ಲಿ ಕೊಡುತ್ತಿದ್ದೀರಷ್ಟೆ Vaccination programme, F & M Vaccination ನಾನು ಓದಿದ್ದೇನೆ ಇವತ್ತು ಉಣ್ಣೆ ಮಂಡಳಿ ಏನು activity ಮಾಡುತ್ತಿದೆ? animal husbandry department ಮಾಡಬೇಕಾದ activity ಯನ್ನು ಈ ಕಡೆ shift ಮಾಡಿದ್ದೀರಿ ಕುರಿಗಳಿಗೆ F & M Vaccination ಕೊಡುತ್ತೀರಿ, ಅವುಗಳು ಒಂದು ಉಳಿಯುವುದಿಲ್ಲ ಕಾರಣ ಕರ್ನಾಟಕದಲ್ಲಿ ಗ್ರೇಸಿಂಗ್ ಲ್ಯಾಂಡ್ ಇಲ್ಲ ಕುರಿಯನ್ನು ಹೆಚ್ಚು ಮಾಡಲು ನಿಮಗೆ ಹುಲ್ಲುಗಾವಲೇ ಇಲ್ಲ ಕುರಿಯನ್ನು ಮನೆಯಲ್ಲಿ ಕಟ್ಟಿ ಬೆಳೆಸಲು ಆಗುವುದಿಲ್ಲ ಮೇಕೆಯನ್ನು ಮನೆಯಲ್ಲಿ stall feed ಮಾಡಿ ಬೆಳೆಸಬಹುದು ಕುರಿಯನ್ನು ನೀವು ಬಯಲಿಗೆ ಬಿಡಲೇ ಬೇಕು ಕುರಿ ಉತ್ಪಾದನೆಯನ್ನು ಹೆಚ್ಚಿಸಿಬಿಡುತ್ತೇನೆಂದು ನೀವು ಯಾವುದೇ ಜನಾಂಗವನ್ನು ತೃಪ್ತಿಪಡಿಸಬಹುದೆಂದು ತಿಳಿದುಕೊಂಡಿದ್ದರೆ ಅದು ನಿಜವಾಗಿಯೂ ತಪ್ಪು ಮಾಡಬೇಕೆಂದರೆ, ನಾನು ನಿಮಗೆ honest suggestion ಕೊಡುತ್ತಿದ್ದೇನೆ, ಉತ್ಪತ್ತಿಯಾಗುತ್ತಿರುವ ಉಣ್ಣೆಯೇನಿದೆ, ಅದು ಎಲ್ಲಾದರೂ finished product ಆಗಿ ಮಾರಾಟ ಆಗುವಂತೆ ಮಾಡಿಕೊಟ್ಟರೆ ಅವನಿಗೆ ಕನಿಷ್ಟ 3–6 ತಿಂಗಳಿಗೆ ಏನು ಉಣ್ಣೆ ತೆಗೆಯುತ್ತಾನೆ, ಅದರಲ್ಲಿ ಏನಾದರೂ ಸ್ವಲ್ಪ ವರಮಾನ ರೈತರಿಗೆ ಬರುವಂತಾದರೆ ಅನುಕೂಲವಾಗುತ್ತದೆಯೇ ಹೊರತು ಇನ್ಯಾವ ವರೈಟಿಯನ್ನು ತರಲು ಹೋಗಬೇಡಿ ಕರ್ನಾಟಕಕ್ಕೆ ಬನ್ನೂರು ಒಂದೇ ವರೈಟಿ ಸಾಕು ಟಗರು ಕೊಡಿಸುತ್ತೇನೆ, ಅದು ಮಾಡುತ್ತೇನೆ, ಅಲ್ಲಿಂದ ತರುತ್ತೇನೆ

ಎಂದು ಹೇಳುವುದನ್ನು ಕೈಬಿಟ್ಟುಬಿಡಿ ಉಣ್ಣೆಯನ್ನು ನಿಮಗೆ convert ಮಾಡುವುದಕ್ಕಾಗುವುದಿಲ್ಲವೆಂದರೆ ಮಾಂಸಕ್ಕೋಸ್ಕರ ಕುರಿಗಳನ್ನು ಮಾಡುತ್ತೇವೆಂದು ಸ್ಪಷ್ಟವಾಗಿ ಈ ರಾಜ್ಯ ಸರ್ಕಾರ decision ತೆಗೆದುಕೊಳ್ಳಬೇಕಾಗಿದೆ ಈಶ್ವರಪ್ಪನವರೆ, ಇವತ್ತು ಒಂದೇ ಒಂದು ಕೆ ಜಿ ಉಣ್ಣೆ ಹೋಗುತ್ತಿಲ್ಲ ಶಿರಾ, ಚಿಕ್ಕನಾಯಕನಹಳ್ಳಿ ಭಾಗವೇ ಇವತ್ತು ಕುರಿಗೆ ಪ್ರಾಮುಖ್ಯವಾದ ಸ್ಥಳ ಒಂದು ಕೆ ಜಿ ಉಣ್ಣೆಯನ್ನು ಇವತ್ತು ಯಾರೂ ತೆಗೆದುಕೊಳ್ಳುವವರಿಲ್ಲ ಅದನ್ನೇನಾದರೂ ಮಾಡಿ ಯಾರ ಜೊತೆಯಾದರೂ ಮಾತನಾಡಿ ಲೂಧಿಯಾನಕ್ಕೋ, ಪಂಜಾಬಿಗೋ, ಹರಿಯಾಣಕ್ಕೋ ಅಲ್ಲೆಲ್ಲ ಏನು ಮಾಡುತ್ತಿದ್ದಾರೆ ಕೇಳಿ ಕಾಶ್ಮೀರ ಬೆಲ್ಟ್‌ನಿಂದ ಹಿಡಿದು ಹರಿಯಾಣದವರೆಗೂ ಉಣ್ಣೆಯನ್ನು ಹೇಗೆ convert ಮಾಡುತ್ತಾರೆ, ಹಾಗೆ ಈ ರಾಜ್ಯದಲ್ಲೇನಾದರೂ ಮಾಡಿ Carpet ಮಾಡಿಸಿ ನೀವು ನಮಗೆ Agricultural allied activities ಒಂದಕ್ಕೂ scope ಕೊಡಲಿಲ್ಲ ಚೈನಾ ದೇಶಕ್ಕೆ ಎಷ್ಟು Coir and Coir products ಕೊಟ್ಟರೂ ಇವತ್ತು receive ಮಾಡಿಕೊಳ್ಳುವ stage ಇದೆ ಕರ್ನಾಟಕದಲ್ಲಿ Coir ಇಲ್ಲ ಹೆಚ್ಚು ಕಡಿಮೆ ನೀವು ಅರಸೀಕೆರೆ Coir Society ಗೆ ಹಣ ಇಟ್ಟಿದ್ದೀರಿ, ಅದು ಬಿಟ್ಟರೆ ಇಡೀ ರಾಜ್ಯದಲ್ಲಿರುವ Coir Industry ಗಳು ಮುಚ್ಚಿ ಹೋಗಿವೆ ತೆಂಗಿನ ನಾರಿನ ಉತ್ಪನ್ನಗಳ ತಯಾರಿಕಾ ಘಟಕಗಳು ಎಲ್ಲ ಸಮಾಪ್ತಿ stage ಗೆ ಬಂದಿವೆ ಏನಾದರೂ rejuvenate ಮಾಡಬೇಕಾಗಿತ್ತಲ್ಲಾ? ಕಳೆದ ಮೂರು ವರ್ಷಗಳಿಂದ, ಮಾನ್ಯ ಸಿದ್ಧರಾಮಯ್ಯನವರ ಕಾಲದಿಂದ ತಮ್ಮ ಕಾಲದವರೆಗೂ ನಾವು ಕೇಳಿಕೊಂಡು ಬಂದೆವು ಇವತ್ತು What is the main rural industry? ತಾವು ಹೇಳುತ್ತೀರಿ, Rural industry ಯಾವುದು? ನನ್ನ ಪ್ರಕಾರ Poultry ಇರಬಹುದು, Brick industry ಇರಬಹುದು ಇದಕ್ಕೆಲ್ಲಾ ನೀವು ದುಡ್ಡನ್ನೇ ಇಟ್ಟಿಲ್ಲ Poultry ಮತ್ತು Brick industry ಗೆ subsidy release ಮಾಡುತ್ತೇವೆ ಎಂಬುದು ತಮ್ಮ ಬಾಯಲ್ಲೇ ಬರಲಿಲ್ಲ ನೀವು ಏನು ಹೇಳಿ ಜನರನ್ನು ಬದುಕಿಸುತ್ತೀರಿ? ಯಾರನ್ನು ಬದುಕಿಸುತ್ತೀರಿ? ನಮಗೆ ಗೊತ್ತಿಲ್ಲ ಬಾಯಿ ತುಂಬಾ 'ರೈತರು, ರೈತರು' ಎಂದು ಭಾಷಣ ಮಾಡುತ್ತೀರಿ ಅಲ್ಲಿ ನಡೆಯುತ್ತಿರುವ ಒಂದು industry ಉಳಿಸುವುದಿಲ್ಲ ಅಲ್ಲಿ ನಡೆಯುತ್ತಿರುವ ಒಂದು ಕಸುಬಿಗೆ ಪೂರಕವಾಗಿ budget assistance or support ಕೊಡುವುದಿಲ್ಲ

ಯಾರಿಗೆ ಇಟ್ಟಿದ್ದೀರಿ? ಮೂರನೆಯದಾಗಿ ಹೇಳುವುದಾದರೆ, ಸಾರ್ ಇವತ್ತು water conservation, ನಿಜವಾಗಿ ಯಡಿಯೂರಪ್ಪನವರೆ, ನಿಮಗೆ ಪ್ರಾಥಮಿಕ ವಲಯದ ಮೇಲೆ ಆಸಕ್ತಿ ಇದ್ದರೆ, ಕನಿಷ್ಟ ನಿಮ್ಮ ಕಾರ್ಯಕ್ರಮ ಬಿಟ್ಟುಬಿಡಿ, Government of India ನಿಂದ water shed programme ಗೆ ಬಂದಿದ್ದ ಹಣವೆಷ್ಟು? ಈ ರಾಜ್ಯದಲ್ಲಿ utilize ಆಗಿರುವುದೆಷ್ಟು? utilize ಆಗದಿರುವುದು ಎಷ್ಟು? ಎಂಬ ಬಗ್ಗೆ ಮಾಹಿತಿಯನ್ನು ಈ ಸಭೆ ಮುಂದೆ ತಂದಿಡಿ ಕೇಂದ್ರ ಸರ್ಕಾರ ಕೊಡುತ್ತಿರುವಂತಹ grants ಗಳನ್ನೂ ಕೂಡ ಇವತ್ತು ನೀವು ಖರ್ಚು ಮಾಡಲಿಕ್ಕೆ ವಿಫಲರಾಗಿದ್ದೀರಿ ಎಲ್ಲಿ ಅಂತರ್ಜಲ ಅಭಿವೃದ್ಧಿ ಆಗಬೇಕೋ, ಎಲ್ಲಿ 2010 ಅಥವಾ 2020ನೇ ಇಸವಿಗೆ ನೀವು ಮರಳುಗಾಡು ಆಗುತ್ತೀರಿ ಎಂದು ಹೇಳಿ ವರದಿ ಇದೆ, ಅದರ ಆಧಾರದ ಮೇಲೆ ಇವತ್ತು ಬಹುಶಃ ಕೇಂದ್ರ ಸರ್ಕಾರದವರು ನಿಮಗೆ ಇದಕ್ಕಾಗಿ ಹಣ ಕೊಟ್ಟಿದ್ದಾರೆ ಅದರಲ್ಲಿ ಎಷ್ಟನ್ನು ನೀವು utilize ಮಾಡಿದ್ದೀರಿ? ನಿಮ್ಮ Economic Survey Report ಅನ್ನು ನಾನು ಓದುತ್ತಿದ್ದೆ ಎಷ್ಟನ್ನು ನೀವು utilize ಮಾಡಿದ್ದೀರಿ ಎಂಬುದನ್ನು ಹೇಳಿ ನೋಡೋಣ ಇದರ ಬಗ್ಗೆ ಸ್ವಲ್ಪ ಗಮನ ಕೊಡಬೇಕಾಗುತ್ತದೆ ಅದರ ಬಗ್ಗೆ ನಾನೇ ಹೇಳಿ ಬಿಡುತ್ತೇನೆ ಆರ್ಥಿಕ ಸಮೀಕ್ಷೆಯಲ್ಲಿ ಈ ರೀತಿ ಹೇಳಲಾಗಿದೆ

> " ಸಮಗ್ರ ಬಂಜರು ಭೂಮಿ ಅಭಿವೃದ್ಧಿ ಯೋಜನೆಗಳನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ದಿನಾಂಕ 1 4 2005 ರಿಂದ ಜಲಾನಯನ ಅಭಿವೃದ್ಧಿ ಇಲಾಖೆಗೆ ವರ್ಗಾಯಿಸಿದೆ ಸದರಿ ಯೋಜನೆಗಳಿಗೆ 2006–07ನೇ ಸಾಲಿಗೆ ರೂ 25,702 99 ಲಕ್ಷಗಳಿಂದ 4,28,383 ಹೆಕ್ಟೇರ್ ಪ್ರದೇಶವನ್ನು ಅಭಿವೃದ್ಧಿ ಪಡಿಸುವ ಗುರಿ ಹೊಂದಿದ್ದು, 2005–06ನೇ ಸಾಲಿನ ಉಳಿಕೆ ಹಣ ಸೇರಿದಂತೆ ಒಟ್ಟು ರೂ 6555 10 ಲಕ್ಷಗಳನ್ನು ಡಿಸೆಂಬರ್ 2006ರ ಅಂತ್ಯಕ್ಕೆ ಖರ್ಚು ಮಾಡಿ 1,07,927 ಹೆಕ್ಟೇರ್ ಪ್ರದೇಶವನ್ನು ಅಭಿವೃದ್ಧಿ ಪಡಿಸಲಾಗಿದೆ "

4 ಲಕ್ಷದ 28 ಸಾವಿರದಾ 383 ಹೆಕ್ಟೇರ್ ಪ್ರದೇಶದ ಗುರಿ ಕೊಟ್ಟು, ನಿಮಗೆ 25 ಸಾವಿರದ 702 ಲಕ್ಷ ರೂಪಾಯಿಗಳ programme ಕೊಟ್ಟರೆ, ನಿಮ್ಮ ಸರ್ಕಾರ

ಮಾಡಿರುವುದು 1,07,927 ಹೆಕ್ಟೇರ್‌ಗಳು ಮಾತ್ರ. ಇದಕ್ಕಾಗಿ ನೀವು ಖರ್ಚು ಮಾಡಿರುವುದು 6555 10 ಲಕ್ಷ ರೂಪಾಯಿಗಳು ನೀವು ರೈತರ ಪರವಾಗಿದ್ದೀರಾ? ನೀವು Finance Minister ಅಲ್ಲವೇ? ಇದನ್ನೆಲ್ಲಾ ಬಜೆಟ್ ಮಂಡಿಸುವ ಮುಂದೆ ತಾವು ಓದಲಿಲ್ಲವೇ? ಹಾಗೆಯೇ ಮುಂದಕ್ಕೆ ಓದಿ 'ಸುವರ್ಣ ಕೃಷಿ ಹೊಂಡ', ನಿಮ್ಮ ಯೋಜನೆ, ನೀವೇ ಹೇಳಿಕೊಂಡಂತಹ ಯೋಜನೆ, ನಾನು ಸುವರ್ಣ ಕೃಷಿ ಹೊಂಡವನ್ನು SC/ST ಗಳಿಗೆ ಕೊಡುತ್ತೇನೆಂದು ನೀವು ಹೇಳಿದ್ದೀರಿ

> " ರೂ 5000 00 ಲಕ್ಷಗಳನ್ನು ಖರ್ಚು ಮಾಡಿ 50,000 ಕೃಷಿ ಹೊಂಡಗಳನ್ನು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ, ಸಣ್ಣ ಮತ್ತು ಅತಿ ಸಣ್ಣ ರೈತರ ಜಮೀನಿನಲ್ಲಿ ನಿರ್ಮಿಸಲು ಗುರಿ ಹೊಂದಿದ್ದು, ಡಿಸೆಂಬರ್ 2006ರ ಅಂತ್ಯಕ್ಕೆ ರೂ 549 11 ಲಕ್ಷಗಳನ್ನು ಖರ್ಚು ಮಾಡಿ 5603 ಕೃಷಿ ಹೊಂಡಗಳನ್ನು ನಿರ್ಮಿಸಲಾಗಿದೆ"

Scheduled Caste ಗೆ ನೀವು ಕೊಟ್ಟ ಕಾರ್ಯಕ್ರಮ ಈ ರಾಜ್ಯದಲ್ಲಿ ಅನುಷ್ಠಾನವಾಗಿರುವುದು just 10% ಮಾತ್ರ. ಇನ್ನು ಕೇಂದ್ರ ಪುರಸ್ಕೃತ ರಾಷ್ಟ್ರೀಯ ಜಲಾನಯನ ಅಭಿವೃದ್ಧಿ ಯೋಜನೆಯಲ್ಲಿ,

> "2006–07ನೇ ಸಾಲಿಗೆ ರೂ 3333 33 ಲಕ್ಷಗಳ ಆರ್ಥಿಕ ಗುರಿ ಹಾಗೂ 67212 ಹೆಕ್ಟೇರ್ ಪ್ರದೇಶ ಅಭಿವೃದ್ಧಿ ಪಡಿಸುವ ಭೌತಿಕ ಗುರಿಗಳನ್ನು ಹೊಂದಲಾಗಿದ್ದು ಡಿಸೆಂಬರ್ 2006ರ ಅಂತ್ಯಕ್ಕೆ ರೂ 1841 02 ಲಕ್ಷ ರೂ ಗಳನ್ನು ಖರ್ಚು ಮಾಡಿ 38908 ಹೆಕ್ಟೇರ್ ಪ್ರದೇಶವನ್ನು ಅಭಿವೃದ್ಧಿ ಪಡಿಸಲಾಗಿದೆ "

ಈಗ ಏನೇನು ಕೆಲಸವನ್ನು ಗ್ರಾಮೀಣ ಪ್ರದೇಶಕ್ಕೆ ರೈತರ ಪರವಾಗಿ ಮಾಡುತ್ತಿದ್ದೀರಿ ಎಂಬುದನ್ನು ಮಾನ್ಯ ಯಡಿಯೂರಪ್ಪನವರು ಹೇಳಬೇಕಲ್ಲವೇ?

> "47152 ಹೆಕ್ಟೇರ್ ಪ್ರದೇಶವನ್ನು ಅಭಿವೃದ್ಧಿ ಪಡಿಸುವ ಗುರಿ ಹೊಂದಿದ್ದು, ಗ್ರಾಮೀಣಾಭಿವೃದ್ಧಿ ಪಶ್ಚಿಮ ಘಟ್ಟ ಅಭಿವೃದ್ಧಿ ಯೋಜನೆಯಲ್ಲಿ 10828 ಹೆಕ್ಟೇರ್ ಪ್ರದೇಶವನ್ನು ಮಾತ್ರ ಅಭಿವೃದ್ಧಿ ಪಡಿಸಲಾಗಿದೆ "

10ರಿಂದ 25% ನಷ್ಟು development ಕೂಡ ಆಗಿಲ್ಲ, ಹಣವೂ ಪೂರ್ತಿಯಾಗಿ ಖರ್ಚಾಗಲಿಲ್ಲ What is your main programme today? ಮಾನ್ಯ ಅಧ್ಯಕ್ಷರೆ, ನಾವು ಅನೇಕ ಸಲ ಇಲ್ಲಿ ಮಾತನಾಡಿದ್ದೇವೆ ಇವತ್ತು ಈ ರಾಜ್ಯದ ಬೊಕ್ಕಸದಿಂದ ಬಹಳಷ್ಟು ಹಣ ಖರ್ಚಾಗುತ್ತಿರುವುದು ನೀರಾವರಿಗೆ ಮತ್ತು ಕುಡಿಯುವ ನೀರಿಗೆ ಎಂಬುದನ್ನು ಮಾನ್ಯ ಯಡಿಯೂರಪ್ಪನವರೆ, ತಾವು ಒಪ್ಪಿಕೊಳ್ಳುತ್ತೀರಿ ಏಕೆ ಹೀಗೆ ಆಗುತ್ತಿದೆ? Underground water level ಕೆಳಗೆ ಹೋಗಿದೆ, ಭೂಮಿಯಲ್ಲಿ ನೀರಿಲ್ಲ, Conserve ಮಾಡುವಂತಹ ಕಾರ್ಯಕ್ರಮಗಳು ಯಶಸ್ವಿಯಾಗಿ ಆಗುತ್ತಿಲ್ಲ ಒಂದು ಕಡೆ surface water management ಅನ್ನು neglect ಮಾಡಿದ್ದೀರಿ ಇನ್ನೊಂದು ಕಡೆ afforestation ಕಾರ್ಯಕ್ರಮವನ್ನು neglect ಮಾಡಿದ್ದೀರಿ 30–31% forest ಇದ್ದದ್ದು 21–22%ಗೆ ತಂದಿದ್ದೀರಿ 30% ನಷ್ಟು ತುಮಕೂರಿನಲ್ಲಿ ಇದ್ದಂತಹ forest ಅನ್ನು 8%ಕ್ಕೆ ಇಳಿಸಿದ್ದೀರಿ ಇನ್ನು ಎರಡು ವರ್ಷಗಳಲ್ಲಿ forest conservation ನಲ್ಲೇನಾದರೂ ದುಡ್ಡು ಕಟ್ಟಿ ಬಿಟ್ಟು, ಅದನ್ನೂ ಮೈನ್ಸ್ ಮಾಡಿಕೊಂಡು ಬಿಟ್ಟರೆ, ನಮ್ಮ ತುಮಕೂರಿನಲ್ಲಿ forest will be zero ಆ ಕಾರ್ಯಕ್ರಮದ ಕೆಳಗಡೆ ಸನ್ಮಾನ್ಯ ಯಡಿಯೂರಪ್ಪನವರು ಏನು ಕೆಲಸ ಮಾಡಿದ್ದಾರೆ ಎಂದು ನಾನು ಕೇಳಬೇಕಾಗುತ್ತದೆ ಬೆನ್ನು ತಟ್ಟಿಕೊಳ್ಳುವುದಕ್ಕೆ ಮೊದಲೇ, ವಾಸ್ತವವನ್ನು ನೀವು ಅರ್ಥ ಮಾಡಿಕೊಳ್ಳಬೇಕು ಮಾನ್ಯ ಉಪಾಧ್ಯಕ್ಷರೆ, ನನಗೊಂದು ಸಮಾಧಾನ ಇದೆ ಇವತ್ತು ನಾನು 70–80 ಮನೆಗಳಿರುವಂತಹ ಹಳ್ಳಿಯಲ್ಲಿ ವಾಸ ಮಾಡುತ್ತಿದ್ದೇನೆ I am proud of it ನಮ್ಮ ಊರಿನ ಜನಸಂಖ್ಯೆ 700–800 ನಾನು ನಿಮಗೊಂದು affidavit ಹಾಕುತ್ತೇನೆ ಕೃಷಿಯನ್ನೇ ನಂಬಿಕೊಂಡು ಬದುಕಿರುವವನು ನಾನು ಏನು ಮಾಡಿದ್ದೀರಿ? ಹೇಳಬೇಕಲ್ಲಾ? ನಾವೂ ಈ ಫೀಲ್ಡ್‌ನಲ್ಲಿ ಬೆಳೆದು ಬಂದಿದ್ದೇವೆ ಸಾರ್ ಕೆಲವರು ನಾವು 'ರೈತರ ಮಕ್ಕಳು' ಎಂದು ಹೇಳಿಕೊಳ್ಳುತ್ತಾರೆ ಕೆಲವರು ಮಣ್ಣಿನ ಮಕ್ಕಳಾಗಿ ಹುಟ್ಟುತ್ತಾರೆ, ಇನ್ನು ಕೆಲವರು ರೈತರ ಮಕ್ಕಳಾಗಿ ಹುಟ್ಟುತ್ತಾರೆ ಆದರೆ ಅವರು ಮಾಡಿದ್ದೇನು ಎಂಬುದು ಮುಖ್ಯ. ಇನ್ನು ಕೆಲವರು ಬೆಂಗಳೂರಿನಲ್ಲಿ ಮಾತನಾಡುತ್ತಾರೆ I am also from agriculturist community and family ಎಂದು ಹೇಳಿಕೊಳ್ಳುತ್ತಾರೆ ಇವರೆಂದೋ ಇವರ ತಾತನ ಕಾಲದಲ್ಲಿ agriculturist family ಯಲ್ಲಿ ಇದ್ದರೆ, ಇವರು ರೈತರಾಗಿ ಬಿಡುತ್ತಾರೆ ಈ

ತರಹ ರೈತರಾಗಿರುವವರೂ ಇದ್ದಾರೆ Black money ಮಾಡಿ, ಬೇರೆ ಬೇರೆ ದಂಧೆಯಲ್ಲಿ ದುಡಿದು, tax ತಪ್ಪಿಸಿಕೊಳ್ಳುವವನು ಇವತ್ತು ರೈತನಾಗಿದ್ದಾನೆ ಆತ 100% ರೈತ ಏಕೆಂದರೆ, agriculture income tax ಇಲ್ಲವಲ್ಲ ಎಲ್ಲಾ ದಂಧೆಗಳನ್ನು ಮಾಡಿ, ಸಾರಾಯಿಯಿಂದ ಹಿಡಿದು, ಸೇಂದಿಯಿಂದ ಹಿಡಿದು, Medical College ನಿಂದ ಹಿಡಿದು, Engineering College ನಡೆಸುವುದು, ಈ ತರಹದ ಎಲ್ಲಾ ದಂಧೆಗಳನ್ನು ಮಾಡುವ ರೈತರು ಒಂದು ಕಡೆ ಇದ್ದಾರೆ ಅವರೂ ತಾವು ರೈತರು ಎಂದು ಕರೆದುಕೊಳ್ಳುತ್ತಾರೆ ಅವರು ಸುಖವಾಗಿದ್ದಾರೆ ಇನ್ನೊಂದು ತರಹದ ರೈತರು, ಒಂದು ಕಡೆ ವ್ಯಾಪಾರವನ್ನೋ, ನೌಕರಿಯನ್ನು ಮಾಡಿಕೊಂಡು ಇನ್ನೊಂದು ಕಡೆಯಲ್ಲಿ ಕೃಷಿ ಮಾಡುವವರಾಗಿದ್ದಾರೆ ಇಲ್ಲೇನು ದುಡ್ಡು ಬರುತ್ತದೆ, ಅದನ್ನು ಅಲ್ಲಿಗೆ ಹಾಕುತ್ತಾರೆ ಸ್ವಲ್ಪ ರೈತರು ಎಂಬುದಕ್ಕೆ ಅವರು ಹತ್ತಿರವಾಗುತ್ತಾರೆ ಸಂಬಳವನ್ನು ತೆಗೆದುಕೊಳ್ಳುವಂತಹ ಮೇಸ್ಟ್ರಿಗೆ, 6–7 ಸಾವಿರ ರೂಪಾಯಿಗಳ ಸಂಬಳ ನಮ್ಮ ಊರಿನಲ್ಲಿದ್ದರೆ ಅವರಿಗೆ ಬೇಕಾಗಿಲ್ಲ ಸಾರ್ 3–4 ಸಾವಿರ ರೂಪಾಯಿಗಳು ಮಾತ್ರ ಸಾಕು ಇನ್ನು everything 2 ಸಾವಿರ ರೂಪಾಯಿಗಳಿಗೆ ತೆಂಗಿನಕಾಯಿ ಕೊಂಡು ಹಾಕುತ್ತಾ ಬಂದು ಬಿಟ್ಟರೆ, ವರ್ಷದ ಕೊನೆಗೆ 30 ಸಾವಿರ ಕಾಯಿಯನ್ನು ಅವರು ಕೊಳ್ಳಬಹುದು ಸನ್ಮಾನ್ಯ ಮುಖ್ಯಮಂತ್ರಿಗಳೇ, ಕೊಬ್ಬರಿ ಬೆಲೆ ಬಿದ್ದು ಹೋಗಿದ್ದು ಅದಕ್ಕೇ ಕಾಯಿ ಆಚೆಗೆ ಹೋಗುತ್ತಿತ್ತು ಕರ್ನಾಟಕದಲ್ಲಿ 30% of the coconuts as such ಆಚೆಗೆ ಹೋಗುತ್ತಿತ್ತು ಇದು ಬಹಳ ಗಹನವಾದ ವಿಚಾರ ಲೋಕಲ್‌ನಲ್ಲಿ ಕಾಯಿಯನ್ನು ಕೊಂಡು ಕೊಬ್ಬರಿಗೆ ಹಾಕಲಿಕ್ಕೆ ಶುರು ಮಾಡಿದರು 100% ಎಲ್ಲರೂ ಕೊಬ್ಬರಿ ಹಾಕಲಿಕ್ಕೆ ಶುರು ಮಾಡಿದರು ಎಳನೀರು ಆಗಿ ಹೋಗುತ್ತಿದ್ದದ್ದು ನಿಂತು ಹೋಯಿತು, ಕಾಯಿ ಆಗಿ ಹೋಗುತ್ತಿದ್ದದ್ದು ನಿಂತು ಹೋಯಿತು ಇಷ್ಟೂ ಕೊಬ್ಬರಿಗೆ ಬರುವುದಕ್ಕೆ ಶುರು ಮಾಡಿ, 50–70 ಸಾವಿರ ಕ್ವಿಂಟಾಲ್ ನಿರೀಕ್ಷೆ ಮಾಡಿದ್ದ ಕಡೆಗೆ ಟನ್‌ಗೆ 3–4 ಲಕ್ಷ ಆಗಿ ಹೋಯಿತು ಇವರೂ ರೈತರೇ! ವ್ಯಾಪಾರ ಮಾಡಿ ಕಾಯಿಯನ್ನು ಕೊಂಡು ಹಾಕಿ ಕೊಬ್ಬರಿಗೆ ಹಾಕುವವರೂ ಸಹ ರೈತರೇ! ಆಕಾಶ ನೋಡಿಕೊಂಡು, ಉಗಾದಿ ಹಬ್ಬದ ದಿವಸ ಚಂದ್ರನನ್ನು ನೋಡಿಕೊಂಡು, ಚಂದ್ರ ಹಾಗೆ ಕಾಣುತ್ತಾನೆ? ಕೆಂಪಗೆ ಕಾಣುತ್ತಾನೋ, ಬೆಳ್ಳಗೆ ಕಾಣುತ್ತಾನ್ನೋ, ಈ ವರ್ಷ ಮಳೆಗಾಲ ಆಗುತ್ತದೆಯೇ

ಎಂದು ಶಾಸ್ತ್ರ ಕೇಳಿಕೊಂಡು ಬದುಕಿದ್ದೇವಲ್ಲಾ, ನಾವೂ ರೈತರೇ ನಿಮ್ಮ ದಮ್ಮಯ್ಯ ಸಾರ್, ನಮ್ಮ 25 ಸಾವಿರ ರೂಪಾಯಿಗಳ ಸಾಲ ಮನ್ನಾ ಮಾಡಿ, 50 ಸಾವಿರಕ್ಕಿಂತ ಜಾಸ್ತಿ ಸಾಲ ತೆಗೆದುಕೊಂಡು ಬಿಟ್ಟಿದ್ದೇವೆ ಎಂದು ಕೇಳುವ ನಾವೂ ಕೂಡ ರೈತರೇ ಯಾವ ರೈತರಿಗೆ ನೀವು programme ಗಳನ್ನು ಹಾಕಿಕೊಂಡಿದ್ದೀರಿ? ಪ್ರಾಧಮಿಕ ವಲಯದಲ್ಲಿ ಯಾವ ರೈತರನ್ನು ಉಳಿಸಲಿಕ್ಕೆ ನೀವು importance ಕೊಟ್ಟಿದ್ದೀರಿ ಎಂಬುದನ್ನು ತಾವು ಹೇಳಬೇಕು ಇನ್ನು ಉಪಾಧ್ಯಕ್ಷರೆ, ನಾನು ಈಗಾಗಲೇ ಹೇಳಿದ್ದೇನೆ ಬಹಳ ದೊಡ್ಡ ತಪ್ಪು ಮಾನ್ಯ ಯಡಿಯೂರಪ್ಪನವರಿಂದ ಆಗಿರುವುದು ಎಂದರೆ, ನೀರಾವರಿಗೆ ಮತ್ತು ಎನರ್ಜಿಗೆ ಇವರು ಹಣದ ವಿನಿಯೋಗವನ್ನು ಕಡಿಮೆ ಮಾಡಿರುವುದು ಅದಕ್ಕೆ ಕಾರಣ, popular programmes ಗೆ ಇವರು ಒತ್ತು ಕೊಟ್ಟಿರುವುದು ಜನ ಮೆಚ್ಚಿಸುವುದಕ್ಕೆ ಹೋಗಿ ಇವತ್ತು ಈ ರೀತಿ ಆಗಿದೆ 'ಜನಗಳು ಮೆಚ್ಚಿಕೊಂಡಿದ್ದಾರೆ, ನಾನು ಮಾಡುತ್ತಿದ್ದೇನೆ ಜನಗಳು ಕೇಳಿದ್ದಾರೆ, ನಾನು ಮಾಡುತ್ತಿದ್ದೇನೆ' ಎಂದು ಅವರು ಹೇಳುತ್ತಾರೆ ಈ ಬಜೆಟ್ approval ಅನ್ನು ಅವರಿಗೆ ಜನಗಳು ಈಗಾಗಲೇ ಕೊಟ್ಟಿದ್ದಾರೆ ನಾವು ಸುಮ್ಮನೆ ಕೆಲಸವಿಲ್ಲದೇ namesake ಇಲ್ಲಿ ಚರ್ಚೆ ಮಾಡುತ್ತಿದ್ದೇವೆ ಏನೋ ಚರ್ಚೆ ಮಾಡಲಿಕ್ಕೆ ನೀವು ಕರೆದಿದ್ದೀರಿ ಎಂದು ಕೇವಲ namesake ನಾವು ಇಲ್ಲಿ ಚರ್ಚೆ ಮಾಡುತ್ತಿದ್ದೇವೆ ಇದರರ್ಥ ಏನು ಎಂಬುದನ್ನು ನೀವೇ ಹೇಳಿ ಸಾರ್ What is your programme in power generation? ? What is the programme of the State? ನಿಮಗಿರುವ dearth ಅನ್ನು, scarcity ಯನ್ನು, ಎಷ್ಟು ವರ್ಷದೊಳಗೆ complete ಮಾಡುತ್ತೀರಿ? ಯಾರಾದರೂ ಬಂದು ಇವತ್ತು ಒಂದು ಉದ್ದಿಮೆ start ಮಾಡುವವನಿಗೆ, ಯಾರಾದರೂ ಬಂದು ನಾನು ಇವತ್ತು ಅಲ್ಲಿ ಒಂದು ಕೈಗಾರಿಕೆ start ಮಾಡುತ್ತೇನೆ ಎಂದರೆ, ಅವನಿಗೆ ವಿದ್ಯುತ್ತೇ ಇಲ್ಲ ನನ್ನ ಹತ್ತಿರ ಆ ರೀತಿ ಕೆಲವರು ಬಂದಿದ್ದರು, ಸನ್ಮಾನ್ಯ Chief Minister ರವರ ಹತ್ತಿರವೂ ಕೆಲವರು ಹೋಗಿರಬಹುದು ಚಿಕ್ಕನಾಯಕನಹಳ್ಳಿಯಲ್ಲಿ ನಾವು Steel Plant ಮಾಡುತ್ತೇವೆ, ಹಿರಿಯೂರಿನ ಹತ್ತಿರ Steel Plant ಮಾಡುತ್ತೇವೆ ಎಂದು ಕೆಲವರು ಬಂದಿದ್ದರು ಏಕೆ ಅವರು ಮಾಡುತ್ತಿಲ್ಲ? ಅವರಿಗೆ ಕೊಡಲು ನಮ್ಮಲ್ಲಿ Electricity ಇಲ್ಲ, ನೀರಿಲ್ಲ ನಮ್ಮ ore ಅಲ್ಲಿಂದ ಹೋಗುತ್ತಿರುವುದನ್ನು ನಾವು

3/9

ತಡೆಯಬಹುದಾಗಿತ್ತು ನಾವು ಏಕೆ ಇಲ್ಲಿ ನಿಂತುಕೊಂಡು ಮಾತನಾಡುವುದಿಲ್ಲ? ಅವರಿಗೆ power ಕೊಡುವ ಶಕ್ತಿ ನಮಗೆ ಇಲ್ಲ ಅವರಿಗೆ ನೀರು ಕೊಡುವ ಶಕ್ತಿ ನಮಗೆ ಇಲ್ಲ ಒಂದು ಪಕ್ಷ ನೀವು ಅಲ್ಲಿ ಏನಾದರೂ ಪವರ್ ಅನ್ನು ಕೊಟ್ಟಿದ್ದರೆ ಗ್ರಾಮೀಣ ಪ್ರದೇಶದ 5–6 ಸಾವಿರ ಹುಡುಗರಿಗೆ ಕೆಲಸ ಸಿಗುತ್ತಿತ್ತು ಒಂದು ಪಕ್ಷ ಅಲ್ಲಿ ನೀವು ಪವರ್ ಕೊಟ್ಟಿದ್ದರೆ ದಿವಸ ನಿಮಗೆ ಒಂದಿಷ್ಟು ಕಬ್ಬಿಣದ ಅದಿರಿನ ಸ್ಟೀಲ್ ಆಗುತ್ತಿತ್ತು, ನೀವು ಅದನ್ನು ಮಾಡಲೇ ಇಲ್ಲ ಸನ್ಮಾನ್ಯ ಮುಖ್ಯಮಂತ್ರಿಗಳಿದ್ದರೆ, ನಾನು ಈಗಲೂ ಕೇಳುತ್ತಿದ್ದೇನೆ, ತಮ್ಮ ಮುಂದೆ ಸಲ್ಲಾಂಕರ್ ಯಾರೋ, "ನಾನು ಅಲ್ಲಿ ಪ್ಲಾಂಟ್ ಮಾಡುತ್ತೇನೆ" ಎಂದು ಅರ್ಜಿಯನ್ನು ಕೊಟ್ಟಿದ್ದಾರೆ ಕನಿಷ್ಟ ಅಷ್ಟಾದರೂ ಸೌಜನ್ಯವನ್ನು ತೋರಿಸಿ ಈ ದೇಶದ ಕಚ್ಚಾ ಪದಾರ್ಥವನ್ನು ಕನ್ವರ್ಟ್ ಮಾಡಿಕೊಡುತ್ತೇವೆಂದು ತಮ್ಮನ್ನು ಯಾರಾದರೂ ಕೇಳಿದರೆ ಅವರಿಗೆ ಸಹಾಯ ಮಾಡಿ Industries ಅನ್ನು ಬೆಂಗಳೂರಿಗೆ ಮಾತ್ರ ನೀವು ಕೊಡಬೇಕಾ? ಬೆಂಗಳೂರು ಅಜುಬಾಜಿನಲ್ಲೇ ನೀವು industrial area ವನ್ನು develop ಮಾಡಬೇಕಾ? ore ಇರುವ ಕಡೆ ನೀವು ಏತಕ್ಕೆ ಕೊಡುತ್ತಿಲ್ಲ? ಬಳ್ಳಾರಿಯಲ್ಲಿ ಏತಕ್ಕೆ ಫ್ಯಾಕ್ಟರಿ ಆಗುತ್ತಿಲ್ಲ? ಚಿಕ್ಕ ನಾಯಕನ ಹಳ್ಳಿಯಲ್ಲಿ ಏತಕ್ಕೆ ಫ್ಯಾಕ್ಟರಿ ಆಗುತ್ತಿಲ್ಲ? ಹೊಸದುರ್ಗದಲ್ಲಿ ಏತಕ್ಕೆ ಆಗುತ್ತಿಲ್ಲ? ಹೊಸಪೇಟೆಯಲ್ಲಿ ಏತಕ್ಕೆ ಆಗುತ್ತಿಲ್ಲವೆಂದು ನೀವು ಹೇಳಬೇಕಲ್ಲ ಕೋಟ್ಯಾಂತರ ಟನ್ ನಮ್ಮ ಹತ್ತಿರ ತೆಗೆದುಕೊಂಡು ಹೋಗುತ್ತಿದ್ದಾರೆ, ನಾವು, ಇಲ್ಲೇನಾದರೂ ಪ್ಲಾಂಟ್‌ಗಳನ್ನು ಮಾಡಿ ಎಂದು ಕಂಡೀಷನ್ ಹಾಕುತ್ತಿದ್ದೇವೆ ನಮಗೆ infrastructure ಕೊಟ್ಟರೆ ಮಾಡುತ್ತೇವೆಂದು ನಿಮ್ಮ ಸರ್ಕಾರಕ್ಕೆ ಅರ್ಜಿಯನ್ನು ಕೊಡುತ್ತಾರೆ, ನಿಮ್ಮ ಪ್ರೋಗ್ರಾಂ ಏನು ಸರ್? ಈ ರಾಜ್ಯದಲ್ಲಿ IT, BT ಎರಡೇ ಈ ರಾಜ್ಯದಲ್ಲಿರುವುದೆಂದು ತಿಳಿದುಕೊಂಡುಬಿಟ್ಟಿರಾ? ನಿಮ್ಮ IT, BT ಇಂದ ಏನಾಗಿದೆ ಎಂದು ಪ್ರಶ್ನೆ ಮಾಡುತ್ತೇವೆ? What is the gain you have got? Export ಆದರೆ ಕೇಂದ್ರ ಸರ್ಕಾರಕ್ಕೆ ಅನುಕೂಲವಾಗುತ್ತದೆ, ಮತ್ತೊಂದು ಆದರೆ ಇಲ್ಲಿ ತಮಿಳುನಾಡು, ಕೇರಳದವರಿಗೂ ನೌಕರಿ ಸಿಗುತ್ತದೆ, ನಮ್ಮ ಹುಡುಗರಿಗೆ ಏನಾಗಿದೆ? ನಾನು inspecton ಗೆ ಹೋದಾಗ ಕರ್ನಾಟಕದ ಹುಡುಗರಿಗೆ ಕನಿಷ್ಟ ಕೆಲಸ ಕೊಡುತ್ತಿದ್ದೀರಾ ಎಂದು ಕೇಳಿದೆ, ಕೊಡುತ್ತಿಲ್ಲ ಸರ್ ಸುಮ್ಮನೆ ಭಾಷಣ, ನಂಜುಂಡಪ್ಪ ವರದಿ ಒಂದಷ್ಟು ದಿವಸ, ಸರೋಜಿನಿ ಮಹಿಷಿ ಒಂದಷ್ಟು ದಿವಸ, ವಾಟಾಳ್

ನಾಗರಾಜ್‌ರವರ ಗಡಿನಾಡು ಪ್ರದೇಶದ ವರದಿ ಒಂದಷ್ಟು ದಿವಸ ಚರ್ಚೆ ಬಿಟ್ಟರೆ, ಯಾವ ಕಾರ್ಯಕ್ರಮಗಳು ನೀವು ಗ್ರಾಮೀಣ ಪ್ರದೇಶಕ್ಕೆ ಕೊಟ್ಟಿದ್ದೇವೆಂದು ಸಮಾಧಾನ ಮಾಡಿಕೊಳ್ಳುವಂತಹ ಸ್ಥಿತಿಯಲ್ಲಿ ಇಲ್ಲ ಈಗ ಅವರು ಸಾಲ ಮನ್ನಾದ್ದು ನಾನು ಮಾಡಿದ್ದು ತಪ್ಪಾ ಎಂದು ಅವರು ಹೇಳಿದರು ನಾನು ತಪ್ಪು ಸರಿಗಳ ವಿಶ್ಲೇಷಣೆಗೆ ಹೋಗುವುದಿಲ್ಲ ಹಿಂದೆಲ್ಲಾ ಸಾಲ ಮನ್ನಾ ಮಾಡಲೇ ಬೇಕೆಂದು ನೀವು ಹೋರಾಟ ಮಾಡುತ್ತಿದ್ದಿರಿ, ನಾವು ಹೋರಾಟ ಮಾಡುತ್ತಿದ್ದೆವು ಏಕೆಂದರೆ, 10 ವರ್ಷ,15 ವರ್ಷ, 16 ವರ್ಷ ರೈತರಿಗೆ ದುಡ್ಡನ್ನು ಕಟ್ಟಲು ಆಗಿರಲಿಲ್ಲ ಹೋದ ವರ್ಷ ನೀವು ಬಹಳ ಒಳ್ಳೆಯ ಕೆಲಸ ಮಾಡಿ ಬಡ್ಡಿಯನ್ನು ಇಳಿಸಿದಾಗ ನಾವು ಮೆಚ್ಚಿಕೊಂಡೆವು Interest Rate ಕಡಿಮೆ ಮಾಡಿದಾಗ ಸುಮಾರು 70–80 ರಷ್ಟು society ಗಳ convert ಆಗಿ ಬಿಡ್ತು ಬಹಳ ಏನು ಬಾಕಿ ಇರಲಿಲ್ಲ ಬಹಳ ಬಾಕಿ ಇರುವವರು ಇವತ್ತು ಅದನ್ನು ಬಳಕೆ ಮಾಡಿಕೊಳ್ಳುವುದಿಲ್ಲ ನೀವು ಇವತ್ತು ಕೊಟ್ಟಿರುವ ಸ್ಕೀಂನಲ್ಲಿ ಬಳಕೆಯಾಗುವುದಿಲ್ಲ ಒಂದು ಅಂಶವನ್ನು ಹೇಳುತ್ತೇನೆ, If at all you are concerned with productivity of the state agriculture, ರೈತರನ್ನು ದಯಮಾಡಿ ಗುಂಪು ಮಾಡಬೇಡಿ, ವರ್ಗೀಕರಣ ಮಾಡಬೇಡಿ, ಈ ಪಾಪವನ್ನು ಮಾಡುವುದನ್ನು ನಿಲ್ಲಿಸಿಬಿಡಿ, ಖಂಡಿತ ನಿಲ್ಲಿಸಿ ಈ ದೇಶದ ಕೃಷಿ ಉತ್ಪತ್ತಿಯನ್ನು ಜಾಸ್ತಿ ಮಾಡಬೇಕೆಂದರೆ ಎಲ್ಲಾ ರೈತರಿಗೂ ನೀವು ಏನಾದರೂ ಸ್ಕೀಂ ತನ್ನಿ, production oriented scheme ತನ್ನಿ, ಕಾಸ್ಟ್ ಕಡಿಮೆ ಮಾಡುವ ಸ್ಕೀಂ ತನ್ನಿ, ನೀರು ಕೊಡುವ ಸ್ಕೀಂ ಅನ್ನು ತನ್ನಿ, ಪವರ್ ಕೊಡುವ ಸ್ಕೀಂ ತನ್ನಿ ಈ ಕಡೆ ಖರ್ಚು ಮಾಡುವ ದುಡ್ಡನ್ನೆಲ್ಲಾ ಈ ಕಡೆಗೆ ವಿನಿಯೋಗ ಮಾಡಿ, ರೈತರ ಮಗ, ನಮ್ಮನ್ನೆಲ್ಲಾ ಉಳಿಸಿ ಹೋದರೆಂದು ಯಡಿಯೂರಪ್ಪನವರನ್ನು ತಲೆ ಮೇಲೆ ಎತ್ತಿಕೊಂಡು ಮೆರೆಯುತ್ತೇವೆ ಈ ರೀತಿ ಪಾಪ್ಯುಲರ್ ಸ್ಕೀಂ ತೆಗೆದುಕೊಂಡು ಬಂದು, ನನ್ನನ್ನು ಅವರು ಮೆಚ್ಚಿಕೊಂಡಿದ್ದಾರೆ, ಇವರು ಮೆಚ್ಚಿಕೊಂಡಿದ್ದಾರೆ, ನನ್ನನ್ನು ಅಲ್ಲಿ ಒಪ್ಪಿದರು, ಇಲ್ಲಿ ಒಪ್ಪಿದರು, ಅದಕ್ಕೆ ಮಾಡಿದ್ದೇನೆ ಎಂದು ನೀವು ಹೇಳಿದರೆ, ಯಡಿಯೂರಪ್ಪನವರೆ, ಶಾಸನಸಭೆಯ ಸದಸ್ಯರಾಗಿ ನಾವು ಖಂಡಿತಾ ಎಂಡಾರ್ಸ್ ಮಾಡುವುದಕ್ಕಾಗುವುದಿಲ್ಲ ಏಕೆಂದರೆ, ಅದರಿಂದ ಉತ್ಪತ್ತಿಯಾಗುವ ಪ್ರಶ್ನೆ ಇಲ್ಲ,

ಅವನು ಮುಂದಿನ ವರ್ಷವು ಸರ್ಕಾರ ಸಾಲವನ್ನು ವಜಾ ಮಾಡುತ್ತಾ ಇಲ್ಲವಾ ಎಂದು ಅವನು ಕಾಯ್ದುಕೊಂಡು ಕುಳಿತುಕೊಳ್ಳುತ್ತಾನೆ ನಿಮ್ಮ ಸಂಸ್ಥೆಗಳು ಖಂಡಿತ ಮುಚ್ಚಿ ಹೋಗುತ್ತವೆ ಈಗೇನು ನೀವು 25 ಸಾವಿರದವರೆಗೆ ಸಾಲ ಮನ್ನಾ ಮಾಡಿದ್ದಿರಿ, ಬರೆ ರೆಸಿಟ್ ಹಾಕಬೇಕು, ಅವನು ದುಡ್ಡು ಕೊಡುವ ಸ್ಥಿತಿಯಲ್ಲಿ ಇಲ್ಲ ನೀವು ಎಲ್ಲಿಯವರೆಗೆ money ಅನ್ನು society ಗೆ transfer ಮಾಡುವುದಿಲ್ಲ, ಅಲ್ಲಿಯವರೆಗೆ ಬಡ್ಡಿಯನ್ನು ಯಾರು ಕಟ್ಟುತ್ತಾರೆಂದು ಲೆಕ್ಕ ಮಾಡಬೇಕಾಗುತ್ತದೆ Society ಗೆ ಯಾರು ಕೊಡುತ್ತಾರೆ, society ಮುಳುಗುತ್ತದೆ ದೊಡ್ಡ ರೈತರಿಗೆ ನೀವು ಮಾಡಿ, ನೀವು 25 ಸಾವಿರ ರೂಪಾಯಿಗಳನ್ನು ಬಿಟ್ಟರೆ 75 ಸಾವಿರವನ್ನು ಅವನ್ನು ತಂದು ತುಂಬುತ್ತಾನೆ, ಅವನೇನಾದರೂ ನಿಮ್ಮ society ಗೆ ದುಡ್ಡು ಕೊಡುತ್ತಾನೆ, 25 ಸಾವಿರ ಉಳಿಸಿಕೊಳ್ಳುವುದಕ್ಕೆ ಎಲ್ಲೋ ಹೊಂದಿಸಿಕೊಂಡು ಬರುತ್ತಾನೆ ಅದಾದರೂ ಮಾಡಿದ್ದರೆ, ಒಂದಿಷ್ಟು society ಗಳ activities start ಆಗುತ್ತಿತ್ತು, ನೀವು ಮಾಡಲಿಲ್ಲ You can receive a single pie, ಏಕೆಂದರೆ 25 ಸಾವಿರ ರೂಪಾಯಿಗಳಿಗೆ 25 ಸಾವಿರ ರೂಪಾಯಿಯನ್ನು ಮನ್ನಾ ಮಾಡಿದ್ದೀರಿ, ಅಸಲು ಮತ್ತು ಬಡ್ಡಿ ಮನ್ನಾ ಮಾಡಿದ್ದೀರಿ, 25 ಸಾವಿರ ರೂಪಾಯಿಯವನು ನಾನೇಕೆ society ಹತ್ತಿರ ಹೋಗಬೇಕು ಎಂದು ಹೇಳುತ್ತಾನೆ Society Secretary ಕುಳಿತುಕೊಳ್ಳಬೇಕು, ಜಮಾ ಬರೆದುಕೊಳ್ಳಬೇಕು, ನಿಮ್ಮ society ಯಿಂದ subsidy ತೆಗೆದುಕೊಳ್ಳುವವರೆಗೆ ಕಾಯಬೇಕು 1 ಲಕ್ಷದವನಿಗೆ ಮನ್ನಾ ಮಾಡಿದರೆ 75,000 ಅವರಿಗೆ ರಿಕವರಿ ಬರುತ್ತದೆ, ನೀವು ಅದನ್ನು ಮಾಡಬೇಕು ವಿ ಪಿ ಸಿಂಗ್‌ರವರು ಇಡೀ ದೇಶದಲ್ಲಿ 10,000 ರೂಪಾಯಿಗಳನ್ನು ಎಲ್ಲರಿಗೂ ಮನ್ನಾ ಮಾಡಿದರು ಹಾಗಾದರೆ ಅದು ರೈತರ ಕಾರ್ಯಕ್ರಮವಲ್ಲವೇ? ಯಾರೂ ಮಾಡಲಿಲ್ಲ ನೀವು 25,000 ಸಾಲ ಮನ್ನಾ ಮಾಡಿದ್ದೇವೆಂದರೆ, ದಯಮಾಡಿ ಎಲ್ಲರಿಗೂ ಮಾಡಿ ವಿ ಪಿ ಸಿಂಗ್ ಕಾಲದಲ್ಲಿ 10,000 ರೂಪಾಯಿಗಳೆಂದರೆ, ಅದರ ವ್ಯಾಲ್ಯು ಎಷ್ಟಾಗುತ್ತಿತ್ತು? ದಯಮಾಡಿ, ಇದನ್ನು ನೀವು ಸೀರಿಯಸ್ ಆಗಿ ತೆಗೆದುಕೊಳ್ಳಲೇಬೇಕು ಇನ್ನು ಬಹಳ ಕಾರ್ಯಕ್ರಮಗಳು, ಚುನಾವಣೆ ಆಧಾರಿತವಾಗಿದೆ ಎಂದು ನಮ್ಮ ಅಭಿಪ್ರಾಯ ರಾಜ್ಯದ ಅಭಿವೃದ್ಧಿ ಆಧಾರಿತವಾದ ಕಾರ್ಯಕ್ರಮವಲ್ಲ ಅಥವಾ ಸ್ಪರ್ಧಾತ್ಮಕ ಕಾರ್ಯಕ್ರಮಗಳಾಗಿವೆ ಸ್ಪರ್ಧೆಯಲ್ಲಿ

ನೀವು ಮುಂದಿರಬೇಕೋ, ಜೆಡಿಎಸ್ ಮುಂದಿರಬೇಕೋ ಎಂದಾಗಿದೆ ಚೆಲುವರಾಯಸ್ವಾಮಿಯವರೇ, ಇದು ರಿಲೇ ರೇಸ್ ಆಡುವುದಕ್ಕೆಂದು ಹೋಗಿ, ನೀವು ನೀವೇ ಮಾಡಿಕೊಂಡಿರುವ ಸ್ಪರ್ಧೆ ಯಾವ್ಯಾವ ಕಾರ್ಯಕ್ರಮಕ್ಕೆ ಎಷ್ಟೆಷ್ಟು ಹಣವನ್ನು ನೀವು ಒದಗಿಸಬೇಕಾಗಿತ್ತೊ, ಅದನ್ನು ನೀವು ಹೆಚ್ಚು ಕಡಿಮೆ ಮಾಡಿಕೊಂಡು ಬಂದು ಬಿಟ್ಟಿದ್ದಿರಿ ನನಗೆ ಎತ್ತು ಕಟ್ಟುವ ಕೆಲಸ ಮಾಡುವುದು ಗೊತ್ತಿಲ್ಲ ಆದರೆ ಎಲ್ಲೋ ಒಂದು ಕಡೆ ಅನ್ನಿಸುತ್ತದೆ, ವೈಯಕ್ತಿಕವಾಗಿ ಯಾವ ಇಲಾಖೆ ನಿಮ್ಮ ಮೇಲೆ ಪ್ರಭಾವ ಬೀರುವುದಕ್ಕೆ ಸಾಮರ್ಥ್ಯವಿತ್ತೊ, ಆ ಇಲಾಖೆಗೆ ಸ್ವಲ್ಪ ಜಾಸ್ತಿ ದುಡ್ಡು ಸಿಕ್ಕಿಬಿಟ್ಟಿದೆ, ಹಿನ್ನೆಲೆಯೆಲ್ಲಾ ಗೊತ್ತಿಲ್ಲ ಆದರೂ ಕೂಡ ನಿಮ್ಮ ಶಿಷ್ಯನೆಂದು ತಿಳಿದುಕೊಂಡಿದ್ದೆ, ಅವರಿಗೆ ಆ ಖಾತೆಯನ್ನು ಕೊಟ್ಟು ನೀವು ಸಿರಿಕಲ್ಚರ್ ಬಗ್ಗೆ ನೋಡಲೇ ಇಲ್ಲ ಸಿರಿಕಲ್ಚರ್ ಗೆ ಏನು ದುಡ್ಡನ್ನು ಕೊಟ್ಟಿದ್ದಿರೆಂದು ಕೇಳಿದರೆ, ಪಾಪ ನಿಮ್ಮ ಮಂತ್ರಿ ಏನು ಓಡಾಡುವುದಕ್ಕಾಗುತ್ತದೆ? ಸಿರಿಕಲ್ಚರ್ ಇಲಾಖೆಗೆ ನಿಮ್ಮ ಅನುದಾನವೇನು ಸರ್? ಅಗ್ರಕಲ್ಚರ್ ನಲ್ಲಿ ಹೊಸ activities ಏನು ಸರ್? ಅರ್ಟಿಕಲ್ಚರ್ ಗೆ ಸಂಬಂಧಿಸಿದಂತೆ ಕಳೆದ ಹಾಗೂ ಈ ಸಾರಿಯ ಎರಡು ನಿಮ್ಮ ಭಾಷಣಗಳನ್ನು ಇಟ್ಟುಕೊಂಡಿದ್ದೇವೆ, ಹೋದ ವರ್ಷ ಇಲ್ಲಿ ತಾವೇನು ಭಾಷಣವನ್ನು ಮಾಡಿದ್ದಿರಿ, ಅದೇ ಈ ವರ್ಷವು ಪುನರಾವರ್ತನೆಯಾಗಿದೆ ಅದೇ ಸೈಕಲ್, ಅದೇ ಡ್ರಿಪ್ ಇರಿಗೇಷನ್, ಅದೇ 75% ರೈತರಿಗೆ ಬೀಜಗಳ ಮೇಲೆ ಸಬ್ಸಿಡಿ, ಹುಡುಗರಿಗೆ ಅದೇ ಚೆಲುವರಾಯ ಸ್ವಾಮಿಯವರ ರಿಯಾಯಿತಿ ಬಸ್ ಪಾಸ್ ಅಷ್ಟನೆ In this budget, you must spell out some new programmes ಹೊಸದಾಗಿ ಏನಾದರೂ ಇದ್ದರೆ, ಸರಿ ತಪ್ಪು ಎಂದು ಇಲ್ಲಿ ವ್ಯಾಖ್ಯಾನಿಸಬಹುದು ಈ ವರ್ಷ ಇಷ್ಟು ಖರ್ಚಾಯಿತಾ ಮುಂದಿನ ವರ್ಷ ಅದೇ ಎಲ್ಲಾ ಕಾರ್ಯಕ್ರಮಗಳ ಪುನರಾವರ್ತನೆಯನ್ನು ತಾವು ಇಲ್ಲಿ ನಿಂತುಕೊಂಡು ಓದಿದ್ದಿರಿ

ಶ್ರೀ ಎಸ್ ರಾಜೇಂದ್ರನ್ – ಅದಕ್ಕೋಸ್ಕರ ಜಂಟ್ಸ್ ಗೆಲ್ಲಾ ಬೈಸಿಕಲ್ ಕೊಡುತ್ತೇವೆಂದು ಹೇಳಿದ್ದಿರಿ, ರೇಸ್ ಸೈಕಲ್ಲಾದರೂ ಕೊಡಿ ಅವರೇನು ಹೇಳಿದರೆಂದರೆ, ಲಾಸ್ಟ್ ಟೈಮ್ ಅದೇ ಸೈಕಲ್, ಈ ಸಾರಿಯು ಅದೇ ಸೈಕಲ್, ಜೆಂಟ್ಸ್ ಗೆ ಕೊಡುವಾಗ ಒಂದು ಟ್ರೈಸಿಕಲ್ ಕೊಡಿ ಅಥವಾ ರೇಸ್ ಸೈಕಲ್ ಕೊಡಿ, ಸೈಕಲ್ ಚೇಂಜ್

ಮಾಡಿ, ಆಗ ನಿಮಗೆ ಗಾಂಭೀರ್ಯ ಬರುತ್ತದೆ, ನೋಡಿ, ಮಾಧುಸ್ವಾಮಿ ಹೇಳಿದ ತಕ್ಷಣ ಸೈಕಲ್ ಕೊಟ್ಟುಬಿಡಿ

ಶ್ರೀ ಜೆ ಸಿ ಮಾಧುಸ್ವಾಮಿ – ನಾನು ಹೇಳಿದೆ ಎಂದು ಕೊಡುವುದು ಬೇಡ, ಅವರಿಗೆ ಯಾರು ಹೇಳುವವರಿದ್ದಾರೆ, ಅವರು ಹೇಳಿದಾಗಲಾದರು, ಕೊಡಲಿ ಚೆಲುವರಾಯ ಸ್ವಾಮಿಯವರೆ, ತಾವು ಅವರಿಗೆ ಹೇಳುವುದು ಬೇಡವೆ? ಇನ್ನು ನೇಕಾರರದು, ತಾವು ಹೋದ ಸಾರಿ ಪ್ರೊಗ್ರಾಂ ಡಿಕ್ಲೇರ್ ಮಾಡಿದಿರಲ್ಲಾ, ಎಷ್ಟು ಅನುಷ್ಠಾನವಾಗಿದೆ ಎಂದು ಕೇಳುತ್ತೇನೆ ಈ ರಾಜ್ಯದಲ್ಲಿ ಮೇಜರ್ ಕಸಬುದಾರರು ಇದ್ದಿದ್ದು ನೇಕಾರರದ್ದು ಏನು ಆಗಲಿಲ್ಲ, ನಾವೇ ನಿಂತು ಕೊಂಡು ಕೇಳಿದೆ ನಿಮ್ಮ ಬಾಗಲಕೋಟೆ ಜಿಲ್ಲಾ ನೇಕಾರರು ನನಗೆ ಬರೆದು ಕೊಡುತ್ತಾ, 2000 ದಿಂದ ಈಚೆಗೆ ಪಡೆದಿರುವ ಸಾಲವನ್ನು ಮನ್ನಾ ಮಾಡಿಸಿದ್ದಾರೆ, ಅವರು ಸಾಲ ಮನ್ನಾ ವ್ಯಾಪ್ತಿಗೆ ಬರುವುದಕ್ಕಾಗುವುದಿಲ್ಲ, ಅದಕ್ಕಾಗಿ ನೇಕಾರರಿಗೂ ಚಾಲ್ತಿ ಸಾಲಿನಲ್ಲಿ 25,000 ಕೊಡಿಸಿ ಎನ್ನುತ್ತಾರೆ ನೀವು ಹೋದ ಸಾರಿ ಏನು ಹೇಳಿದಿರಿ? ಅದರಲ್ಲಿ ಪಟ್ಟಣ ಸಹಕಾರ ಬ್ಯಾಂಕ್ ಮೂಲಕ 4% ದರದಲ್ಲಿ ಸೌಲಭ್ಯ ಕಲ್ಪಿಸುವ ಭರವಸೆಯನ್ನು ನೀಡಲಾಗಿತ್ತು ಅದು ಇನ್ನು ಜಾರಿಗೆ ಬಂದಿಲ್ಲ, ಈಗ ನೇಕಾರರು ಸಾಲ ಪಡೆಯುವ ಪ್ರಶ್ನೆ ಇಲ್ಲ? ನೇಕಾರರಿಗೆ ವಿಶೇಷ ಪ್ಯಾಕೇಜ್ ಎಂದು ನೀವು ಬಜೆಟ್‌ನಲ್ಲಿ ಓದುತ್ತೀರಿ, ನೇಕಾರರಿಗೆ ಏನು ಮಾಡಿದಿರಿ ಎಂಬುದು ನಮಗೆ ಗೊತ್ತಾಗಬೇಕಲ್ಲ? ಸರ್, ಇವತ್ತು ನೇಕಾರರು ನೆಲಕಚ್ಚು ಬಿಟ್ಟಿದ್ದಾರೆ, ಅವರಿಗೆ ನೀವು ಏನು ಮಾಡಲಿಲ್ಲ ನಾವು ನಿಮಗೆ ಡಿಮ್ಯಾಂಡ್ ಮಾಡಿದೆವು KSFC ನಲ್ಲಿ ನೇಕಾರರು ಏನೂ ಸಾಲ ತೆಗೆದುಕೊಂಡಿದ್ದಾರೆ, ಅವರಿಗೊಂದು ವಿಶೇಷವಾದ ಪ್ರಾಜೆಕ್ಟ್ ತಂದು, ಏನಾದರೂ ಮಾಡಿ ಸೆಟ್ಲಮೆಂಟ್ ಗೆ ಅವಕಾಶ ಮಾಡಿಕೊಡಿ, ಮತ್ತೆ ಬಡ್ಡಿ ಮನ್ನಾ ಮಾಡಿ ಎಂದು ಹೇಳಿದ್ದೆವು, ಮಾಡಲಿಲ್ಲ ಈ ಸಾರಿ KSFC ನಲ್ಲೇ ಸೆಟ್ಲಮೆಂಟ್ ಜೊತೆಗೆ ಬಡ್ಡಿ ಬಿಡುತ್ತೇವೆಂದು ಹೇಳಿದ್ದಾರೆ, ಅವರು ನೇಕಾರರಿಗೆಂದು ಹೇಳಲಿಲ್ಲ ನೇಕಾರರಿಗೆ ಏನು ಮಾಡಿದ್ದಿರೆಂದು ನಾನು ನಿಮಗೆ ಈಗ ಕೇಳುತ್ತೇನೆ ಎಷ್ಟು ಕಸಬುದಾರರು ಇರಬಹುದು? ನೀವು, ಬಡಗಿ, ಕಮ್ಮಾರ, ಕುಂಬಾರ, ಸವಿತ ಸಮಾಜ, ಅಕ್ಕಸಾಲಿ ಸಮಾಜ ಇವೆಲ್ಲದರ ಬಗ್ಗೆ ಹೇಳುತ್ತಿರಿ, ಈ ರಾಜ್ಯದ ಎಲ್ಲಾ ಜನಗಳಿಗೆ ನೀವು

ಕೊಟ್ಟಿರುವ ಹಣದಲ್ಲಿ ಕೊಡಗಿಗೊ, ಸಕಲೇಶಪುರಕ್ಕೊ ಹೋಗಿ ಜೇನು ತುಪ್ಪದ ಬಾಟಲ್ ಅನ್ನು ತೆಗೆದುಕೊಂಡು ಬಂದು ನೀವು ಕೊಟ್ಟಿರುವ ದುಡ್ಡು, ಒಂದೊಂದು ತೊಟ್ಟು ತುಟಿಗೆ ಹಚ್ಚಿಕೊಳ್ಳುವುದಕ್ಕಾಗುವುದಿಲ್ಲವಲ್ಲ ಸುಮ್ಮನೆ ಒಂದು ತೊಟ್ಟು ಜೇನು ತುಪ್ಪವನ್ನು ಬಾಯಿಗೆ ಇಟ್ಟು ನಾವು ಬಜೆಟ್‌ನಲ್ಲಿ ಕೊಟ್ಟಿದ್ದೇವೆ, ಸಿಹಿಯಾಗಿದೆ ಏನೊ ನೋಡಪ್ಪ ಎನ್ನುವುದು 10 ಕೋಟಿ ದುಡ್ಡಿಟ್ಟು ಇಷ್ಟು ದೊಡ್ಡ ಸಮಾಜಗಳ ಬಗ್ಗೆ ಅಸೆಂಬ್ಲಿಯಲ್ಲಿ ವ್ಯಾಖ್ಯಾನ ಮಾಡಿದರಲ್ಲ 500 ರೂಪಾಯಿ ಇದ್ದರೆ, ನಾನು 5,000 ರೂಪಾಯಿಯನ್ನು ಕೊಡುತ್ತೇನೆ ಎಂದು ಒಂದು ಬ್ಯೂಟಿ ಪಾರ್ಲರ್ ಮಾಡಿಕೊ, ಎಂದು ಹೇಳುತ್ತೀರಿ ಹಳ್ಳಿ ಹಳ್ಳಿಗೆ ಬ್ಯೂಟಿ ಪಾರ್ಲರ್ ಅಂತೆ

ಶ್ರೀ ವಾಟಾಳ್ ನಾಗರಾಜ್ – ಇರುವ ಕೂದಲೆಲ್ಲಾ ತೆಗೆದುಬಿಡಬೇಕು

[ಈ ಸಂದರ್ಭದಲ್ಲಿ ಮಾನ್ಯ ಸದಸ್ಯರಾದ ಸಿದ್ದುಸವದಿಯವರು ಮಾತನಾಡಲು ಎದ್ದು ನಿಂತರು]

ಶ್ರೀ ಜೆ ಸಿ ಮಾಧುಸ್ವಾಮಿ – ತಾವು ಮಂತ್ರಿಯಾದಾಗ ಉತ್ತರವನ್ನು ಹೇಳಿವಿರಂತೆ, ಅವರು ಕೇಳುತ್ತಾರೆ, ನಾವು ಹೇಳುತ್ತಿದ್ದೇವೆ It is my right I need not talk in your words ಅದು ನನ್ನ ಇಷ್ಟ ಟೀಕೆ ಮಾಡುವುದು ನನ್ನ ಹಕ್ಕು ಉತ್ತರ ಹೇಳುವುದಕ್ಕೆ ಅವರಿದ್ದಾರೆ ದಿನಾ ಇದೇ ಪ್ರಾರಂಭವಾಗಿದೆ ಮಂತ್ರಿಗಳು ಉತ್ತರ ಹೇಳುವ ಹಾಗಿಲ್ಲ MLA ಗಳು ಉತ್ತರ ಹೇಳುವುದಾದರೆ ನಾನು ಮಾತನಾಡುವುದಿಲ್ಲ I am here to criticize It is my duty ಇಲ್ಲಿ ಮಾತನಾಡುವುದಕ್ಕಾಗಿಯೇ ಜನ ನನ್ನನ್ನು ಆರಿಸಿ ಕಳುಹಿಸಿರುವುದು

ಅಧ್ಯಕ್ಷರು – ಮಾಧುಸ್ವಾಮಿಯವರೇ, ಒಂದು ಗಂಟೆ ಐದು ನಿಮಿಷಗಳ ಕಾಲ ನೀವು ಮಾತನಾಡಿದ್ದೀರಿ

ಶ್ರೀ ಜೆ ಸಿ ಮಾಧುಸ್ವಾಮಿ – ಮಾನ್ಯ ಅಧ್ಯಕ್ಷರೆ, ನಾನು ಬಹಳ ನೊಂದುಕೊಳ್ಳುವುದು, ಏನೆಂದರೆ ಗೃಹ ಇಲಾಖೆಯನ್ನು ನೀವು strenghthen ಮಾಡಬೇಕಾಗಿತ್ತು ನಾವು ಬೆಂಗಳೂರು ಒಳಗೆ enter ಆಗಬೇಕಾದರೆ ಒಂದು ಗಂಟೆ ತೆಗೆದುಕೊಳ್ಳುತ್ತದೆ Police ನವರು ಇಲ್ಲ Volume of vehicles 24

ಸಾವಿರವೋ 48 ಸಾವಿರವೋ Two wheelers ಬೆಂಗಳೂರಿನಲ್ಲಿವೆ ಎಂದು ನೀವೇ ಹೇಳುತ್ತೀರಿ 14 ರಿಂದ 15 ಲಕ್ಷ ವೆಹಿಕಲ್ಸ್ ಬೆಂಗಳೂರಿನಲ್ಲಿ ಇವೆ ಎಂದು ನೀವೇ ಹೇಳುತ್ತೀರಿ ಇವತ್ತು ಒಂದೊಂದು traffic signal ನಲ್ಲಿ police ನವರಿಗಾಗಿ ನೀವು ಹುಡುಕಬೇಕಾಗುತ್ತದೆ ನಾನು ಒಂದು ಸಾರಿ ಅವರಿಗೆ ಹೇಳಿದ್ದೆ ಗಾರ್ಮೆಂಟ್ಸ್‌ಗಳಿಗೆ ಹೋಗುವ ಹೆಣ್ಣುಮಕ್ಕಳು ಒಂದೊಂದು ಆಟೋದಲ್ಲಿ 10,12,13 ಜನ ಹೀಗೆ ತುಂಬಿಕೊಂಡು ಹೋಗುತ್ತಾರೆ Police ನವರು ಕೇಳುವ ಸ್ಥಿತಿಯಲ್ಲಿಲ್ಲ Police force ಅನ್ನು strengthen ಮಾಡಲಿಲ್ಲ ನಮ್ಮ ಕಡೆ ಬಂದರೆ mining operations ಎಷ್ಟು ನಡೆಯುತ್ತಿದೆ, ಅದನ್ನು ಕಾಯಬೇಕಾದುದು ಯಾರು? ನಮ್ಮ ಕಡೆ ಒಂದು station ಬೇಕಿತ್ತು ಎಲ್ಲೋ ಒಂದು ಕಡೆ ಕಿಬ್ಬನ ಹಳ್ಳಿ ಕ್ರಾಸ್‌ನಲ್ಲಿ station ಬೇಕು ಇನ್ನೊಂದು ಕಡೆ ಹುಳಿಯಾರದ ಹತ್ತಿರ ಒಂದು station ಬೇಕು ಈ ವರ್ಷ ನೀವು ಒಂದೇ ಒಂದು station ಗೆ provision ಮಾಡಲಿಲ್ಲ ಮಾನ್ಯ ಚೆಲುವರಾಯಸ್ವಾಮಿಯವರೇ, ಇಡೀ ಕರ್ನಾಟಕ ರಾಜ್ಯದಲ್ಲಿ ನಿಮ್ಮ ಸರ್ಕಾರ ಒಂದು ಹೊಸ police station open ಮಾಡಲಿಕ್ಕೆ provision ಮಾಡಲಿಲ್ಲ ಎರಡನೆಯದು, ಹಳೆಯ police station ಗಳು town ಗಳಲ್ಲಿದ್ದವು ತಾಲ್ಲೂಕು headquarter ಗಳಲ್ಲಿ ಇತ್ತು ಅಲ್ಲಿ 21 ಜನ Personnel ಹೊಸ station ಗಳನ್ನು ಚಿಕ್ಕ ಚಿಕ್ಕ area ಗಳಿಗೆ ಮಾಡುತ್ತೀರಿ, ಅಲ್ಲಿ 41 staff ಇದನ್ನು ನೀವು ಎಲ್ಲಿಯಾದರೂ ನೋಡಿದ್ದೀರಾ? ಬರೀ ಮಂತ್ರಿಗಳನ್ನು ಕಾಯುವುದಕ್ಕೆ, ದೇವರಿಗೆ ಕಾಯುವುದಕ್ಕೆ, ಜಾತ್ರೆ ಕಾಯುವುದಕ್ಕೆ, ಕಾಲೇಜಿಗೆ ಹೋಗಿ ಬರುತ್ತಿರುವ ಹೆಣ್ಣು ಮಕ್ಕಳಿಗೆ ಕಾಯುವುದಕ್ಕೆ ನಮ್ಮ ಬಳಿ police ನವರು ಇಲ್ಲ ಇನ್ನು law and order maintenance ಗೆ ಎಲ್ಲಿಂದ ತರುತ್ತೀರಿ? ದಯಮಾಡಿ ಆ force ಅನ್ನು strengthen ಮಾಡಲೇಬೇಕು ತಾವು ಹೊಸ police station ಕೊಡಲೇಬೇಕು ಇನ್ನು fire stations ಬಗ್ಗೆ ನೀವು ಒಂದು policy ಮಾಡಬೇಕು ಎಷ್ಟು ಕಿ ಮಿ ಗೆ ಒಂದು fire station ಇರಬೇಕು, ಆಕಸ್ಮಿಕವಾದ ಒಂದು ಘಟನೆ ನಡೆದಾಗ ಆ ಲಾರಿ ಎಷ್ಟು ನಿಮಿಷದಲ್ಲಿ ಎಷ್ಟು ದೂರ ಹೋಗಬಹುದು ಎಂಬ ಬಗ್ಗೆ ಒಂದು ವೈಜ್ಞಾನಿಕವಾದ ತೀರ್ಮಾನಕ್ಕೆ ನೀವು ಬರಬೇಕು It may be unproductive ಆದರೆ ಅವರು ಯಾರೋ

ಬದುಕಿಕೊಳ್ಳುತ್ತಾನೆ ಮನೆ ಸುಟ್ಟು ಹೋಗುವವನು, ಮೆದೆ ಸುಟ್ಟು ಹೋಗುವವನು, ಅಂಗಡಿ ಸುಟ್ಟು ಹೋಗುವವನು ಬದುಕಿಕೊಂಡರೆ ಅದು ದೇಶದ ಆಸ್ತಿ ಎಂದು ನೀವು ಭಾವಿಸಿಕೊಳ್ಳಬೇಕು ನಾನು ನಿಮಗೆ ಮೊನ್ನೆ ಕೇಳಿದೆ General Insurance Company ಯವರು ನಿಮಗೆ 25 ಕೋಟಿ ರೂಪಾಯಿಗಳನ್ನು ಕೊಟ್ಟರು Fire station ಮಾಡಿ, ನಾವು insurance ಕೊಡುವ claims ಆದರೂ ಕಡಿಮೆ ಆಗಲಿ, ಅದಕ್ಕಾಗಿ ನಮ್ಮ assistance ಕೊಡುತ್ತಿದ್ದೇವೆ ಎಂದು ಹೇಳಿ ಕೊಟ್ಟರು ಮಾನ್ಯ ಯಡಿಯೂರಪ್ಪನವರೇ, ನೀವು Finance Department ಮೇಲೆ ಹೇಳಿದಿರಿ, ಆ ದುಡ್ಡು ಎಲ್ಲಿ ಹೋಯಿತು? ಏಕೆ fire stations ಆಗಲಿಲ್ಲ? ಇದು ನಿಮ್ಮ ಕಾಲದ್ದು ಅಲ್ಲ ನೀವೇನು personal ಆಗಿ ತೆಗೆದುಕೊಳ್ಳಬೇಕಾಗಿಲ್ಲ ಆ ದುಡ್ಡನ್ನು ಯಾವ ಕಡೆ ಬದಲಿ ಮಾಡಿದ್ದಾರೆ, ದಯಮಾಡಿ ವಸೂಲಿ ಮಾಡಿ, ನಮಗೆ ಒಂದೊಂದು ರೂರಲ್ ತಾಲ್ಲೂಕಿನಲ್ಲಿ ಒಂದೊಂದು fire staton ಗಳನ್ನು ತಾವು ಒದಗಿಸಬೇಕು ಯಾರೋ ಕೊಟ್ಟಿರುವಂತಹ ದಾನದ ದುಡ್ಡನ್ನು ನಮಗೆ ಕೊಡುವುದಲ್ಲ, ಆ ದುಡ್ಡಿನಲ್ಲಿಯೂ fire station ಮಾಡುವುದಿಲ್ಲವೆಂದು ಹೇಳಿದರೆ, ಈ ರಾಜ್ಯದ ಗತಿ ಏನು? ಇದು ನಮಗೆ ಅರ್ಥವಾಗಿಲ್ಲ Fire station ಮಾಡುವ ಕಡೆ ನೀವು ಆದ್ಯತೆಯನ್ನು ಕೊಡಬೇಕು ಬಂದೀಖಾನೆಗಳ ಸ್ಥಿತಿ ಚೆನ್ನಾಗಿ ಇಲ್ಲ ಇವತ್ತು ಜೈಲಿನಲ್ಲಿ ಏನು inmates ಇದ್ದಾರೆ, ಅವರಿಗೆ ಸ್ವಲ್ಪ ಊಟ ತಿಂಡಿ ವಗೈರೆ ಚೆನ್ನಾಗಿ ಕೊಡಬೇಕು ತಾವು ಸ್ವಾತಂತ್ರ್ಯ ಹೋರಾಟಗಾರರಿಗೆ 1500 ರಿಂದ 3,000 ರೂಪಾಯಿಯವರೆಗೆ ಜಾಸ್ತಿ ಮಾಡಿದಿರಿ, ಗೋವಾ ಹೋರಾಟಗಾರರಿಗೆ 1000 ರೂಪಾಯಿಯಿಂದ 2,000 ರೂಪಾಯಿ ಮಾಡಿದಿರಿ, ಕಲಾವಿದರು ನಿಮಗೇನು ಮಾಡಿದ್ದರು? ಈ ರಾಜ್ಯ ಸುವರ್ಣ ಕರ್ನಾಟಕ ಆಚರಣೆ ಮಾಡುತ್ತಿದೆ ಒಬ್ಬನೇ ಒಬ್ಬ ಅಶಕ್ತ ಕಲಾವಿದನಿಗೆ ಒಂದು ಮಾಶಾಸನ ಮಂಜೂರಾಗಿಲ್ಲ ಒಬ್ಬನೇ ಒಬ್ಬ ಅಶಕ್ತ ಕಲಾವಿದನಿಗೆ 10 ರೂಪಾಯಿ, 100 ರೂಪಾಯಿ ಜಾಸ್ತಿ ಮಾಡುತ್ತೇವೆಂದು ನೀವು ನಿಮ್ಮ ಬಜೆಟ್ ಪುಸ್ತಕದಲ್ಲಿ ಓದಲಿಲ್ಲ ಸುವರ್ಣ ಕರ್ನಾಟಕದಲ್ಲಿ ಸೇವೆ ಮಾಡಿರುವವರು ಯಾರು ನಾವೇ ಯೋಚನೆ ಮಾಡಬೇಕು India ದೇಶದ Government freedom fighter ಗೆ ಇನ್ನೊಂದಿಷ್ಟು ಜಾಸ್ತ ಕೊಡಿ ನೀವು ನಮ್ಮ ಕನ್ನಡಕ್ಕೋಸ್ಕರ ದುಡಿದವರಿಗೆ ಜೀವ ತೇಯ್ದವರಿಗೆ ಏನು ಮಾಡಿದ್ದೀರಿ?

ಅದೊಂದು format ಕೂಡ ಬದಲಾವಣೆ ಮಾಡಬೇಕು ಮಾನ್ಯ ಉಪ ಮುಖ್ಯಮಂತ್ರಿಗಳೆ, 3500 ರೂಪಾಯಿಗಿಂತ ಕಡಿಮೆ ವರಮಾನ ಇದ್ದರೆ, 70 ವರ್ಷ ದಾಟಿದರೆ ಅಶಕ್ತ ಕಲಾವಿದರು ಅಂತೆ 3500 ರೂಪಾಯಿಗೆ ಯಾರಾದರೂ ತಹಶೀಲ್ದಾರ್ ಇವತ್ತು Income certificate ಕೊಟ್ಟು ನೌಕರಿ ಮಾಡುವುದಕ್ಕಾಗುತ್ತಾ? Annual income 3500 ರೂ ಇದು ವರ್ಷದ್ದು ತಿಂಗಳದ್ದಲ್ಲ ತಹಶೀಲ್ದಾರ್ ಬಂದು ನಮಗೆ ಹೇಳುತ್ತಾರೆ ನಾವು ಈ certificate ಕೊಡುವುದಕ್ಕಾಗುವುದಿಲ್ಲ, ದಿವಸಕ್ಕೆ 12 ರೂಪಾಯಿ ಅವನಿಗೆ ಆದರೆ ನಾವು ಮನೆಗೆ ಹೋಗಿಬಿಡುತ್ತೇವೆ ಸರ್ ವರ್ಷದ ಆದಾಯ 3500 ರೂಪಾಯಿಗೆ certificate ಕೊಡುವುದಕ್ಕಾಗುವುದಿಲ್ಲವೆಂದು ಹೇಳುತ್ತಾರೆ ತಾವು ದಯಮಾಡಿ ಆ ಬಾಬ್ತಿನಲ್ಲಿ ಹೆಚ್ಚು ಹಣವನ್ನು ಇಡಬೇಕು ನೀವು ಏನಾದರೂ ಮಾಡಿ ಈ ನಾಡಿಗೆ ಸಾಹಿತ್ಯಾತ್ಮಕವಾಗಿ ಮತ್ತು ಸಾಂಸ್ಕೃತಿಕವಾಗಿ ಸೇವೆ ಮಾಡಿದವರನ್ನು ಗೌರವಿಸಬೇಕು 70 ವರ್ಷವನ್ನು ಏನಾದರೂ ಮಾಡಿ 60 ವರ್ಷಕ್ಕೋ 58 ವರ್ಷಕ್ಕೋ ಇಳಿಸಬೇಕಾಗುತ್ತದೆ ಅದನ್ನು ನೀವು ದಯಮಾಡಿ ಮಾಡಲೇಬೇಕಾಗಿದೆ ಏಕೆಂದರೆ ನಮಗೆ ಒತ್ತಾಯ ಇದೆ ನೀವು ಅದನ್ನು ಮಾಡಲಿಲ್ಲವೆಂದರೆ ನಮ್ಮ ಭಾಷೆ ಮತ್ತು ಸಂಸ್ಕೃತಿ ಮೇಲೆ ನಿಮಗೇನು ಪ್ರೇಮ ಇರಬಹುದು, ನಿಮಗೇನು ಅಭಿಮಾನ ಇರಬಹುದು, ಅದನ್ನು ಜನರೇ ತೀರ್ಮಾನ ಮಾಡಲಿ ಎಂದು ಬಿಟ್ಟು ಬಿಡುತ್ತೇನೆ Pay Commission report ಅನ್ನು ತಾವು ಒಪ್ಪಿಕೊಂಡಿದ್ದೀರಿ ಎಂದು ಭಾಷಣ ಮಾಡಿದ್ದೀರಿ ನಮ್ಮ ದುರ್ದೈವ, ಆಕಸ್ಮಾತ್ ನಾವು news ನೋಡುತ್ತಿರುತ್ತೇವೆ, ರಾಜ್ಯ ಏನಾಗುತ್ತಿದೆ ಎಂದು ನೋಡುತ್ತಿರುತ್ತೇವೆ ಮಾನ್ಯ ಮುಖ್ಯಮಂತ್ರಿಗಳು ಎಲ್ಲೋ ಒಂದು ಕಡೆ ಭಾಷಣ ಮಾಡುತ್ತಾ ಹೇಳಿದರು ನಾನು ಜಾಗ ಮರೆತು ಬಿಟ್ಟಿದ್ದೇನೆ ಯಾವು ಪುರುಷಾರ್ಥಕ್ಕೆ Pay Commission report ಒಪ್ಪಿಕೊಳ್ಳಬೇಕೆಂದು ಭಾಷಣ ಮಾಡಿದರು ನಾವು ಇವರುಈ ವರ್ಷ ಮಾಡುವುದಿಲ್ಲವೆಂದು ಅಂದುಕೊಂಡಿದ್ದೆವು ಮಾನ್ಯ ಮುಖ್ಯ ಮಂತ್ರಿಗಳ ಬಾಯಿಯಲ್ಲಿ ಅದು ಬಂದಾಗ ಏನಾದರೂ ಆ ದುಡ್ಡು ನಮ್ಮ ಕ್ಷೇತ್ರಗಳ ಯೋಜನೆಗಳಿಗೆ ಉಪಯೋಗವಾಗಬಹುದು ಎಂದು ಅಂದುಕೊಂಡಿದ್ದೆವು ಅವರು ಅಂದಿದ್ದಕ್ಕೋ ಅಥವಾ ಸಮನ್ವಯದ ಕೊರತೆಯೋ

ಮಾನ್ಯ ಯಡಿಯೂರಪ್ಪನವರು ದಿಢೀರನೆ ನಾನು ಒಪ್ಪಿಕೊಂಡಿದ್ದೇನೆಂದು ಹೇಳಿ ಬಿಟ್ಟರು ನಾನು ಒಪ್ಪಿಕೊಂಡಿದ್ದೇನೆಂದು ಇಲ್ಲಿ ಸದನದಲ್ಲಿ ಭಾಷಣ ಮಾಡಿದರು ಆದರೆ arrears ಎರಡು ವರ್ಷಗಳ ನಂತರ ಕೊಡುತ್ತೇನೆಂದು ಹೇಳುವುದಕ್ಕೆ ನೀವೇನು ಇಲ್ಲಿ ಗೂಟ ಬಡಿದುಕೊಂಡು ಇರುತ್ತೀರಾ? ನಾನು ಪ್ರಶ್ನೆ ಕೇಳುತ್ತೇನೆ, who has given by the authority of deferring the arrears? ಆ Government ಕಥೆ ಏನು? ನಾವು ಹೇಗೆ ಮಾತನಾಡಬೇಕು? ಬಾಕಿ ವೇತನವನ್ನು 2008–09ನೇ ಸಾಲಿನಲ್ಲಿ ವಿತರಿಸಲಾಗುವುದು

ಶ್ರೀ ಬಿ ಎಸ್ ಯಡಿಯೂರಪ್ಪ – ಒಂದು ಬಾಯಿಯಲ್ಲಿ ಹೇಳುತ್ತೀರಿ 5th Pay Commission ಸಂಬಳ ಏಕೆ ಕೊಟ್ಟಿರಿ ಎಂದು ಇನ್ನೊಂದು ಕಡೆ ಹೇಳುತ್ತೀರಿ, arrears ಮುಂದಿನ ಎರಡು ವರ್ಷಕ್ಕೆ ಕೊಡುತ್ತೇವೆಂದರೆ ಅದನ್ನು ಟೀಕೆ ಮಾಡುತ್ತೀರಿ ದುಡ್ಡು ಎಲ್ಲಿಂದ ತರಲಿ print ಮಾಡಲಾ?

ಶ್ರೀ ಜೆ ಸಿ ಮಾಧುಸ್ವಾಮಿ – Pay Commission report ಬಗ್ಗೆ ನಿಮ್ಮಿಬ್ಬರ ಅಭಿಪ್ರಾಯಗಳ ವ್ಯತ್ಯಾಸವನ್ನು ಹೇಳಿದೆ ಕೊಟ್ಟಿದ್ದೇಕೆ ಎಂದು ನಾನು ಹೇಳಲಿಲ್ಲ

ಶ್ರೀ ವಾಟಾಳ್ ನಾಗರಾಜ್ – ಮಾನ್ಯ ಯಡಿಯೂರಪ್ಪನವರೇ, "ನಾನು ದುಡ್ಡು print ಮಾಡಲಾ" ಎಂದು ಹೇಳಿದಿರಿ Print ಮಾಡಿಬಿಡಿ ತಪ್ಪೇನಿಲ್ಲ ಮಾಡಿಬಿಡಿ ತಾವು ಈಗ ಒಂದೇ ಸಮನೆ ಕೂಗಾಡುತ್ತಿದ್ದೀರಿ Print ಮಾಡಲಾ print ಮಾಡಲಾ ಎಂದು ಹೇಳುತ್ತಿದ್ದೀರಿ Print ಮಾಡಿಬಿಟ್ಟರೆ ತಾಪತ್ರಯ ತಪ್ಪಿ ಹೋಗುತ್ತದೆ

ಶ್ರೀ ಜೆ ಸಿ ಮಾಧುಸ್ವಾಮಿ – ಮಾನ್ಯ ಅಧ್ಯಕ್ಷರೆ, ಅದನ್ನು ಒಪ್ಪಿಕೊಳ್ಳಿ ಅಂತ ಹೇಳಿದವರೂ ಅಲ್ಲ ನಾವು, ತಿರಸ್ಕರಿಸಿ ಎಂದು ಹೇಳಿದವರೂ ಅಲ್ಲ ನಾವು ನಮ್ಮನ್ನೇಕೆ ನೀವು ಟೀಕೆ ಮಾಡುತ್ತಿದ್ದೀರಿ? ತಿರಸ್ಕರಿಸಿದವರು ನಿಮ್ಮ ಮಾನ್ಯ ಮುಖ್ಯಮಂತ್ರಿಗಳು ಒಪ್ಪಿಕೊಂಡವರು ನೀವು ಎಂದು ಅಷ್ಟೇ ನಾವು ಮಾತನಾಡಿದ್ದು ನೀವು ಒಪ್ಪಿಕೊಂಡಿದ್ದು ತಪ್ಪು ಎಂದು ನಾನು ಹೇಳಲಿಲ್ಲ

ಶ್ರೀ ಬಿ ಎಸ್ ಯಡಿಯೂರಪ್ಪ – ಪಂಚವಾರ್ಷಿಕ ಯೋಜನೆಗಳನ್ನು ಮಾಡುತ್ತಾರೆ ಐದು ವರ್ಷಗಳ ಕಾಲ ಶಾಶ್ವತವಾಗಿ ಇರುತ್ತೇವೆಂದು ಮಾಡುತ್ತಾರಾ? ಹಾಗೆಯೇ ಒಂದು ಸರ್ಕಾರ ಒಂದು ಕಾರ್ಯಕ್ರಮ ಕೊಟ್ಟರೆ ಮುಂದಿನ ಯೋಜನೆಗಳನ್ನು ಮುಂದಿನ ವರ್ಷ ಕೊಡುತ್ತೇವೆ ಅದರ ಮುಂದಿನ ವರ್ಷ ಕೊಡುತ್ತೇವೆ ಎಂದು ಹೇಳುವುದು ನೀವೇ ಗೂಟ ಬಡಿದುಕೊಂಡಿರುತ್ತೀರಾ ಎಂದರೆ ಮುಂದೆ ಬರುವ ಸರ್ಕಾರ ಅದನ್ನು ಮಾಡುತ್ತದೆ

ಶ್ರೀ ಜೆ ಸಿ ಮಾಧುಸ್ವಾಮಿ – ದಯಮಾಡಿ ಕ್ಷಮಿಸಬೇಕು ತಾವು retrospectıe effect ಕೊಡುತ್ತಿದ್ದೀರಿ

ಶ್ರೀ ಜಯಪ್ರಕಾಶ್ ಕೆ ಹೆಗ್ಡೆ – ಮಾನ್ಯ ಅಧ್ಯಕ್ಷರೆ, ಮೊನ್ನೆ ಇವರು ಮಾತನಾಡುವಾಗ ಕೃಷಿ ಸಾಲ ನೀವು ಮಾಡಿದ್ದನ್ನು ನಾನು ಈಗ ಕೊಡುತ್ತಿದ್ದೇನೆ ಎಂದು ಹೇಳಿದಿರಿ ಹಾಗೆ ಇವರು ಮಾಡಿದ್ದನ್ನು ಮುಂದಿನ ಸರ್ಕಾರವೂ ಕೊಡಬೇಕಾಗುತ್ತದೆ

ಶ್ರೀ ಜೆ ಸಿ ಮಾಧುಸ್ವಾಮಿ – ಜಯಪ್ರಕಾಶ್, budget has to be prospectıve ಈ ದೇಶದ ಬಜೆಟ್ Aprıl 1 ರಿಂದ ಮುಂದಕ್ಕೆ ಇವರು ಕಾರ್ಯಕ್ರಮ ಕೊಡಬಹುದಾಗಿತ್ತು ನಾನು ಮಾತನಾಡುವುದರಲ್ಲಿ ಅರ್ಥ ಇದೆ ನೀವು Aprıl 1 ರಿಂದ ಸಂಬಳ ಕೊಡುತ್ತೇನೆ ಎಂದು ಹೇಳಿದ್ದೀರಿ ನಾನು ನಿಮಗೆ ಟೀಕೆ ಮಾಡಲಿಲ್ಲ ಅದು ನಿಮ್ಮ ಹಣೆ ಬರಹ ಟಂಕಸಾಲೆ ಹಾಕುತ್ತೀರೋ ಮತ್ತೊಂದು ಹಾಕುತ್ತೀರೋ ಒಪ್ಪಿಕೊಂಡಿರುವವರು ನೀವು ನಾವು ಕೊಡಿ ಎಂದು ಬಂದಿಲ್ಲ, ಕೊಡಬೇಡಿ ಎಂದು ಹೇಳಿ ಓಟು ಕಳೆದುಕೊಳ್ಳುವುದಕ್ಕೆ ನಮಗೂ ಆಸಕ್ತಿ ಇಲ್ಲ ನಮಗೇನಾಗಬೇಕಾಗಿದೆ? It ıs your responsıbılity ನಾನು ನಿಮಗೆ ಕೇಳುವುದು, 1 4 06 ರಿಂದ 31 3 07 ರವರೆಗಿನ ಬಾಕಿ ವೇತನವನ್ನು 2008–09ನೇ ಸಾಲಿನಲ್ಲಿ ವಿತರಿಸಲಾಗುವುದು ಎಂದು ಏಕೆ ಹೇಳಿದಿರಿ, ಇಲ್ಲೇಕೆ provı-sıon ಮಾಡಲಿಲ್ಲ? ಇಷ್ಟೇ ನನ್ನ ಪ್ರಶ್ನೆ When you have made retro-spectıve effect payment, ಇಲ್ಲಿ ನೀವು ಏಕೆ provısıon ಮಾಡಲಿಲ್ಲ? ಹೇಳಬೇಕಲ್ಲಾ ನಿಮ್ಮ ಇಷ್ಟು ಅದು It ıs your scheme, your budget

ನೀವು ಏಕೆ ಮಾಡಲಿಲ್ಲ? ಇದನ್ನು ಇನ್ನೊಂದು ಕಡೆ ನಾನು ನಿಮಗೆ ಕೇಳುತ್ತೇನೆ ಒಂದು ಕಡೆ ಒಂದು cut off date ನಿಂದ ಹೈಸ್ಕೂಲ್‌ಗಳನ್ನು grant in aid ಗೆ ಸೇರಿಸುವುದಕ್ಕೆ ಹೋಗುತ್ತೀರಿ general category school ಗಳನ್ನು ತರುತ್ತೇವೆಂದು ಹೊಸ ಆಲೋಚನೆ ಮಾಡಿದ್ದೀರಿ, ಅದನ್ನು ಸ್ವಾಗತಿಸುತ್ತೇವೆ ಇನ್ನೊಂದು ಕಡೆ ಹೋದ ವರ್ಷ 400 ಹೈಸ್ಕೂಲ್‌ಗಳನ್ನು ಪ್ರಾರಂಭ ಮಾಡಿದಿರಿ ಇನ್ನೊಂದು ಕಡೆ 200 ಚಿಲ್ಲರೆ ಕಾಲೇಜುಗಳನ್ನು ಪ್ರಾರಂಭ ಮಾಡಿದಿರಿ ಈ ವರ್ಷ ಇನ್ನಷ್ಟು high school ಮತ್ತು college ಗಳನ್ನು ಮಾಡುತ್ತಿದ್ದೀರಿ Where is the allocation in this Education Department? ನೀವು ಇದರ ಬಗ್ಗೆ ನಮಗೆ ಹೇಳಬೇಕಲ್ಲ ನೀವು ಬಜೆಟ್ ಮೇಲೆ ಭಾಷಣ ಮಾಡುವಾಗ ಇಂಥಿಂಥ ಕಾರ್ಯಕ್ರಮಗಳಿಗೆ ನಾನು ಅನುಮತಿಯನ್ನು ಕೊಟ್ಟಿದ್ದೇನೆ ಮತ್ತು ಅವುಗಳಿಗೆ ಇಷ್ಟು ಹಣ ಒದಗಿಸಿದ್ದೇನೆಂದು ನೀವು ಹೇಳಲಿಲ್ಲ ಪೇ ಕಮಿಶನ್‌ನಿಂದ ಸಂಬಳ ಎಷ್ಟು ಜಾಸ್ತಿಯಾಗುತ್ತದೆ, ಅದಕ್ಕೆ ನಾನು ಏನು ಮಾಡಿದ್ದೇನೆ, ಎಲ್ಲಿಂದ ಹಣವನ್ನು ಒದಗಿಸುತ್ತಿದ್ದೇನೆ ಎಂದು ಹೇಳಲಿಲ್ಲ ನನಗೇ ಗೊತ್ತಿಲ್ಲ, ನೀವ್ಯಾರಾದರೂ ಆ ಬಗ್ಗೆ ಓದಿರುವವರು ಇದ್ದರೆ ಆಮೇಲೆ ಮಾತನಾಡಿ ಈ ಬಗ್ಗೆ ನೀವು ಹೇಳಬೇಕು ಇನ್ನು ಎರಡನೆಯದಾಗಿ, ಹೊಸ ಶಾಲೆಗಳನ್ನು ಗ್ರ್ಯಾಂಟ್ ಇನ್ ಏಡ್‌ಗೆ ಒಳಪಡಿಸುವುದರಿಂದ ನಿಮಗೆ ಎಷ್ಟು ಖರ್ಚು ಬರುತ್ತಿದೆ, ಅದಕ್ಕೆ ಹಣವನ್ನು ಎಲ್ಲಿಂದ ಒದಗಿಸುತ್ತೀರಿ ಎಂಬ ಬಗ್ಗೆ ಹೇಳಿಲ್ಲ ಹೊಸ ಹೈಸ್ಕೂಲ್ ಮತ್ತು ಕಾಲೇಜುಗಳನ್ನು ಮಾಡುವುದರಿಂದ ಆ ಸಂಬಳವನ್ನು ನೀವು ಎಲ್ಲಿಂದ ಒದಗಿಸುತ್ತೀರಿ ಎಂಬ ಬಗ್ಗೆ ಹೇಳಿಲ್ಲ ಇನ್ನು ಬಿಲ್ಡಿಂಗ್ ಬಗ್ಗೆ, ಇಷ್ಟು ಕಾಲೇಜ್, ಜೂನಿಯರ್ ಕಾಲೇಜುಗಳನ್ನು ಕೊಟ್ಟು, ತಾವು ಬಹುಶಃ 70 ಕೋಟಿ ಬಿಲ್ಡಿಂಗ್‌ಗೆ ಇಟ್ಟಿದ್ದೀರಿ ಇದರಿಂದ ಎಷ್ಟು ಕಟ್ಟಡಗಳನ್ನು ಕಟ್ಟುವುದಕ್ಕೆ ಸಾಧ್ಯವಾಗುತ್ತದೆ ಎನ್ನುವ ಬಗ್ಗೆ ನಮಗೆ ಹೇಳಿಲ್ಲ ಒಂದಕ್ಕೊಂದಕ್ಕೆ ತಾಳೆ ಇರಬೇಕಲ್ಲವೆ? ಅದನ್ನು ನಾವು ಕೇಳುವುದು ನಿಜ ಉತ್ತರ ಕೊಡಬೇಕಾದರೆ ಹೇಳಿ, ನಾವು ಇಂಥ ಕಡೆಯಿಂದ ತರೋಣ ಎಂದು ಇದನ್ನು ಮಾಡಿದ್ದೇನೆ ಅದು ಬಂದಾಗ ಕೊಡುತ್ತೇನೆ ಬಿಡಿ ಎಂದು ನಮಗೆ ಹೇಳಿ ನಮಗೇನು ಸಾರ್, ನಮಗೂ ಖುಷಿಯಾಗುತ್ತದೆ, ನಾವೂ ಕೇಳುತ್ತೇವೆ, ಮ್ಯಾನೇಜ್‌ಮೆಂಟ್ ಪರವಾಗಿ ನೀವು ಡಿಸಿಶನ್ ತೆಗೆದುಕೊಂಡರೆ ನಾವು ಏಕೆ

ಬೇಡವೆಂದು ಹೇಳೋಣ ಆದರೆ ಒಂದು ವಿಷಯದಲ್ಲಿ ಸರ್ಕಾರಕ್ಕೆ ನಾನು ವಾರ್ನ್ ಮಾಡುತ್ತೇನೆ ಎಲ್ಲಿ ನೀವು ಪರ್ಮನೆಂಟ್ ಅನ್ – ಏಡೇಡ್ ಎಂದು ಬರೆಸಿಕೊಂಡು, ಯಾವುದೇ ಶಿಷ್ಟಾಚಾರವನ್ನು ಪಾಲಿಸದೇ ಶಾಲೆಗಳನ್ನು ಮಂಜೂರು ಮಾಡಿ ದಿಢೀರೆಂದು ಇನ್ನೊಂದು ಸರ್ಕಾರ ಬಂದುಬಿಟ್ಟು ಅನುದಾನಕ್ಕೆ ಒಳಪಡಿಸುತ್ತೇವೆ ಎಂದರೆ ಅದು ಸರಿಯಲ್ಲ ಇದಕ್ಕೆ ಎಲ್ಲಾದರೂ ಒಂದು ಕಡೆ ತಾವು ರೆಗ್ಯುಲೇಶನ್ಸ್‌ನ್ನು ಇಡಬೇಕು ನೀವು ಗ್ರ್ಯಾಂಟ್ ಕೊಡಿ, ಅವೊತ್ತು everything was floated ನನಗೆ ಇವೆಲ್ಲಾ ಗೊತ್ತು, ಯಾರು ಯಾರನ್ನೂ ಈ ಬಗ್ಗೆ ಕೇಳಲೇ ಇಲ್ಲ ಮುಖ್ಯಮಂತ್ರಿಗಳೆ, ನಾನು ಕೇಳಿದೆ, ಎರಡೆರಡು ಸ್ಕೂಲ್‌ಗಳನ್ನು ಒಂದೊಂದು ಊರಿಗೆ ಕೊಡುತ್ತೀರಲ್ಲಾ ಎಂದು ಕೇಳಿದೆ ಬಿಡಿ ನಾವೇನು ಸಂಬಳ ಕೊಡಬೇಕಾಗಿತ್ತೆ, ಅವರು ಎಂದೂ ಗ್ರ್ಯಾಂಟ್ ಕೇಳುವುದಿಲ್ಲವೆಂದು ಬರೆದುಕೊಡುತ್ತಾರಲ್ಲ ಖಂಡಿತ ಸಾರ್, ನಿಮಗೂ ಗೊತ್ತು we are not involved We are not going to give anything ಯಾರೋ ಸ್ಕೂಲ್ ನಡೆಸುತ್ತಿದ್ದಾರೆ, ನಡೆಸಿಕೊಂಡು ಹೋಗಲಿ ಬಿಡಿ ಎಂದು ಹೇಳಿದಿರಿ ಆದರೆ ಇವೊತ್ತು ನೀವು ಇದೆಲ್ಲವನ್ನೂ ಗ್ರ್ಯಾಂಟ್ ಇನ್ ಏಡ್‌ಗೆ ತರುತ್ತಿದ್ದೀರಿ, evaluation ಆಗಿದೆಯೇ ಏನೇನು ಆಧಾರದ ಮೇಲೆ ಸೇರಿಸಿದ್ದೀರಿ? ಕಟ್ ಆಫ್ ಡೇಟ್ ಕೊಟ್ಟಿದ್ದೀರಿ, ಒಂದು ಊರಿನಲ್ಲಿ ಎರಡು, ಮೂರು, ನಾಲ್ಕು ಸ್ಕೂಲ್‌ಗಳಿವೆ, ಅಗತ್ಯವಿದೆಯೇ When you are going to pay, you are bound to ask ಇದುವರೆಗೆ ಅವರನ್ನು ಕೇಳಿ ಎಂದು ನಿಮಗೆ ಹೇಳಿರಲಿಲ್ಲ ಆದರೆ ಈಗ ನೀವು ಕೇಳಬೇಕಲ್ಲ ಆ ಊರಿಗೆ ಇನ್ನೊಂದು ಸ್ಕೂಲ್ ಬೇಕೆ? ಆ ಊರಿನಿಂದ ಪಕ್ಕದ ಸ್ಕೂಲ್ ಎಷ್ಟು ದೂರದಲ್ಲಿದೆ? ಇದ್ಯಾವುದೂ ಇಲ್ಲದೇ ಸಾರಾಸಗಟಾಗಿ ತಾವು ಹೇಳಿಬಿಟ್ಟಿರಿ ಇಂಥ ಕಟ್ ಆಫ್ ಡೇಟ್ ನಿಂದ ಜನರಲ್ ಮ್ಯಾನೇಜ್‌ಮೆಂಟ್ ಸ್ಕೂಲ್‌ಗಳನ್ನು ನಾವು ಸೇರಿಸುತ್ತಿದ್ದೇವೆ ಎಂದಿರಿ ನಾವು ಅದನ್ನು ಸ್ವಾಗತಿಸುತ್ತೇವೆ ಬಾರಿ ಒಳ್ಳೆಯ ಕೆಲಸವಾಯಿತು, 20 ವರ್ಷ ಆದಮೇಲೆ ಅವರಿಗೆ ಅನುದಾನದ ಸಂಬಳ ಬಂತು ಆದರೆ ಎಲ್ಲಾದರೂ ಒಂದು ಕಡೆ ರೆಗ್ಯುಲೇಶನ್ ಹಾಕುವುದನ್ನು ತಾವು ತರಬೇಕು ಮತ್ತೆ ಈಗ ತಾವು ನಮಗೆ ಹೇಳಬೇಕು ಜೇನುಹನಿಯಂತೆ ತೆರಿಗೆಯನ್ನು ಸಂಗ್ರಹ ಮಾಡುತ್ತೇವೆ ಎಂದು ಹೇಳಿದ್ದೀರಿ ಜೇನು ಎಂಬ ಶಬ್ದವನ್ನು

ನೀವು ಬಳಸಿರುವುದಕ್ಕೆ ನಾನು ಬಳಸುತ್ತಿದ್ದೇನೆ ಜೇನುಹನಿಯಂತೆ ತೆರಿಗೆ ಸಂಗ್ರಹ ಮಾಡಿ ಕಾವೇರಿ ನೀರು ಹರಿಸಿದ ಹಾಗೆ ಹರಿಸುತ್ತೇನೆಂದರೆ ದುಡ್ಡು ಎಲ್ಲಿಂದ ಬರುತ್ತದೆ, ಎಷ್ಟು ಬರುತ್ತದೆ ಎಂಬ ಬಗ್ಗೆ ತಾವು ಮೊದಲೇ ಒಂದು ಸ್ಟೇಟ್‌ಮೆಂಟ್‌ನ್ನು ಇಲ್ಲಿ ಇಡಬೇಕು ಧರ್ಮಸಿಂಗ್‌ರವರು ಮಾತನಾಡಿದ್ದು ವಾಸ್ತವ ನೀವು ಇಟ್ಟಿರುವ ಪ್ರೋಗ್ರಾಂಗೆ, ನಿಮ್ಮ ರೆವಿನ್ಯೂಗೆ ಸುಮಾರು 8 ರಿಂದ 9 ಸಾವಿರ ಕೋಟಿ ವ್ಯತ್ಯಾಸ ನಮಗೆ ಕಾಣುತ್ತಿದೆ ಇದರಲ್ಲೇನೂ ಅನುಮಾನವಿಲ್ಲ 8 ರಿಂದ 9 ಸಾವಿರ ಕೋಟಿ ನಿಮ್ಮ ರೆವಿನ್ಯೂ ಲಾಸ್ ಈಗ ನಿಮಗೆ ಅರ್ಯಾಕ್ ತೆಗೆಯುವುದರಿಂದ ಲಾಸ್ ಆಗುತ್ತದೆ ಸುಮಾರು 2 ಸಾವಿರ ಕೋಟಿ ಅರ್ಯಾಕ್ ಬಾಬ್ತಿನಲ್ಲಿ ನೀವು ನಷ್ಟ ಮಾಡಿಕೊಳ್ಳುತ್ತಿದ್ದೀರಿ ಎನ್‌ಫೋರ್ಸ್‌ಮೆಂಟ್ ಮಾಡುವುದರಿಂದ ಅದರಲ್ಲಿ, ಅರ್ಯಾಕ್ ತೆಗೆಯುವುದರಿಂದ ಏನಾಯಿತು, ತಾವೇ ಒಪ್ಪಿಕೊಳ್ಳುತ್ತೀರಿ, ಕಳ್ಳಬಟ್ಟಿ ಸಾರಾಯಿ ಮಾಡುತ್ತಾರೆ, ಅದನ್ನೆಲ್ಲಾ ನಿಗ್ರಹ ಮಾಡಬೇಕಾಗಿದೆ, ಸ್ಟಾಫ್ ಜಾಸ್ತಿ ಮಾಡಬೇಕಾಗಿದೆ, ಎನ್‌ಫೋರ್ಸ್‌ಮೆಂಟ್ ಜಾಸ್ತಿ ಮಾಡಬೇಕಾಗಿದೆ, ವಿಜಿಲೆನ್ಸ್ ಜಾಸ್ತಿ ಮಾಡಬೇಕಾಗಿದೆ, ನೀವು ಅದಕ್ಕೆ ಅಡಿಶನಲ್ ಸ್ಟಾಫ್ ತೆಗೆದುಕೊಳ್ಳಲೇಬೇಕು ಸುಮಾರು ನಿಮಗೆ ಎಷ್ಟು ಕೋಟಿ ರೂ ಗಳ ಖರ್ಚು ಬರುತ್ತದೆ ಎಂಬುದನ್ನು ನೀವು ಈಗ ಹೇಳಬೇಕು ಒಂದೊಂದು ತಾಲ್ಲೂಕಿನಲ್ಲಿ ಇರುವ ಒಂದೊಂದು ಎಕ್ಸೈಸ್ ಆಫೀಸ್‌ಗಳಿಗೆ ಕನಿಷ್ಟ ನೂರು ನೂರು ಜನ ಬೇಕಾಗುತ್ತಾರೆ ಹಳ್ಳಿಗಳಲ್ಲಿ ಹೋಗಿ ಕಾಯಬೇಕು, ಕಳ್ಳಬಟ್ಟಿ ಎಲ್ಲೆಲ್ಲಿ ಮಾಡುತ್ತಾರೆ ಎಂದು ನೀವು ಕಾಯಬೇಕು ನೀವು ಇದನ್ನು ಹೇಗೆ ಮಾಡುತ್ತೀರಿ ಎಂಬ ಬಗ್ಗೆ ನಮಗೂ ಸ್ವಲ್ಪ ಹೇಳಿ ಸಾರ್, ನಾವೂ ಕಲಿತುಕೊಳ್ಳುತ್ತೇವೆ

ಶ್ರೀ ಎನ್ ರಾಜೇಂದ್ರನ್ – ಕಳ್ಳಬಟ್ಟಿ ಮಾಡುವುದು ಶುರುವಾಗುತ್ತದೆ

ಶ್ರೀ ಜೆ ಸಿ ಮಾಧುಸ್ವಾಮಿ – ಕಳ್ಳಬಟ್ಟಿ ಇವರು ಹೇಗೆ ತಡೆಯುತ್ತಾರೆ ಎಂದು ಕೇಳುತ್ತಿದ್ದೇನೆ ಸಾರ್ ಪಕ್ಕದ ರಾಜ್ಯದಲ್ಲಿ ಕಳ್ಳಬಟ್ಟಿ ಮಾಡುತ್ತಿರುವುದು ನಾವೇ, ಯಾರು, ಪ್ರಭಾವ ಇರುವವರೇ, ಕಳ್ಳಬಟ್ಟಿಯನ್ನು ಯಾರೂ ಬಡವರು ಇವೊತ್ತು ಮಾಡುವುದಿಲ್ಲ ಬಡವರು ಮಾಡಿಬಿಡುತ್ತಾರೆಯೇ? ಆ ರೀತಿ, ಮಾಡುವುದಕ್ಕಾಗುತ್ತದೆಯೇ ಅವರದೇ ಆದ ಒಂದು ನೆಟ್‌ವರ್ಕ್ ಸೃಷ್ಟಿ ಮಾಡಿಕೊಂಡು ಮಾಡುತ್ತಾರೆ, ಅದನ್ನೆಲ್ಲಾ ತಾವು ಹೇಗೆ ನಿಗ್ರಹ ಮಾಡುತ್ತೀರಿ! What is your

policy? ಸಾರಾಯಿಯನ್ನು ನೀವು ಬಂದ್ ಮಾಡುತ್ತೇವೆ ಎಂದವರು ನೀವು ಕರ್ನಾಟಕವನ್ನು total dry state ಎಂದು ಏಕೆ ತರಲಿಲ್ಲ Total dry state ಆಗಿದ್ದರೆ enforcement easy ಆಗಿರುತ್ತಿತ್ತು ಕರ್ನಾಟಕದಲ್ಲಿ ಎಲ್ಲಾದರೂ ಮದ್ಯ, ಸಾರಾಯಿ ಏನಾದರೂ ಸಿಕ್ಕಿದರೆ, ರೆಕ್ಟಿಫೈಡ್ ಸ್ಪಿರಿಟ್ ಸಿಕ್ಕಿದರೆ, ನ್ಯೂಟ್ರಲ್ ಸ್ಪಿರಿಟ್ ಸಿಕ್ಕಿದರೆ ಅಲ್ಲಿಯೇ ಅದನ್ನು ಸೀಸ್ ಮಾಡಬಹುದಿತ್ತು ನಾನು ಇಟ್ಟುಕೊಂಡಿರುತ್ತೇನಪ್ಪಾ, ನಾನು ಅರ್ಯಾಕ್ ಕುಡಿಯುತ್ತೀನೋ, ರಂ ಕುಡಿಯುತ್ತೀನೋ, ವಿಸ್ಕಿ ಕುಡಿಯುತ್ತೀನೋ ಅದು ನನ್ನ ಹಣೆಬರಹ, ಆದರೆ ಇದಕ್ಕೆಲ್ಲಾ ಬೇಸಿಕ್ ಪ್ರಾಡಕ್ಟ್ ಏನು ಎಂದರೆ ರೆಕ್ಟಿಫೈಡ್ ಸ್ಪಿರಿಟ್ಟೇ ಆಗಿರುತ್ತದೆ ಅಥವಾ ನ್ಯೂಟ್ರಲ್ ಸ್ಪಿರಿಟ್ಟೇ ಸ್ವಲ್ಪ ಬಣ್ಣ ಹೆಚ್ಚು ಕಡಿಮೆ ಮಾಡಿ ಅರ್ಯಾಕ್ ಮಾಡಬಹುದು ಮತ್ತು ರಂ ಮಾಡಬಹುದು ಈಗ ಇವರು ಮಾಡುವುದಕ್ಕೆ ಹೊರಟಿರುವುದು ಅದೇ ಆಗಿದೆ ಲೋ ಕ್ವಾಲಿಟಿ ಎಂದು ಕೊಟ್ಟರೆ ಪ್ಯಾಕೆಟ್‌ನಲ್ಲಿ ಕೊಡುತ್ತಿದ್ದ ಅರ್ಯಾಕ್‌ನ್ನು ಈಗ ಬಣ್ಣ ಹಾಕಿ ಬಾಟಲ್‌ನಲ್ಲಿ ಕೊಡಬೇಕಷ್ಟೇ ಇದೇನು ಮಾಡುತ್ತೀರಿ ನೀವು? ಕುಡಿಯುವುದನ್ನು ತಪ್ಪಿಸಬೇಕು ಎಂದು ನಿಮ್ಮ ಮನಸ್ಸಿನಲ್ಲಿದ್ದರೆ, ಲಕ್ಷಾಂತರ ಸ್ತ್ರೀ ಶಕ್ತಿ ಸಂಘಗಳವರು ನಿಮಗೆ ನೀಡಿರುವ ಮನವಿಯನ್ನು ಕನ್ಸಿಡರ್ ಮಾಡುವುದಾದರೆ ದಯಮಾಡಿ ಕುಡಿಯುವುದನ್ನು ತಪ್ಪಿಸುವುದಕ್ಕೆ ಒಂದು ಕಾರ್ಯಕ್ರಮವನ್ನು ನೀವು ಹೇಳಿಬಿಡಿ ನಾವೂ ಆಗ ನಿಮ್ಮನ್ನು ಶ್ಲಾಘಿಸುತ್ತೇವೆ ಅರ್ಯಾಕ್ ತಪ್ಪಿಸುವುದರಿಂದ ಕುಡಿತ ತಪ್ಪಿತು ಎಂದು ಏಕೆ ಹೇಳುತ್ತೀರಿ? ಅರ್ಯಾಕ್‌ಗೆ ಅಡಿಕ್ಟ್ ಆಗಿರುವವನು ಕುಡಿಯುವುದನ್ನು ಬಿಡುತ್ತಾನೆಯೇ? 14 ರೂಪಾಯಿ ಕೊಟ್ಟು ಅರ್ಯಾಕ್ ಕುಡಿಯುತ್ತಿದ್ದವನನ್ನು ನೀವು 60 ರೂಪಾಯಿ ಕೊಟ್ಟು ಕುಡಿಯುವ ಹಾಗೆ ಮಾಡಿದಿರಿ ಸರಿ ತಾನೇ, ನಾವು ತೋಟ ಕಾಯುವವರು, ನಮ್ಮ ಹತ್ತಿರ ಜನ ಇಲ್ಲ, ನಮ್ಮ ತೋಟದ ಕಾಯಿ ಕಳ್ಳತನವಾಗುತ್ತದೆ ಆದುದರಿಂದ ನಾನು ಹೇಳುವುದೇನೆಂದರೆ, you must have a policy ಸರ್ಕಾರಕ್ಕೆ ಅರ್ಯಾಕ್‌ನ್ನು ರದ್ದು ಮಾಡಬೇಕು ಎಂದು ಅನ್ನಿಸಿದರೆ ಮತ್ತು ಅರ್ಯಾಕ್‌ನಿಂದಾಗಿ ಎಷ್ಟೋ ಸಂಸಾರಗಳು ಹಾಳಾಗುತ್ತಿರುವುದು ಗಮನಕ್ಕೆ ಬಂದುಬಿಟ್ಟಿದೆ ಎಂದು ಹೇಳುವವರು ದಯಮಾಡಿ ದೊಡ್ಡವರು ಕುಡಿಯುವುದನ್ನೂ ತಪ್ಪಿಸಿ ಅವರು ಕೂಡ ರಾತ್ರಿ ಮಾಡುವ ಚೇಷ್ಟೆಗಳು ಸ್ವಲ್ಪ ಕಡಿಮೆಯಾಗಲಿ ನೀವು ದೊಡ್ಡವರಿಗೆ ಪರ್ಮಿಟ್ ಕೊಟ್ಟುಬಿಡುತ್ತೀರ ರಂ ಬ್ರಾಂದಿ ವಿಸ್ಕಿ ಕುಡಿದುಕೊಂಡು

ಬೀದಿಯಲ್ಲಿ ಓಡಾಡಿಕೊಂಡು ಏನು ಬೇಕಾದರೂ ಮಾಡಬಹುದು ಅರ್ಯಾಕ್ ಕುಡಿಯುತ್ತಿದ್ದ ಬಡವರು ಮಾತ್ರ ಚೇಷ್ಟೆ ಮಾಡಬಾರದೆಂದು ಸ್ತ್ರೀ ಶಕ್ತಿ ಸಂಘದವರ ಅರ್ಜಿಯನ್ನು ನೀವು ಸ್ವೀಕರಿಸುತ್ತೀರ? ನಮ್ಮ ಅರ್ಜಿಗಳನ್ನೂ ಕೂಡ ಸ್ವೀಕರಿಸಿ ಎಲ್ಲವನ್ನೂ ನಿಲ್ಲಿಸಿ ನಿಲ್ಲಿಸಬೇಕೆಂದರೆ total ban has to be imposed in Karnataka ಆ ರೆವಿನ್ಯೂವನ್ನೂ ಕೂಡ ಬಿಟ್ಟುಬಿಡಿ ನಿಮಗೇನಾದರೂ ಆಸಕ್ತಿ ಇದ್ದರೆ, ನೀವು ನಿಜವಾಗಿಯೂ ಹಳ್ಳಿಯ ಜನಗಳ ಬಾಯಿಗೆ ಒಳ್ಳೆಯ ಮಾತಿನ ತುಪ್ಪ ಸವರುತ್ತಿದ್ದರೆ ಸ್ತ್ರೀ ಶಕ್ತಿ ಸಂಘದವರ ಮನವಿ ನಿಮಗೆ ಬಂತು ಎಂದು ಇಲ್ಲಿ ಭಾಷಣ ಮಾಡಿರುವುದು ಸತ್ಯವಾದರೆ ದಯಮಾಡಿ ಟೋಟಲ್ ಬ್ಯಾನ್‌ನ್ನು ನೀವು ತೆಗೆದುಕೊಂಡು ಬನ್ನಿ ಇಲ್ಲವೆಂದರೆ ಕೇವಲ ಅರ್ಯಾಕ್ ಬ್ಯಾನ್ ಮಾಡುವುದರಿಂದ ಸಮಾಜ ಸುಧಾರಣೆ ಆಗುತ್ತದೆ ಎಂದು ನಾವು ಭಾವಿಸುವುದಕ್ಕಾಗುವುದಿಲ್ಲ ಟ್ಯಾಡಿ ಬ್ಯಾನ್ ಮಾಡಿದಾಗಲೂ ನಾವು ಹೀಗೆಯೇ ಮಾತನಾಡಿದ್ದು ಟ್ಯಾಡಿ ಕುಡಿಯುತ್ತಿದ್ದವರು ಅರ್ಯಾಕ್ ಕುಡಿದರು, ಅಷ್ಟೇ ಆಗಿದ್ದು ನೀವೇನು ಹೇಳಿದಿರಿ, ನಾನು ಬಿಟ್ಟುಬಿಡುತ್ತಿದ್ದೀನಿ, ಅದರಿಂದ ನಿಮಗೆ ಎಷ್ಟು ನಷ್ಟವಾಗುತ್ತದೆ, ಅದನ್ನು ನೀವು ಎಲ್ಲಿಂದ ಕೊಡುತ್ತೀರಿ ಎಂಬ ಬಗ್ಗೆ ನಮಗೆ ಹೇಳಿಯೇ ಇಲ್ಲ ನಾನು ಅವರಿಗೆ ಕೇಳಬಯಸುವುದೇನೆಂದರೆ, ನೀವು ಈಗ ಅರ್ಯಾಕ್‌ನ್ನು ಬ್ಯಾನ್ ಮಾಡಿದಿರಿ ಷುಗರ್ ಫ್ಯಾಕ್ಟರಿಗಳಿಗೆ ನಷ್ಟವಾಗುತ್ತದೆ, if at all I am right, ಮೊಲಾಸೆಸ್‌ಗೆ ಡಿಮ್ಯಾಂಡ್ ಕಡಿಮೆಯಾಗುತ್ತದೆ ನನ್ನ ಕಲ್ಪನೆಯಂತೆ ನ್ಯಾಚುರಲ್ ಮೊಲಾಸೆಸ್‌ಗೆ ಡಿಮ್ಯಾಂಡ್ ಕಡಿಮೆಯಾಗುತ್ತದೆ ಈಗ recovery of sugar ನಿಂದ ಹಣ ಬರುವುದು ಒಂದು ಲೆಕ್ಕ, ಅದರ ಮೊಲಾಸೆಸ್ ಮೇಲೆ ಬೈ-ಪ್ರಾಡಕ್ಟ್ಸ ಮೇಲೆ ನಾವು ಹಣವನ್ನು ತೆಗೆದುಕೊಳ್ಳುತ್ತಿದ್ದದ್ದು ಇನ್ನೊಂದು ಲೆಕ್ಕ, you have stopped the income Income through molasses to farmers or sugar factories ಏನು substitute ಅನ್ನು ನೀವು ನಮಗೆ ಕೊಡುತ್ತಿದ್ದೀರಿ? ಅದಕ್ಕೆ ಏನು ಪರಿಹಾರವನ್ನು ತಾವು ಘೋಷಣೆ ಮಾಡುತ್ತಿರಿ ಎಂಬ ಬಗ್ಗೆ ನೀವು ನಮಗೆ ಹೇಳಬೇಕು ನೀವು ಇವೊತ್ತು ಅರ್ಯಾಕ್‌ನ್ನು ಬ್ಯಾನ್ ಮಾಡಿದ ಮೇಲೆ, ಹೇಳಿದ್ದೀರಲ್ಲಾ, ನೀವೇ, ಕಾಕಂಬಿ, ಡೀನೇಚರ್ಡ್ ಸ್ಪಿರಿಟ್ ಮತ್ತು ರೆಕ್ಟಿಫೈ ಸ್ಪಿರಿಟ್ ಮೇಲೆ ತೆರಿಗೆ ಹಾಕುತ್ತೇವೆ ಎಂದು ಹೇಳಿದ್ದೀರಿ ನೀವು ತೆರಿಗೆಯಲ್ಲಿ ಕಾಕಂಬಿಯನ್ನೂ

ಸೇರಿಸಿಬಿಟ್ಟಿದ್ದೀರಿ ಕಾಕಂಬಿ ಶುಗರ್ ಫ್ಯಾಕ್ಟರಿಯಿಂದ ಏನು ಬರುತ್ತದೆ ಅದರ ಟ್ಯಾಕ್ಸ್‌ನ್ನೂ ಕೂಡ ಜಾಸ್ತಿ ಮಾಡುತ್ತಿದ್ದಾರೆ ಈ ರೀತಿ ಮಾಡಿದರೆ ನಾಳೆ ದಿವಸ ಆ ಮೊಲಾಸೆಸ್‌ನ್ನು ಕೇಳುವವರೂ ಇಲ್ಲದಂತಾಗುತ್ತದೆ ನಾಳೆ ಆ ಮೊಲಾಸೆಸ್ ಮೇಲೆ ಇನ್‌ಕಂ ಅನ್ನು ಜನರೇಟ್ ಮಾಡುತ್ತೇವೆ ಎಂದು ಆ ಶುಗರ್ ಫ್ಯಾಕ್ಟರಿಯವರು ಹೇಳಿಕೊಂಡು ಅವರ ಪ್ರಾಜೆಕ್ಟ್ ರಿಪೋರ್ಟ್‌ನಲ್ಲೇನಾದರೂ ಅದನ್ನು ತೋರಿಸಿ ಅದನ್ನೂ ಕೂಡ ಸೇರಿಸಿಕೊಂಡು ಅಪ್ರೈಸ್ ಮಾಡಿದ್ದರೂ, ಅದನ್ನು ನಂಬಿ ಅದಕ್ಕೆ ಫೈನಾನ್ಸ್ ಮಾಡಿದ ಕಂಪನಿಗಳವರ ಗತಿಯೇನು? ನೀವು as a Finance Minister you are bound to give suggestions for all this ಇನ್ನು ವಿದ್ಯುಚ್ಛಕ್ತಿ ಉತ್ಪಾದನೆಗೆ ಖರೀದಿಸುವ ಡೀಸೆಲ್ ಮೇಲೆ ನೀಡಿರುವ ಶೇಕಡ 4 ರ ವಿನಾಯಿತಿಯೊಂದಿಗೆ ಸ್ವಯಂ ಪ್ರಮಾಣ ಪತ್ರ ಸಾರ್ ಇದನ್ನು ಕ್ಲಾರಿಫೈ ಮಾಡಬೇಕು 4 ಪರ್ಸೆಂಟ್ ತೆರಿಗೆ ವಿನಾಯಿತಿ ಯಾವ ಡೀಸೆಲ್ ಮೇಲೆ? ಹೌಸ್ ಹೋಲ್ಡ್ ಜನರೇಟರ್‌ಗೆ ಕೊಡುತ್ತೀರ? ಅಂಗಡಿಯಲ್ಲಿ ಇಟ್ಟುಕೊಂಡಿರುವ ಜನರೇಟರ್‌ಗೆ ಕೊಡುತ್ತೀರ? ಏಕೆಂದರೆ ಅವುಗಳೂ ಕೂಡ ಡೀಸೆಲ್ ಜನರೇಟರ್‌ಗಳೆ ಆಗಿವೆ ಈ ರೀತಿ ಉಪಯೋಗಿಸುವ ಎಲ್ಲಾ ಜನರೇಟರ್‌ಗಳಿಗೆ ಬಳಸುವ ಡೀಸೆಲ್‌ಗೆ ವಿನಾಯಿತಿಯನ್ನು ಕೊಡುತ್ತಿದ್ದೀರೋ ಅಥವಾ ಮೇಜರ್ ಆಗಿ ಎಲೆಕ್ಟ್ರಿಸಿಟಿ ಜನರೇಟ್ ಮಾಡುವ ಜನರೇಟರ್‌ಗೆ ಕೊಡುತ್ತಿದ್ದೀರೋ ಎಂಬ ಬಗ್ಗೆ ತಾವು ಎಲ್ಲಾದರೂ ಇಲ್ಲಿ ಸ್ಪಷ್ಟೀಕರಣವನ್ನು ಕೊಡಬೇಕು ಭಾರಿ ಇನ್‌ವೆಸ್ಟ್‌ಮೆಂಟ್ ಮಾಡಿ ನೀವೇನಾದರೂ ಇನ್‌ವೆಸ್ಟ್ ಮಾಡುವಂಥ ಡೀಸೆಲ್ ಜನರೇಟರ್ ಯುನಿಟ್ಸ್‌ಗೆ ಕೊಡುತ್ತಿದ್ದೀರೋ ಎಂಬ ಬಗ್ಗೆ ಹೇಳಬೇಕು ಇನ್ನು ನಾನು ಕಂಪೇರ್ ಮಾಡಬೇಕಾಗಿದೆ, ಏನೇನು ಅಲೊಕೇಶನ್‌ಗಳನ್ನು ಹೇಗೆ ಹೇಗೆ ಮಾಡಿದ್ದಾರೆಂದು ವಲಯವಾರು ಯೋಜನಾ ವೆಚ್ಚದ ಬಗ್ಗೆ ಹೇಳುತ್ತೇನೆ ಕೃಷಿ ಮತ್ತು ಸಂಬಂಧಿತ ಚಟುವಟಿಕೆಗಳಿಗೆ ಹಂಚಿಕೆ 6 88% ಇತ್ತು ಮಾನ್ಯ ಸಿದ್ಧರಾಮಯ್ಯನವರ ಕಾಲದಲ್ಲಿ 6 33 ಇತ್ತು ಆದರೆ ನೀವು 7 06ಕ್ಕೆ ಹೋದಿರಿ ನೀರಾವರಿ ಮತ್ತು ಪ್ರವಾಹ ನಿಯಂತ್ರಣ, ಇದರಲ್ಲಿ 29 ಇತ್ತು, ಅದನ್ನು ತಾವು 17 69ಕ್ಕೆ ತಂದಿದ್ದೀರಿ Just 17 69 28 08 ರಿಂದ ತಾವು 17 69ಕ್ಕೆ ತಂದಿರಿ ಯಾವಾಗ ತಂದಿರಿ? When we require more investment Krishna and Cauvery ಬಯಲಲ್ಲಿ ಜಾಸ್ತಿ investment

ಬೇಕು ಎನ್ನುವಾಗ ಇವರು plan ಅನ್ನು 10% ರಿಂದ 12% cut ಮಾಡುತ್ತಾರೆ ಏಕೆ cut ಮಾಡುತ್ತೀರಿ? ಈ ರಾಜ್ಯದಲ್ಲಿ cycle ಕೊಡುವುದಕ್ಕೆ, ಚಂಡು ಕೊಡುವುದಕ್ಕೆ, ಹೂವು ಕೊಡುವುದಕ್ಕೆ, ಪೆಪ್ಪರ್‌ಮೆಂಟ್ ಕೊಡುವುದಕ್ಕೆ cut ಮಾಡಿರುವ ಹಣ ಯಾವುದು? ನೀರಾವರಿಯದ್ದು ಆಮೇಲೆ ಕೈಗಾರಿಕಾ ಖನಿಜಗಳು, ಅದನ್ನು ತಾವು ಜಾಸ್ತಿ ಮಾಡುತ್ತೀರಿ ಏಕೆ ಅಲ್ಲಿ expenditure ಜಾಸ್ತಿಯಾಗಿ ನಿಮಗೆ income ಜಾಸ್ತಿ ಬರುತ್ತಿಲ್ಲವೆಂದು ನಮಗೆ ನೀವು ಹೇಳಬೇಕಲ್ಲ ನೀವು 16 ನಿಂದ 24% ಗೆ ತೆಗೆದುಕೊಂಡು ಹೋಗುತ್ತೀರಿ ನೀರು ಪೂರೈಕೆಯಲ್ಲಿ ನೀವು ಎಷ್ಟು ಜಾಸ್ತಿ ಮಾಡಿದ್ದೀರಿ? ಮಾಡಲಿಲ್ಲ, ನೀವು ಬಹಳ ಕಡಿಮೆ ಮಾಡಿದ್ದೀರಿ ನೀರಿಲ್ಲ ಎಂದು ಹಾಹಾಕಾರ, ಬರಗಾಲ ಇರುವಾಗ ನಮಗೆ ಒಂದು percent ಅಷ್ಟೇ ನೀವು ಮಾಡಿರುವುದು ವಸತಿ ಮತ್ತು ನಗರಾಭಿವೃದ್ಧಿ, ಇದಕ್ಕೆ 13% ಗೆ ತೆಗೆದುಕೊಂಡು ಹೋಗಿದ್ದೀರಿ ಹಳ್ಳಿ ಬಗ್ಗೆ ಮಾತನಾಡುತ್ತೀರಿ ನೀರಾವರಿಯದ್ದು, ಅಲ್ಲಿಯ ದುಡ್ಡನ್ನು ತೆಗೆದುಕೊಂಡು ಬಂದು ಈ ಕಡೆ divert ಮಾಡಿ

ಶ್ರೀ ಬಿ ಎಸ್ ಯಡಿಯೂರಪ್ಪ (ಮಾನ್ಯ ಉಪ ಮುಖ್ಯಮಂತ್ರಿಗಳು) – ಒಂದು ನಿಮಿಷ ತಾವು ಕುಳಿತುಕೊಂಡರೆ, ನಿಮ್ಮ ಬಾಯಿಯಲ್ಲಿ ಕೊನೆಗೆ ಏನಾದರೂ ಮಾತನಾಡುತ್ತೀರೋ ಏನೋ ಗೊತ್ತಿಲ್ಲ, ಅಲ್ಲಿಯವರೆಗೆ ಕಾಯುತ್ತೇನೆ ಮೊದಲ ಬಾರಿಗೆ ಡಾ॥ ನಂಜುಂಡಪ್ಪ ವರದಿಯನ್ನು ಅನುಷ್ಠಾನಗೊಳಿಸುವುದಕ್ಕೆ 1,576 ಕೋಟಿ ರೂಪಾಯಿ ಏನು ಕೊಡುವುದಕ್ಕೆ ಹೊರಟಿದ್ದೇವೆ, ಅದರ ಬಗ್ಗೆ ತಾವು ಮಾತನಾಡುತ್ತಿಲ್ಲ ಗ್ರಾಮಗಳ ಅಭಿವೃದ್ಧಿಗೋಸ್ಕರ ಸಾವಿರ ಗ್ರಾಮ ಎಂದು ಹೇಳಿ ಅದಕ್ಕೆ 400 ಕೋಟಿ ರೂಪಾಯಿ ತೆಗೆದು ಇಟ್ಟಿದ್ದೇವೆ, ಅದರ ಬಗ್ಗೆ ತಾವು ಮಾತನಾಡುವುದಕ್ಕೆ ready ಇಲ್ಲ ಹೇಗೆ ಎಂದು? ಹೈದರಾಬಾದ್ ಕರ್ನಾಟಕದ ಅಭಿವೃದ್ಧಿ ಬಗ್ಗೆ ನಿಮಗೆ ಚಿಂತೆ ಇಲ್ಲವಾ? ರಾಜ್ಯದ ಇತಿಹಾಸದಲ್ಲಿ ಮೊದಲ ಬಾರಿಗೆ ಆ ಒಂದು ಐತಿಹಾಸಿಕ ತೀರ್ಮಾನ ತೆಗೆದುಕೊಂಡು ದುಡ್ಡು ತೆಗೆದಿಟ್ಟಿದ್ದೇವೆ ಕೊನೇ ಪಕ್ಷ ಮಾನ್ಯ ಧರ್ಮಸಿಂಗ್‌ರವರ ಬಾಯಿಯಲ್ಲಿಯಾದರೂ ಆ ಮಾತು ಬರಬಹುದು ಎಂದುಕೊಂಡಿದ್ದೆ

ಶ್ರೀ ಜೆ ಸಿ ಮಾಧುಸ್ವಾಮಿ – ಇದು ಮಜಾ ಇದೆ ಸಾರ್ ನೀವು ಹೇಳುವುದನ್ನು ನಾವು ಹೇಳುವುದಕ್ಕೆ ಇಲ್ಲಿ ನಿಂತುಕೊಳ್ಳಬೇಕಾ?

ಅಧ್ಯಕ್ಷರು – ಒಳ್ಳೆಯ ಕೆಲಸಕ್ಕೆ appreciation ಬೇಕು ಎಂದು ಹೇಳುತ್ತಿದ್ದಾರೆ ಭುಜ ತಟ್ಟಬೇಕು ನೀವು ಎಂದು ಹೇಳುತ್ತಿದ್ದಾರೆ

ಶ್ರೀ ಜೆ ಸಿ ಮಾಧುಸ್ವಾಮಿ – ಅದನ್ನು ಆಮೇಲೆ ಮಾಡೋಣ ಶಿಕ್ಷಣ, ಕ್ರೀಡೆ, ಕಲೆ ಮತ್ತು ಸಂಸ್ಕೃತಿ, You must try to uderstand, Pay commission Report ಅನ್ನು ಒಪ್ಪಿಕೊಂಡರೆ 80% ಫಲಾನುಭವಿಗಳು ಅದರಲ್ಲಿ ಶಿಕ್ಷಕರೇ ರಾಜ್ಯದ number of employees ನಲ್ಲಿ Education Department ನಲ್ಲಿ ಇರುವವರು 80 ರಿಂದ 90% ಎಂದು ಇಟ್ಟುಕೊಳ್ಳಬಹುದು ಅದು ಜಾಸ್ತಿ, high schools ಜಾಸ್ತಿ, colleges ಜಾಸ್ತಿ, grant-in-aid college ಜಾಸ್ತಿ 7 9% ನಿಂದ ಎಂದರೆ 8% ನಿಂದ 9% ಗೆ allocation ಅನ್ನು ಮಾನ್ಯ ಯಡಿಯೂರಪ್ಪನವರು ತೆಗೆದುಕೊಂಡು ಹೋಗುತ್ತಾರೆ Is that 1% is sufficient to meet all these expenditure ಎನ್ನುವುದು ನಮ್ಮ ಪ್ರಶ್ನೆ 1% amount ನೀವು ಜಾಸ್ತಿ ಏನು allocate ಮಾಡಿಕೊಂಡಿದ್ದೀರಿ, is it enough to meet all the expenditure ಅವರಿಗೆ increment ಬರುತ್ತಿರುತ್ತದೆ ಅವರುಗಳಿಗೆ appointement ಗಳನ್ನು ಜಾಸ್ತಿ ಮಾಡುತ್ತಿದ್ದೀರಿ DA, TA ಜಾಸ್ತಿಯಾಗುತ್ತದೆ ಮಾನ್ಯ ಯಡಿಯೂರಪ್ಪನವರೆ, ನಮಗೆ ನೀವು ಉತ್ತರ ಹೇಳಬೇಕು ಶಿಕ್ಷಣ ಇಲಾಖೆಯಲ್ಲಿ ಇವತ್ತು ಅಷ್ಟು college ಅಷ್ಟು high school ಎಲ್ಲಾ ನೀವು ಮಾಡಿ, ಹೊಸ college ಗಳನ್ನು ಸ್ಥಾಪನೆ ಮಾಡಿ ಆದರೆ, 7 9% ನಿಂದ 9% ಗೆ ತಾವು allocation ತೋರಿಸಿಕೊಂಡಿದ್ದೀರಿ, ಎಂದರೆ 1% Pay Commission ಒಪ್ಪುತ್ತೀರಿ Grant-in-aid ಗೆ ಸೇರಿಸುವುದಕ್ಕೆ ಒಪ್ಪುತ್ತೀರಿ Grant-in-aid-general institutions ಎಷ್ಟು ಬರುತ್ತವೆ ಎಂದು ನಿಮಗೆ ಕಲ್ಪನೆ ಇಲ್ಲ High School ಗಳು ಮಾಡುತ್ತೀರಿ, College ಗಳನ್ನು ಮಾಡುತ್ತೀರಿ, first grade college ಮಾಡುತ್ತೀರಿ ನೀವು ಎಲ್ಲಾ ಊರುಗಳಲ್ಲಿ institutions-modernize ಮಾಡುತ್ತೀರಿ ತಾವು ಎಲ್ಲಿಂದ ದುಡ್ಡು ತಂದು ಕೊಡುತ್ತೀರಿ ಹೇಳಿ ಆರೋಗ್ಯ

ಮತ್ತು ಕುಟುಂಬ ಕಲ್ಯಾಣದ ಬಗ್ಗೆ, ಏನು ಮಾನ್ಯ ಅಶೋಕ್ ರವರು ಮಾತನಾಡಿದ್ದೇ ಆಡಿದ್ದು

ಅಧ್ಯಕ್ಷರು – ಮಾಧುಸ್ವಾಮಿಯವರೆ ತಾವು ಮುಗಿಸುವುದಿಲ್ಲವೇ? ಒಂದೂ ಮುಕ್ಕಾಲು ಗಂಟೆಯಾಯಿತು

ಶ್ರೀ ಜೆ ಸಿ ಮಾಧುಸ್ವಾಮಿ – ಮುಗಿಸಬೇಕಲ್ಲ ಸಾರ್, ಸಾಯಂಕಾಲದವರೆಗೂ ಹಾಗೆ ಇರುವುದಕ್ಕೆ ಆಗುತ್ತದಾ? ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಎಷ್ಟು ಮಾಡಿದ್ದೀರಿ ಸಾರ್? Allocation remains same ಅದು 2 4% ಹಣವನ್ನು ನೀವು ಜಾಸ್ತಿ ಇಡಲೇ ಇಲ್ಲ ಇಂಧನ, ಮಾನ್ಯ ಸಿದ್ಧರಾಮಯ್ಯನವರ ಕಾಲದಲ್ಲಿ allocation 13 68% ಇತ್ತು ಮಾನ್ಯ ಯಡಿಯೂರಪ್ಪನವರು ಹೋದ ಬಾರಿ ಇಟ್ಟಿದ್ದು 11%, ಈಗಲೂ ಅಷ್ಟೇ ನಿಮಗೆ ಒಂದು ಮಾತು ಹೇಳುತ್ತೇನೆ Distribution and transmission, ಇವೆರಡೂ ಮಾನ್ಯ ರೇವಣ್ಣನವರ ಕಾಲದಲ್ಲಿ ಆಗಿದೆ ನಾವು ಎಲ್ಲದನ್ನು ಟೀಕೆ ಮಾಡಲು ಇಲ್ಲಿ ನಿಂತಿಲ್ಲ ಬೇಕಾದಷ್ಟು MOS ಗಳು ಆಗಿದೆ, ಬೇಕಾದಷ್ಟು transformer ಗಳು ಜಾಸ್ತಿ ಮಾಡಿದ್ದೀರಿ, ಬೇಕಾದಷ್ಟು stations ನೀವು ಮಾಡಿದ್ದೀರಿ ಅದಕ್ಕೆ ನೀವು ಹಣ ಇಟ್ಟಿರುವುದು ಬಹಳ ಕಡಿಮೆ Generation of Power ಇಲ್ಲದೇ ಇದೆಲ್ಲಾ ನೀವು ಮಾಡುತ್ತಿದ್ದೀರಿ ನೀವು ಎಲ್ಲಿ Generation of Power ಗೆ ಆದ್ಯತೆ ಕೊಡಲಿಲ್ಲವೆಂದರೆ ನಿಮಗೆ ಈ ರಾಜ್ಯದ ಅಭಿವೃದ್ಧಿ ಬಗ್ಗೆ ಆಸಕ್ತಿ ಇಲ್ಲ ಇನ್ನು ಕೃಷಿ ಚಟುವಟಿಕೆಗಳು ಎಷ್ಟು ಜಾಸ್ತಿ ಮಾಡಿದ್ದೀರಿ? ಅದು 6 33 ಇದ್ದದ್ದು 7% ಮಾಡಿದ್ದೀರಿ ಗ್ರಾಮೀಣಾಭಿವೃದ್ಧಿ, ಅದು 5% ಇತ್ತು 6% ಆಯಿತು ಗ್ರಾಮೀಣಾಭಿವೃದ್ಧಿ ಕೆಳಗೆ ಸ್ವಚ್ಛಗ್ರಾಮ, ಸುವರ್ಣ ಗ್ರಾಮ, ಒಂದು ಸಾವಿರ ಗ್ರಾಮ ಒಂದು ವರ್ಷಕ್ಕೆ, ಒಂದು ಕೋಟಿ ರೂಪಾಯಿ ಖರ್ಚು ಅದಕ್ಕೆ ಎಲ್ಲಿದೆ ಸ್ವಾಮಿ ದುಡ್ಡು? ಒಂದು ಸಾವಿರ ಗ್ರಾಮಗಳನ್ನು ಆಯ್ಕೆ ಮಾಡಿಕೊಂಡು ಪ್ರತಿ ಗ್ರಾಮಕ್ಕೆ ಒಂದು ಕೋಟಿ ರೂಪಾಯಿ ಕೊಡುತ್ತೇನೆ ಎಂದು ಹೇಳಿದ್ದೀರಿ ಅದಕ್ಕೆ ಹಣ ಎಲ್ಲಿ ಇಟ್ಟಿದ್ದೀರಿ? ಒಂದು ಜಿಲ್ಲೆಗೆ ಸ್ವಚ್ಛಗ್ರಾಮಗಳು 10 ಲಕ್ಷ ಇದ್ದದ್ದನ್ನು 20 ಲಕ್ಷ ಮಾಡಿಕೊಂಡು ಒಂದೊಂದು ಜಿಲ್ಲೆಗೆ 50 ರಿಂದ 60 ಕೊಡುತ್ತಿದ್ದೀರಿ

ಹಣ ಎಲ್ಲಿ ಇಟ್ಟಿದ್ದೀರಿ? ಯಾವ ಹಣ ತಂದು ಇಲ್ಲಿ ಖರ್ಚು ಮಾಡುತ್ತೀರಿ? ನಮಗೆ ಪ್ರೋಗ್ರ್ಯಾಂ ಗೊತ್ತಾಗಬೇಕಲ್ಲ ನೀವೇ ಇಲ್ಲಿ ಒಂದು ಸಾವಿರ ಆಯ್ಕೆ ಮಾಡುತ್ತೇವೆ ಎಂದು ಹೇಳುತ್ತೀರಿ ಇದರ ಜೊತೆಗೆ ಹೈದರಾಬಾದ್–ಕರ್ನಾಟಕದ ಬಗ್ಗೆ ಡಾ॥ ನಂಜುಂಡಪ್ಪ ವರದಿಯಲ್ಲಿ ನಾನು 1,571 ಕೋಟಿ ರೂಪಾಯಿಗಳನ್ನು ನಿಮಗೆ allocate ಮಾಡುತ್ತೇನೆಂದು ಹೇಳಿದ್ದೀರಿ ಹಣ ಎಲ್ಲಿದೆ? ಯಾವ ರೀತಿ ಮಾಡುತ್ತೀರಿ? ಇಲ್ಲಿಯವರೆಗೆ ಅಲ್ಲಿ ಆಗಿರುವಂತಹ ಇನ್ವೆಸ್ಟ್‌ಮೆಂಟ್‌ನ ಪ್ರಮಾಣ ಎಷ್ಟು ಎಂದು ತಮಗೆ ಗೊತ್ತಿದೆಯಾ? ಅಲ್ಲಿ ಏನೇನು ಆಗಿದೆ ಎಂದು ತಮಗೆ ಗೊತ್ತಾ? ಎಲ್ಲಾದರೂ evaluation ಮಾಡಿಸುತ್ತೀರಾ? 20 ವರ್ಷ, 10 ವರ್ಷ, 8 ವರ್ಷದ ಹಿಂದೆ ಕೊಟ್ಟಿರುವಂಥ ರಿಪೋರ್ಟ್‌ಗಳನ್ನು ಇವತ್ತು ವೈಜ್ಞಾನಿಕ ಎಂದು ತಾವು consider ಮಾಡುತ್ತೀರಾ? ನಾನು ಡಾ॥ ನಂಜಂಡಪ್ಪನವರನ್ನು ಟೀಕೆ ಮಾಡುವುದಿಲ್ಲ ಆದಾದಮೇಲೆ ಏನೇನು ಕಾರ್ಯಕ್ರಮಗಳು ಆಗಿದೆ? Irrigation ಎಷ್ಟು ಬೆಳೆದಿದೆ? ರಸ್ತೆಗಳನ್ನು ಎಷ್ಟು ಮಾಡಿದ್ದೇವೆ? ಅದರ ಮೌಲ್ಯಮಾಪನ ಎಲ್ಲಾದರೂ ಒಂದು ಕಡೆ ಆಗಿದೆಯಾ? ಅಲ್ಲಿ ಆಗಿರುವಂತಹ ಕೆಲಸಕ್ಕೂ ಮತ್ತು ಅಲ್ಲಿ ಖರ್ಚಾಗಿರುವಂತಹ ಹಣಕ್ಕೂ ಏನಾದರೂ ತಾಳೆ ಹೊಂದುತ್ತದೆಯಾ? ಅದನ್ನು ನೋಡಿದಿರಾ? ಅದರ ಬಗ್ಗೆ ತಾವು ನೋಡಬೇಕಲ್ಲ ಸುಮ್ಮನೆ ಹೆಸರು ಹೇಳಿದ ತಕ್ಷಣ ಅದಕ್ಕೆ ಶ್ರೇಷ್ಠತೆ ಬರುವುದಿಲ್ಲ ಅಲ್ಲಿ ಎಷ್ಟು ಖರ್ಚಾಗಿದೆ ಎಂದು ನೋಡಬೇಕಲ್ಲ ನಾವೆಲ್ಲ Upper Krishna project start ಆದಾಗ unilateral agreement ಬಂದಾಗ ಕೃಷ್ಣ ನೀರು ಬಳಸಬೇಕು ಎಂದಾಗ ನಾವು ಬಾಯಿ ಮುಚ್ಚಿಕೊಂಡು ಇದ್ದೆವು ನಾವೂ ಯಾರೂ ಮಾತನಾಡುತ್ತಿರಲಿಲ್ಲ ಇಡೀ ರಾಜ್ಯದ 1/3 ಭಾಗದ ದುಡ್ಡು ಖರ್ಚಾಗುವಾಗ ನಾವು ಮಾತನಾಡಲಿಲ್ಲ Hats off ಕೆಲಸವಾಗಲಿ ಎಂದಿದ್ದೇವೆ ಈಗ ಬಂದಿದ್ದೀರಿ, ತಾವು ಡಾ॥ ನಂಜುಂಡಪ್ಪನವರ ವರದಿ ಬಗ್ಗೆ ಹೇಳುತ್ತಿರಲ್ಲ, ಇವತ್ತಿನ ಸ್ಥಿತಿ ಗತಿ ಏನಿದೆ? ಬೇರೆ ತಾಲ್ಲೂಕುಗಳ ಸ್ಥಿತಿ ಗತಿ ಏನಿದೆ ಎನ್ನುವುದನ್ನು ಅವಲೋಕನ ಮಾಡಬೇಕಲ್ಲ ಅಲ್ಲಿ Industrial ನಲ್ಲಿ ಏನಾಗಿದ್ದೇವೆ? Irrigation ನಲ್ಲಿ ಏನಾಗಿದ್ದೇವೆ? Agriculture ನಲ್ಲಿ ಏನಾಗಿದೆ? ನಾವು ಕರ್ನಾಟಕದ ಮಧ್ಯಭಾಗದಲ್ಲಿ ಬದುಕಿರುವವರು ಪಾಪದವರು ಏನಾಗಿದ್ದೇವೆ?

ನಮ್ಮ ಬಗ್ಗೆ ಕೂಡ ನೀವು ಸ್ವಲ್ಪ ಯೋಚನೆ ಮಾಡಬೇಕಲ್ಲ ಹಿಂದೆ ಬಹಳ ಶ್ರೀಮಂತರಾಗಿದ್ದಂತಹ ತಾಲ್ಲೂಕುಗಳು ಮೂರು, ನಾಲ್ಕು, ಐದು ವರ್ಷ ಮಳೆ ಹೋಗಿ ನಾವು ಅದಕ್ಕಿಂತ ಬ್ಯಾಕ್‌ವರ್ಡ್ ಆಗಿಬಿಟ್ಟಿದ್ದೇವೆ ಕೃಷಿ ವಿಶ್ವವಿದ್ಯಾನಿಲಯ, ಹಾರ್ಟಿಕಲ್ಚರ್ ವಿಶ್ವವಿದ್ಯಾನಿಲಯ ಮಾಡುತ್ತೇವೆ ಎಂದಿದ್ದೀರಿ ಮಾಡಿ ಸಾರ್ which is the main Horticulture District in Karnataka? Kolar ಏನು stress ಕೊಟ್ಟಿದ್ದೀರಿ? ತರಕಾರಿ, ಹಣ್ಣು, ಹಾಲು ಇವೆಲ್ಲಾ ಇವತ್ತು ಏನಾದರೂ ಬೆಂಗಳೂರಿಗೆ ಬರುತ್ತಿದ್ದರೆ, ಅವರು ಮೇಜರ್ ಆಗಿ ಮಾಡಿಕೊಂಡು ಬರುತ್ತಿದ್ದಾರೆ ಏನು ಪ್ರೊಜೆಕ್ಟ್ ಇದೆ? Which is other district in Karnataka? Tumkur, Coconut, Arecanut ಎಲ್ಲಾ ನಾವು ಬೆಳೆಯುತ್ತಿದ್ದೆವು ನಮಗೆ ಏನು ಪ್ರೋಗ್ರ್ಯಾಂ ಕೊಟ್ಟಿದ್ದೀರಿ? ಯುನಿವರ್ಸಿಟಿ ಮಾಡಿಬಿಟ್ಟರೆ ನಾನು ಉದ್ಧಾರ ಆದೆನಾ? ನಾನು ಹಾರ್ಟಿಕಲ್ಚರ್ ಯುನವರ್ಸಿಟಿ ಅಲ್ಲಿ ವ್ಯಾಸಂಗ ಮಾಡಿದ್ದೇನೆ ನಮಗೆ ಮಾಡಿ ಸ್ವಾಮಿ, ಯುನಿವರ್ಸಿಟಿ ಕಟ್ಟಿಕೊಂಡು ನಮಗೆ ಏನೂ ಬೇಕಾಗಿಲ್ಲ ನಿಮ್ಮ ಯುನಿವರ್ಸಿಟಿಯವರು ಯಾರೂ ಇನ್ನೂ ನುಸಿಪೀಡೆಗೆ ಔಷಧಿ ಕಂಡುಹಿಡಿದಿಲ್ಲ ನಿಮ್ಮ ಯುನಿವರ್ಸಿಟಿಯವರು ಯಾರೂ ಅಡಿಕೆಯ ಹಳದಿ ರೋಗಕ್ಕೆ ಔಷಧಿ ಕಂಡುಹಿಡಿದಿಲ್ಲ ನೀವು ಇವತ್ತು ಅಡಿಕೆ ಬೆಳೆಯುವ ಪ್ರದೇಶದವರು Research oriented ಕೆಲಸ ಏನಾದರೂ ಯುನಿವರ್ಸಿಟಿಯಲ್ಲಿ ಆಗುತ್ತಿದೆಯಾ? ಇರುವಂತಹ ಯುನಿವರ್ಸಿಟಿಗೆ ಏನಾದರೂ Research oriented funds ಅದನ್ನು ನೀವು ಕೊಟ್ಟಿದ್ದೀರಾ? Research Dean ಗಳು ಏನು ಮಾಡುತ್ತಿದ್ದಾರೆ ಎಂದು ನೀವು ನೋಡಿದ್ದೀರಾ? ಯಾವುದಾದರೂ ಒಂದು ಖಾಯಿಲೆಗೆ ಅವರು ಔಷಧಿ ಕಂಡುಹಿಡಿದಿದ್ದಾರಾ? ನಮಗೆ ಯುನಿವರ್ಸಿಟಿ ಏಕೆ ಬೇಕು? ನಾನು ಹಿಂದೆ ಕೇಳಿದ್ದೆ, ಒಂದು ಹಸಿರು ಗಬ್ಬಿ ರಾಗಿ ಇವತ್ತು ರಾಜ್ಯದಲ್ಲಿ extinct ಆಗುತ್ತಿದೆ ಇಷ್ಟೊಂದು RRS ಗಳು ಮತ್ತು Agriculture University ನಮ್ಮ ಹತ್ತಿರ ಇದೆ ಯಾರಾದರೂ ಒಬ್ಬರು ರಿಸರ್ಚ್ ಮಾಡಿದರಾ? ಯಾವುದೋ ಇಂಡಾಫ್, ಆ ವರೈಟಿ, ಈ ವೈರಟಿ, ಅಂತ ಕಾಳು ಜಾಸ್ತಿಯಾಗಿ ಹುಲ್ಲು ಇಲ್ಲದ ವರೈಟಿ ಯನ್ನು ನೀವು ತಂದಿರಿ ಹುಲ್ಲ, ಕಾಳು, ಎರಡು ಜಾಸ್ತಿಯಾಗುವಂತಾದ್ದು ಮಾಡಿ

ಎಂದರೆ ಮಾಡಲಿಲ್ಲ ರಿಸರ್ಚ್ ಮತ್ತು lab to land ಆ ಕಾರ್ಯಕ್ರಮವಾಗಬೇಕು, ಆಗ ನಾವು ಯುನಿವರ್ಸಿಟಿಗಳನ್ನು ಒಪ್ಪುವುದು ಅಲ್ಲಿಯ ಸಂಶೋಧನೆ ಫಲ ನಮಗೆ reach ಆಗಬೇಕು ಆದರೆ ದುರ್ದೈವ 50 ವರ್ಷವಾದರೂ reach ಆಗಲಿಲ್ಲ 50 ವರ್ಷದಲ್ಲಿ ನಿಮ್ಮ Agriculture University research ಮಾಡಿರುವ ಫಲ ರೈತರ ಕೈಗೆ ಸಿಕ್ಕಿಲ್ಲ ಕನಿಷ್ಟ ಹರ್ಟಿಕಲ್ಚರ್‌ನಲ್ಲಿಯೂ ಕೂಡ ಸಿಕ್ಕಿಲ್ಲ

ಅಧ್ಯಕ್ಷರು – ಅವರು ಮಾಡದಿದ್ದರೆ, ಇವರು ಏನು ಮಾಡುತ್ತಾರೆ?

ಶ್ರೀ ಜೆ ಸಿ ಮಾಧುಸ್ವಾಮಿ – ಯುನಿವರ್ಸಿಟಿ ಮಾಡುತ್ತೇವೆಂದು ಹೇಳಿದ್ದಾರಲ್ಲ, ಒಳ್ಳೆ ಕತೆಯಾಯಿತಲ್ಲಾ, ಇವರು ಮಾಡದಿದ್ದರೆ, ಮತ್ತೆ ಯಾರು ಮಾಡಬೇಕು?

ಅಧ್ಯಕ್ಷರು – ವಿಜ್ಞಾನಿಗಳಿಗೆ ಯುನಿವರ್ಸಿಟಿಯಲ್ಲಿ ಸರಿಯಾದ ಸೌಲಭ್ಯಗಳನ್ನು ಕೊಡದಿದ್ದರೆ, ಅದೇನಾದರೂ ಇದ್ದರೆ ಹೇಳಿ ಎಲ್ಲಾ ವಿಚಾರದಲ್ಲೂ ನಾವು slackness ಕಾಣುತ್ತಿದ್ದೇವೆ

ಶ್ರೀ ಜೆ ಸಿ ಮಾಧುಸ್ವಾಮಿ – ಹೌದು, ಅವರು ಹರ್ಟಿಕಲ್ಚರ್ ಯುನಿವರ್ಸಿಟಿ ಮಾಡಿದ್ದೇವೆಂದು ಹೇಳಿದರು ಹರ್ಟಿಕಲ್ಚರ್ ಯುನಿವರ್ಸಿಟಿ ಗೆ ಒಂದು ಅಜೆಂಡಾ ಇತ್ತು ನಮ್ಮ ಉತ್ಪಾದನೆಯನ್ನು ಜಾಸ್ತಿ ಮಾಡುವುದಕ್ಕೆ ಇತ್ತು ಅದು ರೋಗ ಕಂಟ್ರೋಲ್ ಮಾಡುವುದಕ್ಕೆ ಇತ್ತು ನಮ್ಮ ಬದುಕಿಗೆ ಪೂರಕವಾದ ಕಾರ್ಯಕ್ರಮ ಮಾಡಿಕೊಡುವಂಥ ಹರ್ಟಿಕಲ್ಚರ್ ಯುನಿವರ್ಸಿಟಿ ಬಂದರೆ ನಾವು ಅದನ್ನು ಸ್ವಾಗತ ಮಾಡುತ್ತೇವೆ ನಮ್ಮ ಸಮಸ್ಯೆ ನಮಗೆ ಗೊತ್ತಲ್ಲ, ನೀರು ಇಲ್ಲ, ಕರೆಂಟ್ ಇಲ್ಲ, ಬೋರ್‌ವೆಲ್ ಇಲ್ಲ, ದನಕರುವಿನ ಗೊಬ್ಬರ ಇಲ್ಲ, ಅದೆಲ್ಲಾ ಹಾಕದೇ ಕಾಯಿ ಬರುವುದಿಲ್ಲ ಅದೆಲ್ಲಾ ಹಾಕದೇ ರಾಗಿ ಬರುವುದಿಲ್ಲ, ಅದೆಲ್ಲಾ ಹಾಕದೆ ಕಬ್ಬು ಬರುವುದಿಲ್ಲ ಇದಕ್ಕೆ ಏನಾದರೂ ಮಾಡಿ, ಅದಕ್ಕಿಂತ ದೊಡ್ಡ ಸಾಧನೆ ನಾವೇ ಮಾಡುತ್ತೇವೆಂದು ನಾವು ಹೇಳುತ್ತಿರುವುದು ತಾವು ದಯಮಾಡಿ ಉತ್ತರವನ್ನು ಕೊಡುವಾಗ ಹೇಳಬೇಕು ಅನೇಕ ಬಾಬ್ತುಗಳಿಂದ ನಮಗೆ ಇವತ್ತು ಹಣ ಬರುವುದು ಕಡಿಮೆಯಾಗಿದೆ ನಾನು ಟ್ಯಾಕ್ಸ್ ಕಲೆಕ್ಷನ್ ಬಗ್ಗೆ ನಿಮಗೆ ಒಂದು ಮಾತನ್ನು

ಹೇಳಬಯಸುತ್ತೇನೆ ನಾವು ವ್ಯಾಟ್ ಬಂದರೆ ಬಹಳ ಸುಧಾರಣೆಯಾಗಿತ್ತೆಂದು ತಿಳಿದುಕೊಂಡಿದ್ದೆವು ಭಾರಿ evasion ಆಗುತ್ತಿದೆ, ಅಂಗಡಿಯು ಇಲ್ಲೆ ಇರುತ್ತದೆ, ಗೊಡೌನ್ ಇಲ್ಲೆ ಇರುತ್ತದೆ ನಾನು ವಾಸ್ತವವಾಗಿ ಮಾತನಾಡುತ್ತೇನೆ, ಯಾರನ್ನು ಟೀಕೆ ಮಾಡುತ್ತಿಲ್ಲ 60% of the tax ಇವತ್ತು evade ಆಗುತ್ತಾ ಇದೆ ನಮ್ಮ ಕಲ್ಪನೆ ಏನು ಇತ್ತು, stock load ಹಾಕಿರುತ್ತಾರೆ, ನಿಮ್ಮ ಅಧಿಕಾರಿಗಳು ಹೋಗುತ್ತಾರೆ, ನೋಡುತ್ತಾರೆ, ವಸೂಲಿ ಬಹಳ ಚೆನ್ನಾಗಿ ಆಗುತ್ತದೆಂದು ಹೇಳಿ, ಆ ರೀತಿ ನಿಮ್ಮ ಇಲಾಖೆ ನಡೆಯುತ್ತಿಲ್ಲ ನಿಮ್ಮ ಇಲಾಖೆ ನಡೆಯುತ್ತಿರುವುದು material cost ಜಾಸ್ತಿಯಾಯಿತು, ಅದಕ್ಕೆ propotionate ಆಗಿ ಕಲೆಕ್ಷನ್ ಜಾಸ್ತಿಯಾಗಿರುವುದು ಬಿಟ್ಟರೆ, ವಸೂಲಿಯಲ್ಲಿ ಸಾಧನೆ ಸಾಧಿಸಿದ್ದೇವೆಂಬ ಮಾತನ್ನು ದಯಮಾಡಿ ಇನ್ನೊಮ್ಮೆ ಪರಿಶೀಲನೆ ಮಾಡಿ ಎಲ್ಲೂ ಕೂಡ ಇವತ್ತು original bill ಕೊಡುತ್ತಿಲ್ಲ ಒಂದು bill ಅನ್ನು ಲಾರಿಯವರಿಗೆ ಕೊಡುತ್ತಾರೆ, ಮಧ್ಯೆ ಎಲ್ಲಾದರೂ ತಡೆದರೆ ಈ bill ಅನ್ನು ತೋರಿಸು ಎಂದು ಹೇಳುತ್ತಾರೆ ನಾನು ಇದನ್ನು ಖಂಡಿತವಾಗಿ ಹೇಳುತ್ತಿದ್ದೇನೆ ಇದನ್ನು ನಾನು practical ಆಗಿ ನಿಮಗೆ ಹೇಳುತ್ತಿದ್ದೇನೆ ನಾಲ್ಕು ಲಕ್ಷ ರೂಪಾಯಿಗಳ material ಅನ್ನು ತೆಗೆದುಕೊಂಡರೆ, ಒಂದು ಲಕ್ಷ ಚಿಲ್ಲರೆಗೆ ಒಂದು bill ಅನ್ನು ಕೊಟ್ಟಿರುತ್ತಾನೆ ನಮ್ಮ ಲಾರಿಯನ್ನು ತಡೆದರೆ ಆ bill ಅನ್ನು ತೋರಿಸುತ್ತೇವೆ, ತಡೆಯದಿದ್ದರೆ ಅದು ವಜಾ, ಯಾರು ಅಂಗಡಿಯಲ್ಲಿ ಬೋರ್ಡ್ ಅನ್ನು ಹಾಕಿ, ನನ್ನ ಹತ್ತಿರ ಸ್ಟಾಕ್ ಇಷ್ಟು ಇದೆ, ಎಂದು display ಮಾಡುತ್ತಿಲ್ಲ ಯಾವುದೇ ಬಾಬ್ತಲ್ಲೂ ಮಾಡುತ್ತಿಲ್ಲ, ಮತ್ತೆ ನಿಮ್ಮ ವಸೂಲಿ ಮಾಡುವ office ಗಳು ನೀಟಾಗಿ ವ್ಯವಹಾರಗಳನ್ನು ಮಾಡಿಕೊಂಡು ಹೋಗುತ್ತಿದ್ದಾರೆ ನೀವು ಬಹಳ ಒಳ್ಳೆಯ ರೀತಿಯಲ್ಲಿ ಆಗುತ್ತಿದೆಯೆಂದು ತಿಳಿದುಕೊಂಡಿದ್ದೀರಿ ಆ ಕಡೆ ಆಲೋಚನೆ ಮಾಡಬೇಕು, ಎರಡನೆಯದು, two wheelers ಗೆ tax ಜಾಸ್ತಿ ಮಾಡಿಬಿಟ್ಟರೆ ಬಹುಶಃ two wheelers ಸಂಖ್ಯೆಯನ್ನೆ ಕಡಿಮೆ ಮಾಡಬಹುದೆಂಬ ನಿಮ್ಮ ಭಾವನೆಯನ್ನು ನಾವು ಒಪ್ಪುವುದಕ್ಕೆ ಆಗುವುದಿಲ್ಲ Two wheelers ಗೆ life tax ಅನ್ನು ಜಾಸ್ತಿ ಮಾಡಿ ಬಿಟ್ಟಿದ್ದೇವೆ, ಹಾಗಾಗಿ ಬೆಂಗಳೂರಿನಲ್ಲಿ two wheelers ಕಡಿಮೆಯಾಗಬೇಕೆಂದು ಹೇಳುತ್ತೀರಿ ತಾವು ಬೇರೆ ಆಲೋಚನೆಯನ್ನು ಮಾಡಬೇಕು ಬೆಂಗಳೂರು ನಗರದ transport arrangement ಗೆ ಬೇರೆ

ಮಾಡಬೇಕೆಂದು ಹೇಳುತ್ತಿದ್ದೇನೆ ನಮ್ಮದು ಒಂದು demand ಇದೆ Agriculture ನಲ್ಲಿ tractor ಅನ್ನು ಏನು ಬಳಸುತ್ತಿದ್ದೇವೆ ಅದಕ್ಕೆ diesel ಗೆ ನೀವು subsidise ಮಾಡಬೇಕು ನೀವು ಮೀನುಗಾರರಿಗೆ ಕೊಟ್ಟಿದ್ದೀರಿ ಇಷ್ಟು ಎಕರೆ ಭೂಮಿ ಇರುವವರಿಗೆ ಇಷ್ಟು diesel ಅನ್ನು subsidy price ನಲ್ಲಿ ಕೊಡಿಯೆಂದು ಒಂದು ಆದೇಶವನ್ನು ಮಾಡಿ ನಾವು ರೈತರು ಬದುಕಿಕೊಳ್ಳುತ್ತೇವೆ, ಉಳುಮೆ ಮಾಡುವುದಕ್ಕೆ ನಮಗೆ ಬಹಳ ಕಷ್ಟವಾಗಿದೆ Production cost ಕಡಿಮೆಯಾಗುತ್ತದೆ, ನಮ್ಮ agriculture diesel ಗೆ ಏನಾದರೂ ಕಡಿಮೆ ಮಾಡಬೇಕು ನಾನು ಮತ್ತೊಮ್ಮೆ demand ಮಾಡುತ್ತಿದ್ದೇನೆ ಕೊಬ್ಬರಿ ಮೇಲೆ ಇರುವ CST ಯನ್ನು ತೆಗೆಯಬೇಕು ಅದರಿಂದ ನಿಮಗೆ ಬಹಳ ವರಮಾನ ಬರುತ್ತದೆಂದು ನೀವು ಭಾವಿಸಬಾರದು ಕಾಫಿಯನ್ನು nationalize ಮಾಡಬೇಕು ಅವನು 15 ಲಕ್ಷ ರೂಪಾಯಿಯೊಳಗೆ ಮಾಡಲಿ, 15 ಲಕ್ಷ ರೂಪಾಯಿಗಳಾಚೆಗೆ ಮಾಡಲಿ, ನಾನು ಈಗ ತಾವು ಏನು ಕಾರ್ಯಕ್ರಮಗಳನ್ನು ತಂದಿದ್ದೀರಿ, ದೇವರು ನಿಮಗೆ ಇದನ್ನೆಲ್ಲಾ ನಿಭಾಯಿಸುವಂಥ ಶಕ್ತಿಯನ್ನು ಕೊಡಲಿಯೆಂದು ಹಾರೈಸುತ್ತೇನೆ ಏಕೆಂದರೆ ನಮಗೆ ಇರುವ ವಿವೇಚನೆಯಲ್ಲಿ ಅಷ್ಟೊಂದು ದೊಡ್ಡ ಮೊತ್ತದ ಹಣವನ್ನು ಒದಗಿಸುವುದಕ್ಕೆ ಆಗುವುದಿಲ್ಲ ಸುಮ್ಮನೆ ಇಲ್ಲಿ ಬಜೆಟ್ ಹೇಳಿ ಹೋಗುವುದು, ಅಲ್ಲಿ ಮಾಡುವುದಕ್ಕಾಗುವುದಿಲ್ಲವೆಂಬ ಸ್ಥಿತಿ ನಿರ್ಮಾಣ ಮಾಡಬಾರದು ತಾವು performance report ಅನ್ನು ತಾವು ಇವತ್ತೇ ಕೊಟ್ಟಿದ್ದರೆ, ಇವತ್ತೇ ನಿಮಗೆ ಗೊತ್ತಾಗುತ್ತಿತ್ತು ಹೋದ ವರ್ಷ ಏನು ಹೇಳಿದಿರಿ, ಎಲ್ಲಿಗೆ ಬಂದು ನಿಂತಿದ್ದೀರಿಯೆಂದು ಗೊತ್ತಾಗುತ್ತಿತ್ತು ನಿಮ್ಮ ಇಲಾಖೆಯವರು ಅದನ್ನು ಬಜೆಟ್ ಚರ್ಚೆಯಾಗುವವರೆಗೂ ಕೊಡುವುದಿಲ್ಲ, ಏಕೆಂದರೆ ಅವರು ಉತ್ತರವನ್ನು ಹೇಳುವುದಕ್ಕೆ ಕಷ್ಟವಾಗುತ್ತದೆಂದು ಕೊಡುವುದಿಲ್ಲ ಇದನ್ನೆಲ್ಲಾ ಮಾಡುವುದಕ್ಕೆ ದೇವರು ನಿಮಗೆ ಶಕ್ತಿಯನ್ನು ಕೊಡಲಿ, ಆ ಶಕ್ತಿಯನ್ನು ಏನಾದರೂ ಮಾಡಿ, ನಿಜವಾಗಿಯೂ ರೈತರ ಬಗ್ಗೆ ಅನುಕಂಪ ಇಟ್ಟುಕೊಂಡು ಮಾಡಿ ಇನ್ನು ಬೇರೆ popular ಕಾರ್ಯಕ್ರಮಗಳು ಏನು ಇದೆ ಅದು ಸೈ ಎನಿಸಿಕೊಳ್ಳುವುದಕ್ಕೆ ಆಗುವುದಿಲ್ಲ ನೀವು ಒಂದು ಮರಕ್ಕೆ ದುಡ್ಡನ್ನು ಕೊಟ್ಟರೆ ಇನ್ನು 10 ಮರಗಳು ಮುನಿಸಿಕೊಳ್ಳುತ್ತವೆ ನೀವು ತಪ್ಪು ತಿಳಿದುಕೊಂಡಿದ್ದೀರಿ ನೀವು ಯಾರಿಗಾದರೂ 10 ಜನರಿಗೆ ಎತ್ತಿನಗಾಡಿಯನ್ನು ಕೊಟ್ಟರೆ, ನಮಗೆ ಅಲ್ಲಿ

ನೂರು ಜನ ರೈತರು ವಿರೋಧವಾಗುತ್ತಾರೆ ಅದು ಅವರು 10 ಜನರೇನಾ ಎಂದು ಕೇಳುತ್ತಾರೆ, ನಿಜವಾಗಿಯೂ, ರಾಜಕಾರಣಿಗಳಾಗಿ individual benefit ಕೊಟ್ಟು ಸೈ ಎನಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲ ಇದನ್ನು ತಲೆಗೆ ತೆಗೆದುಕೊಂಡು ಬಿಡಿ, 250 ಜನರಿಗೆ ಮುಂದಿನ ವರ್ಷಕ್ಕೆ ಎತ್ತನ್ನು ಕೊಡುತ್ತೇವೆಂದು ಹೇಳಿದರೆ, ಅಲ್ಲಿ ಇನ್ನು 500 ಜನರು ವಿರೋಧವಾದರೆಂದು ಆಗುತ್ತದೆ ಭಾರಿ ಹೆಸರು ಬರುತ್ತದೆಂದು ಅಲ್ಲ ಆ ಕಾರ್ಯಕ್ರಮಗಳಿಗೆ ತಾವು ದಯಮಾಡಿ ಕಡಿವಾಣವನ್ನು ಹಾಕಬೇಕು ಕೃಷಿಗೆ ಪೂರಕವಾಗಿ ಕೊಡಬೇಕು, ಮತ್ತೆ ಇವತ್ತು ಮಾನ್ಯ ಯಡಿಯೂರಪ್ಪನವರು ಬಹಳ ಕಾರ್ಯಕ್ರಮಗಳನ್ನು ಘೋಷಣೆ ಮಾಡಿದ್ದಾರೆ ನಾನು ಎರಡು ವಿಚಾರಗಳನ್ನು ಕೇಳಬೇಕಾಗಿದೆ ತಾವು mid-day meal ಕಾರ್ಯಕ್ರಮವನ್ನು SSLC ಯವರಿಗೂ ಘೋಷಣೆ ಮಾಡಿ, extend ಮಾಡಿದ್ದೇವೆಂದು ಹೇಳಿದ್ದೀರಿ Quantum of food middle school ಮಕ್ಕಳಿಗೆ ಕೊಟ್ಟಷ್ಟೆ High School ಮಕ್ಕಳಿಗೂ ಕೊಟ್ಟರೆ ಆಗುವುದಿಲ್ಲ ಅದನ್ನು ತಾವು ತಲೆಯಲ್ಲಿ ಇಟ್ಟುಕೊಳ್ಳಬೇಕು Mid-day meal ನಲ್ಲಿ High School ಮಕ್ಕಳಿಗೆ ಅವರಿಗೆ ಶಕ್ತಿ ಇರುವಷ್ಟಾದರೂ ನೀವು ಆಹಾರವನ್ನು ಕೊಡಿಸುವುದಾದರೆ ಈ ಕಾರ್ಯಕ್ರಮವನ್ನು ತನ್ನಿ ಇಲ್ಲವೆಂದರೆ ಅವರು ಹೇಗೋ ಮನೆಯಿಂದ ತಂದು ಊಟ ಮಾಡುವುದನ್ನು ಕಳೆದು ಅರ್ಧ ಹೊಟ್ಟೆಯಲ್ಲಿ ಕುಳಿತುಕೊಂಡು ಓದುವ ಸ್ಥಿತಿಯನ್ನು ತಾವು ದಯವಿಟ್ಟು ನಿರ್ಮಾಣ ಮಾಡಬಾರದು ಕೆಲವು sectors ಅನ್ನು ತಾವು ಮರೆತುಬಿಟ್ಟಿದ್ದೀರಿ ಅದರ ಕಡೆಗೆ ತಾವು ಗಮನವನ್ನು ಕೊಡಬೇಕು With all that ಒಂದಷ್ಟು ಕೆಲಸವನ್ನು ಮಾನ್ಯ ಯಡಿಯೂರಪ್ಪನವರು ಈ ಬಜೆಟ್‌ನಲ್ಲಿ ಮಾಡಿದ್ದೀರಿ ಡಾ॥ ನಂಜುಂಡಪ್ಪನವರ ವರದಿಯ ಪ್ರಕಾರ ಅಭಿವೃದ್ಧಿಯನ್ನು ಮಾಡುತ್ತೇವೆಂದು ನಮಗೆ ಹೇಳಿದ್ದೀರಿ ತಾವು ಆ ಅಭಿವೃದ್ಧಿಯನ್ನು ವೈಯಕ್ತಿಕ ಬದುಕಿನ ಅಭಿವೃದ್ಧಿಯ ಹಾಗೆ ಮಾಡಿದರೆ ನಾನು ಅದನ್ನು ಮೆಚ್ಚಿಕೊಳ್ಳುತ್ತೇನೆ ನಾವು ಡಾ॥ ನಂಜುಂಡಪ್ಪನವರ ವರದಿಯನ್ನು ಒಪ್ಪುತ್ತೇವೆ ರಸ್ತೆಯನ್ನು ಮಾಡಿ ನಾವು ಡಾ॥ ನಂಜುಂಡಪ್ಪನವರ ವರದಿಯಲ್ಲಿ ಅನುಷ್ಠಾನ ಮಾಡಿದ್ದೇವೆಂದು ಹೇಳಬಾರದು Education ಅನ್ನು ನಾವು ಏಕೆ ಒಪ್ಪುತ್ತೇವೆ? ನಿಮ್ಮ Education Commissioner ಅವರನ್ನು ನೀವು ಕೇಳಬೇಕು ಒಂದು ಹಳ್ಳಿಯಲ್ಲಿ 20

ಹುಡುಗರಿಲ್ಲವೆಂದರೆ ಶಾಲೆಯನ್ನು ಮುಚ್ಚಿಯೆಂದು ನೀವು ಆದೇಶವನ್ನು ಕೊಡುತ್ತೀರಿ ಚಿಕ್ಕನಾಯಕನ ಹಳ್ಳಿಯಂಧ ತಾಲ್ಲೂಕುಗಳಲ್ಲಿ 80–85 post ಅನ್ನು shift ಮಾಡಿಯೆಂದು ಆದೇಶವನ್ನು ಕೊಡುತ್ತೀರಿ ನೀವು ಡಾ॥ ನಂಜುಂಡಪ್ಪನವರ ವರದಿಯನ್ನು ಅನುಷ್ಟಾನ ಮಾಡುತ್ತಿರಾ? ಹಾಗಾದರೆ ನಾವು ನಾಲ್ಕು ನಾಲ್ಕು ಜನ ಮಕ್ಕಳನ್ನು ಹುಟ್ಟಿಸಿ ಎಂದು ಹೋಳೋಣವೇ? ಅವರ ಊರಿಗೆ school ಬೇಕೆಂದರೆ, ಅವರು ಮಕ್ಕಳನ್ನು ಹುಟ್ಟಿಸುವ ಕಾರ್ಯಕ್ರಮವನ್ನು ಈಗ ಮಾಡಿಕೊಳ್ಳಬೇಕು ಅವರು ಊರುಗಳಲ್ಲಿ School ಗಳೇ ಇಲ್ಲ ಅದನ್ನು ಎಲ್ಲಾದರೂ ತನ್ನಿ, ಇನ್ನು ಎರಡನೆಯದಾಗಿ ನಾನು ಹೇಳಿದರೆ ತಾವು ನಗುತ್ತೀರಿ, 1ನೇ ತರಗತಿಯಿಂದ 7ನೇ ತರಗತಿಯವರೆಗೂ ಮೂರು ಜನ master ಗಳನ್ನು ಇಟ್ಟುಕೊಂಡು ಮಾಡಬೇಕು Student teacher ratio ನಿಮ್ಮ- ಸರ್ಕಾರದಲ್ಲಿ ತಂದಿದ್ದೀರಿ Is not a fact? 1ನೇ ತರಗತಿಯಿಂದ 7ನೇ ತರಗತಿಯವರೆಗೂ 3 ಜನ ಮೇಸ್ಟ್ರುಗಳನ್ನು ಪಾರ ಮಾಡಿಯೆಂದು ನಿಮ್ಮ ಹತ್ತಿರ ಇರುವುದೇ 90 ಹುಡುಗರು, 100 ಹುಡುಗರೆಂದು ಹೇಳಿಬಿಟ್ಟರೆ, quality education ನಮಗೆ ಕೊಟ್ಟಿದ್ದೀರಾ? ಡಾ॥ ನಂಜುಂಡಪ್ಪನವರ ವರದಿಯನ್ನು ಏನು implement ಮಾಡುತ್ತೀರಿ? ನಮಗೆ ಪ್ರತಿ class ಒಬ್ಬ ಶಿಕ್ಷಕರನ್ನು ಕೊಡಿ Yes, ಶಿಕ್ಷಣ ಮೊದಲನೇ ಆದ್ಯತೆಯೆಂದು ಮಾಡಿ Educate and organize ಎಂದು ಡಾ॥ ಅಂಬೇಡ್ಕರ್‌ರವರು ಹೇಳಿದ್ದಾರೆ ಮೊದಲು Educate ಮಾಡಿ ಈ restriction ಅನ್ನು ತೆಗೆಯುವುದಕ್ಕೆ ನಿಮ್ಮ officers ಗೆ ಹೇಳಿ ಗ್ರಾಮೀಣ ಪ್ರದೇಶಗಳಲ್ಲಿ ಮಕ್ಕಳ ಸಂಖ್ಯೆ ಇಷ್ಟೆ ಇರಬೇಕೆಂಬ ಆದೇಶವನ್ನು ದಯಮಾಡಿ withdraw ಮಾಡಿಸಿ ನಿಜವಾಗಿಯೂ ನಮಗೆ ಸಹಾಯ ಮಾಡಬೇಕೆಂದರೆ, 100 ಜನರು ಇದ್ದರೆ, 1 to 7 class ನಲ್ಲಿ 100 ಜನರನ್ನು ಕೂರಿಸಿಕೊಂಡು ಪಾರ ಮಾಡೋಣವೇ? ಇವತ್ತು ನಮ್ಮ ಶಾಲೆಗಳು, ನಿಮ್ಮ drill teacher ಕುಳಿತುಕೊಂಡು ಕನ್ನಡ ಪಾರವನ್ನು ಮಾಡುತ್ತಿದ್ದಾರೆ ಅದು ಗೊತ್ತಾ? ದಯಮಾಡಿ ಈ ಕಡೆಗೆ ಹೆಚ್ಚು ಆದ್ಯತೆಯನ್ನು ಕೊಡಬೇಕು ಇವತ್ತು ಶಾಲೆಗಳಿಗೆ ಶಿಕ್ಷಕರ ಮತ್ತು ಮಕ್ಕಳ ಅನುಪಾತವನ್ನು ಹಳ್ಳಿಗಳಲ್ಲಿ ಏನು ತಂದಿದ್ದೀರಿ, ಆ restriction ಅನ್ನು ತೆಗೆಯಬೇಕೆಂದು ಹೇಳಿ, ನಾನು ಮಾನ್ಯ ಅಧ್ಯಕ್ಷರಿಗೆ ವಂದಿಸಿ, ನಾನು ನನ್ನ ಮಾತನ್ನು ಮುಗಿಸುತ್ತೇನೆ

ಅಧ್ಯಕ್ಷರು – ಈಗ ಮಾನ್ಯ ಎನ್ ಚೆಲುವರಾಯಸ್ವಾಮಿಯವರು ಭೋಜನ ಕೂಟವನ್ನು ಏರ್ಪಾಡು ಮಾಡಿದ್ದಾರೆ ಎಲ್ಲರೂ ದಯಮಾಡಿ ಬರಬೇಕೆಂದು ವಿನಂತಿಸಿಕೊಂಡಿದ್ದಾರೆ ಈಗ ಸದನವನ್ನು 3 00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ

(ಸಭೆಯು ಮಧ್ಯಾಹ್ನ 1 57 ಗಂಟೆಗೆ ಮುಂದೂಡಿ, ಮತ್ತೆ 3 00 ಗಂಟೆಗೆ ಸೇರಲು ನಿಶ್ಚಯಿಸಿತು)

(ಸದನವು ಪುನಃ ಮಧ್ಯಾಹ್ನ 3 ಗಂಟೆ 16 ನಿಮಿಷಕ್ಕೆ ಸಮಾವೇಶಗೊಂಡಿತು)

(ಸನ್ಮಾನ್ಯ ಸಭಾಧ್ಯಕ್ಷರು ಪೀಠವನ್ನಲಂಕರಿಸಿದ್ದರು)

ಅಧ್ಯಕ್ಷರು – ಶ್ರೀರಾಮರೆಡ್ಡಿಯವರೆ, ತಾವು ಮಾತನಾಡಿ ತಾವೇ ಒಂದು ಲಕ್ಷ್ಮಣರೇಖೆ ಹಾಕಿಕೊಂಡು ಮಾತನಾಡಿ ಏಕೆಂದರೆ, ಬಹಳ ಜನರು ಮಾತನಾಡುವವರಿದ್ದಾರೆ ಅದಕ್ಕೋಸ್ಕರ ಹೇಳಿದೆ ದಯಮಾಡಿ, ಅರ್ಥ ಮಾಡಿಕೊಳ್ಳಿ ಎಲ್ಲರೂ ಮಾತನಾಡಬೇಕೆನ್ನುತ್ತಾರೆ

ಶ್ರೀ ಜಿ ವಿ ಶ್ರೀರಾಮರೆಡ್ಡಿ (ಬಾಗೇಪಲ್ಲಿ) – ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಯಡಿಯೂರಪ್ಪನವರು ಎರಡನೇ ಬಾರಿಗೆ ಆಯವ್ಯಯವನ್ನು ಮಂಡಿಸಿದ್ದಾರೆ ನಾನು ಅದನ್ನು ಮಂಡಿಸುವ ಸಂದರ್ಭದಲ್ಲೇ ಪ್ರತಿಭಟನೆ ಮಾಡಿದೆ ಏಕೆಂದರೆ, ಮಂಡಿಸುತ್ತಿರುವ ಬಜೆಟ್ ತನ್ನ ಪಾವಿತ್ರ್ಯತೆಯನ್ನು ಕಳೆದುಕೊಂಡಿದೆ ಹಾಗಾಗಿ, ಅದನ್ನು ಮಂಡಿಸುವುದರಲ್ಲಿ ಏನೂ ಅರ್ಥವಿಲ್ಲ ಆ ಬಜೆಟ್‌ನಲ್ಲಿ ಏನೆಲ್ಲ ಅಂಶಗಳು ಇವೆ ಎನ್ನುವಂಥದ್ದರ ಬಗ್ಗೆ ಒಂದು ತಿಂಗಳಿನಿಂದ, ದೇಶಾದ್ಯಂತ, ರಾಜ್ಯಾದ್ಯಂತ ಪ್ರಚಾರಕ್ಕಿಟ್ಟಿದ್ದಾರೆ ಹಾಗಾಗಿ, ಬಜೆಟ್‌ಗೆ ಯಾವ ರೀತಿಯಾದಂಥ ಪಾವಿತ್ರ್ಯತೆ ಇರಬೇಕಾಗಿತ್ತು, ಆ ಪಾವಿತ್ರ್ಯತೆ ಮತ್ತು ಎರಡನ್ನೂ ಕೂಡ ಸಂಪೂರ್ಣವಾಗಿ ಕಳೆದುಕೊಂಡಿದೆ, ಮಂಡನೆಗೆ ಯೋಗ್ಯವಲ್ಲವೆಂದು ನಾನು ಪ್ರತಿಭಟನೆ ಮಾಡಿದೆ ನನ್ನ ಪ್ರತಿಭಟನೆಗೆ ಆಧಾರವೆಂದರೆ ಮಾನ್ಯ ಮುಖ್ಯಮಂತ್ರಿಗಳು ಮತ್ತು ಹಣಕಾಸಿನ ಮಂತ್ರಿಗಳೂ ಆಗಿರುವ ಉಪ ಮುಖ್ಯಮಂತ್ರಿಗಳು ಹೇಳಿರುವಂಥ ಹೇಳಿಕೆಗಳು "12ನೇ ತಿಂಗಳಲ್ಲಿ ಸಾರಾಯಿ ನಿಷೇಧ ಸರ್ಕಾರಕ್ಕೆ ಚಿಂತನೆ ಮದ್ಯ ನಿಷೇಧಕ್ಕೆ

ಸರ್ಕಾರದ ಚಿಂತನೆ ಯಡಿಯೂರಪ್ಪ" "ರಾಜ್ಯದಲ್ಲಿ ಸಾರಾಯಿ ನಿಷೇಧಕ್ಕೆ ಸರ್ಕಾರದ ಹೆಜ್ಜೆ ಮುಖ್ಯಮಂತ್ರಿಗಳು ಅದಕ್ಕಿಂತ ಒಂದು ಹೆಜ್ಜೆ ಮುಂದೆ ಹೋಗಿ, ಅಮಲು ಮುಕ್ತ ಸಮಾಜ ನಿರ್ಮಾಣದ ಗುರಿ ಮಾನ್ಯ ಯಡಿಯೂರಪ್ಪನವರು " "ಕೇವಲ ಸಾರಾಯಿ ಅಲ್ಲ, ಅದಕ್ಕಿಂತ ಒಂದು ಹೆಜ್ಜೆ ಮುಂದೆ ಹೋಗಿ ಅಮಲು ಮುಕ್ತ ಸಮಾಜ ನಮ್ಮ ಗುರಿ, total ban ಲಾಟರಿ, ಸಾರಾಯಿ ನಿಷೇಧ ಸಿ ಎಂ ಘೋಷಣೆ Declared 1ನೇ ತಿಂಗಳ 4ನೇ ತಾರೀಖಿನಲ್ಲಿ ಘೋಷಣೆ ಮಾಡಿರತಕ್ಕಂಥದ್ದಿದೆ ಸಾರಾಯಿ, ಲಾಟರಿಗೆ ನಿಷೇಧ, ಏಪ್ರಿಲ್‌ನಿಂದ ಜಾರಿ ಮುಖ್ಯಮಂತ್ರಿ." time ಕೂಡ fix ಮಾಡಿಬಿಟ್ಟರು Ban may remain on paper ಇವರದೇ ಹೇಳಿಕೆ "Arrack ban from 1st July CM " ಇದು ಈ ಬಜೆಟ್ ಬಗ್ಗೆ, ಸಾರಾಯಿ ನಿಷೇಧದ ಬಗ್ಗೆ, ಮತ್ತೆ, ಸಾಲ ಮನ್ನಾ ಹೇಳಿಯೇ ಬಿಟ್ಟರು ಸಾಲ ಮನ್ನಾ ಸರ್ಕಾರದ ತೀರ್ಮಾನ, 25 ಸಾವಿರ ರೂಪಾಯಿಗಳವರೆಗೆ ಸೀಮಿತ ಹಣಕಾಸು ಮಂತ್ರಿ. ಎಲ್ಲ ರೈತರಿಗೂ ಬಡ್ಡಿ ಮನ್ನಾ ಮುಖ್ಯಮಂತ್ರಿ. ಇವು ಇವರು ಹೇಳಿರತಕ್ಕಂಥ ಹೇಳಿಕೆಗಳು ಹಾಗಾಗಿ, ತಾವೇ ದಯವಿಟ್ಟು ಹೇಳಬೇಕು ಮಾನ್ಯ ಯಡಿಯೂರಪ್ಪನವರೇ ಹೇಳಬೇಕು ನಾನು ಬೇರೆ ಯಾರನ್ನೂ ಕೇಳುವುದಿಲ್ಲ ಅವರೇ ಹೇಳಿರುವ ಹೇಳಿಕೆಗಳಿವು ಈ ಬಜೆಟ್‌ಗೇನಾದರೂ ಪಾವಿತ್ರ್ಯತೆ ಇದೆಯೇ ಎನ್ನತಕ್ಕಂಥದ್ದನ್ನು ಅವರೇ ಹೇಳಬೇಕು " ರೈತರ ಸಾಲ ಮನ್ನಾ ಮುಗಿಯದ ಗೊಂದಲ Promise will be kept Loan waiver for Karnataka farmers CM ಸಾಲ ಮನ್ನಾ ಮಾರ್ಚ್ 31ರೊಳಗೆ ತೀರ್ಮಾನ ಸಾಲ ಮನ್ನಾ ಸಹಕಾರ ಬ್ಯಾಂಕ್ ಹಿತಾಸಕ್ತಿ ಬಗ್ಗೆ ಚರ್ಚೆ ಸಾಲ ಮನ್ನಾ ಮುಂದಿನ ವಾರ ಸಹಕಾರ ಸಂಘಗಳ ಸಭೆ ಯಡಿಯೂರಪ್ಪ ಸಾಲ ಮನ್ನಾ ಕ್ರಿಯಾ ಯೋಜನೆ ಸಿದ್ಧ ಸಿ ಎಂ Announcement on farmer loan waiver before March 31 Kumarswamy ಸರ್ಕಾರದ ಅಸ್ಪಷ್ಟತೆ, ಪ್ರತಿಪಕ್ಷ ತರಾಟೆ " ಇದು ಸಾಲ ಮನ್ನಾ ಬಗ್ಗೆ ಮೂರು ಪ್ರಮುಖವಾದ ಘೋಷಣೆಗಳು (1) ಲಾಟರಿ ನಿಷೇಧ (2) ಸಾರಾಯಿ ನಿಷೇಧ (3) ಸಾಲ ಮನ್ನಾ ಈ ಪ್ರಮುಖವಾದಂಥ ಸರ್ಕಾರದ ಆಯವ್ಯಯದ ತೀರ್ಮಾನಗಳನ್ನು ಅದನ್ನು

ಮಂಡಿಸುವುದಕ್ಕಿಂತ ಒಂದು ತಿಂಗಳ ಮೊದಲೇ ಡಿಕ್ಲೇರ್ ಮಾಡಿಬಿಟ್ಟು ಬಜೆಟ್ ಮಂಡಿಸಿ ಇದಕ್ಕೆ ಪಾವಿತ್ರ್ಯತೆ ಉಳಿದಿದೆ ಎಂದು ಯಡಿಯೂರಪ್ಪನವರು ಹೇಳಿದರೆ ನನ್ನದೇನೂ ತಕರಾರಿಲ್ಲ ಇದಕ್ಕೆ ಪಾವಿತ್ರ್ಯತೆ ಉಳಿದಿದೆ ಎಂದು ನೀವು ಭಾವಿಸಿದರೆ, ಇದಕ್ಕೆ ನನ್ನದೇನೂ ತಕರಾರಿಲ್ಲ ಹೀಗಾಗಿ ಈ ಆಯವ್ಯಯ ತನ್ನ ಎಲ್ಲಾ ಪಾವಿತ್ರ್ಯತೆಯನ್ನು, ಗೌಪ್ಯತೆಯನ್ನು ಕಳೆದುಕೊಂಡು, ಇದೊಂದು ಸಂತೆಯ ಮಾತಾಗಿದೆ ಮಾನ್ಯ ಯಡಿಯೂರಪ್ಪನವರೇ, ನೀವು ಪ್ರಾರಂಭದಲ್ಲೇ ಕುವೆಂಪು ರವರನ್ನು ಕೋಟ್ ಮಾಡಿದಿರಿ ಇದು ಕೂಡ ಕುವೆಂಪು ರವರು ಹೇಳಿದ ಮಾತು "ಶಾಸ್ತ್ರ ಎಂಬುದು ಸಂತೆಯ ಮಾತು, ವೇದ ಎಂಬುದು ಓದಿನ ಸುದ್ದಿ, ಪುರಾಣ ಎಂಬುದು ಪುಂಡರ ಗೋಷ್ಟಿ" ಇದನ್ನು ನಾನು ಹೇಳಿಲ್ಲ ಇದು ಕೂಡ ಕುವೆಂಪುರವರ ಮಾತು ಇದೊಂದು ಸಂತೆಯ ಮಾತಾಗಿ ಮಾರ್ಪಾಟಾಗಿದೆ ಅಂದರೆ, ರಾಜ್ಯದ ಬಜೆಟ್ ಒಂದು ಸಂತೆಯ ಮಾತಾಗಿ ಉಳಿದಿದೆ ಇದನ್ನು ಇಷ್ಟಕ್ಕೆ ನಿಲ್ಲಿಸುತ್ತೇನೆ ಮಾನ್ಯ ಯಡಿಯೂರಪ್ಪನವರು ಬಜೆಟ್‌ನ್ನು ಮಂಡಿಸಿದ್ದಾರೆ ನಾನು ಅವರಿಗೆ ಬಹಳ ನಮ್ರತೆಯಿಂದ ಕೇಳುತ್ತಿದ್ದೇನೆ ರಾಜ್ಯದ ಬಜೆಟ್ ಅಂದರೆ ಏನು? ಇದೇನಾದರೂ ಚೀಟಿ ವ್ಯವಹಾರ ನಡೆಸುವ ಹಣಕಾಸು ನಿಗಮವೇ ಹಣ ಹಾಕಿ ಚೀಟಿ ವ್ಯವಹಾರ ನಡೆಸುತ್ತಾರೆ ಹಣಕಾಸು ಇಲಾಖೆ ಎಂದರೆ, ಚೀಟಿ ನಡೆಸತಕ್ಕಂಥ ಹಣಕಾಸು ಸಂಸ್ಥೆಯಲ್ಲ ಆಯವ್ಯಯ ಎಂದರೆ, ಒಂದು ರಾಜ್ಯದಲ್ಲಿ ಒಂದು ವರ್ಷಕ್ಕೆ ನಮಗೆಷ್ಟು ಆದಾಯ ಬರುತ್ತದೆ, ಆ ಆದಾಯ ಎಲ್ಲಿಂದ ಬರುತ್ತದೆ, ಹೇಗೆ ಬರುತ್ತದೆ, ಆ ಆದಾಯವನ್ನು ನಾವು ಯಾವುದಕ್ಕೆ ಖರ್ಚು ಮಾಡಬೇಕು, ಹೇಗೆ ಖರ್ಚು ಮಾಡಬೇಕು, ಯಾವ್ಯಾವುದಕ್ಕೆ ಎಷ್ಟು ಖರ್ಚು ಮಾಡಬೇಕು, ಯಾವುದಕ್ಕೆ ಆದ್ಯತೆ ಕೊಡಬೇಕು ಎನ್ನುವುದನ್ನು ತೀರ್ಮಾನ ಮಾಡತಕ್ಕಂಥ ಹಕ್ಕು ಅದಕ್ಕೆ ಒಪ್ಪಿಗೆ ಕೊಡತಕ್ಕಂಥ ಅಧಿಕಾರಿ ಇರತಕ್ಕಂಥದ್ದು ಈ ಶಾಸನ ಸಭೆಗೆ ಇವರ್ಯಾರಿಗೂ ಆ ಅಧಿಕಾರವಿಲ್ಲ ಇವರಿಗೇನಾದರೂ ಅಧಿಕಾರ ಇದ್ದಿದ್ದರೆ ಶಾಸನ ಸಭೆಯಲ್ಲಿ ಅದನ್ನು ಮಂಡಿಸುತ್ತಲೇ ಇರಲಿಲ್ಲ ಅಂತಿಮವಾಗಿ ತೀರ್ಮಾನ ತೆಗೆದುಕೊಳ್ಳತಕ್ಕಂಥ ಅಧಿಕಾರ ಇರತಕ್ಕಂಥದ್ದು ಈ ಶಾಸನ ಸಭೆಗೆ ಆದರೆ ಈ ಶಾಸನ ಸಭೆಗೆ ಇರತಕ್ಕಂಥ ಎಲ್ಲಾ ಪರಮಾಧಿಕಾರವನ್ನು ಕಿತ್ತು ಬಿಸಾಕಿ ಇದರ ಪಾವಿತ್ರ್ಯತೆಯನ್ನು ಕಳೆದು ಹಾಕಿ, ಮೂರು ತಿಂಗಳ ಹಿಂದೆ ಘೋಷಣೆ ಮಾಡಿ

ಶಾಸನ ಸಭೆಯಲ್ಲಿ ಇದನ್ನು ಮಂಡಿಸಿದರೆ ಈ ಶಾಸನ ಸಭೆಗೆ ಏನಾದರೂ ಘನತೆ – ಗೌರವ ಇದೆಯೇ? ಎಂದು ಹಿರಯರಾದಂಥ ಮಾನ್ಯ ಉದಾಸಿ ಅವರನ್ನು ಮತ್ತು ಯಡಿಯೂರಪ್ಪನವರನ್ನು ಕೇಳುತ್ತಿದ್ದೇನೆ ಹೋಗಲಿ, ನೀವು ಮಂಡಿಸಿರತಕ್ಕಂಥ ಬಜೆಟ್‌ಗೆ ನಿರ್ದಿಷ್ಟವಾಗಿ ಹೇಳಿ ನಿಮ್ಮ ಗುರಿಗಳು ಏನು ? ನಿಮ್ಮ ಆಯ್ಕೆಗಳು ಯಾವ್ಯಾವು? ನಿಮ್ಮ ಪ್ರಯಾರಿಟೀಸ್ ಏನು? ಯಾವುದಕ್ಕೆ ಪ್ರಯಾರಿಟೀಸ್ ಕೊಡುತ್ತೀರಿ? ಬಜೆಟ್ ಎಂದರೆ ಯಾವ್ಯಾವುದು ಏನೇನು ಇರಬೇಕು, ಮೊದಲನೆ ಆದ್ಯತೆ ಇರಬೇಕಾದುದು ಮಾನವ ಸಂಪನ್ಮೂಲ ಅಭಿವೃದ್ಧಿಗೆ ಇರಬೇಕು ಎರಡನೇ ಆದ್ಯತೆ ಇರಬೇಕಾಗಿರುವುದು ಆರ್ಥಿಕ ಅಭಿವೃದ್ಧಿಗೆ ಅದರಲ್ಲಿ ಕೃಷಿ, ಕೈಗಾರಿಕೆ, ತೋಟಗಾರಿಕೆ, ಸಮಾಜ ಕಲ್ಯಾಣ, ಎಲ್ಲಾ ಬರುತ್ತದೆ ಮೂರನೇಯದು ಪ್ರಕೃತಿ ಸಂಪತ್ತಿನ ಅಭಿವೃದ್ಧಿ ಮಾನ್ಯ ಉದಾಸಿಯವರೇ, ಒಂದು ಆಯವ್ಯಯಕ್ಕೆ ಇವು ಮುಖ್ಯವಾಗಿರಬೇಕಾದಂಥ ಗುರಿಗಳು ಈ ಗುರಿಗಳನ್ನು ತಲುಪತಕ್ಕಂಥ ನಿಟ್ಟಿನಲ್ಲಿ ನಿಮ್ಮ ಬಜೆಟ್ ಇದೆಯೇ? ಇದನ್ನು ನೀವೇ ಹೇಳಿ ಇದರಲ್ಲಿ ಹೇಳಿರತಕ್ಕಂಥದ್ದು ಏನೆಲ್ಲಾ ಇದ್ದರೆ, ಏನಾದರೂ ಇಲ್ಲದೇ ಇದ್ದರೆ, ಏನಾದರೂ ಇದ್ದರೆ, ನೀವೇ ಹೇಳಿರತಕ್ಕಥದ್ದು ಏನೆಲ್ಲಾ ಇದ್ದರೆ, ಏನಾದರೂ ಇಲ್ಲದೇ ಇದ್ದರೆ, ನೀವೇ ಹೇಳಿರತಕ್ಕಂಥದದು, ನಾವು ಹೇಳಿರತಕ್ಕಂಥದ್ದು ಏನೂ ಒಂದು ಅಕ್ಷರ ಇದರಲ್ಲಿಲ್ಲ ಇದರಲ್ಲಿ ಒಂದು ಅಕ್ಷರ ಕೂಡ ಇಲ್ಲ ಎಲ್ಲಾ ನಿಮ್ಮದೇ ಇದನ್ನು ತೋರಿಸಿಯೇ ನಿಮಗೆ ಹೇಳುತ್ತೇನೆ ಈ ಮೂರು ಗುರಿಗಳನ್ನು ತಲುಪತಕ್ಕಂಥ ದಿಕ್ಕಿನಲ್ಲಿ ಈ ಬಜೆಟ್‌ನಲ್ಲಿ ಏನಾದರೂ ಒಂದು ಕಾರ್ಯಕ್ರಮವನ್ನು ನೀವು ಹಾಕಿದ್ದೀರಾ? ನೀವು ಬಜೆಟ್‌ನಲ್ಲಿ ಸರ್ಕಾರದ ಆದ್ಯತೆಗಳನ್ನು ಹೇಳಿದ್ದೀರಿ ಏನೆಂದರೆ, ನಮ್ಮ ಸರ್ಕಾರದ ಆದ್ಯತೆಗಳು ಇಂತಿವೆ

1) ಅಭಿವೃದ್ಧಿಯ ವೇಗೋತ್ಕರ್ಷ
2) ಸಮತೋಲನದ ಅಭಿವೃದ್ಧಿ
3) ಸಾಮಾಜಿಕ ನ್ಯಾಯ
4) ಸಾಮಾಜಿಕ ಸಾಮರಸ್ಯ
5) ಸಾಮಾಜಿಕ ಭದ್ರತೆ

6) ಆಹಾರದ ಭದ್ರತೆ

7) ಮಾನವ ಸಂಪನ್ಮೂಲದ ಸದ್ಬಳಕೆಗೆ ಕೌಶಲ್ಯಾಭಿವೃದ್ಧಿ

8) ಉದ್ಯೋಗಾವಕಾಶಗಳಲ್ಲಿ ಹೆಚ್ಚಳ

ಕಡೆಯದಾಗಿ ನೀವು ಇದನ್ನು ಹೇಳಿದ್ದೀರಿ ಇದನ್ನು ನೀವು ಹೇಳಿರತಕ್ಕಂಥದ್ದು ಸ್ವಾಮಿ, ನಾವು ಹೇಳಿದ್ದಲ್ಲ ಇವು ನಿಮ್ಮ ಗುರಿಗಳು ಇದನ್ನು ತಲುಪುವುದಕ್ಕೆ ನೀವು ಯಾವ್ಯಾವ ಅಂಶಗಳನ್ನು ಆಯ್ಕೆ ಮಾಡಿಕೊಂಡಿದ್ದೀರೆಂದರೆ, 71 ಅಂಶಗಳನ್ನು ಆಯ್ಕೆ ಮಾಡಿಕೊಂಡಿದ್ದೀರಿ ಅದರಲ್ಲಿ ನೀವು ಆಯವ್ಯಯದ ಮುಖ್ಯಾಂಶಗಳು ನಮ್ಮ ಆಯವ್ಯಯದ ಪ್ರಧಾನ ಅಂಶಗಳೆಂದು ನೀವೇ ಇವುಗಳನ್ನು ಆಯ್ಕೆ ಮಾಡಿಕೊಂಡಿರುವುದು ನಮ್ಮದಲ್ಲ ಇವರು ಆಯ್ಕೆ ಮಾಡಿಕೊಂಡಿರುವ 71 ಅಂಶಗಳನ್ನು ನಾನು ಇಲ್ಲಿ ಓದಿದರೆ, ನಮಗೆ ಒಂದು ರೀತಿಯ ಮುಜುಗರ ಆಗುತ್ತದೆ, ಆ ಕಾರಣಕ್ಕಾಗಿ ನಾನು ಓದುವುದಕ್ಕೆ ಆಗುವುದಿಲ್ಲ ಏಕೆಂದರೆ, ಇವೆಲ್ಲಾ ಬಜೆಟ್‌ನಲ್ಲಿ ಬರತಕ್ಕಂಥ ಅಂಶಗಳಲ್ಲ ಎನ್ನತಕ್ಕಂಥ ಪ್ರಾಥಮಿಕ ತಿಳುವಳಿಕೆ ಇರತಕ್ಕಂಥ ಜನ ನಾವು ನಾವೇನು ಆರ್ಥಿಕ ಪಂಡಿತರಲ್ಲ ಇದರಲ್ಲಿ **"ಹಿಂದೂಸ್ಥಾನಿ ಗಾಯಕಿ ಡಾ॥ ಗಂಗೂಬಾಯಿ ಹಾನಗಲ್ ಅವರ ಮನೆ ವಸ್ತು ಸಂಗ್ರಹಾಲಯವಾಗಿ ಪರಿವರ್ತನೆ"** ಅವರ ಬಗ್ಗೆ ನಮಗೆ ಗೌರವವಿದೆ ಆದರೆ ಇದು ಎಲ್ಲಿ ಬರಬೇಕಾಗಿತ್ತು? ಆ ಕಾರ್ಯಕ್ರಮ ಎಲ್ಲಿ ರೂಪಿಸಬೇಕಾಗಿತ್ತು? ನೀವು ಯಾವುದರಲ್ಲಿ ಇಡಬೇಕಾಗಿತ್ತು? ಎಲ್ಲಿ ಇಟ್ಟಿದ್ದೀರಿ? ಎಲ್ಲಿ ಇಡಬೇಕಾಗಿತ್ತು, ಎಲ್ಲಿ ಇಟ್ಟಿದ್ದೀರಿ? ನೀವು ಇಡಬೇಕಾಗಿದ್ದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಲ್ಲಿ ನೀವು ಹಣವನ್ನು ತೊಡಗಿಸಿ ಅದರ ಮುಖಾಂತರ ನೀವು ಅವುಗಳನ್ನು ಜಾರಿ ಮಾಡಿಸಿದ್ದರೆ ನಮ್ಮದೇನೂ ತಕರಾರಿಲ್ಲ ಆದರೆ ನೀವು ಇಟ್ಟಿರತಕ್ಕಂಥದ್ದು ಎಲ್ಲಿ? ನಮ್ಮ ಆಯವ್ಯಯದ ಪ್ರಧಾನ ಅಂಶಗಳು ಪ್ರಧಾನ ಅಂಶಗಳು ಎಂದರೆ ಏನು? ಈ ರಾಜ್ಯದ ಆರ್ಥಿಕಾಭಿವೃದ್ಧಿಗೆ ಬೇಕಾಗಿರತಕ್ಕಂಥ ಮೂಲ ಅಂಶಗಳು ನಿಮ್ಮ ಮೊದಲನೇ ಅಂಶ ಇಲ್ಲಿ ಹೇಳಿರತಕ್ಕಂಥದ್ದು ಅಭಿವೃದ್ಧಿಯ ವೇಗೋತ್ಕರ್ಷ Crystallization of development, fastening the development, streamline the development ನಿಮ್ಮ ಮೊದಲನೇ ಘೋಷಣೆ ಇದು ನಿಮ್ಮ streamline

4/13

ಮಾಡುತ್ತದೆಯೇ? ನಿಮ್ಮ ಅಭಿವೃದ್ಧಿಯ ವೇಗವನ್ನು ಇದು ಹೆಚ್ಚು ಮಾಡುತ್ತದೆಯೇ? 71 ಅಂಶಗಳಲ್ಲಿ ಯಾವುದಾದರೂ ಒಂದು ಅಂಶ, ಮಾನ್ಯ ಯಡಿಯೂರಪ್ಪನವರೆ, ಈ ರಾಜ್ಯದ ಅಭಿವೃದ್ಧಿಯ ವೇಗವನ್ನು ಹೆಚ್ಚಿಸುತ್ತಿದೆಯೇ? ಇದರಲ್ಲಿ ಒಂದೇ ಒಂದು ಅಂಶ ಇದೆಯೇ ಎಂದು ಹೇಳಿಬಿಡಿ ಅದರ ಬದಲಿಗೆ ನೀವು ಯಾವ ಆದ್ಯತೆಯನ್ನು ನೀವೇ ಬಜೆಟ್‌ನಲ್ಲಿ ಹೇಳಿದ್ದೀರಿ, ಅದನ್ನು ಬಿಟ್ಟು ಬೇರೆಯದಕ್ಕೆ ಆದ್ಯತೆಯನ್ನು ಕೊಟ್ಟಿದ್ದೀರಿ ಇದನ್ನು ನಾವು ಬಜೆಟ್ ಎಂದು ಕರೆಯಬೇಕೆ? ನಾನು ಪ್ರಾರಂಭದಲ್ಲಿ ಹೇಳಿದಾಗ ಶ್ರೀನಿವಾಸಗೌಡರು ಇರಲಿಲ್ಲ ಕೆಲವು ಕಡೆ ಚೀಟಿಗಳನ್ನು ನಡೆಸುತ್ತಾರೆ ಇದು ತಮಗೆ ಗೊತ್ತಿದೆಯಲ್ಲವೇ? ಅದು ಇದು ನಾನು ಹೇಳಿದೆ, ಆಗ ನೀವು ಇರಲಿಲ್ಲ ನೀವು ಈಗ ಬಂದು ಏನು ಎಂದು ಕೇಳಿದರೆ ನಾನೇನು ಮಾಡಲಿ?

ಶ್ರೀ ಕೆ ಶ್ರೀನಿವಾಸ ಗೌಡ – ಚೀಟಿಗಳನ್ನು ನಡೆಸುವುದು ಎಂದು ಹೇಳಿದಿರಿ ಉಪಮುಖ್ಯಮಂತ್ರಿಗಳಾಗಿ ಚೀಟಿ ನಡೆಸುತ್ತಾರೆಂದರೆ ಇದು ಯಾವ ನ್ಯಾಯ? ಅವರು ಎಲ್ಲಿ ನಡೆಸಿದ್ದಾರೆಂದು ಅದನ್ನಾದರೂ ತಾವು ಹೇಳಬೇಕು ಬಜೆಟ್ ಕೊಡುವುದರಲ್ಲಿರುವ ತಪ್ಪುಗಳನ್ನು ಎತ್ತಿ ಹೇಳಿ ನನಗೆ ಗೊತ್ತಿದ್ದ ಹಾಗೆ ಚೀಟಿ ನಡೆಸುವಂಥ ವ್ಯವಹಾರ ಇದರಲ್ಲಿ ಏನೂ ಇಲ್ಲ ನಿಮಗೆ ಗೊತ್ತಿದ್ದರೆ ಅದನ್ನು ಪಬ್ಲಿಕ್ ಆಗಿ ಹೇಳಿ

ಶ್ರೀ ಕೆ ಜಯಪ್ರಕಾಶ್ ಹೆಗ್ಡೆ – **MSIL** ನಲ್ಲಿ ಚೀಟಿ ನಡೆಸುತ್ತಿದ್ದಾರೆ

ಶ್ರೀ ಹೆಚ್ ಸಿ ಬಾಲಕೃಷ್ಣ – ಚೀಟಿ ನಡೆಸುವುದೆಲ್ಲಾ ಈಗಾಗಲೇ ನಿಲ್ಲಿಸಿದ್ದೇವೆ ಸರ್ಕಾರ ಚೀಟಿ ನಡೆಸುವುದಿಲ್ಲ

ಶ್ರೀ ಜಿ ವಿ ಶ್ರೀರಾಮರೆಡ್ಡಿ – ನಾನು ಹೇಳಿದ್ದನ್ನೂ ಪೂರ್ತಿ ಕೇಳದೇ ಮಧ್ಯೆ ಬಂದು ಈ ರೀತಿ ಮಾತನಾಡಿದರೆ ಏನು ಮಾಡಲಿ? ಇದನ್ನು ಬಜೆಟ್ ಎಂದು ಕರೆಯಬೇಕೇ? ನಿಮ್ಮದು ಆದ್ಯತೆಯ ವಲಯ ಮೊದಲನೆಯದಾಗಿ ಆರ್ಥಿಕ ಅಭಿವೃದ್ಧಿ ಈ ಆರ್ಥಿಕ ಅಭಿವೃದ್ಧಿ ಎಂದರೆ ಏನು? ಇಡೀ ಕರ್ನಾಟಕ ರಾಜ್ಯದಲ್ಲಿ ವಸ್ತುಗಳ ಉತ್ಪಾದನೆಗೆ ಮತ್ತು ಸರಕುಗಳ ಉತ್ಪಾದನೆಗೆ ಆದ್ಯತೆಯನ್ನು ಕೊಡತಕ್ಕಂಥ

ಕೆಲಸ ಆಗಬೇಕು ಇವತ್ತಿನ ದಿವಸ ಕೃಷಿ, ಕೈಗಾರಿಕೆ, ತೋಟಗಾರಿಕೆ ಈ ರೀತಿಯಾಗಿ ಎಲ್ಲಾ ರಂಗದಲ್ಲಿಯೂ ಕೂಡ ಉತ್ಪಾದನೆಗಳನ್ನು ಹೆಚ್ಚಿಸತಕ್ಕಂಥದ್ದಕ್ಕೆ ಮೊದಲನೇ ಗುರಿ ಇರಬೇಕು ಈ ರಾಜ್ಯ ಅಭಿವೃದ್ಧಿಯಾಗಬೇಕಾದರೆ, ಉತ್ಪಾದನೆ ಹೆಚ್ಚು ಮಾಡಬೇಕು ಉತ್ಪಾದನೆ ಹೆಚ್ಚು ಮಾಡುವುದಕ್ಕೆ ನೀವು ಯಾವಾಗ ಆದ್ಯತೆ ಕೊಡುತ್ತೀರೋ ಆಗ ಆರ್ಥಿಕ ಅಭಿವೃದ್ಧಿಯಾಗುವುದಕ್ಕೆ ಸಾಧ್ಯವಾಗುತ್ತಯೇ ಹೊರತು, ಉತ್ಪಾದನೆ ಹೆಚ್ಚು ಮಾಡುವುದಕ್ಕೆ ಆದ್ಯತೆ ಕೊಡದೇ ಅನುತ್ಪಾದಕವಾದಂಥ ವೆಚ್ಚವನ್ನು ಮಾಡುತ್ತಾ ಹೋದರೆ ಅದು ಆರ್ಥಿಕ ಅಭಿವೃದ್ಧಿಯಾಗುತ್ತದೆಯೇ? ಮಾನ್ಯ ಅಧ್ಯಕ್ಷರು ಶೇಕ್ಸ್‌ಪಿಯರ್‌ರವರ ಪಾರವನ್ನು ತಾವೂ ಕೂಡ ಓದಿರಬೇಕೇನೋ ಗೊತ್ತಿಲ್ಲ ನಾನು ಪಿಯುಸಿಯಲ್ಲಿದ್ದಾಗ ಓದಿದ್ದೇನೆ "ಪ್ರಾಡಿಗಲ್ ಸನ್" ಎಂಬ ಪಾರ ಇತ್ತು ಅಂದರೆ, ದುಂದು ವೆಚ್ಚದ ಮಗ ಎಂದರ್ಥ ಆದ್ದರಿಂದ ಇದರಲ್ಲಿ ಏನಾಗಿದೆಯೆಂದರೆ, ಯಾರೋ ಶ್ರಮ ಬಿದ್ದು ಯೋಜನೆ ಹಾಕಿ ಸಂಪತ್ತನ್ನು ಉತ್ಪಾದನೆ ಮಾಡಿದರು ಈಗ ಇದನ್ನು ಖರ್ಚು ಮಾಡುವುದು ಹೇಗೆ ಎಂದು ಗೊತ್ತಿಲ್ಲದೇ ಇರತಕ್ಕಂಥವರ ಕೈಗೆ ಯಜಮಾನಿಕೆ ಹೋಯಿತು ನಮ್ಮ ಚಿಂತಾಮಣಿಯಲ್ಲಿ ಸಿಮೆಂಟ್ ಮೂಟೆ ಹೊತ್ತು ವ್ಯಾಪಾರ ನಡೆಸಿ ನಮ್ಮ ಚಿಂತಾಮಣಿಯಲ್ಲಿಯೇ ದೊಡ್ಡ ಶ್ರೀಮಂತರಾದವರು ಹೇರಳವಾದಂಥ ಆಸ್ತಿಯನ್ನು ಅವರು ಸಂಪಾದನೆ ಮಾಡಿಟ್ಟಿದ್ದರು ಅವರಿಗೆ ಒಬ್ಬನೆ ಮಗ ಇದ್ದ ಏನು ಮಾಡಬೇಕೆಂದು ಆತನಿಗೆ ಗೊತ್ತಾಗಲಿಲ್ಲ ಕಡೆಗೆ ಆ ಒಬ್ಬ ಮಗನ ಸ್ಥಿತಿ ಏನಾಯಿತೆಂದರೆ ಆತನ ತಂದೆ ಸಂಪಾದನೆ ಮಾಡಿದಂಥ ಆಸ್ತಿಯನ್ನು ಪೋಲ್ ಮಾಡಿ ಕೊನೆಗೆ ಮತ್ತೆ ಸಿಮೆಂಟ್ ಅಂಗಡಿ ಪ್ರಾರಂಭ ಮಾಡುವುದಕ್ಕೆ ಹೋದಾಗ ಆತನಿಗೆ ಅಂಗಡಿ ಸಿಗಲಿಲ್ಲ ದೊಡ್ಡಪಿಳ್ಳಪ್ಪನವರ ಛತ್ರದ ಪಕ್ಕದಲ್ಲಿಯೇ ದಾಸಪ್ಪನವರ ಮನೆ ಇದೆ ಮಾನ್ಯ ರಮೇಶ್‌ಕುಮಾರ್‌ರವರು ಅವರ ಮನೆಯನ್ನು ನೋಡಿರಬೇಕು ಅದು ಶ್ರೀನಿವಾಸಪುರಕ್ಕೆ ಹೋಗುವ ದಾರಿಯಲ್ಲಿಯೇ ಇದೆ ಕೊನೆಗೆ ಆತನ ಮಗನಿಗೆ ಅಂಗಡಿ ಸಿಗಲಿಲ್ಲ ಇದೂ ಕೂಡ ಹಾಗೆ ಆಗುತ್ತದೆ ಸದ್ಯಕ್ಕೆ ಆ ರೀತಿಯಾಗಿಲ್ಲ ಏತಕ್ಕಾಗಿ ಈ ವಿಚಾರವನ್ನು ಹೇಳುತ್ತಿದ್ದೇನೆಂದರೆ, ಯಾವುದೋ ಕಾರಣದಿಂದ ಕರ್ನಾಟಕ ರಾಜ್ಯಕ್ಕೆ ಹೇರಳವಾದಂಥ ವರಮಾನ ಬರಲಿಕ್ಕೆ ಪ್ರಾರಂಭವಾಯಿತು ಬಂದಂಥ ವರಮಾನವನ್ನು ವ್ಯವಸ್ಥಿತವಾಗಿ ಯೋಜನ

ಬದ್ಧವಾಗಿ ಉಪಯೋಗಿಸಿಕೊಳ್ಳತಕ್ಕಂಥ ಮತ್ತು ಆದಾಯವನ್ನು ಹೆಚ್ಚಿಸಿಕೊಳ್ಳತಕ್ಕಂಥದ್ದಕ್ಕೆ ಇನ್ನೊಂದು ಹೊಸ ಕಾರ್ಯಕ್ರಮವನ್ನು ಹಾಕಿಕೊಳ್ಳದೇ ಈಗ ಇದ್ದಂಥ ಹಣವನ್ನು ಆ ಮರಕ್ಕೆ ಈ ಮರಕ್ಕೆ ಒಂದಿಷ್ಟು ಆ ದೇವಸ್ಥಾನಕ್ಕೆ ಒಂದಿಷ್ಟು ಕೊಡುತ್ತಾ ಹೋದರೆ, " ಯಾರದೋ ದುಡ್ಡು ಯಲ್ಲಮ್ಮನ ಜಾತ್ರೆ" ರೀತಿಯಾಗುತ್ತದೆ ಸಣ್ಣ ನೀರಾವರಿ ಅಭಿವೃದ್ಧಿ ಕಾರ್ಯಕ್ರಮದಲ್ಲಿ ರವಿಶಂಕರ್ ಗುರೂಜಿಗೆ ಜ್ಞಾನೋದಯವಾದಂಥ ಜಾಗದ ಅಭಿವೃದ್ಧಿ ಬಗ್ಗೆ ಇದರಲ್ಲಿ ಇದೆ ಅವರಿಗೆ ಎಲ್ಲಿ ಜ್ಞಾನೋದಯ ಆಯಿತೆಂಬುದು ನನಗೆ ಗೊತ್ತಿಲ್ಲ ಅವರನ್ನು ನೋಡಿಲ್ಲ, ಅವರ ಕತೆ ಕೂಡ ನನಗೆ ಗೊತ್ತಿಲ್ಲ ಭಾರತ ದೇಶ ಸಾವಿರಾರು ಮುನಿಗಳಿಗೆ ಜ್ಞಾನೋದಯ ಕೊಟ್ಟಿರತಕ್ಕಂಥ ದೇಶವಾಗಿದೆ ಈ ದೇಶದಲ್ಲಿ ಜ್ಞಾನೋದಯವಾದಷ್ಟು ಮುನಿಗಳು ಇಡೀ ಜಗತ್ತಿನಲ್ಲಿ ಯಾವುದೇ ದೇಶದಲ್ಲಿಲ್ಲ ಇವತ್ತಿನ ದಿವಸ ಅವರು ಹುಟ್ಟಿರುವಂತಹ ಸ್ಥಳಗಳೆಲ್ಲವನ್ನು ಅಭಿವೃದ್ಧಿ ಮಾಡುವುದಾದರೆ ಇಂಡಿಯಾ ದೇಶದಲ್ಲಿರತಕ್ಕಂಥ ಉತ್ಪಾದನೆ ಮತ್ತು ವಿಶ್ವಬ್ಯಾಂಕ್ ಮತ್ತು ಐ ಎಂ ಎಫ್ ಸಂಸ್ಥೆಗಳು ಎಲ್ಲಾ ಸಾಲವನ್ನು ಭಾರತಕ್ಕೆ ಕೊಟ್ಟರೂ ಸಾಕಾಗುವುದಿಲ್ಲ ಏಕೆಂದರೆ ಅಷ್ಟು ಜಾಗಗಳು ನಮ್ಮಲ್ಲಿವೆ ಯಾವುದಕ್ಕೆ ಹಣ ಖರ್ಚು ಮಾಡಬೇಕು, ಯಾವುದಕ್ಕೆ ಹಣ ಖರ್ಚು ಮಾಡಬಾರದೆಂಬ ಇವರ ಆದ್ಯತೆ ಏನು? ಯಾವ ರೀತಿಯಾಗಿ ಖರ್ಚು ಮಾಡಬೇಕೆಂಬುದರ ಬಗ್ಗೆಯಾದರೂ ಒಂದು ವಿಧಾನ ಇರಬೇಕಲ್ಲವೇ? ಆರ್ಥಿಕ ಅಭಿವೃದ್ಧಿಯನ್ನು ಸಾಧಿಸುವುದರಲ್ಲಿ ನೀವೇ ಹೇಳಿರುವ ಪ್ರಕಾರ ಕೈಗಾರಿಕಾ ಉತ್ಪನ್ನ ಎಷ್ಟಿದೆ? ಹೋದ ವರ್ಷಕ್ಕೆ ಮತ್ತು ಈ ವರ್ಷಕ್ಕೆ ನಿಮ್ಮ ಬಜೆಟ್‌ನ್ನು ಹೋಲಿಕೆ ಮಾಡಿ ಹೇಳಿ? ಮಾನ್ಯ ಉದಾಸಿಯವರೆ, ಕೈಗಾರಿಕಾ ಉತ್ಪನ್ನ ಎಷ್ಟು ಪರ್ಸೆಂಟ್ ಜಾಸ್ತಿಯಾಗಿದೆ? ನಿಮಗೆ ಕೈಗಾರಿಕಾ ಉತ್ಪನ್ನದ ಮೇಲೆ ಆಸಕ್ತಿ ಇಲ್ಲದಿದ್ದರೆ ಬಿಟ್ಟು ಬಿಡಿ ಗ್ರಾಮೀಣ ಜನರಲ್ಲಿ ಕೊಂಡುಕೊಳ್ಳುವಂಥ ಶಕ್ತಿ ಎಷ್ಟು ಜಾಸ್ತಿಯಾಗಿದೆ? ಏಕೆಂದರೆ, ನಿಮಗೆ ಕೈಗಾರಿಕೆ ಬಗ್ಗೆ ಆಸಕ್ತಿ ಇಲ್ಲ you are Rural Development Minister ಹಳ್ಳಿಗಾಡಿನಲ್ಲಿ ವಾಸ ಮಾಡತಕ್ಕಂಥ ಜನರು ಕೊಂಡು ಕೊಳ್ಳುವಂಥ ಶಕ್ತಿ ಎಷ್ಟು ಜಾಸ್ತಿಯಾಗಿದೆ ? ಬಿಲೋ ಪಾವರ್ಟಿ ಲೈನ್

ಇರುವವರ ಸಂಖ್ಯೆ ಎಷ್ಟಿದೆ? ಈಗ ಕೊಂಡಿಕೊಳ್ಳುವಂಥ ಶಕ್ತಿ ಎಷ್ಟಾಗಿದೆ ಎಂಬುದನ್ನು ಹೇಳಿ? ಮನುಷ್ಯನ ಕೊಂಡುಕೊಳ್ಳುವಂಥ ಶಕ್ತಿ ಹೆಚ್ಚಾದಾಗ ಮಾತ್ರ ಆರ್ಥಿಕ ಅಭಿವೃದ್ಧಿಯಾಗುತ್ತದೆಂದು ಅರ್ಥ ಆದರೆ **"ಹೊಟ್ಟೆಗೆ ಹೊಟ್ಟಿಲ್ಲ ಜುಟ್ಟಿಗೆ ಮಲ್ಲಿಗೆ ಹೂ"** ಇಟ್ಟುಕೊಂಡು ಓಡಾಡಬೇಕೆ? ಆರ್ಥಿಕ ಅಭಿವೃದ್ಧಿಯೆಂದರೆ ಇದೇನು? ಹಳ್ಳಿಗಾಡಿನ ಜನರು ಕೊಂಡುಕೊಳ್ಳುವಂಥ ಶಕ್ತಿ ಇವತ್ತಿನ ದಿವಸ ಕುಸಿಯುತ್ತಿದೆ ಇದಕ್ಕೆ ನಿಮ್ಮ ಕಾರ್ಡ್‌ಗಳೇ ನಿದರ್ಶನವಾಗಿದೆ ಬೇರೆ ಎಲ್ಲಿಯೂ ಇದನ್ನು ಹುಡುಕಬೇಕಾಗಿಲ್ಲ ಮತ್ತೆ ಇದಕ್ಕೆ ಬೇರೆನೂ ರೀಸರ್ಚ್ ಮಾಡಬೇಕಾಗಿಲ್ಲ ಇವತ್ತಿನ ಕೈಗಾರಿಕಾ ಅಭಿವೃದ್ಧಿ ಎಲ್ಲಿಯಾಗಿದೆ?

ಶ್ರೀ ಸಿ ಎಂ ಉದಾಸಿ – ಮಾನ್ಯ ಸಭಾಧ್ಯಕ್ಷರೆ, ರೈತರು ಬೆಳೆದಂಥ ವಸ್ತುವನ್ನು ಮಾರಾಟ ಮಾಡಿದಾಗ ಬಂದಂಥ ಹಣದಿಂದ ಕೊಳ್ಳುವ ಶಕ್ತಿ ಕಡಿಮೆಯಾಗುತ್ತದೆಂದರೆ, ಇದು ಕೇವಲ ರಾಜ್ಯದ ಆಯವ್ಯಯದಿಂದ ಆಗುವುದಿಲ್ಲ ಇದು ಕೇಂದ್ರ ಮತ್ತು ರಾಜ್ಯ ಸರ್ಕಾರದ ಆಯವ್ಯಯ ಮೇಲೆ ಆಗುವಂತಹ ಪರಿಣಾಮವೇ ಹೊರತು ಕೇವಲ ರಾಜ್ಯದ ಆಯವ್ಯಯದಿಂದ ಆಗುತ್ತದೆಂದು ನಾನು ನಂಬುವುದಿಲ್ಲ ನಾನು ನಿಮ್ಮ ಹಾಗೆ ಹೆಚ್ಚಿಗೆ ಮತ್ತು ಅರ್ಥಶಾಸ್ತ್ರವನ್ನು ಓದಿಲ್ಲ ಆದರೆ ಒಂದು ಮಾತನ್ನು ಹೇಳುವುದಕ್ಕೆ ಇಷ್ಟ ಪಡುತ್ತೇನೆ ಆರ್ಥಿಕ ಪರಿಸ್ಥಿತಿಯನ್ನು ಉಳಿಸುವಾಗ ಕೊಂಡುಕೊಳ್ಳುವ ಶಕ್ತಿ ಸಮಾನಾಗಿರಬೇಕೆಂಬುದು ದೇಶದ ಆರ್ಥಿಕ ಪರಿಸ್ಥಿತಿಯ ಮೇಲೆ ಅವಲಂಬಿಸಿರುತ್ತದೆಂದು ನನ್ನ ಭಾವನೆ

ಶ್ರೀ ಜಿ ವಿ ಶ್ರೀರಾಮರೆಡ್ಡಿ – ಕೌಟಿಲ್ಯ ಕೂಡ ಅರ್ಥಶಾಸ್ತ್ರವನ್ನು ಓದಿರಲಿಲ್ಲ ಆದರೆ, ಅರ್ಥಶಾಸ್ತ್ರದ ಎಲ್ಲಾ ಮೂಲ ತಂತ್ರಗಳನ್ನು ಈ ದೇಶದಲ್ಲಿ ಆತನೇ ಪ್ರಾರಂಭ ಮಾಡಿದ ಆದ್ದರಿಂದ, ಪೋಸ್ಟ್ ಗ್ರ್ಯಾಜುಯೇಶನ್ ಮತ್ತು ಪಿಹೆಚ್‌ಡಿಗೂ ಇದಕ್ಕೂ ಏನು ಸಂಬಂಧವಿಲ್ಲ ನೀವು ಹೇಳಿದ ವಿಷಯದಲ್ಲಿ ಒಂದು ಅಂಶವನ್ನು ನಾನು ಒಪ್ಪುತ್ತೇನೆ ಪೂರ್ಣವಾಗಿ ಒಪ್ಪುವುದಿಲ್ಲ ಕೊಂಡುಕೊಳ್ಳತಕ್ಕಂಥ ಶಕ್ತಿ ಹೆಚ್ಚಾಗುವುದರಲ್ಲಿ ಕೇಂದ್ರ ಸರ್ಕಾರದ ಪಾಲು ಇದೆ ಮತ್ತೆ ರಾಜ್ಯ ಸರ್ಕಾರದ

ಪಾಲೂ ಕೂಡ ಇದೆ ಆದ್ದರಿಂದ, ಕೇಂದ್ರ ಸರ್ಕಾರದ ಮೇಲೆ ಹೇಳಿ ರಾಜ್ಯ ಸರ್ಕಾರ ಸಂಪೂರ್ಣ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳುವುದಕ್ಕೆ ಆಗುವುದಿಲ್ಲ

ಶ್ರೀ ಜೆ ಸಿ ಮಾಧುಸ್ವಾಮಿ – ಮಾನ್ಯ ಉದಾಸಿಯವರೆ, ತಾವು ಹೇಳತಕ್ಕಂತದ್ದು ಸತ್ಯ ರೈತರು ಬೆಳೆದಂಥ ವಸ್ತುವನ್ನು ಮಾರಾಟ ಮಾಡಿ ಅದರಿಂದ ಉತ್ಪತ್ತಿ ಜಾಸ್ತಿಯಾಗತಕ್ಕಂಥ ಶಕ್ತಿ ಬಂದರೆ, ಕೊಂಡುಕೊಳ್ಳುವುದಕ್ಕೆ ಶಕ್ತಿ ಆಟೋಮ್ಯಾಟೀಕ್ ಆಗಿ ಬರುತ್ತದೆ First, you have to generate some funds, then you can purchase something ನಾವು ಈಗ ವಾದ ಮಾಡುತ್ತಿರುವುದೇನೆಂದರೆ, ಗ್ರಾಮೀಣ ಪ್ರದೇಶದಲ್ಲಿನ ಜನರ ಉತ್ಪತ್ತಿಯನ್ನು ಮಾರಾಟ ಮಾಡಿ ಆತ ನಿರೀಕ್ಷೆ ಮಾಡಿದಷ್ಟು ಹಣ ಬಾರದೇ ಇರುವುದರಿಂದ ಆಟೋಮ್ಯಾಟಿಕ್ ಆಗಿ ಆತನಿಗೆ ಕೊಂಡುಕೊಳ್ಳುವುದಕ್ಕೂ ಶಕ್ತಿ ಇರುವುದಿಲ್ಲ ಖರೀದಿ ಮಾಡತಕ್ಕಂಥ ಪವರ್ ಬರಬೇಕಾದರೆ, ಆತನ ಪ್ರಾಡಕ್ಟ್ ಸೇಲ್ ಆಗಬೇಕಲ್ಲವೇ? ಆದ್ದರಿಂದ ಆತನಿಗೆ ಲಾಭ ಬರಬೇಕಲ್ಲವೇ? ಆದ್ದರಿಂದ ಈ ಕೆಲಸವನ್ನು ನೀವು ಮಾಡಬೇಕು ಈ ಕೆಲಸವನ್ನು ನೀವು ಮಾಡಿಲ್ಲವೆಂದು ಹೇಳುತ್ತಿದ್ದೇವೆ

ಶ್ರೀ ಸಿ ಎಂ ಉದಾಸಿ – ಹಣಕ್ಕೆ ಕೊಳ್ಳುವ ಶಕ್ತಿ ಇರಬೇಕೆಂಬ ಪ್ರಶ್ನೆ ಬಂದಾಗ

ಶ್ರೀ ಸಿದ್ಧರಾಮಯ್ಯ – ಇದರಲ್ಲಿ ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ಜವಾಬ್ದಾರಿ ಇರುತ್ತದೆ ಕೇವಲ ಕೇಂದ್ರ ಸರ್ಕಾರದ ಜವಾಬ್ದಾರಿ ಇದೆ ಎಂದು ರಾಜ್ಯ ಸರ್ಕಾರ ಕೈ ತೊಳೆದುಕೊಂಡು ಕುಳಿತುಕೊಳ್ಳುವುದಕ್ಕೆ ಆಗುವುದಿಲ್ಲ

ಶ್ರೀ ಸಿ ಎಂ ಉದಾಸಿ – ಈಗ ಒಂದು ರಾಜ್ಯದ ಆರ್ಥಿಕ ನೀತಿಯ ಮೇಲೆ ಇಡೀ ದೇಶದಲ್ಲಿ

ಅಧ್ಯಕ್ಷರು – ಕೇಂದ್ರ ಸರ್ಕಾರದ ಹೆಸರು ಪ್ರಸ್ತಾಪ ಮಾಡಿದರೆ ಕೆಲವರಿಗೆ ಕೆಂಡ ಮುಟ್ಟಿದಂತಾಗುತ್ತದೆ ಆದ್ದರಿಂದ ಅದನ್ನು ಬಿಟ್ಟು ಮಾತನಾಡಿ

ಶ್ರೀ ಜಿ ವಿ ಶ್ರೀರಾಮರೆಡ್ಡಿ – ಮಾನ್ಯ ಅಧ್ಯಕ್ಷರೇ, ತಾವು ಹೇಳಿರತಕ್ಕಂಧದು ನಮಗೆ ಕೇಳಿಸಲಿಲ್ಲ

ಶ್ರೀ ಸಿದ್ಧರಾಮಯ್ಯ – ನೀವು ಹೇಳಿರತಕ್ಕಂಧ ಸಲಹೆ ಗೊತ್ತಾದರೆ ಅವರು ಮಾತನಾಡುವುದಕ್ಕೆ ಸ್ವಲ್ಪ ಅನುಕೂಲವಾಗುತ್ತದೆ

(ಗೊಂದಲ)

ಶ್ರೀ ಜಿ ವಿ ಶ್ರೀರಾಮರೆಡ್ಡಿ .– ತಾವು ಇಲ್ಲಿ ಅಸಂಬದ್ಧವಾಗಿ ಮತನಾಡಬೇಡಿ ಏನಾದರೂ ವಿಷಯವಿದ್ದರೆ ತಾವು ಮಾತನಾಡಬೇಡಿ

ಶ್ರೀ ಜೆ ಸಿ ಮಾಧುಸ್ವಾಮಿ – ನಂದಿಗ್ರಾಮದಲ್ಲಿ ಪ್ರೊಟೆಸ್ಟ್ ಮಾಡತಕ್ಕಂಧ ಶಕ್ತಿ ರೈತರಿಗೆ ಇತ್ತು ಆದ್ದರಿಂದ ಅಲ್ಲಿ ಪ್ರೊಟೆಸ್ಟ್ ಮಾಡಿದ್ದಾರೆ ಈ ರಾಜ್ಯದಲ್ಲಿ SEZ ಎಷ್ಟು ಜಮೀನು ಮತ್ತು ಯಾರ್ಯಾರು ಜಮೀನು ತೆಗೆದುಕೊಳ್ಳಲಾಗಿದೆ ಎಂಬುದು ತಮಗೆ ಗೊತ್ತಿದೆಯೇ? ಕರ್ನಾಟಕದಲ್ಲಿ ಅದರ 100 ಪಟ್ಟು ರೈತರ ಜಮೀನುಗಳನ್ನು SEZ ಗೆ ತೆಗೆದುಕೊಳ್ಳಲಾಗಿದೆ ಅವರು ಪ್ರೊಟೆಸ್ಟ್ ಮಾಡಿ ಸುದ್ದಿ ಮಾಡಿದ್ದಾರೆ ನೀವು entire aim of the land ಅನ್ನು ಸರ್ವನಾಶ ಮಾಡುತ್ತಿದ್ದೀರಿ?

ಶ್ರೀ ಎಂ ಟಿ ಬಿ ನಾಗರಾಜ್ – ಒಂದೊಂದು ತಾಲ್ಲೂಕಿನಲ್ಲಿ ಸಾವಿರಾರು ಎಕರೆಗಳು SEZ ಗೆ ತೆಗೆದುಕೊಳ್ಳಲಾಗಿದೆ ಇವತ್ತು ಏನಾಗುತ್ತದೆಂದರೆ, ಬೆಳಿಗ್ಗೆ ಸಿಂಗಲ್ ವಿಂಡೊದಲ್ಲಿ ಅಪ್ರೂವಲ್ ಮಾಡುತ್ತಿದ್ದಾರೆ ದಿವಸಕ್ಕೆ 10–10 ಅಪ್ರೂವಲ್ ಮಾಡಿಕೊಡುತ್ತಿದ್ದೀರಿ ಇವತ್ತಿನ ದಿವಸ ಇದಕ್ಕಾಗಿ ರೈತರ ಸಾವಿರಾರು ಎಕರೆ ಜಮೀನುಗಳನ್ನು ತೆಗೆದುಕೊಳ್ಳಲಾಗುತ್ತಿದೆ ನಾವು ರೈತರ ಬೆನ್ನುಲುಬು ಎಂದು ಹೇಳುತ್ತಾ ರೈತರ ಬೆನ್ನುಲುಬನ್ನು ಮುರಿಯತಕ್ಕಂಧ ಕೆಲಸವನ್ನು ನೀವು ಮಾಡುತ್ತಿದ್ದೀರಿ

ಶ್ರೀ ಜಿ ವಿ ಶ್ರೀರಾಮರೆಡ್ಡಿ – ಇಲ್ಲಿ ಕೆಲವರು ಅಸಂಬದ್ಧವಾದ ಮಾತನ್ನು ಹೇಳುತ್ತಾ ನನ್ನ ಸಮಯವನ್ನು ವೇಸ್ಟ್ ಮಾಡುತ್ತಿದ್ದಾರೆ ಆದ್ದರಿಂದ ನಾನು

ಮಾತನಾಡುವುದಕ್ಕೆ ತಾವು ಒತ್ತಾಯ ಹಾಕಬೇಡಿ ಮಾನ್ಯ ಉದಾಸಿಯವರು ಸರಿಯಾದಂಥ ಒಂದು ಪ್ರಶ್ನೆಯನ್ನು ಇಲ್ಲಿ ತಂದಿದ್ದಾರೆ ಅದನ್ನು ಬೇಕಾದರೆ ಇಲ್ಲಿ ಚರ್ಚೆ ಮಾಡಬಹುದು ಅದಕ್ಕೆ ತೊಂದರೆ ಏನು ಇಲ್ಲ ನಾನು ಮಾತನಾಡತಕ್ಕಂಥ ವಿಚಾರವೆ ಬೇರೆ ಇದೆ ಆದರೆ, ಇವರು ಅದನ್ನು ಪ್ರಸ್ತಾಪ ಮಾಡುವುದಕ್ಕೆ ಬಿಡುತ್ತಿಲ್ಲ ಆ ವಿಚಾರ ಬಂದಾಗ ಮತ್ತೆ ಮಾತನಾಡೋಣ ಅದಕ್ಕೆ ಯಾರೇನು ಹೆದರಿಕೊಂಡು ಹೋಗುವುದಿಲ್ಲ ಕರ್ನಾಟಕ ರಾಜ್ಯದಲ್ಲಿ ಕೈಗಾರಿಕಾ ಉತ್ಪನ್ನಗಳ ಪರ್ಸೆಂಟೇಜ್ 3 2 ರಷ್ಟು ಕಡಿಮೆಯಾಗಿದೆ ಕೈಗಾರಿಕಾ ಉತ್ಪನ್ನ, ಎಷ್ಟು ಕಡಿಮೆಯಾಗಿದೆ ಎಂದು ನೀವು ಬಜೆಟ್‌ನಲ್ಲಿ ಒಪ್ಪಿಕೊಂಡಿದ್ದೀರಿ ಈಗ 2% ಉಳಿದಿದೆ actual 15% ಆದರೆ 2% ಎಂದು ನೀವು ಹೇಳಿರುತ್ತೀರಿ ಅಂದರೆ 5% ದಿಂದ 15% ಗೆ ಕೃಷಿ ಉತ್ಪನ್ನ ಇಳಿದಿದೆ ಅಂದರೆ ಕಡಿಮೆಯಾಗಿದೆ Rural Employment opprtunity ಕಡಿಮೆಯಾಗಿದೆ ಎಂದು ಬಜೆಟ್‌ನಲ್ಲಿ ನೀವೇ ಒಪ್ಪಿಕೊಂಡಿದ್ದೀರಿ ಕೃಷಿ ಉತ್ಪನ್ನಗಳ ಉತ್ಪಾದನೆ ಕಡಿಮೆಯಾಗಿದೆ ಕೈಗಾರಿಕಾ ಉತ್ಪಾದನೆ ಕಡಿಮೆಯಾಗಿದೆ ನಿರುದ್ಯೋಗ ಸಮಸ್ಯೆ ಎಷ್ಟು ಪರ್ಸೆಂಟೇಜ್ ಹೆಚ್ಚಾಗಿದೆ ಎನ್ನತಕ್ಕಂಥದ್ದನ್ನು ಅವರು ಇದರಲ್ಲಿ ಹೇಳಿಲ್ಲ ಆದರೆ ನಿರುದ್ಯೋಗ ಸಮಸ್ಯೆ ಇಷ್ಟು ಪರ್ಸೆಂಟೇಜ್ ಹೆಚ್ಚಾಗಿದೆ ಬಜೆಟ್‌ನಲ್ಲಿ ನಮ್ಮ ಸೇವಾವಲಯದಿಂದ 54 ಪರ್ಸೆಂಟೇಜ್ ನಮಗೆ ಆದಾಯವಿದೆ ಎಂದು ಹೇಳುತ್ತೀರಿ Employment generate ಮಾಡಿರತಕ್ಕಂಥದು ಅದು ಅದಾಯವೇ? ಅದು ಯಾವ ಆದಾಯ? ಇದು ಉದ್ಯೋಗ ರಹಿತ ಬೆಳವಣಿಗೆ ಹೊರತು ಉದ್ಯೋಗ ಸಹಿತ ಬೆಳವಣಿಗೆ ಅಲ್ಲ, ನಿಮ್ಮ ಸೇವಾವಲಯದ್ದು ಇದು ಉದ್ಯೋಗ ರಹಿತ ಬೆಳವಣಿಗೆ ಉದ್ಯೋಗ ರಹಿತ ಏನು ಇದೆ, it is more dangerous than high percentage of unemployment Employment growth ಅದನ್ನು ಎಲ್ಲಿಯಾದರೂ ಒಂದು ಕಡೆ ಈ ಬಜೆಟ್‌ನಲ್ಲಿ ಪ್ರಸ್ತಾಪವನ್ನು ಮಾಡಿದ್ದೀರಾ? ಅಥವಾ ನಿರುದ್ಯೋಗ ಸಮಸ್ಯೆಯನ್ನು ಪರಿಹಾರ ಮಾಡುವುದು ಪೂರ್ತಿ ನಿಮ್ಮ ಕೈಯಲ್ಲಿ ಇಲ್ಲ, ಅದು ನನಗೆ ಗೊತ್ತಿದೆ ಇಡೀ ನಿರುದ್ಯೋಗ ಸಮಸ್ಯೆಯನ್ನು ಒಂದು ರಾಜ್ಯ isolated ಆಗಿ ಮಾಡುವುದಕ್ಕೆ ಆಗುವುದಿಲ್ಲ It is

impossible ಆದರೆ ಆ direction ನಲ್ಲಿ ನಿಮ್ಮ ಪಾತ್ರವನ್ನು ನಿರ್ವಹಿಸತಕ್ಕಂಥ ಕೆಲಸವನ್ನಾದರೂ ಮಾಡಲು ಈ ನಿರುದ್ಯೋಗ ಸಮಸ್ಯೆಗೆ ನೀವು ಕರ್ಯಕ್ರಮವನ್ನು ಹಾಕಿದ್ದೀರಾ? ನಾವು ಜಂಬವನ್ನು ಕೊಚ್ಚಿಕೊಳ್ಳುತ್ತಿದ್ದೇವೆ, ಐಟಿ ಬಿಟಿ ಯಲ್ಲಿ ನಾವು ಅತ್ಯಂತ ಹೆಚ್ಚಿನ ಉದ್ಯೋಗಾವಕಾಶವನ್ನು ಕರ್ನಾಟಕದಲ್ಲಿ ಕೊಟ್ಟಿದ್ದೇವೆ, ಅದು ಪ್ರತ್ಯೇಕವಾಗಿ ಬೆಂಗಳೂರಿನಲ್ಲಿ ಎಂದು ಹೇಳಿರುತ್ತೀರಿ ನಿಮ್ಮ ಯೋಜನಾ ಆಯೋಗದ ಅಂಕಿ ಅಂಶಗಳ ಪ್ರಕಾರವೇ, ನೀವೆ ಹೇಳಿರತಕ್ಕಂಥದ್ದು ನಾವು ಅಲ್ಲ It Engineers ಇವತ್ತು ಎಷ್ಟು ಲಕ್ಷ ಜನರು ನಿರುದ್ಯೋಗಿಗಳಾಗಿದ್ದಾರೆ ಕರ್ನಾಟಕದಲ್ಲಿ ಓದಿರತಕ್ಕಂಥ IT Engineers ಕೆಲಸವಿಲ್ಲದೆ ಬೀದಿಯಲ್ಲಿ ಓಡಾಡುತ್ತಿದ್ದಾರೆ 11 ಲಕ್ಷ ಜನ, IT Engineers now they are unemployed in bangalore alone ನೀವು Engineers Graduates ಬಿಡಿ Diploma Graduates ಬಿಡಿ ITI Graduates ಬಿಡಿ, ಇವರೆಲ್ಲನ್ನು ಬಿಟ್ಟರೂ ಕೂಡ the so-called ನಿಮ್ಮ ಈ IT Market ಏನಿದೆ, it has failed to absorb you own products It Secretary ಯವರನ್ನು ಕರೆದು ಕೇಳಿ, ಎಷ್ಟು ಜನ ನಿರುದ್ಯೋಗಿಗಳು ಇದ್ದಾರೆ ಎಂದು? ಒಂದನ್ನು ಅರ್ಥ ಮಾಡಿಕೊಳ್ಳಬೇಕು ಯಾವುದೇ ಒಂದು ವಿಭಾಗ saturation point reach ಆದರೆ there ends the matter ಇವು Saturation point reach ಆಗುತ್ತಿವೆ ಅವು ಕೆಲವೇ ದಿವಸ ನೀರಿನ ಮೇಲೆ ಬುಗ್ಗೆ ಇದ್ದಂತೆ they are not permanent assets It all depends on the world market again ನಿಮ್ಮ ಸೋಫ್ಟ್‌ವೇರ್ ಇಂಜೀನಿಯರಿಂಗ್ ಏನಿದೆ, ಅದು ಪ್ರಪಂಚ ಮಾರ್ಕೆಟ್‌ನ ವ್ಯಾಪಾರದ ವಹಿವಾಟಿನ ಮೇಲೆ ಹೊಂದಿಕೊಂಡಿರುತ್ತದೆಯೇ ಹೊರತು, ನಿಮ್ಮ ಕೈಯಲ್ಲಿ ಅದು ಇಲ್ಲ ಅದು ಇರಲಿಕ್ಕೆ ಸಾಧ್ಯವಿಲ್ಲ ಅದನ್ನು ತಡೆಹಿಡಿಯತಕ್ಕಂಥ ಕಾರ್ಯಕ್ರಮವನ್ನು ನೀವು ಏನು ಹಾಕಿದ್ದೀರಿ How many engineering graduates are unemployed in Karnataka ? ಲೆಕ್ಕ ಇದೆಯಾ ನಿಮ್ಮ ಹತ್ತಿರ, ಲೆಕ್ಕ ಇಲ್ಲ ಹೋಗಲಿ, ಆ Engineer Graduate ಗಳನ್ನು MBBS Graduates ಗಳನ್ನು ತಯಾರು ಮಾಡಲಿಕ್ಕೆ ನಮ್ಮದೇ

114

ರಾಜ್ಯ ಸರ್ಕಾರ ಒಂದು ವರ್ಷಕ್ಕೆ ಎಷ್ಟು ಕೋಟಿ ಹಣ ಖರ್ಚು ಮಾಡುತ್ತಿದೆ ಎನ್ನುವ ಲೆಕ್ಕ ನಿಮ್ಮ ಹತ್ತಿರ ಇದೆ

ಶ್ರೀ ಕೆ ಆರ್ ರಮೇಶ್‌ಕುಮಾರ್ – ಮಾನ್ಯ ಅಧ್ಯಕ್ಷರೆ, ಈ ಸೆಕ್ಟರ್ ನಲ್ಲಿ unemployment creat ಆದರೆ ಏನು problem ಇಲ್ಲ ಡಾಕ್ಟರ್, ಇಂಜೀನಿಯರ್‌ಗಳು ಪ್ರೈವೇಟ್ ಪ್ರ್ಯಾಕ್ಟೀಸ್, ಒಂದು ಫ್ಯಾಕ್ಟರಿ ಅಥವಾ ಇನ್ನೊಂದನ್ನು ಮಾಡುತ್ತಾರೆ ಈ globalization effect ಮತ್ತೆ ಈಗ ಬಂದಿರತಕ್ಕಂಥ ಗ್ರಹಚಾರ, unskilled labourers rural unemployed ಯಾರಿದ್ದಾರೆ, ಆ ಅನಕ್ಷರಸ್ಥ, ಅವನ ಹತ್ತಿರ ಅಗ್ರಿಕಲ್ಚರನಲ್ಲಿ ಯಾವ ಸ್ಕಿಲ್ ಇಲ್ಲ unskilled, agriculture labourer, he is getting unemployed now ಅವನು ಏನು ಮಾಡಬೇಕು? ಬೇರೆ ಅವನಿಗೆ ಏನೂ ಗೊತ್ತಿಲ್ಲ ಸ್ವಂತ ಜಮೀನು ಇಲ್ಲ, ಅವನು ಕರೆದವರ ಹತ್ತಿರ ಕೂಲಿಗೆ ಹೋಗಿ ಕೂಲಿ ಕೊಟ್ಟಷ್ಟು ಕೂಲಿ ತೆಗೆದುಕೊಂಡು ಕೆಲಸವನ್ನು ಮಾಡುತ್ತಿದ್ದನು ಅವನು ನಿರುದ್ಯೋಗಿಯಾಗುತ್ತಿದ್ದಾನೆ ಅದು ಎಲ್ಲಿಗೆ ಹೋಗಬಹುದು, ಯಾವ ಸ್ವರೂಪ ತಾಳಬಹುದು ಎನ್ನುವುದನ್ನು ಈ ಸಮಾಜದಲ್ಲಿ ನಾನಾ ಸ್ವಲ್ಪ ಯೋಚನೆ ಮಾಡಬಹುದು

ಶ್ರೀ ಜಿ ವಿ ಶ್ರೀರಾಮರೆಡ್ಡಿ – ಮಾನ್ಯ ಅಧ್ಯಕ್ಷರೇ, ನಾನು ಪ್ರಾರಂಭದಲ್ಲಿ ಹೇಳಿದೆ Rural unemployment is increase ಅದನ್ನು ನೀವು ಹೇಳಿದಿರಿ they are leaving villages and coming to towns ನೀವು ಇದನ್ನು ನೋಡಿರಬಹುದು 11 th plan Outlay for state over 50% of the outlay proposed in the plan has been earmarked for three sectors i e power, irrigation and agriculture ಈ ಯೋಜನೆಯ ರಿಪೋರ್ಟ್ ಪ್ರಕಾರ, ಕೃಷಿಯನ್ನು ಮಾಡತಕ್ಕಂಥವರ ಸಂಖ್ಯೆ ಕಡಿಮೆಯಾಗುತ್ತಿದೆ Agriculture and allied activities is 4 25% ಇದು ಕಾಡಿಮೆಯಾಗುತ್ತಿದೆ 11 th plan statement ಇದು ವಾಸ್ತವವಾಗಿ ಅದರ ಅರ್ಧ ನಿಮ್ಮ ಬಜೆಟ್‌ನಲ್ಲಿ

ಹೇಳಿರತಕ್ಕಂಥದ್ದು ಸರಿಯಲ್ಲ ಕೃಷಿ ಅವಲಂಬಿತರು ಹೆಚ್ಚಾಗುತ್ತಿದ್ದಾರೆಂದು, ಬದಲಿಗೆ ಕಡಿಮೆಯಾಗುತ್ತಿದ್ದಾರೆ it is a fact ಏಕೆಂದರೆ, ಕೃಷಿ ಮಾಡತಕ್ಕಂಥವನು, ಇವತ್ತು ದಿವಾಳಿಯಾಗುತ್ತಿದ್ದಾನೆ ಏನು ಅವನಿಗೆ ಕೃಷಿಯಲ್ಲಿ ಬದುಕಲಿಕ್ಕೆ ಆಗುತ್ತಿಲ್ಲ ಕೃಷಿಯನ್ನು ಬಿಟ್ಟುಬಿಟ್ಟು ಇವತ್ತು ಬೇರೆ ಮಾರ್ಗವನ್ನು ಹುಡುಕುತ್ತಿದ್ದಾನೆ, ಸಣ್ಣ ರೈತ, ಬಡ ರೈತ, ಮಧ್ಯಮ ವರ್ಗದ ರೈತನಿಗೆ ಬೇರೆ ದಾರಿಯೇ ಇಲ್ಲ ಅವನು ಬೇರೆ ದಾರಿಯನ್ನು ಹಿಡಿಯುತ್ತಿದ್ದಾನೆ This is why actually the planning Commission Report ಏನಿದೆ, That is right Agriculture ಮಾಡತಕ್ಕಂಥವರ ಜನರ ಸಂಖ್ಯೆ ಇವತ್ತು ಕಡಿಮೆಯಾಗುತ್ತಿವೆ ಏಕೆ ಕಡಿಮೆಯಾಗುತ್ತಿದೆ ಎಂದರೆ, because the agrarian sector is in great crisis in India today There is no hope of getting out of that crisis in the near future ಆ ತರಹದ ಬಿಕ್ಕಟ್ಟಿಗೆ ಸಿಕ್ಕಿಹಾಕಿಕೊಂಡಿದೆ ಅದಕ್ಕೆ ರಾಜ್ಯ ಸರ್ಕಾರ ಮಾತ್ರ ಹೊಣೆ ಎಂದು ನಾನು ಹೇಳುತ್ತಿಲ್ಲ ಅದಕ್ಕೆ ಕೇಂದ್ರ ಸರ್ಕಾರದ ಹೊಣೆಗಾರಿಕೆಯೂ ಇದೆ ಆದರೆ ಈ ಬಿಕ್ಕಟ್ಟಿನಿಂದ ಪಾರಾಗಲಿಕ್ಕೆ ನಮ್ಮ ರಾಜ್ಯದಿಂದ ನಾವೇನಾದರೂ ಪ್ರಯತ್ನ ಮಾಡಿದ್ದೇವಾ? ಅದನ್ನು ಕೃಷಿರಂಗದ ಬಗ್ಗೆ ಮಾತನಾಡುವ ಸಂದರ್ಭದಲ್ಲಿ ಹೇಳುತ್ತೇನೆ ಅದರ ಜೊತೆಗೆ ನೀವು ಇವತ್ತು, ಹಣಕಾಸಿನ ಪರಿಸ್ಥಿತಿ 53,912 ಕೋಟಿ ರೂ ಗಳ ಸಾಲ ಇದೆ ನೀವು ಏನು ಹೇಳಿದಿರಿ, ಇದು ರಾಜ್ಯದ ಒಟ್ಟಾರೆ ರಾಜಸ್ವ ಸಂಗ್ರಹಣೆಯ ಶೇಕಡಾ 18 ಕ್ಕಿಂತ ಕಡಿಮೆ ಇದೆ ರಾಜ್ಯದ ಸಾಲವೃದ್ಧಿ ದರವು ಶೇಕಡಾ 10 14 ರಷ್ಟು ಇದ್ದು, ಇದು ರಾಜಸ್ವ ವೃದ್ಧಿಯ ಶೇಕಡಾ 1 5 ರ ಪ್ರಮಾಣಕ್ಕಿಂತ ಹೆಚ್ಚಾಗಿರುವುದಿಲ್ಲ ಆದ್ದರಿಂದ ನಾನು ಸುಸ್ಥಿತಿಯಲ್ಲಿದ್ದೇವೆಂದು ಹೇಳುತ್ತಿದ್ದಾರೆ ಈಗ ಬಡ್ಡಿ ಕೊಡತಕ್ಕಂಥದ್ದು ಎಷ್ಟು? 4366 ಕೋಟಿ ರೂ ಗಳ ಬಡ್ಡಿಯನ್ನು ಕೊಡುತ್ತಿದ್ದೇವೆ ಅಂದರೆ 12% of the total state income is going towards debt-serviving 12 % ಸಾಲಕ್ಕೆ ಬಡ್ಡಿಯನ್ನು ಕೊಡುತ್ತಿದ್ದೇವೆ 53 ಸಾವಿರ ಕೋಟಿ ರೂ ಗಳ ಸಾಲ ಇದೆ Debt-servicing is about 4,366 crores ಕಡಿಮೆಯಾಗಲಿಲ್ಲ ಯಾವ ರಾಜ್ಯದಲ್ಲಿ debt ಕಡಿಮೆಯಾಗಲಿಲ್ಲವೋ

ಆಗ ಅಭಿವೃದ್ಧಿ ಕುಂಠಿತಗೊಳ್ಳುತ್ತದೆ ಇವತ್ತು ನೀವು ರೈತರ ಸಾಲದ ಮನ್ನಾ ಬಗ್ಗೆ ಜಿಜ್ಞಾಸೆ ಮಾಡುತ್ತಿದ್ದೀರಿ, ಹಣ ಎಲ್ಲಿಂದ ತರಬೇಕು, ಏನು ಮಾಡಬೇಕು? ನಮ್ಮ ಇಡೀ ರೈತರ ಸಹಕಾರಿ ಸಾಲ ಇರತಕ್ಕಂಥದ್ದು ನಿಮ್ಮ ಪ್ರಕಾರ 6000 ಕೋಟಿ ರೂ ಗಳು ಇದೆ ಹೋಗಲಿ , ನಾವು ಸಾಲವನ್ನು ತರುವುದು ಬೇಡವೆಂದು ಹೇಳುವುದಿಲ್ಲ ಸಾಲ ತರಬೇಕಾಗುತ್ತದೆ ಅಭಿವೃದ್ಧಿ ದೃಷ್ಟಿಯಿಂದ ಸಾಲ ತರಬೇಕಾಗುತ್ತದೆ ಯಾವ ಅಭಿವೃದ್ಧಿ ದೃಷ್ಟಿಯಿಂದ, ನಮ್ಮ ಉತ್ಪಾದನೆಯನ್ನು ಹೆಚ್ಚು ಮಾಡಿಕೊಳ್ಳಲಿಕ್ಕೆ ನಾವು ಸಾಲವನ್ನು ಮಾಡಿ ತಂದು ಉತ್ಪಾದನೆಯನ್ನು ಹೆಚ್ಚು ಮಾಡಿಕೊಳ್ಳಲಿಕ್ಕೆ ಖರ್ಚು ಮಾಡುವುದಾದರೆ, ಸಾಲತರಲು ನಮ್ಮ ತಕರಾರು ಇಲ್ಲ ಆದರೆ ನೀವು ತಂದಿರುವ ಸಾಲವನ್ನು ಯಾವ ವಲಯದಲ್ಲಿ ಹೂಡುತ್ತೀರಿ? ಉತ್ಪಾದನೆಯ ಸಾಮರ್ಥ್ಯವನ್ನು ಹೆಚ್ಚಿಸುವಂತಹ ವಲಯದಲ್ಲಿ ಹೂಡಿದ್ದೀರೋ? ಅನುತ್ಪಾದನೆಗೆ ನೀವು ಸಾಲವನ್ನು ಮಾಡುತ್ತಿದ್ದಿರಾ? ಇದನ್ನು ನೀವು ಹೇಳಬೇಕು ನೀವು ಉತ್ಪಾದನೆಯ ವಲಯಕ್ಕೆ ತಂದು 53 ಸಾವಿರ ಕೋಟಿ ರೂಪಾಯಿಗಳು ಬಂಡವಾಳವನ್ನು ಹಾಕಿದ್ದರೆ ಇದರ ಬಗ್ಗೆ ನಮ್ಮ ತಕರಾರು ಇಲ್ಲ ನಮ್ಮ ಅರ್ಥ ವ್ಯವಸ್ಥೆಗೆ ಇನ್ನು ಹೆಚ್ಚು ಶಕ್ತಿ ಬರುತ್ತಿತ್ತು ಆದರೆ ನಾನು ಆಗಲೇ ಹೇಳಿದ್ದೇನೆ ಮಾನ್ಯ ಅಧ್ಯಕ್ಷರೇ ಅಲ್ಲಿ ಗಲಾಟೆ ನಡೆಯುತ್ತಿದೆ ನೀವು ಟೋಟಲ್ ಏನು ಸಾಲವನ್ನು ತಂದಿದ್ದೀರಿ, ಅದನ್ನು ಅಭಿವೃದ್ಧಿಯ ಉತ್ಪಾದನೆ ರಂಗದಲ್ಲಿ ಹಾಕದೇ ಅನುತ್ಪಾದಕ ರಂಗದಲ್ಲಿ ಹಾಕಿ ಇವತ್ತು ರಾಜ್ಯದ ಮೇಲೆ ಸಾಲದ ಹೊರೆಯನ್ನು ಹಾಕಿ ಅದು ಇನ್ನು ಬಡ್ಡಿ ಮತ್ತು ಸಾಲ ಎರಡು ಸಹ ಹೆಚ್ಚಾಗುತ್ತಾ ಹೋಗುತ್ತದೆಯೇ ಹೊರತು ಕಡಿಮೆಯಾಗುತ್ತಾ ಹೋಗುವುದಿಲ್ಲ ನಿಮಗೆ ಆಮೇಲೆ ವಿವರವನ್ನು ಹೇಳುತ್ತೇನೆ ಪವರ್ ಸೆಕ್ಟಾರ್‌ಗೆ ನೀವು ಲೋನ್‌ನ್ನು ತೆಗೆದುಕೊಳ್ಳುತ್ತೀರಿ? Power sector investment ಗೆ ಇವತ್ತು ನಿಮ್ಮ ಪ್ಲಾನ್‌ನಲ್ಲಿ ಈಗ ಒಂದೇ ಒಂದು ಮೆಗಾವ್ಯಾಟ್‌ನ್ನು ಹೊಸದಾಗಿ ಉತ್ಪಾದನೆ ಮಾಡುವುದಕ್ಕಾಗಿ ಒಂದು ರೂಪಾಯಿ ಇನ್ವೆಸ್ಟ್‌ಮೆಂಟ್ ಮಾಡಿರುವುದಿಲ್ಲ ಆದರೆ world Bank ನಿಂದ ಸಾಲವನ್ನು ತೆಗೆದುಕೊಂಡು ಬಂದಿರುವುದು, power sector ನ renovation ಗೆ ಮತ್ತು generation ಗೆ ಎಷ್ಟು ಸಾವಿರ ಕೋಟಿ

ರೂಪಾಯಿಗಳನ್ನು ತಂದಿದ್ದೀರಿ ನೀವು ಒಂದು ಮೆಗವ್ಯಾಟ್ ವಿದ್ಯುತ್‌ನ್ನು ತಯಾರು ಮಾಡುವುದಕ್ಕೆ ಇದರಲ್ಲಿ ಯಾವುದೇ ಹಣವನ್ನು ಇಟ್ಟಿಲ್ಲ There is no plan to produce a single megawatt of power in the state Industry ಯಲ್ಲಿ highly growth state ಎಂದು ಹೇಳುತ್ತೀರಿ ಅವರಿಗೆ ಎಲ್ಲಿಂದ ಪವರ್‌ನ್ನು ತಂದು ಕೊಡುತ್ತೀರಿ? ಏನು ಮಂತ್ರವನ್ನು ಹಾಕುತ್ತೀರಾ? ನಿಮ್ಮ ಗುರೂಜಿಗೆ ಜ್ಞಾನೋದಯವನ್ನು ಮಾಡಿಬಿಟ್ಟು ಮಂತ್ರಹಾಕಿ ಪವರ್‌ನ್ನು ತಂದು ಕೊಡುತ್ತಾರಾ? ಜ್ಞಾನೋದಯ ಆದವರೆಲ್ಲರಿಗೂ ರಾಜ್ಯಕ್ಕೆ ಪವರ್‌ನ್ನು ತಂದುಕೊಡುತ್ತಾರೆ ನೀವು ಉತ್ಪಾದನೆ ಮಾಡುವ ಬಗ್ಗೆ ಎಲ್ಲಿ ಹಣವನ್ನು ತಂದು ಹಾಕಿದ್ದೀರಿ? ಇಲ್ಲಿ ಮಾಧುಸ್ವಾಮಿಯವರು ಬೆಳಿಗ್ಗೆ ಈ ಬಗ್ಗೆ ಹೇಳಿದರು power generation 3 aspects ಇದೆ Thermal, Hydel & automic, Atomic ಬಗ್ಗೆ ನಾನು ವಿವರವನ್ನು ಕೊಡುವುದಕ್ಕೆ ಹೋಗುವುದಿಲ್ಲ ನೀವು ಯಾವುದರಲ್ಲಾದರೂ ಹಣವನ್ನು ತೊಡಗಿಸಿ, ನೀವು ಥರ್ಮಲ್‌ನಲ್ಲಿ ಇನ್ವೆಸ್ಟ್‌ಮೆಂಟ್ ಮಾಡಿದರೂ you are definitely going undre loss ಅದರಲ್ಲಿ ಅನುಮಾನವೇ ಇಟ್ಟುಕೊಳ್ಳಬೇಡಿ ಏಕೆಂದರೆ, cost of production ಜಾಸ್ತಿಯಾಗುತ್ತದೆ ಅದು ಥರ್ಮಲ್ ಪವರ್‌ದು ಥರ್ಮಲ್ ಪವರ್‌ಗೂ ಹೈಡಲ್ ಪವರ್‌ಗೂ ಅಜಗಜಾಂತರ cost of production ವ್ಯತ್ಯಾಸ ಆದರೆ ತಾವು world bank ನಿಂದ ಲೋನ್ ತೆಗೆದುಕೊಂಡು ಬಂದರಲ್ಲಾ ಸ್ವಾಮಿ, ಅದನ್ನು ಎಲ್ಲಿ ಹಾಕಿದ್ದೀರಿ? ಹಾಗಾಗಿ ನಿಮ್ಮ ಹಣಕಸಿಣ ನಿರ್ವಹಣೆಗೆ ಯಾವುದೇ ರೀತಿಯಾದಂತಹ ಆರ್ಥಿಕ ಅಭಿವೃದ್ಧಿಗೆ ಇರಬೇಕಾದಂತಹ ಕಾರ್ಯಕ್ರಮವನ್ನು ನೀವು ಅದರಲ್ಲಿ ಹಾಕಲಿಲ್ಲ ಅದರ ಪರಿಣಾಮ ಇವತ್ತು ಏನಾಗಿದೆ, ಯಾವ ವೇಗೋತ್ಕರ್ಷ ಎಂದು ನೀವು ಪ್ರಾರಂಭದಲ್ಲಿ ಹೇಳಿದ್ದೀರೋ, ಅಭಿವೃದ್ಧಿಯ ವೇಗೋತ್ಕರ್ಷ ಎಂದು ಹೇಳಿದ್ದೀರೋ, ವೇಗೋತ್ಕರ್ಷಕ್ಕೆ ಪವರೇ ಇಲ್ಲ, ಯಡಿಯೂರಪ್ಪನವರೇ ಮೋಟಾರು ಓಡಬೇಕಾದರೆ ಪವರ್ ಬೇಕು ನೀವು ಪವರ್ ಇಲ್ಲದೇ ಮೋಟಾರನ್ನು ಓಡಿಸುವುದಕ್ಕೆ ಹೊರಟಿದ್ದೀರಿ ವೇಗೋತ್ಕರ್ಷ ಮಾಡುವುದಕ್ಕೆ ಹೊರಟಿದ್ದೀರಿ ಕೆಮಿಸ್ಟ್ರಿಯಲ್ಲಿ ಫಾರ್ಮುಲಾ ಇದೆ catalyst forces ಎಂದು

ವೇಗವರ್ಧಕ ರಾಸಾಯನಿಕ ಕ್ರಿಯೆ ಇದೆ ವೇಗವರ್ಧಕ ರಾಸಾಯನಿಕ ವಸ್ತುಗಳು ಇಲ್ಲದೇ ಇದ್ದರೆ ವೇಗವರ್ಧಕ ಹೇಗೆ ಆಗುತ್ತದೆ ? ಇದು ಸಿಂಪಲ್ ಕೆಮಿಸ್ಟ್ರಿ ಆ ಸಿಂಪಲ್ ಕೆಮಿಸ್ಟ್ರಿ ನಿಮ್ಮ ಫೈನಾನ್ಸ್‌ನಲ್ಲಿ ಇಲ್ಲವಲ್ಲಾ? ವೇಗೋತ್ಕರ್ಷ ಎಂದು ಹೇಳುತ್ತೀರಿ? ಪವರ್ ಜನರೇಷನ್ ಮಾತ್ರ ಇಲ್ಲ ಹಾಗಾಗಿ ನಿಮ್ಮ ಏನು ಹಣಕಾಸಿನ ವ್ಯವಸ್ಥೆ ಇದೆ, ಅದರ ನಿರ್ವಹಣೆ ವೈಜ್ಞಾನಿಕವಾಗಿಲ್ಲ ಅದು ಅವೈಜ್ಞಾನಿಕವಾಗಿದೆ ಅಭಿವೃದ್ಧಿಯತ್ತ ಗುರಿ ಇಲ್ಲ ಉತ್ಪಾದನೆಯತ್ತ ಗುರಿಯಿಲ್ಲ ಇದು ನೀವು ನಿಮ್ಮ ಬಜೆಟ್‌ನಲ್ಲಿ ಹೇಳಿರುವಂತಹ ಅಂಶ, ನಾನು ಸ್ವತಃ ಒಂದು ಅಂಶವನ್ನು ಹೇಳುತ್ತಿಲ್ಲ ನಿಮ್ಮ ಬಜೆಟ್‌ನಲ್ಲಿ ನೀವೇ ಹೇಳಿರುವಂತಹ ಅಂಶಗಳು ಇವು ನೀವು 71 ಅಂಶಗಳ ನಿಮ್ಮ ಗುರಿ ಎಂದು ಇದೆ ಇವೆಲ್ಲಾ ಬಜೆಟ್‌ನಲ್ಲಿ ಸೇರಬೇಕಾಗಿರಲಿಲ್ಲ ಹಲವಾರು ಇಲಾಖೆಗಳು ಸ್ವತಂತ್ರವಾಗಿ ನಿರ್ವಹಣೆ ಮಾಡಬೇಕಾಗಿರುವಂತಹ ಕೆಲಸಗಳು ಉದಾ ಸಮಾಜಕಲ್ಯಾಣ ಇಲಾಖೆ, ಈ ಇಲಾಖೆಗೆ ನೇರವಾಗಿ ಹಣ ಕೊಡತಕ್ಕಂತಹ ಪ್ರಮಾಣವನ್ನು ಹೆಚ್ಚು ಮಾಡಿ ಅಲ್ಲಿ ಕಾರ್ಯಕ್ರಮಗಳನ್ನು ರೂಪಿಸಿದ್ದರೆ ಆ ಇಲಾಖೆಗೆ ಶಕ್ತಿ ಬರುತ್ತಿತ್ತು ಅದೇ ರೀತಿಯಲ್ಲಿ ನೀವು ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಹಣವನ್ನು ಕೊಟ್ಟು ಐತಿಹಾಸಿಕ ಸ್ಥಳಗಳನ್ನು ಮತ್ತು ಪ್ರವಾಸಿ ಸ್ಥಳಗಳನ್ನು ಅಭಿವೃದ್ಧಿ ಮಾಡತಕ್ಕಂತಹ ಅಧಿಕಾರ ಮತ್ತು ಜವಾಬ್ದಾರಿಯನ್ನು ಅವರಿಗೆ ಕೊಟ್ಟು ಅವರಿಗೆ ಹಣವನ್ನು ಕೊಡಬೇಕು ಅದನ್ನು ಬಿಟ್ಟು ನೇರವಾಗಿ ನೀವೇ ಬಜೆಟ್‌ನಲ್ಲಿ ಹೇಳಿಬಿಟ್ಟರೆ, ಅದು ಸರಿ ಅಲ್ಲ ತಾವು ತಪ್ಪು ತಿಳಿದುಕೊಳ್ಳಬೇಡಿ You are not giving autonomous power to those departments, ಸಮಾಜ ಕಲ್ಯಾಣ ಇಲಾಖೆಯವರು ಮಾಡಬೇಕಾಗಿರುವಂತಹ ಕೆಲಸಗಳನ್ನು ನೀವೇ ಇಲ್ಲಿ ಪಟ್ಟಿ ಮಾಡಿ ಬಿಟ್ಟಿದ್ದೀರಿ ಮತ್ತೆ ಅವರಿಗೆ ಏನು ಕೆಲಸವಿದೆ? ಕನ್ನಡ ಮತ್ತು ಸಂಸ್ಕೃತಿ ಇಲಾಖೆಯವರು ಜಾರಿ ಮಾಡಬೇಕಾಗಿರುವಂತಹ ಕೆಲಸಗಳನ್ನು ಇಲ್ಲಿ ನೀವೇ ಪಟ್ಟಿ ಮಾಡಿದ್ದೀರಿ? ಮತ್ತೆ ಆ ಇಲಾಖೆ ಏತಕ್ಕೆ ಇರಬೇಕು? ಅದಕ್ಕೆ ಮಂತ್ರಿ ಏಕೆ ಇರಬೇಕು? ಅಂದರೆ ಪೋಸ್ಟ್‌ಮನ್ ಕೆಲಸವನ್ನು ಮಾಡುವುದಕ್ಕೆ ಅವರಿಗೆ ಸ್ವತಂತ್ರವಾಗಿ ಆ ಇಲಾಖೆಗೆ ಏನು ಯೋಜನೆಯನ್ನು ಹಾಕುವಂತಹ ಶಕ್ತಿ ಇಲ್ಲವೇ? ನೀವು

ಹಣವನ್ನು ಡಿಪಾರ್ಟ್‌ಮೆಂಟ್‌ಗೆ ಕೊಡಿ ಸ್ವಾಮಿ ಆ ಇಲಾಖೆಗೆ ಕೊಡಿ ಸ್ವಾಮಿ ಸಮಾಜ ಕಲ್ಯಾಣ ಇಲಾಖೆಗೆ ನೀವು ಏನು ಹಣವನ್ನು ಒದಗಿಸಿದ್ದೀರಿ, ಅದರ ಪರ್ಸೆಂಟೇಜ್ ಜಾಸ್ತಿ ಮಾಡಿ ಕೊಡಿ ಅವರು ಪ್ರೊಗ್ರ್ಯಾಂಗಳನ್ನು implement ಮಾಡಲಿ ಅವರು ಏತಕ್ಕೆ ಇರುವುದು? ಕುಮಾರಸ್ವಾಮಿಯವರು ಮಂತ್ರಿಯಲ್ಲವೇ? ಅವರ ಕೈಯಲ್ಲಿ ಇದನ್ನು ಮಾಡುವುದಕ್ಕಾಗುವುದಿಲ್ಲವೇ? You are encroaching upon other portfolios which is dangerous to the democracy and to the collective responsibility of the cabinet It is a very serious thing

ಅಧ್ಯಕ್ಷರು – ಮಾನ್ಯ ಶ್ರೀರಾಮರೆಡ್ಡಿಯವರೆ ತಾವು ಬೇಗನೆ ಮುಗಿಸಿ

ಶ್ರೀ ಕೆ ಶ್ರೀನಿವಾಸಗೌಡ – ಮಾನ್ಯ ರೆಡ್ಡಿಯವರು ಆರ್ಥಿಕವಲಯಗಳ ಮೇಲೆ ಮಾತನಾಡುವಾಗಲೂ ನೀವು ಬೇಗನೆ ಮುಗಿಸಿ ಎಂದು ಹೇಳಿದರೆ ಹೇಗೆ ಸ್ವಾಮಿ? ಸರ್ಕಾರ ಎಚ್ಚರಿಕೆಯನ್ನು ವಹಿಸುವಂತಹ ವ್ಯವಸ್ಥೆ ಇದು ಅವರು ಬಜೆಟ್ ಮೇಲೆ ಮಾತನಾಡುವಾಗ ನೀವು ಬೇಗನೆ ಮುಗಿಸಿ ಎಂದರೆ ಸರಿಯಲ್ಲ ಅವರು ಅಷ್ಟು ಚೆನ್ನಾಗಿ ಮಾತನಾಡುತ್ತಿದ್ದಾರೆ ಅದನ್ನು ನಾವು ಕೇಳೋಣ

ಅಧ್ಯಕ್ಷರು .– ಮಾನ್ಯ ಶ್ರೀನಿವಾಸಗೌಡರೆ, ನಿಮ್ಮ ಪಾರ್ಟಿಯವರು 23 ಜನರ ಹೆಸರನ್ನು ಕೊಟ್ಟಿದ್ದಾರೆ ಇವರು 8 ಜನರ ಹೆಸರನ್ನು ಕೊಟ್ಟಿದ್ದಾರೆ ಜೆಡಿಎಸ್‌ನವರು 4 ಜನರ ಹೆಸರನ್ನು ಕೊಟ್ಟಿದ್ದಾರೆ ಜೊತೆಗೆ ಇಂಡಿಪೆಂಡೆಂಟ್ಸ್ ಇದ್ದಾರೆ ಇವರೆಲ್ಲರೂ ಮಾತನಾಡಬೇಕಲ್ಲವೇ?

ಶ್ರೀ ಜಿ ವಿ ಶ್ರೀರಾಮರೆಡ್ಡಿ – ಹೊಸ ಕೃಷಿ ನೀತಿಯನ್ನು ಈ ಸರ್ಕಾರದವರು ಪ್ರಕಟ ಮಾಡಿದ್ದಾರೆ ಇದನ್ನು ತಾವು ದಯವಿಟ್ಟು ಕೇಳಿ ಬಜೆಟ್‌ನಲ್ಲಿ ಮಾನ್ಯ ಯಡಿಯೂರಪ್ಪನವರು ಹೇಳುವ ಪ್ರಕಾರ 64 ಪರ್ಸೆಂಟ್ ಜನರು ಹಳ್ಳಿಗಾಡಿನಲ್ಲಿ ಜೀವನ ಮಾಡುತ್ತಿದ್ದಾರೆ ನೀವು 64 ಪರ್ಸೆಂಟ್ ಜನರು ಜೀವನ ಮಾಡುತ್ತಿರುವಂತಹ ಕೃಷಿ ವಲಯವೆಂದರೆ ಹಳ್ಳಿಗಾಡಿನ ಪ್ರದೇಶಕ್ಕೆ ನೀವು ಬಜೆಟ್‌ನಲ್ಲಿ ಒಟ್ಟು ತೆಗೆದು

ಇಟ್ಟಿರುವಂಥಹದ್ದು ಕೇವಲ 8 ಪೈಸೆ ಅದು 64 ಪರ್ಸೆಂಟ್ ಜನಕ್ಕೆ 8 ಪೈಸೆ ನೀವು ಹೊಸ ಕೃಷಿ ನೀತಿಯನ್ನು ಸಮ್ಮಿಶ್ರ ಸರ್ಕಾರ ಹೊರಡಿಸಿರುವುದರಲ್ಲಿ ಕಾರ್ಯ ರೂಪರೇಖೆಗಳ ಒಂದು ಹೆಡ್‌ಲೈನ್ ಕೊಟ್ಟಿದ್ದೀರಿ ಅದರಲ್ಲಿ ನೀವು ಏನು ಹೇಳಿದ್ದೀರಿ, ಮೊದಲನೆಯದು, ಕೃಷಿ ಹವಾಗುಣ, ಸಂಯೋಜನೆ ವಿವಿಧ ಕೃಷಿ ಹವಾಮಾನ ಪರಿಸ್ಥಿತಿಯನ್ನು ಹೊಂದಿರುವುದು ರಾಜಸ್ಥಾನದ ನಂತರ ಎರಡನೇ ಅತಿ ಹೆಚ್ಚಿನ ಅಭಾವಪೀಡಿತ ಪ್ರದೇಶ ಯಾವುದು? ಕರ್ನಾಟಕ ಇದನ್ನು ನೀವೇ ಹೇಳಿರುವುದು, ಅದು ನಾನಲ್ಲ ದೇಶದಲ್ಲಿ ಅತೀ ಕಡಿಮೆ ನೀರಾವರಿಯಲ್ಲಿ ಹೊಂದಿರುವ ಪ್ರದೇಶಗಳಲ್ಲಿ ಒಂದಾಗಿರುವುದು ಯಾವುದು? ಅದು ಕರ್ನಾಟಕ ಹೆಚ್ಚಿನ ಕಡಿಮೆ ಬೆಳೆಗಳ ಸಾಂದ್ರತೆ ಹೆಚ್ಚುತ್ತಿರುವ ರೈತರ ಆತ್ಮಹತ್ಯೆ ಪ್ರಕರಣಗಳು ಹೆಚ್ಚಿನ ಪ್ರಮಾಣದಲ್ಲಿ ಸಣ್ಣ ಮತ್ತು ಅತಿ ಸಣ್ಣ ರೈತರನ್ನು ಹೊಂದಿರುವಂತಹ ರಾಜ್ಯ ರಾಜಸ್ಥಾನದ ನಂತರ ಎರಡನೇ ಅತಿ ಹೆಚ್ಚಿನ ಅಭಾವಪೀಡಿತ ಪ್ರದೇಶ ಎಂದು ನೀವೇ ಒಪ್ಪಿಕೊಂಡಿರುವಂತಹ ಈ ಕೃಷಿ ನೀತಿಯಲ್ಲಿ ಈ ಅಭಾವಪೀಡಿತ ಪ್ರದೇಶ ಇರುವುದು ಎಂದರೆ ನಮ್ಮಲ್ಲಿ ಸಾಮಾನ್ಯವಾಗಿ ನಾವು ಲೆಕ್ಕ ಹಾಕುವುದು ಮಳೆ ಇಲ್ಲದೇ ಇರುವಂತಹದ್ದು ಮತ್ತು ನೀರಾವರಿ ವ್ಯವಸ್ಥೆ ಇಲ್ಲದೆ ಇರುವಂತಹದ್ದು, ಈ ಬಯಲು ಸೀಮೆ ಪ್ರದೇಶವನ್ನು ಅಭಿವೃದ್ಧಿ ಮಾಡುವುದಕ್ಕೆ ಇರತಕ್ಕಂತಹ ಒಂದೇ ಒಂದು ದಾರಿ, ಆ ಬಯಲು ಸೀಮೆ ನೀರಾವರಿ ಯೋಜನೆಗಳನ್ನು ಒದಗಿಸುವಂತಹದ್ದು ಮತ್ತು ಜಲಾನಯನ ಅಭಿವೃದ್ಧಿ ಕಾರ್ಯಕ್ರಮಗಳನ್ನು ಮಾಡತಕ್ಕಂತಹದ್ದು ಇವರೆಡೇ ದಾರಿ ಇರುವುದು ಏಕೆ ಅದನ್ನು ತಡೆ ಹಿಡಿಯಲಿಕ್ಕೆ ಕೇಂದ್ರ ಸರ್ಕಾರ ಪ್ಯಾಕೇಜ್ ಅನೌನ್ಸ್ ಮಾಡಿತು ವಿದರ್ಭಕ್ಕೆ ಪ್ರಧಾನಮಂತ್ರಿಗಳು ಹೋಗಿ ಬಂದ ಮೇಲೆ ಆ ಪ್ಯಾಕೇಜ್ ಹಣ ಬಂದಿದೆ, ನಿಮಗೆ ಅದನ್ನು ಯಾವ ರೀತಿ ಉಪಯೋಗಿಸಲಿಕ್ಕೆ ಕಾರ್ಯಕ್ರಮಗಳನ್ನು ಹಾಕಿದ್ದೀರಿ? ಹೇಗೆ ರೈತರ ಆತ್ಮಹತ್ಯೆಗಳನ್ನು ತಡೆಯುತ್ತೀರಿ? ಹೇಗೆ ಅವರಲ್ಲಿ confidence ಅನ್ನು ನೀವು create ಮಾಡುತ್ತೀರಿ? ಎರಡನೆಯದು ಇವತ್ತು ಇನ್ನೊಂದು ಕಡೆ ಕೃಷಿ ರಂಗದಲ್ಲಿ, ಬಜೆಟ್‌ನಲ್ಲಿಯೂ ಕೂಡ ಹೇಳಿದ್ದೀರಿ, ಕರ್ನಾಟಕ ರಾಜ್ಯದಲ್ಲಿ ಅತೀ ಹೆಚ್ಚಿನ

ಕೃಷಿ ಆಧಾರವಾಗಿರುವುದು ಸಣ್ಣ ನೀರಾವರಿ ಮೇಲೆ ಶೇ 74 ರಷ್ಟು ಪ್ರದೇಶ ಕೃಷಿ ಆಗುತ್ತಿರುವಂಥ ಪ್ರದೇಶ ಕರ್ನಾಟಕದ ಸಣ್ಣ ನೀರಾವರಿ ಭಾಗದಲ್ಲಿ, ಸಣ್ಣ ನೀರಾವರಿಗೆ ನೀವು ಹಣ ಎಷ್ಟು ಇಟ್ಟಿದ್ದೀರಿ? ಜಲಸಂವರ್ಧನೆಗೆ ನೀವು ಕೆರೆಗಳ ಅಭಿವೃದ್ಧಿ, ಒಂದು ಉದಾಹರಣೆಗೆ ಹೇಳುತ್ತೇನೆ, ಇವರೇ ಹೇಳಿದ್ದಾರೆ, ಕೆರೆಗಳ ಅಭಿವೃದ್ಧಿ, ಕೆರೆಗಳ ಅಭಿವೃದ್ಧಿಯಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆ ಮತ್ತು ಗುಲಬರ್ಗಾ ಜಿಲ್ಲೆಯೆಂದು ಇವರು ಆಯ್ಕೆ ಮಾಡಿಕೊಂಡಿದ್ದಾರೆ ಆದರೆ ಇಡೀ ರಾಜ್ಯದಲ್ಲಿ ಅತೀ ಹೆಚ್ಚಿನ ಕೆರೆಗಳಿರುವ ಕೋಲಾರ ಜಿಲ್ಲೆ ಇವರ ಕಣ್ಣಿಗೆ ಬೀಳಲಿಲ್ಲ ಕೋಲಾರ ಜಿಲ್ಲೆಯಲ್ಲಿ 4,100 ಕೆರೆಗಳಿವೆ ಆ ಕೆರೆಗಳ ಅಭಿವೃದ್ಧಿಗೆ ಇವರ ಕಾರ್ಯಕ್ರಮ ಇಲ್ಲ, ಇವರ ಕಣ್ಣಿಗೆ ಬೀಳಲೇ ಇಲ್ಲ ಇವತ್ತು ಕೋಲಾರ ಜಿಲ್ಲೆಗೆ ಮಾಧುಸ್ವಾಮಿಯವರು ಬೆಳಿಗ್ಗೆ ಹೇಳಿದರು, ಕೋಲಾರದ ಜಿಲ್ಲೆಯಿಂದ ರೇಷ್ಮೆ ಕೊಟ್ಟೆವು, ಚಿನ್ನ ಕೊಟ್ಟೆವು, ತರಕಾರಿ ಕೊಟ್ಟೆವು, ನೀವೇನು ಕೊಟ್ಟಿದ್ದೀರಿ ನಮಗೆ? ಹೋಗಲಿ ನೀವು ನಮಗೇನು ಕೊಡಬೇಡಿ, ಕೋಲಾರ ಜಿಲ್ಲೆಯ ರೈತರು ಪಡುಷ್ಟು ಕಷ್ಟ ಯಾರೂ ಪಡುವುದಿಲ್ಲ ನೀರು ಕೊಡಿ ಎಂದು ಕೇಳಿದೆವು, ಅದಕ್ಕೇನಾದರೂ ಯೋಜನೆ ಹಾಕಿದಿರಾ? 4,100 ಕೆರೆಗಳಿವೆ ಮಾನ್ಯ ಯಡಿಯೂರಪ್ಪನವರೇ, ನಿಮಗೆ ಅದು ಆದ್ಯತೆ ಆಗಲಿಲ್ಲ? ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿರುವ ಕೆರೆಗಳನ್ನು ಅಭಿವೃದ್ಧಿ ಮಾಡಿ ನಮ್ಮದೇನೂ ಅಭ್ಯಂತರವಿಲ್ಲ, ತುಮಕೂರು ಜಿಲ್ಲೆ, ಕೋಲಾರ ಜಿಲ್ಲೆಯಲ್ಲಿ ಕೆರೆಗಳು ಜಾಸ್ತಿಯಿವೆ, ಆ ಜಿಲ್ಲೆಗಳು ನಿಮ್ಮ ಕಣ್ಣಿಗೆ ಬೀಳಲಿಲ್ಲವೆ? ನಮ್ಮ ರಾಜ್ಯದಲ್ಲಿ ಕೆರೆಗಳು ಜಾಸ್ತಿಯಿರುವ ಜಿಲ್ಲೆಗಳಲ್ಲಿ No 1 ಕೋಲಾರ ಜಿಲ್ಲೆ, No 2 ತುಮಕೂರು ಜಿಲ್ಲೆ ನಾನು ಮೊನ್ನೆ ಈಶ್ವರಪ್ಪನವರು ಕೋಲಾರ ಜಿಲ್ಲೆಗೆ ಬಂದಾಗ ಅವರಿಗೆ ಕೆರೆಗಳ ಅಭಿವೃದ್ಧಿ ಪ್ರಾಧಿಕಾರವನ್ನು ಮಾಡಿ ಸಲಹೆ ಮಾಡಿದ್ದೇನೆ ಎಷ್ಟೋ ಪ್ರಾಧಿಕಾರಗಳನ್ನು ಕೆಲಸಕ್ಕೆ ಬರದೇ ಇರುವಂಥ ಪ್ರಾಧಿಕಾರಗಳನ್ನು ಮಾಡಿದ್ದೀರಿ ನೀವು ಇಡೀ ರಜ್ಯದಲ್ಲಿ ಕೆರೆಯ ಅಭಿವೃದ್ಧಿ ಪ್ರಾಧಿಕಾರವನ್ನು ರಚನೆ ಮಾಡಿ ಅದಕ್ಕೆ ಹಣ ಕೊಡಿ ನಮ್ಮ ಕೆರೆಗಳನ್ನು ಜೀರ್ಣೋದ್ಧಾರ ಮಾಡಿದರೆ ನಾವು ಬದುಕಿಕೊಳ್ಳುತ್ತೇವೆ ಏತಕ್ಕೆ ನೀವು ಹಣ ಇಡಲಿಲ್ಲ ಕೋಲಾರ ಜಿಲ್ಲೆಯಲ್ಲಿ ಇವತ್ತು ಎಂಥ ಸ್ಥಿತಿ ಬಂದಿದೆ, ಕುಡಿಯಲಿಕ್ಕೆ ನೀರು ಇಲ್ಲ, ನಿಮಗೆ ಏನೆಲ್ಲಾ ಕೊಟ್ಟೆವು ನಾವು ನಮಗೇನು ಕೊಟ್ಟಿರಿ? ಚಿನ್ನ ಕೊಟ್ಟೆವು, ರೇಷ್ಮೆ ಕೊಡುತ್ತಿದ್ದೇವೆ, ಹಾಲು ಕೊಡುತ್ತಿದ್ದೇವೆ ಜಗತ್ಪ್ರಸಿದ್ಧ ಸಿದ್ಧರಾದ ಇಂಜಿನಿಯರ್ ವಿಶ್ವೇಶ್ವರಯ್ಯನವರನ್ನು ಕೊಟ್ಟೆವು, ಪ್ರಪ್ರಥಮ

ಮುಖ್ಯಮಂತ್ರಿ ಚೆಂಗಲರಾಯ ರೆಡ್ಡಿಯವರನ್ನು ಕೊಟ್ಟೆವು, ಜಗತ್ಪ್ರಸಿದ್ಧ ವಿಜ್ಞಾನಿ ಸಿ ಎನ್ ರಾವ್‌ವರನ್ನು ಕೊಟ್ಟೆವು, ನಮ್ಮ ಜಿಲ್ಲೆಗೆ ಇವತ್ತು ಬರಡಾಗುತ್ತಿದೆ ಕನಿಷ್ಟ ನಮ್ಮ ಕೆರೆಗಳನ್ನು ಅಭಿವೃದ್ಧಿ ಮಾಡಲಿಕ್ಕೆ ನಿಮಗೆ ಸರ್ಕಾರಕ್ಕೆ ಮನಸ್ಸು ಬರಲಿಲ್ಲವೇ? ಇಡೀ ರಾಜ್ಯದ ಅಭಿವೃದ್ಧಿಗೆ ಕಾಣಿಕೆ ಕೊಟ್ಟಿದ್ದೇವೆ ನಾವು, ವಿಶ್ವೇಶ್ವರಯ್ಯನವರನ್ನು ಕೊಟ್ಟಿದ್ದೇವೆ, ಕನ್ನಡದ ಆಸ್ತಿಯನ್ನೇ ಕೊಟ್ಟಿದ್ದೇವೆ ನಾವು, ಕನ್ನಡದ ಆಸ್ತಿ ಮಾಸ್ತಿ ವೆಂಕಟೇಶ್ ಐಯ್ಯಂಗಾರರವರನ್ನು ಕೊಟ್ಟಿದ್ದೇವೆ, ನಮಗೆ ಏನು ಕೊಟ್ಟಿದ್ದೀರಿ? ನಮ್ಮ ಜಿಲ್ಲೆಯಲ್ಲಿ ವಿಶ್ವೇಶ್ವರಯ್ಯನವರ ಹೆಸರಿನಲ್ಲಿ ಒಂದು ಇಂಜಿನಿಯರಿಂಗ್ ಕಾಲೇಜು ಕೊಡಿ, ವಿಶ್ವೇಶ್ವರಯ್ಯನವರು ಹುಟ್ಟಿದ ಊರು ಚಿಕ್ಕಬಳ್ಳಾಪುರದ ಮುದ್ದೇನಹಳ್ಳಿ ತಾಲ್ಲೂಕಿನಲ್ಲಿದೆ, ಆ ಯುನಿವರ್ಸಿಟಿ ಕೇಂದ್ರವನ್ನು ಅಲ್ಲಿ ಸ್ಥಾಪನೆ ಮಾಡಿ ಎಂದು ಮೊದಲು ಶಾಸಕನಾಗಿದ್ದಾಗ ಇಲ್ಲಿ ಬೇಡಿಕೊಂಡೆ ವಿಶ್ವೇಶ್ವರಯ್ಯನವರ ಎಲ್ಲಾ ಕೊಡುಗೆಯ ಲಾಭವನ್ನು ರಾಜ್ಯ ಪಡೆಯಬೇಕು, ಆ ಜಿಲ್ಲೆಗೆ ಮಾತ್ರ ನೀವು ಕನಿಷ್ಠ ಏನೂ ಕೊಡಲಿಕ್ಕೆ ತಯಾರಿಲ್ಲ ಏನೂ ಕೊಡಬೇಡಿ, ಅವರು ಹುಟ್ಟಿದ ಊರು ಮುದ್ದೇನಹಳ್ಳಿ, ಏನು ಗುರುತಿಸಿದ್ದೀರಿ, ಯಾವ ರೀತಿ ಗುರುತಿಸಿದ್ದೀರಿ? ರವಿಶಂಕರ್ ಗುರೂಜಿಗೆ ಜ್ಞಾನೋದಯವಾಯಿತೆಂದು ಅವರಿಗೆ ಹಣ ಕೊಡುತ್ತೀರಿ, ವಿಶ್ವೇಶ್ವರಯ್ಯನವರು ಹುಟ್ಟಿದ ಊರಿನ ಅಭಿವೃದ್ಧಿ ಮಾಡಲಿಕ್ಕೆ ಏನು ಕೊಟ್ಟಿದ್ದೀರಿ ತಾವು? ಇಡೀ ರಾಜ್ಯದಲ್ಲಿ ಕೈಗಾರಿಕಾ ಅಭಿವೃದ್ಧಿ ಆಗಿದೆ, ಇಡೀ ರಾಜ್ಯದಲ್ಲಿ ವಿದ್ಯುಚ್ಛಕ್ತಿ ಉತ್ಪಾದನೆಯಾಗುತ್ತಿದೆ, ಕಬ್ಬು ತಯಾರಾಗುತ್ತಿದೆ

ಶ್ರೀ ಕೆ ಜಯಪ್ರಕಾಶ್ ಹೆಗ್ಡೆ – ರೆಡ್ಡಿಯವರೇ, ರವಿಶಂಕರ್ ಗುರೂಜಿಯವರಿಗೆ ಜ್ಞಾನೋದಯ ಈಗ ಆಗಿದೆ, ಆದರೆ ಅವರಿಗೆ ಜ್ಞಾನೋದಯ ಮೊದಲಿನಿಂದಲೂ ಇದೆ ಅದಕ್ಕೆ ಅವರಿಗೆ ಕೊಡಲಿಲ್ಲ

ಶ್ರೀ ಜೆ ವಿ ಶ್ರೀರಾಮರೆಡ್ಡಿ – ಬಹುಶಃ ಅಲ್ಲೇ ತಪ್ಪಾಗಿರಬೇಕು ಇಡೀ ರಾಜ್ಯ ಕೈಗಾರಿಕೆಯಲ್ಲಿ ಅಭಿವೃದ್ಧಿಯಾಗಿದ್ದರೆ ಅದು ವಿಶ್ವೇಶ್ವರಯ್ಯನವರ ಕೊಡುಗೆ, ನೀರಾವರಿ ಅಭಿವೃದ್ಧಿಯಾಗಿದೆ ಎಂದರೆ ವಿಶ್ವೇಶ್ವರಯ್ಯನವರ ಕೊಡುಗೆ, ನೀವು ಏನು ಕೊಟ್ಟಿರಿ, ಕನಿಷ್ಠ ಅವರ ಊರನ್ನಾದರೂ ಅಭಿವೃದ್ಧಿ ಮಾಡಲಿಕ್ಕೆ ನಿಮಗೆ ಜ್ಞಾಪಕ ಬರಲಿಲ್ಲವೇ? ಅವರು ಹುಟ್ಟಿದ ಜಿಲ್ಲೆಗೆ ಕುಡಿಯಲಿಕ್ಕೆ ನೀರು ಕೊಡಬೇಕೆಂದು ನಿಮಗೆ ಜ್ಞಾಪಕ ಬರಲಿಲ್ಲವೇ? ಕೃಷಿರಂಗದಲ್ಲಿ ಬೀಜಗಳ ಉತ್ಪಾದನೆಗೆ ಬಹಳ

ಆದ್ಯತೆಯನ್ನು ಕೊಡುತ್ತೇವೆಂದು ಹೇಳುತ್ತಿದ್ದಾರೆ, ನಮ್ಮ ಶ್ರೀನಿವಾಸಗೌಡರಿಗೆ ನನಗಿಂತಲೂ ಆ ಬೀಜಗಳ ಬಗ್ಗೆ ಚೆನ್ನಾಗಿ ಗೊತ್ತಿದೆ ಅವರೇ ಹೇಳಬೇಕು ಇವತ್ತು ಇಡೀ ನಮ್ಮ ರಾಜ್ಯದ ಪರಿಸ್ಥಿತಿಯಲ್ಲಿ ಬಿತ್ತನೇ ಬೀಜಗಳು ಉತ್ಪಾದನೆಯ ಬಗ್ಗೆ

ಶ್ರೀ ಬಿ ಎಸ್ ಯಡಿಯೂರಪ್ಪ (ಸನ್ಮಾನ್ಯ ಉಪ ಮುಖ್ಯಮಂತ್ರಿಗಳು) – ಕೋಲಾರ ಜಿಲ್ಲೆಗೆ ಬಹಳ ಅನ್ಯಾಯವಾಗಿದೆಯೆಂದು ಮಾತನಾಡುತ್ತಿದ್ದೀರಿ, ಈ ಜಲಸಂವರ್ಧನೆ ಯೋಜನೆಯಡಿಯಲ್ಲಿ World Bank Scheme ನಲ್ಲಿ maximum ಕೆರೆಗಳಲ್ಲಿ ಹೂಳು ತೆಗೆಯುವಂಥ ಕೆಲಸವನ್ನು ನಿಮ್ಮ ಜಿಲ್ಲೆಯಲ್ಲಿ ಮಾಡುತ್ತಿದ್ದೇವೆ for the First time ಇಲ್ಲಾ ಎಂದು ಕೈ ಅಲ್ಲಾಡಿಸಿದರೆ ನಾನೇನು ಮಾಡಲಿ, ನೀವೇ ಇದ್ದಿರಿ, ಸ್ವಲ್ಪ ಕೇಳಿ, ಯರಗೋಡು drinking water ನಲ್ಲಿ 165–00 ಕೋಟಿ ರೂ ಗಳಲ್ಲಿ ಈ ವರ್ಷ 50 ವರ್ಷ ಕೋಟಿ ರೂ ಗಳನ್ನು ಪ್ರಾವಿಷನ್ ಮಾಡುತ್ತಿದ್ದೇವೆ ಎಲ್ಲವನ್ನೂ ಮಾಡಿದ್ದೇವೆಂದು ಹೇಳುವುದಿಲ್ಲ, at least ನಮ್ಮ ಶ್ರೀರಾಮರೆಡ್ಡಿಯವರಿಗೆ ಗೊತ್ತಿರುವಂಥ ಸಂಗತಿಯೇ, ಕೋಲಾರ ಜಿಲ್ಲೆಯಲ್ಲಿ World Bank Scheme ತೆಗೆದುಕೊಂಡು ಹೋಗಿದ್ದೇವೆ Maximum works ಅನ್ನು ಮಾಡುತ್ತಿದ್ದೇವೆ Drinking water ಗೋಸ್ಕರ ಹಿಂದಿನವರು ಯಾರು ಮಾಡಿದ್ದರೋ, ಏನು ಮಾಡಿದ್ದರೋ, ಏನು ಮಾಡಿದ್ದರೋ ಏನೋ ಕೋಲಾರ್ ಜಿಲ್ಲೆ ಮರೆತುಹೋಗಿತ್ತು, ಏನೋ ಗೊತ್ತಿಲ್ಲ Drinking water ಗೆ ನಾವು ಪ್ರಾವಿಷನ್ ಮಾಡಿದ್ದೇವೆ ಅದನ್ನಾದರೂ at least ನೆನಪು ಮಾಡಿಕೊಳ್ಳಿ ಎಂದು ಕೇಳುತ್ತಿದ್ದೇವೆ ಅಷ್ಟೇ, ನನಗೇನೂ ಸರ್ಟಿಫಿಕೇಟ್ ಬೇಕಿಲ್ಲ ಎಷ್ಟು ಸಾಧ್ಯವೋ ಅಷ್ಟು ಜಸ್ಟೀಸ್ ಮಾಡಿದ್ದೇವೆನೆಂದು ಹೇಳಿದ್ದೇನೆ

ಶ್ರೀ ಕೆ ಶ್ರೀನಿವಾಸಗೌಡ – 11 ತಾಲ್ಲೂಕುಗಳಲ್ಲಿ 6 ತಾಲ್ಲೂಕುಗಳನ್ನು ಮಾತ್ರ ತೆಗೆದುಕೊಂಡಿರುವುದು, ಮಾನ್ಯ ಯಡಿಯೂರಪ್ಪನವರೇ ಸ್ವಲ್ಪ ಅರ್ಥ ಮಾಡಿಕೊಳ್ಳಿ, ಅದು 1024 ಕೆರೆಗಳು, ನಮ್ಮಲ್ಲಿ ಸುಮಾರು 4,100 ಕೆರೆಗಳಿವೆ, ಈ ಜಲಸಂವರ್ಧನೆಯಲ್ಲಿ ತೆಗೆದುಕೊಂಡಿರುವುದು 1024 ಕೆರೆಗಳು, ಅದನ್ನು ನೀವು ಭುಜ ತಟ್ಟಿಕೊಳ್ಳುವುದಲ್ಲ, ನೀವೇನು ಮಾಡಿದ್ದೀರಿ? ಹೀಂದೆ ಎಸ್ ಎಂ ಕೃಷ್ಣಾರವರು ಮಾಡಿದರು, ಈಗ ನೀವೇನು ಮಾಢಿದಿರಿ ಎಂದು ನಾವು ಕೇಳುತ್ತಿದ್ದೇವೆ

(ಗೊಂದಲ)

ಶ್ರೀ ಜಿ ವಿ ಶ್ರೀರಾಮರೆಡ್ಡಿ – ಜಲಸಂವರ್ಧನೆಯ ಯೋಜನೆಯ ಬಗ್ಗೆ ಅದರ failures ಏನು ಅದರ ಬಗ್ಗೆ ಈಗ ನಾನು ಮಾತನಾಡಲಿಕ್ಕೆ ಹೋಗುವುದಿಲ್ಲ ಈಗ ಸಮಯವಿಲ್ಲ, ಆದರೆ ಒಂದೇ ವಿಚಾರವನ್ನು ಮಾನ್ಯ ಯಡಿಯೂರಪ್ಪನವರಿಗೆ ಆ ವಿಚಾರದಲ್ಲಿ ಹೇಳಬಯಸುತ್ತೇನೆ ಜಲಸಂವರ್ಧನೆ ಯೋಜನೆ ನಿಮ್ಮ ರಾಜ್ಯ ಸರ್ಕಾರದ ಬಜೆಟ್ಟಿನ ಹಣದಿಂದ ನಡೆಯುತ್ತಿವುದಲ್ಲ ಅದು, World Bank ನ ಸಾಲ ಅದು World Bank ಹಣದಿಂದ ನಡೆಯುತ್ತಿದೆಯೇ ಹೊರತು ನಿಮ್ಮ ರಾಜ್ಯ ಸರ್ಕಾರದ ಹಣದಿಂದ ಅದು ನಡೆಯುತ್ತಿಲ್ಲ, ಸಾಲ ತೀರಿಸಲಿಕ್ಕೆ ರೈತರ ಮೇಲೆ ಹಾಕುವುದಿಲ್ಲವೇ? ಸಾಲ ತೀರಿಸುವವರು ನೀವು, ನಾವು ಅಲ್ಲ, ಜನರೇ ಸಾಲವನ್ನು ತೀರಿಸುವುದು ಎರಡನೆಯದು ಆ ಜಲಸಂವರ್ಧನೆ ಯೋಜನೆ ಎಷ್ಟು failure ಆಗಿದೆ, ಎಷ್ಟು ಸಕ್ಸಸ್ ಆಗಿದೆ ಎಂದು ಒಂದೂವರೆ ವರ್ಷದಿಂದ ಏನಾದರೂ evalution ಮಾಡಿದಿರಾ? ಎಲ್ಲೆಲ್ಲಿ ಏನೇನಾಗಿದೆಯೆಂದು ಹೇಳಿ ನೀವು NGO ಗಳಿಗೆ ಕೊಟ್ಟುಬಿಟ್ಟಿರಿ, ಅವರೇನೋ ಮಹಾನ್ ದೇಶಭಕ್ತರು ಅವರಾದರೆ ನಿಸ್ವಾರ್ಥತೆಯಿಂದ ಸೇವೆ ಮಾಡುತ್ತೀರೆಂದು NGO ಗೆ ಮ್ಯಾನೇಜ್‌ಮೇಂಟ್ ಕೊಟ್ಟಿದ್ದೀರಿ ಏನಾಗಿದೆಯೆಂದು ಕರೆದು ಎಲ್ಲಾ ವಿಚಾರ ಮಾಡಿ, ಮಾನ್ಯ ಯಡಿಯೂರಪ್ಪನವರೇ ನಿಮಗೆ ಗೊತ್ತಾಗುತ್ತದೆ ಜಲಸಂವರ್ಧನೆ ಯೋಜನೆಯ ಹಣೆಬರಹ ಏನಾಗಿದೆ ಅಲ್ಲಿ ಎನ್ನುವಂಥಾದ್ದು, ಯಾವ ರೀತಿ ಉಪಯೋಗವಾಗಿದೆಯೆಂದು, ಒಂದೂವರೆ ವರ್ಷಗಳಿಂದ ಎಷ್ಟು ಕೆರೆಗಳನ್ನು ಅಭಿವೃದ್ಧಿ ಮಾಡಿದ್ದಾರೆಂಬುದನ್ನು ಸ್ವಲ್ಪ evalution ಮಾಡಿಸಿ, ಎರಡನೆಯದು, ನಾವು ಯರಗೋಡಿಗೆ ಹಣ ಕೊಟ್ಟಿದ್ದೇವೆಂದು ಹೇಳಿದ್ದೀರಿ

ಅಧ್ಯಕ್ಷರು – ಶ್ರೀನಿವಾಸಗೌಡರು ಜಲಸಂವರ್ಧನೆ ಬಹಳ ಚೆನ್ನಾಗಿ ನಡೆಯುತ್ತಿದೆ ಎಂದು ಹೇಳುತ್ತಿದ್ದಾರೆ, ನೀವು ನೋಡಿದರೆ ಹಾಳಾಗಿ ಹೋಗಿದೆ ಅನ್ನುತ್ತೀರಿ ಏನ್ರೀ?

ಶ್ರೀ ಕೆ ಶ್ರೀನಿವಾಸಗೌಡ – ಅದರಲ್ಲಿ ಕೆಲವು lapses ಇದೆ, ನಾನು ಇಲ್ಲವೆಂದು ಹೇಳಿಲ್ಲ, ಆದರೆ ಕೆರೆಗಳನ್ನು ಕಟ್ಟಿದಾಗಿನಿಂದ ಇದುವರೆಗೆ ಕಟ್ಟಿದ ಮಣ್ಣಾಗಲಿ, ಫೀಡರ್ ಚಾನಲ್ ತೆಗೆಯುವುದಾಗಲಿ, ಅಷ್ಟೋ ಇಷ್ಟೋ ಹೂಳು ತೆಗೆಯುದಾಗಲಿ ಕೆಲಸ ಆಗಿದೆ, ಇದುವರೆಗೂ ಸ್ವಾತಂತ್ರ್ಯಬಂದ ಮೇಲಿಂದ ಹಿಡಿದು,

lapses ಇದೆಯೆಂದು ಹೇಳಿದ್ದೇನೆಲ್ಲಾ, ಆ ಎನ್ ಜಿ ಓ ಗೆ ಕೊಟ್ಟು lapses ಆಗಿದೆ, ಇಲ್ಲವೆಂದು ಹೇಳುವುದಿಲ್ಲ ಅದನ್ನು ನಿಲ್ಲಿಸಲಿಕ್ಕೆ ಸರ್ಕಾರ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಬೇಕು

ಶ್ರೀ ಜಿ ವಿ ಶ್ರೀರಾಮರೆಡ್ಡಿ – ನಿಮ್ಮ ಹಣವಂತೂ ಅಲ್ಲ ಅದು, ಬೀಜಗಳಿಗೆ ಮಾನ್ಯ ಯಡಿಯೂರಪ್ಪನವರೇ, ಕರ್ನಾಟಕ ಜಾಗತಿಕ ಬೀಜಕರಣ ಕಾರ್ಯಕ್ರಮಕ್ಕೆ ನಾನು 5 00 ಕೋಟಿ ರೂ ಗಳನ್ನು ನೀಡಲು ಉದ್ದೇಶಿಸಿದ್ದೇನೆಂದು ಬರೆದಿದ್ದೀರಿ ಇಲ್ಲಿ, ಇವತ್ತು ನೀವು ಯಾರಿಗೆ ಕೊಟ್ಟಿದ್ದೀರಿ ಸ್ವಾಮಿ, ಈ ಕೃಷಿ ರಂಗದ ಬೀಜಗಳನ್ನು ಉತ್ಪಾದನೆ ಮಾಡಲಿಕ್ಕೆ ಮಲ್ಟಿ ನ್ಯಾಷನಲ್ ಕಾರ್ಪೋರೇಷನ್‌ವರಿಗೆ ವಹಿಸಿಬಿಟ್ಟಿದ್ದೀರಿ ನೀವು ಮ್ಯಾನ್‌ಸ್ಯಾಂಟೋ, ಕಾರ್ಗಿಲ್, ಮಹಿಕೋ, ಕಂಪನಿಗಳಿಗೆ ಉತ್ಪಾದನೆ ಮಾಡಲಿಕ್ಕೆ ಕೊಟ್ಟುಬಿಟ್ಟಿದ್ದೀರಿ, ಅವರು ಯಾವ ಬೀಜಗಳನ್ನು ತಯಾರು ಮಾಡುತ್ತಾರೋ ಅವನ್ನು ನಮ್ಮ ರೈತರು ಉಪಯೋಗಿಸುವಂಥ ಸ್ಥಿತಿಗೆ ತಂದಿದ್ದೀರಿ, ನಿಮ್ಮ ಕೃಷಿ ವಿಶ್ವವಿದ್ಯಾನಿಲಯದ ವಿಜ್ಞಾನಿಗಳನ್ನು ನೀವು ಕೇಳಿ ಇವತ್ತು ಆ ರಂಗದಲ್ಲಿ ಏನಾಗಿದೆ, ಎಷ್ಟು ಅಪಾಯ ನಮಗೆ ಕಾದಿದೆ, ಇಡೀ ನಮ್ಮ ದೇಶ ಮತ್ತು ರಾಜ್ಯದ ಕೃಷಿಯ ಬೀಜ ಉತ್ಪನ್ನಗಳ ವಿದೇಶಿ ಕಂಪನಿಗಳ ಮೇಲೆ ಆಧಾರ ಬೀಳತಕ್ಕಂಥ ಸ್ಥಿತಿಗೆ ನಮ್ಮನ್ನು ನಮ್ಮ ರೈತರನ್ನು ತಂದಿಟ್ಟಿದ್ದೀರಿ, ನಮ್ಮ ಹಳ್ಳಿಯಲ್ಲಿರತಕ್ಕಂಥ ರೈತ ಏನು ಬೆಳೆಯಬೇಕು ಎಂದು ತೀರ್ಮಾನ ಮಾಡತಕ್ಕಂಥ ಅಧಿಕಾರವನ್ನು ಇವತ್ತು ರೈತರಿಂದ ಕಿತ್ತುಕೊಂಡು ಬಿಟ್ಟಿದ್ದೀರಿ ನಿಮ್ಮ ಕೃಷಿ ವಿಶ್ವವಿದ್ಯಾನಿಲಯದ ವಿಜ್ಞಾನಿಗಳನ್ನು ಕರೆದು ಕೇಳಿ ಅದರಿಂದ ಏನು ಅಪಾಯವಾಗಿದೆಯೆಂದು ಅವರು ಹೇಳುತ್ತಾರೆ ಇಲ್ಲವೇ ನನಗೆ ಸಮಯಕೊಡಿ, ನಾನೇ explain ಮಾಡಿ ಹೇಳುತ್ತೇನೆ ನಿಮ್ಮ ಸೀಡ್ಸ್ ಏನಾಗಿದೆ ಎಂದು ಹೇಳತಕ್ಕಂಥಾದ್ದು ನೀವು 5 00 ಕೋಟಿ ರೂಗಳನ್ನು ಜಾಗತಿಕ ಬೀಜಕರಣಕ್ಕೆ Karnataka Indogeneous seeds production ಗಲ್ಲ ಇವರು ಹಣ ಕೊಡುತ್ತಿರುವುದು, ಜಾಗತೀಕ ಬೀಜಕರಣಕ್ಕೆ ನೀವು ಕೊಡುತ್ತಿದ್ದೀರಿ ಇದರಿಂದ ಯಾವ ಪ್ರಯೋಜನವಾಗುತ್ತದೆಂದು ಆಲೋಚನೆ ಮಾಡಿರುವಿರಾ ನೀವು? ಸರ್ಕಾರ ಹೇಳಬೇಕು

ಅಧ್ಯಕ್ಷರು – ಶ್ರೀರಾಮರೆಡ್ಡಿಯವರೇ ಬೇಗ ಮುಗಿಸಿ

ಶ್ರೀ ಜಿ ವಿ ಶ್ರೀರಾಮರೆಡ್ಡಿ – ಇವತ್ತು ಇನ್ನೊಂದು ಬಹಳ ಪ್ರಮುಖವಾದಂತಹ ಸಾಮಾಜಿಕ ವಲಯದಲ್ಲಿ ಇಲ್ಲಿ ಮೂರು ಕಡೆಗಳಲ್ಲಿ ಹೇಳಿದ್ದೀರಿ ನೀವು, ಸಾಮಾಜಿಕ ಭದ್ರತೆ, ಸಾಮಾಜಿಕ ಸಾಮರಸ್ಯ, ಸಾಮಾಜಿಕ ನ್ಯಾಯ ಸಮತೋಲನಾ ಅಭಿವೃದ್ಧಿ ಎಂದು ಬಜೆಟ್‌ನಲ್ಲಿ ಬಂದಿದೆ ಏನು ಸ್ವಾಮಿ ಈ ಸರ್ಕಾರಕ್ಕೆ ಅದರ ಗಾಳಿ ಗಂಧ ಏನಾದರೂ ಗೊತ್ತಿದೆಯೇ? ಸಾಮಾಜಿಕ ನ್ಯಾಯ ಎಂದರೆ ಏನು? ಸಾಮಾಜಿಕ ಸಾಮರಸ್ಯ, ಏನೇನು ಸಾಮಾಜಿಕ ಸಾಮರಸ್ಯ ಉಳಿದಿದೆ ಕರ್ನಾಟಕ ರಾಜ್ಯದಲ್ಲಿ ದಕ್ಷಿಣ ಕನ್ನಡಕ್ಕೆ ಹೋಗಬೇಕು, ಉತ್ತರ ಕನ್ನಡಕ್ಕೆ ಹೋಗಬೇಕು, ಉಡುಪಿಗೆ ಹೋಗಬೇಕು, ಮೊನ್ನೆ ಬೆಂಗಳೂರಿನಲ್ಲಿ ನಡೆದಿದ್ದು ಇವೆಲ್ಲಾ ಸಾಮಾಜಿಕ ಸಾಮರಸ್ಯ ಅಲ್ಲವೇ ಮಾನ್ಯ ರಮೇಶ್ ಕುಮಾರ್‌ರವರೆ ನಾಲ್ಕೈದು ಜನ ಪ್ರಾಣ ಕಳೆದುಕೊಂಡಿದ್ದು ಸಾಮಾಜಿಕ ಸಾಮರಸ್ಯವೇ? ಸಾಮಾಜಿಕ ಸಾಮರಸ್ಯದಲ್ಲಿ ನೀವು ಮರಗಳಿಗೆ ಹಣ ಕೊಟ್ಟಿದ್ದೀರಿ? ಇದುವರೆಗೆ ಚರ್ಚ್‌ಗಳಿಗೆ, ಮಸೀದಿಗಳಿಗೆ, ಹಣ ಎಷ್ಟು ಕೊಟ್ಟಿದ್ದೀರಿ? ಯಾವ್ಯಾವ ಮರಗಳಿಗೆ ಎಷ್ಟು ಹಣ ಕೊಟ್ಟಿದ್ದೀರಿ? ಯಾವ್ಯಾವ ಗುರುಮರಗಳಿಗೆ ಎಷ್ಟು ಹಣ ಕೊಟ್ಟಿದ್ದೀರಿ? ಹೋಗಲಿ ಸ್ವಾಮಿ, ಕೊಡಿ, ನನ್ನದೇನೂ ತಕರಾರು ಇಲ್ಲ ಇವರಿಗೇನು ದುಡ್ಡಿಗೆ ಕಡಿಮೆಯಿದೆಯೇ? ಈ ಮರಗಳಿಗೆಲ್ಲಾ ನೀವು ಕೊಟ್ಟಿದ್ದೀರಿ ಅಲ್ಲಾ, ಮರಗಳು ಎಲ್ಲೆಲ್ಲಿ ಕೊಟ್ಟಿದ್ದೀರಲ್ಲಾ ಅವರಲ್ಲಿ ದುಡ್ಡಿಲ್ಲದೇ ಕಷ್ಟದಲ್ಲಿದ್ದಾಗ ಏನಾದರೂ ಸಹಾಯ ಮಾಡಲಿಕ್ಕೆ ಕೊಟ್ಟಿದ್ದೀರಾ? ಅವರ ಆಸ್ತಿ ಪಾಸ್ತಿ ಎಷ್ಟು? ನೂರಾರು ಕೋಟಿಗೆ ದೇಶದಲ್ಲಿ ಬೆಲೆಯಿಲ್ಲ ಅವರಿಗೆ ಹಣ ಬೇಕು ಅದು ಕೊಟ್ಟು ಬಿಟ್ಟು ನಾವು ಸಾಮಾಜಿಕ ಸಾಮರಸ್ಯವನ್ನು ಕಾಪಾಡುತ್ತಿದ್ದೇವೆಂದು ಹೇಳಿ ಬೋರ್ಡ್ ಹಾಕಿಕೊಂಡಿದ್ದೀರಾ ನೀವು?

ಶ್ರೀ ವಿ ಸೋಮಣ್ಣ – ಅಧ್ಯಕ್ಷರೇ, ನಾವು ಯಾರು ಉಪಮುಖ್ಯಮಂತ್ರಿಗಳಲ್ಲಿ ಸಿದ್ಧಗಂಗಾ ಮಠಕ್ಕೆ ಕೊಡಿ ಎಂದು ಅರ್ಜಿಹಾಕಿದವರಲ್ಲಿ ಅಲ್ಲ ಆದರೆ ಇಡೀ ರಾಷ್ಟ್ರದಲ್ಲಿ 77 ವರ್ಷಗಳ ಕಾಲ ಸುದೀರ್ಘವಾಗಿ ಆ ಮಠದ ಉತ್ತರಾಧಿಕಾರಿಯಾಗಿ ಲಕ್ಷಾಂತರ, ಕೋಟ್ಯಾಂತರ ಬಡವರಿಗೆ ಎಲ್ಲಾ ಜಾತಿಯ ಎಲ್ಲಾ ವರ್ಗದವರಿಗೆ ಆಶ್ರಯ ನೀಡಿ ವಿದ್ಯಾದಾನ ಹಾಗೂ ಅನ್ನ ದಾಸೋಹವನ್ನು ನೀಡಿ ಕರ್ನಾಟಕಕ್ಕೆ ಅಲ್ಲಾ, ಇಡೀ ಭಾರತಕ್ಕೆ ಒಂದು ಮಾದರಿಯಾಗಿ ಕೊಟ್ಟಿರತಕ್ಕಂಥ ಮಹಾತಪಸ್ವಿಗೆ,

ಅವರು ಮಕ್ಕಳಿಗಾಗಿ ಒಂದು ಪ್ರಾರ್ಥನಾ ಮಂದಿರವನ್ನು ಕಟ್ಟಿ, ಮತ್ತೊಂದಕ್ಕೆ ಕೊಡಿ ಎಂದು ಕೊಟ್ಟಿದ್ದಾರೆಯೇ ವಿನಃ ಯಡಿಯೂರಪ್ಪನವರು ಅನಿರೀಕ್ಷಿತವಾಗಿ ಆ ಸಮಾಜದವರನ್ನು ಒಂದೇ ದೃಷ್ಟಿಯಿಂದ ಏನಾದರೂ ಕೊಟ್ಟಿದ್ದಾರೆಂಬ ಭಾವನೆ ಯಾರಿಗಾದರೂ ಇದ್ದರೆ ಇದು ತಪ್ಪು ಗ್ರಹಿಕೆ, ಆದರೆ ಒಂದು ಸತ್ಯ, ಸಿದ್ಧಗಂಗಾ ಮಠ ಕರ್ನಾಟಕಕ್ಕೆ ಅಲ್ಲ, ಭಾರತ ದೇಶದಲ್ಲಿ ಯಾವುದಾದರೂ ಒಂದು ಮಠ ಕ್ರಾಂತಿಕಾರಿ ಬೆಳವಣಿಗೆಯಲ್ಲಿ ಈ ರಾಷ್ಟ್ರಕ್ಕೆ ಒಂದು ಸಾಮಾಜಿಕ ನ್ಯಾಯವನ್ನು ಬದ್ಧತೆಯನ್ನು 77 ವರ್ಷಗಳಿಂದ ಕೊಟ್ಟಂಥದ್ದು ಇವತ್ತು ಅವರು ಏಪ್ರಿಲ್ 1 ನೇ ತಾರೀಖಿಗೆ ನೂರು ವರ್ಷಕ್ಕೆ ಕಾಲಿಡುತ್ತಿದ್ದಾರೆ ಆ ಸವಿನೆನಪಿಗಾಗಿ ಏನಾದರೂ ಕೊಟ್ಟಿದ್ದಾರೆಯೋ ಏನೊ ನನಗೆ ಗೊತ್ತಿಲ್ಲ ಆದರೆ ಒಂದು ಸತ್ಯ ಯಾವುದೇ ಕಾರಣಕ್ಕೂ ಈ ಮಠವನ್ನು ಬೇರೆ ಮಠಗಳಿಗೆ ಸಾವಿರಾರು ಕೋಟಿ ರೂ ಗಳ ಆಸ್ತಿಯಿದೆ, ಮತ್ತೊಂದಿದೆ, ಮಗದೊಂದಿಗೆ ಎಂದು ತಮ್ಮ ಭಾವನೆ ಇದೆ, ಇದನ್ನು ದಯಮಾಡಿ ಸಿದ್ಧಗಂಗಾ ಮಠಕ್ಕೆ ಹೋಲಿಕೆ ಮಾಡಬಾರದೆಂದು ನಾನು ತಮ್ಮ ಮೂಲಕ ತಮ್ಮಲ್ಲಿ ವಿನಂತಿ ಮಾಡುತ್ತೇನೆ

ಶ್ರೀ ಜಿ ವಿ ಶ್ರೀರಾಮರೆಡ್ಡಿ – ಸಿದ್ಧಗಂಗಾ ಮಠದ ಮೇಲೆ ನಮಗೆ ಅತ್ಯುನ್ನತವಾದಂಥ ಗೌರವವಿದೆ ಅವರು ಮಾಡಿರತಕ್ಕಂಥ ಶೈಕ್ಷಣಿಕ ರಂಗದಲ್ಲಿ ಅವರು ರಾಜ್ಯಕ್ಕೆ ಕೊಟ್ಟಿರತಕ್ಕಂಥ ಕೊಡುಗೆಯ ಬಗ್ಗೆ ನಮಗೆ ಯಾವುದೇ ರೀತಿಯಾದಂಥ ತಕರಾರು ಇಲ್ಲ, ಅವರಿಗೆ ಅಗೌರವ ತೋರಿಸತಕ್ಕಂಥ ಪ್ರಶ್ನೆ ಇಲ್ಲವೇ ಇಲ್ಲ ನಾನು ಕೇಳುತ್ತಿರುವ ಪ್ರಶ್ನೆ ಬೇರೆ ಸಾಮರಸ್ಯದ ಹಿನ್ನೆಲೆಯಲ್ಲಿ ಈ ಪ್ರಶ್ನೆ ಕೇಳುತ್ತಿದ್ದೇನೆಯೇ ಹೊರತು ಕೊಡಬಾರದಾಗಿತ್ತು ಎಂದು ನಾನು ಕೇಳಲಿಲ್ಲ ನಿಮ್ಮ ಆದ್ಯತೆಗಳೇನು ಇಲ್ಲಿ ಎಂದು ನಾನು ಕೇಳುತ್ತಿದ್ದೇನೆ ಆ ರೀತಿ ಕೊಡುಗೆ ಕೊಟ್ಟಿರುವಂಥ ಮಠಗಳು ಸಾಕಷ್ಟು ಇಲ್ಲಿ ಅವಹೇಳನ ಮಾಡುತ್ತಿಲ್ಲ, ನಿಮ್ಮ ಆದ್ಯತೆಗಳೇನು? ಬಜೆಟ್ಟಿನಲ್ಲಿ ಇದನ್ನು ಹೇಳಬೇಕಾಗಿತ್ತೇ? ಕೊಡಲಿಕ್ಕೆ ಬೇರೆ ದಾರಿಯಿರಲಿಲ್ಲವೇ ನಿಮಗೆ? ಇದರಲ್ಲಿ ಹೇಳಿ ಕೊಡಬೇಕಾಗಿತ್ತೇ? ನೀವು ಕೊಡುವ 10 00 ಕೋಟಿ ರೂಗಳನ್ನು ಡಂಗುರ ಸಾರಿ ಕೊಡಬೇಕಾಗಿತ್ತೇ?

ಶ್ರೀ ಹೆಚ್ ಸಿ ಬಾಲಕೃಷ್ಣ – ಅಧ್ಯಕ್ಷರೇ, ಬಜೆಟ್ಟಿನಲ್ಲಿ ಅದು ಬಂದಿರುವುದರಿಂದ ಇಡೀ ಕರ್ನಾಟಕಕ್ಕೆ, ಇಡೀ ದೇಶಕ್ಕೆ ಗೌರವ ಬಂದಂತಾಗಿದೆ ದಯಮಾಡಿ ಅದರ ಬಗ್ಗೆ ಟೀಕೆ ಮಾಡಬಾರದು

ಶ್ರೀ ಜಿ ವಿ ಶ್ರೀರಾಮ ರೆಡ್ಡಿ – ಇವರು ಯಾರು ಹೇಳಲಿಕ್ಕೆ ಟೀಕೆ ಮಾಡಬಾರದೆಂದು, ನನ್ನ ಹಕ್ಕು ಅದು, Who are you to say that? This is my right

(ಗೊಂದಲ)

ಶ್ರೀ ಹೆಚ್ ಸಿ ಬಾಲಕೃಷ್ಣ – ಆಮೇಲೆ ಹೇಳತಕ್ಕಂಥದ್ದು ಹೇಳಿದಿರಿ, ಟೀಕೆ ಮಾಡುತ್ತಿದ್ದಾರೆಂದು ನಿಮ್ಮ ಹಕ್ಕನ್ನು ನಾವೇನು ಮೊಟಕುಗೊಳಿಸುತ್ತಿಲ್ಲ

(ಗೊಂದಲ)

ಶ್ರೀ ಹೆಚ್ ಸಿ ಬಾಲಕೃಷ್ಣ :– ಈಗ ನೂರು ವರ್ಷ ಅವರಿಗೆ ಆಗಿರುವುದರಿಂದ

(ಗೊಂದಲ)

ಶ್ರೀ ಜಿ ವಿ ಶ್ರೀರಾಮರೆಡ್ಡಿ – ಅದನ್ನು ನಾನು ಒಪ್ಪುವುದಿಲ್ಲ ನನ್ನ ಅಭಿಪ್ರಾಯ ಹೇಳುವಂಥದ್ದು ನನ್ನ ಹಕ್ಕು ಅದು ನನ್ನ ಹಕ್ಕನ್ನು ಕಿತ್ತುಕೊಳ್ಳುವುದಕ್ಕೆ ನಾನು ಯಾರಿಗೂ ಅಧಿಕಾರವನ್ನು ಕೊಟ್ಟಿಲ್ಲ ನಿಮಗೆಷ್ಟು ಗೌರವಿದೆಯೋ ನಮಗೂ ಅಷ್ಟೇ ಗೌರವವಿದೆ,

(ಗೊಂದಲ)

ಶ್ರೀ ಹೆಚ್ ಸಿ ಬಾಲಕೃಷ್ಣ – ನಾವು ನಿಮ್ಮ ಹಕ್ಕನ್ನು ಕಿತ್ತುಕೊಳ್ಳುತ್ತಿಲ್ಲ, ವಿನಂತಿ ಮಾಡಿಕೊಳ್ಳುತ್ತಿದ್ದೇವೆ ಅಷ್ಟೇ ಗೊತ್ತು, ನೀವು ಬುದ್ಧಿವಂತರು, ನಿಮಗೆ ಯಾರು ಹೇಳುವಂಥ ಅವಶ್ಯಕತೆ ಇಲ್ಲ ಆದರೂ ವಿನಂತಿ ಮಾಡಿಕೊಳ್ಳುತ್ತಿದ್ದೇವೆ ಅಷ್ಟೆ, ಬುದ್ಧಿ ಹೇಳುತ್ತಿಲ್ಲ

ಶ್ರೀ ಜಿ ವಿ ಶ್ರೀರಾಮರಡ್ಡಿ – ನಿಮ್ಮ ಕೈಯಲ್ಲಿ ಹೇಳಿಸಿಕೊಳ್ಳುವಂಥ ಅವಶ್ಯಕತೆ ನನಗಿಲ್ಲ, ನೀವು ವಿನಂತಿ ಮಾಡತಕ್ಕಂಥ ಅವಶ್ಯಕತೆಯೂ ಇಲ್ಲ You have no right to disturb me

ಅಧ್ಯಕ್ಷರು – ರೆಡ್ಡಿಯವರೇ ದಯವಿಟ್ಟು ಮುಗಿಸಿಬಿಡಿ

ಶ್ರೀ ಕೆ ಜಯಪ್ರಕಾಶ್ ಹೆಗ್ಡೆ – ಅವರ ಪ್ರಶ್ನೆ ಸಾಮಾಜಿಕ ಸಾಮರಸ್ಯದ ಬಗ್ಗೆ, ನನ್ನದು ಇನ್ನೊಂದು ಪ್ರಶ್ನೆ ಇದೆ Priority sector ಏನು ರಾಜ್ಯಸರ್ಕಾರಕ್ಕೆ ಎನ್ನುವಂಥಾದ್ದು? ಈ ಮರಗಳಿಗೆ ಹಣ ಕೊಡುವ ಅಗತ್ಯವೇನಿದೆ? ಇದಕ್ಕಿಂತ ಮೀರಿ ಈ ರಾಜ್ಯದಲ್ಲಿ ಬೇರೆ ಯಾರೂ ಇಲ್ಲವೇ? ಅವರಿಗೆ ಹಣದ ಅಗತ್ಯವಿದೆ ಇದನ್ನು ರಾಜ್ಯಸರ್ಕಾರ ಆಲೋಚನೆ ಮಾಡಬೇಕಲ್ಲವೇ? ಯಾವುದಕ್ಕೆ ಕೊಡಬೇಕು, ಯಾವುದಕ್ಕೆ ಕೊಡಬಾರದು ಎನ್ನುವುದು ಚರ್ಚೆಯಲ್ಲ, ನಮ್ಮ ಪ್ರಯಾರಿಟಿ ಏನು ಎನ್ನುವಂಥಾದ್ದು

(ಗೊಂದಲ)

ಅಧ್ಯಕ್ಷರು – ಇನ್ನು ಬಹಳಷ್ಟು ಜನ ಮಾತನಾಡಲಿಕ್ಕೆ ಇದ್ದಾರೆ, ರೆಡ್ಡಿಯವರೇ, ಈಗ ನೀವು ಮಾತನಾಡಲಿಕ್ಕೆ ಆರಂಭವಾಗಿ ಒಂದು ಗಂಟೆಯಾಯಿತು

ಶ್ರೀ ಎಂ ಪಿ ಪ್ರಕಾಶ್ – ಸನ್ಮಾನ್ಯ ಅಧ್ಯಕ್ಷರೇ, ಸಾಮಾಜಿಕ ಸಾಮರಸ್ಯ ಎನ್ನುವ ವಿಚಾರದಲ್ಲಿ ನಾವ್ಯಾರಾದರೂ ಮಾತನಾಡಿದರೆ ಮತ್ತೆ ಅಪವಾದಕ್ಕೆ ಗುರಿಯಾಗುತ್ತೇವೆಂದು ಗೊತ್ತಿದ್ದರೂ ಕೂಡ ಅನಿವಾರ್ಯವಾಗಿ ಕೆಲವು ಸತ್ಯಸಂಗತಿಗಳನ್ನು ಹೇಳಬೇಕಾಗುತ್ತದೆ ಸಾಮಾಜಿಕ ಸಾಮರಸ್ಯ ಮತ್ತು ಸಾಮಾಜಿಕ ನ್ಯಾಯಕ್ಕೆ ಸಿದ್ಧಗಂಗಾ ಮಠದಲ್ಲಿ ಶ್ರೀಗಳು ಈಗಾಗಲೇ ಭಾರತ ದೇಶದಲ್ಲಿ ಹೆಸರಾಗಿರುವಂಥವರು ಸುಮಾರು 8,000 ಕ್ಕಿಂತ ಹೆಚ್ಚು ವಿದ್ಯಾರ್ಥಿಗಳು ಅಲ್ಲಿ ಉಚಿತವಾದಂಥ ಪ್ರಸಾದವನ್ನು ಮತ್ತು ಶಿಕ್ಷಣವನ್ನು ಪಡೆಯುತ್ತಿದ್ದಾರೆ ಅದರಲ್ಲಿ ಬಹಳ ದೊಡ್ಡ ಸಂಖ್ಯೆಯಲ್ಲಿರುವಂಥವರು ಕುರುಬ ಜನಾಂಗದ ವಿದ್ಯಾರ್ಥಿಗಳು, ನಂತರ ಬರುವವರು ಗೊಲ್ಲ ಜನಾಂಗದ ವಿದ್ಯಾರ್ಥಿಗಳು, ಅದರ ನಂತರ ಬರತಕ್ಕಂಥವರು ಲಿಂಗಾಯಿತ ಜನಾಂಗದ ವಿದ್ಯಾರ್ಥಿಗಳು, ಈಗ

116

ಶ್ರೀರಾಮರೆಡ್ಡಿಯವರು ಇದನ್ನು ಎತ್ತಿದ್ದಾರೆ, ಅದು ತಪ್ಪು ಎನ್ನುವಂಥದ್ದಲ್ಲ, ಒಳ್ಳೆಯ ಕೆಲಸಗಳನ್ನು ಮಾಡಿರುವಂಥ ಮಠಗಳಿವೆ, ಆ ಮಠಗಳಿಗೆ ಈ ಸಹಾಯ ಮಾಡಬೇಕು ತಾವು ಆದ್ಯತೆಯ ವಿಚಾರವನ್ನು ಹೇಳಿದ್ದೀರಿ, ಶಿಕ್ಷಣ ಈ ಕರ್ನಾಟಕ ಸರ್ಕಾರದ ಆದ್ಯತೆ, ಶಿಕ್ಷಣಕ್ಕೆ ಈ ರೀತಿಯಾದಂಥ ಪ್ರೋತ್ಸಾಹ ಕೊಡುವ ಮಠಗಳು ಯಾವ್ಯಾವು ಇವೆ ಆ ಎಲ್ಲಾ ಸಂಸ್ಥೆಗಳಿಗೂ ಸಹಾಯ ಮಾಡುವುದಾಗಿರುವುದರಿಂದ ಈ ಮಠದ ಜೊತೆಗೆ ಬೇರೆ ಮಠಗಳಿಗೂ ಕೊಡಬೇಕೆನ್ನುವುದೇನಿದೆ, ಅದು ಒಪ್ಪುವಂಥ ಮಾತು, ಅದು ನಮ್ಮ ಪ್ರಯಾರಿಟಿ, ಶಿಕ್ಷಣ, ಆರೋಗ್ಯ, ರಸ್ತೆಗಳು, ಈ ಜನತಾ ಮನೆಗಳನ್ನು ಕಟ್ಟುವುದು, ಕುಡಿಯುವ ನೀರು ನಮ್ಮ ಪ್ರಯಾರಿಟಿ ಇದಕ್ಕೆ ಬೇಕಾದಂಥ ರೀತಿಯಲ್ಲಿ ಈ ಬಜೆಟ್ಟಿನಲ್ಲಿ ಹಣ ಒದಗಿಸಲಾಗಿದೆ ಬೇರೆ ಬೇರೆ ಮಠಗಳು ಇವೆ, ಒಳ್ಳೆಯ ಶೈಕ್ಷಣಿಕ ಸಂಸ್ಥೆಗಳು ನಮ್ಮ ತಿಳುವಳಿಕೆಗೆ ಬರದೇ ಇರುವಂಥದ್ದು ಇರಬಹುದು ಅವುಗಳ ಹೆಸರುಗಳನ್ನು ತಾವು ಹೇಳಿದರೆ ಖಂಡಿತವಾಗಿಯೂ ಪರಿಗಣಿಸಿ ಸಹಾಯ ಮಾಡುತ್ತಾರೆ ಭಂಟರು ಬಹಳ ಪ್ರಭಾವಶಾಲಿಯಾಗಿರುವಂಥವರು, ಏಕೆಂದರೆ ಆ ಸಮಾಜ ದುಡಿದು ಹೋರಾಟ ಮಾಡಿ ವಿಶ್ವಸುಂದರಿಯರು ಆಗುತ್ತಾರೆ, ಹೋರಾಟವನ್ನು ಮಾಡುತ್ತಾರೆ ವ್ಯಾಪಾರವನ್ನು ಮಾಡುತ್ತಾರೆ

ಶ್ರೀ ಜಯಪ್ರಕಾಶ್ ಹೆಗ್ಡೆ – ನಮ್ಮನ್ನು ಲೆಕ್ಕಕ್ಕೆ ತಗೊಳ್ಳುತ್ತಾರೆ ಆದರೆ position ಕೊಡುವಾಗ ನಾವು ಲೆಕ್ಕಕ್ಕಿಲ್ಲ ದುರ್ದೈವ ನಮಗೆ ಮರವೇ ಇಲ್ಲ

ಶ್ರೀ ಎಂ ಪಿ ಪ್ರಕಾಶ್ – ಭಂಟರು ಬಹಳ ಪ್ರಭಾವಶಾಲಿಗಳು ಅವರಿಗೆ ಮರಗಳ ಅಗತ್ಯವಿಲ್ಲ ಏಕೆಂದರೆ ಆ ಸಮಾಜ ದುಡಿದು ಹೋರಾಡಿ ವಿಶ್ವಸುಂದರಿಯರೂ ಆಗುತ್ತಾರೆ

ಶ್ರೀ ಜೆ ಸಿ ಮಾಧುಸ್ವಾಮಿ – ಕ್ಷಮಿಸಬೇಕು ಚುಂಚನಗಿರಿ ಸ್ವಾಮಿಗಳು ಇವರನ್ನು ಸೇರಿಸಿಕೊಂಡೇ ಜನಸಂಖ್ಯೆ declare ಮಾಡಿರುವುದು

ಶ್ರೀ ಎಂ ಪಿ ಪ್ರಕಾಶ್ – ಸಂಖ್ಯೆ ಕಮ್ಮಿಯಾಯಿತು ಅನ್ನುವ ಕಾರಣಕ್ಕೇನೆ ಯಾವುದೇ ಸಾಂಸ್ಕೃತಿಕ ಬಾಂಧವ್ಯ ಇಲ್ಲದಿದ್ದರೂ ಭಂಟರನ್ನು ರೆಡ್ಡಿಗಳನ್ನು ಕೊಡಗಿನ ವಕ್ಕಲಿಗರನ್ನು ವಕ್ಕಲಿಗರು ಅಂತ ಘೋಷಿಸಿದ್ದಾರೆ ಆದರೆ ಹೆಣ್ಣು ಕೊಡುವುದಿಲ್ಲ, ಊಟ ಉಪಚಾರ ಇಲ್ಲ

ಶ್ರೀ ಜೆ ಸಿ ಮಾಧುಸ್ವಾಮಿ – ಇವರು, ಕುಂಚಿಟಿಗ ವಕ್ಕಲಿಗರು, ಸರ್ಪ ವಕ್ಕಲಿಗರು ಎಲ್ಲ ಕ್ಯಟಗಿರಿಯೊಳಗೆ ಸೇರಿದ್ದಾರೆ

ಶ್ರೀ ಎಂ ಪಿ ಪ್ರಕಾಶ್ – ಲಿಂಗಾಯ್ತರಲ್ಲಿ ಹೇಗೆ ಒಳಜಾತಿ ಇದೆಯೋ ಅವರಲ್ಲೂ ಇದೆ ಇದೆಲ್ಲ ಆಗಿದ್ದು ಯಾವಾಗ ಹಾವನೂರು ಆಯೋಗದ ವರದಿ ಬಂತು ಜನಸಂಖ್ಯೆ ಪ್ರಮಾಣ ಮತ್ತು ಆ ವರದಿಯಲ್ಲಿ 7 ಮತ್ತು 10ನೇ ತರಗತಿಗಳಲ್ಲಿ ಸರಾಸರಿ ಲೆಕ್ಕದಲ್ಲಿ ಮೇಲೆ ಬಂದ ಜಾತಿಯನ್ನು ಹಿಂದುಳಿದ ಜಾತಿ ಅಂತ ಮಾಡಿದಾಗ ಇವರನ್ನೆಲ್ಲ ಸೇರಿಸಿ ಮಾಡಿದ್ದು

ಶ್ರೀ ಕೆ ಎಂ ಶ್ರೀನಿವಾಸಗೌಡ – ಮಂಗಳೂರಿನಲ್ಲಿ ಬಂಟರು, ಸಕಲೇಶಪುರ ದಾಟಿದ ಮೇಲೆ ವಕ್ಕಲಿಗರು ಅಷ್ಟೇ

ಶ್ರೀ ಬಿ ಆರ್ ಪಾಟೀಲ್ – ನೀವು ಹೇಳುತ್ತೀರ ಅಂತ ಅಂದುಕೊಂಡಿದ್ದೆ ಇವತ್ತು ಧರ್ಮ ಜಾತಿ ಹೆಸರಿನಲ್ಲಿ ವಿಷ ಬಿತ್ತುತ್ತಿರುವ ಸಂದರ್ಭದಲ್ಲಿ ಅಂಧಾ ವಿಷಬೀಜ ಬಿತ್ತುವ ಮರಾಧೀಶರಿಗೂ ಬಜೆಟ್‌ನಲ್ಲಿ ದುಡ್ಡು ಕೊಟ್ಟಿದ್ದಾರೆ

ಶ್ರೀ ಜಿ ವಿ ಶ್ರೀರಾಮರೆಡ್ಡಿ – ನಮ್ಮ ಭಾಷೆಯಲ್ಲಿ ಅದನ್ನು ಹೇಳಿದ್ದೇನೆ ಇನ್ನು ಮಹಿಳೆ ಮಕ್ಕಳ ಅಭಿವೃದ್ಧಿಗೆ ನೀವು ಕೊಟ್ಟಿರುವ ಹಣವೆಷ್ಟು? ಈ ಇಲಾಖೆಯಲ್ಲಿ ಪ್ರಧಾನ ಪಾತ್ರ ವಹಿಸುತ್ತಿರುವ ಅಂಗನವಾಡಿ ಕಾರ್ಯಕರ್ತೆಯರಿಗಾಗಿ ಹಣ ತೆಗೆದಿಟ್ಟಿದ್ದೀರ? ಸರ್ಕಾರ ಎಲ್ಲದಕ್ಕೂ ಆ ಅಂಗನವಾಡಿ ಕಾರ್ಯಕರ್ತೆಯರ ಕೈಲಿ ಚಾಕರಿ ಮಾಡಿಸಿಕೊಳ್ಳುತ್ತೀರಿ ಮಂತ್ರಿಗಳು ಹೋದರೆ ಭಾಷಣ ಕೇಳಲು ಅವರು ಬೇಕು, ನಿಮ್ಮ 26 ಕಾರ್ಯಕ್ರಮ ಜಾರಿಗೊಳಿಸಲು ಅವರನ್ನು ಉಪಯೋಗಿಸಿಕೊಳ್ಳುತ್ತೀರಿ ಸರ್ವೆ, ಜನಗಣತಿ, ಸ್ತ್ರೀಶಕ್ತಿ ಗುಂಪು ಕಟ್ಟಲು ಅವರು ಬೇಕು, ಆದರೆ ಅವರಿಗೆ ಕನಿಷ್ಟ ಗೌರವಧನ ಕೊಡುತ್ತಿರುವುದನ್ನು ಹೆಚ್ಚಿಸಲು ನೀವು ಆಲೋಚನೆ ಮಾಡಲಿಲ್ಲ ಗೌರವಧನದ ಹೆಸರಿನಲ್ಲಿ ಅವರನ್ನೆಷ್ಟು ಶೋಷಿಸಬೇಕೆಂದಿದ್ದೀರಿ? ಈ ಅಂಗನವಾಡಿ ಕಾರ್ಯಕರ್ತೆಯರಿಗೆ ನೇಮಕವಾಗುವುದು ಗೊತ್ತು, ಆದರೆ ಯಾವಾಗ ಮನೆಗೆ ಹೋಗುತ್ತಾರೆ ಅಂತ ಅವರಿಗೇ ಗೊತ್ತಿಲ್ಲ ಕುಮಾರಸ್ವಾಮಿಗಳೇ, ನಿಮಗೇನಾದರೂ ಗೊತ್ತಾ? ಆದರೆ

ಸರ್ಕಾರಿ ನೌಕರರು ನೇಮಕವಾದ ದಿವಸವೇ ಬಲ್ಲರು ಯಾವ ದಿನಾಂಕ ಅವರು ರಿಟೈರಾಗುವರು ಅಂತ ಅಂಗನವಾಡಿ ನೌಕರರು ಮನೆಗೆ ಹೋಗುವಾಗ ಏನು ತೆಗೆದುಕೊಂಡು ಹೋಗುವುದು ಅಂತ ಗೊತ್ತಿಲ್ಲ ಅಷ್ಟು ನಿಕೃಷ್ಟವಾಗಿರುವ ಅವರಿಗೆ ತಿಂಗಳಿಗೆ 2500 ರೂ ಕೊಡುತ್ತೇವೆ ಅಂತ ಭರವಸೆ ನೀಡಿದ್ದೀರಿ ಆದರೆ ಅದಕ್ಕೆ ಹಣ ಇಟ್ಟಿಲ್ಲ ಜತೆಗೆ ಮಹಿಳಾ ಅಭಿವೃದ್ಧಿ ಮಾಡುತ್ತೇವೆನ್ನುತ್ತೀರಿ ಮತ್ತು gender budget ಮಾಡಿದ್ದೀನಿ ಅಂತ ಘೋಷಿಸುತ್ತೀರಿ ಆ document ನನ್ನ ಹತ್ತಿರ ಇದೆ ಇದರನ್ನೆಲ್ಲ ಹುಡುಕಿದೆ ಎಲ್ಲೂ ಅಂಗನವಾಡಿ ಕಾರ್ಯಕರ್ತೆಯರ ಗೌರವಧನ ಹೆಚ್ಚಿಸಲುಹಣ ಇರಿಸಿರುವುದು ಇಲ್ಲ, ಇನ್ನ ನಿಮ್ಮ favourite ಅಕ್ಷರದಾಸೋಹ, ಈಗ 10ನೇ ತರಗತಿವರೆಗೆ ವಿಸ್ತರಿಸಿದ್ದೀರಿ, ಅದರ ಬಡ ಮಹಿಳಾ ನೌಕರಿದಾರರಿಗೆ ಸ್ವಲ್ಪ ವೇತನ ಜಾಸ್ತಿ ಮಾಡಲು ಈ gender budget ನಲ್ಲಿ ಎಲ್ಲೂ ಹಣವಿಟ್ಟಿಲ್ಲ ಅಂದರೆ ಇವೆರಡು ಕ್ಯಟಗಿರಿಯವರು ಮಹಿಳೆಯರಲ್ಲದೇ? ಅವರನ್ನು ಯಾಕೆ ಕಡೆಗಣಿಸಿದ್ದೀರಿ? ಮತ್ತೆ ಹಸುಗಳನ್ನು ಕೊಡಿಸುತ್ತೇವೆ ಎಂದಿದ್ದೀರಿ ಹಸು ತಿವಿದುಬಿಡುತ್ತೆ ಏನು ಮಾಡುತ್ತಾರೆ ಅಂತ ಯಾರೋ ಇಲ್ಲಿ ತಮಾಷೆ ಮಾಡುತ್ತಿದ್ದರು ಮಹಿಳೆಯರಿಗಾಗಿ ಆರ್ಥಿಕ ಸ್ವಾವಲಂಬನೆ ಕಾರ್ಯಕ್ರಮ ಹಾಕಬೇಕು ನಿಜ, ಮಾಡಿ, ಅದನ್ನು ಹೇಗೆ ಮಾಡಬೇಕು? ಹಳ್ಳಿ ಹೆಣ್ಣುಮಕ್ಕಳಿಗೆ ಎಂಥ ಕಾರ್ಯಕ್ರಮ, ಪಟ್ಟಣದ ಶಿಕ್ಷಿತ ನಿರುದ್ಯೋಗಿ ಹೆಣ್ಣಗಳಿಗೆ ಎಂಥ ಕಾರ್ಯಕ್ರಮ, ಅದೇನು ಬೇಡವೇ? ಹಸು ಕೊಡಿಸಿದರೆ ಹೇಗೆ ಸಾಧ್ಯ? ಇರಲಿ ಇನ್ನು ಮಕ್ಕಳಿಗೆ ಪೌಷ್ಟಿಕ ಆಹಾರ ನೀಡುವ ಕಾರ್ಯಕ್ರಮ, ಅಡಿಗೆ ಮಾಡುವ ಅಂಗನವಾಡಿ ಕೇಂದ್ರಗಳಲ್ಲಿ ತಕ್ಕ ಆರೋಗ್ಯಕರ ವ್ಯವಸ್ಥೆ ಇದೆಯೇ? Hygienic conditions ಇರುವ ಅಡಿಗೆಮನೆ ಇದೆಯಾ? ದವಸ store ಮಾಡಿಕೊಳ್ಳಲು ವ್ಯವಸ್ಥೆ ಎಲ್ಲಿದೆ? ಕೆಲವು ಕಡೆ ಜಾಗವಿಲ್ಲದೇ ಅಂಗನವಾಡಿ ಕಾರ್ಯಕರ್ತೆಯರು ಮನೆಯಲ್ಲಿ ಹಾಕಿಕೊಳ್ಳುತ್ತಾರೆ, ಅವರಿಗಾಗದವರು ಸ್ವಂತ ಮನೆಯಲ್ಲಿಟ್ಟುಕೊಂಡು ಅವ್ಯವಹಾರ ನಡೆಸುತ್ತಿದ್ದಾರೆ ಅಂತ ದೂರು ಕೊಡುತ್ತಾರೆ Suspend ಆಗುತ್ತಾರೆ, ಅವರ ಮೇಲೆ ಅತ್ಯಾಚಾರ ದೌರ್ಜನ್ಯಗಳು ನಡೆಯುತ್ತವೆ ಆದ್ದರಿಂದ storage ಗೆ ಸರಿಯಾದ ವ್ಯವಸ್ಥೆ ಆಗಬೇಕು ICDS programme and ಮಹಿಳಾ ಮಕ್ಕಳ ಕಲ್ಯಾಣ ಇಲಾಖೆಗೆ ನೀವು ಕೊಡುತ್ತಿರುವ ಹಣ ಏನೇನೂ

ಸಾಲದು ಮಕ್ಕಳು ಮಹಿಳೆಯರ ಸಂಖ್ಯೆ ಎಷ್ಟು ? ಅವರ ಅಭಿವೃದ್ಧಿಗೆಂದು ತಲಾ ಎಷ್ಟು ಖರ್ಚು ಮಾಡುತ್ತಿದ್ದೀರಿ? ಆದ್ದರಿಂದ ಇದರಲ್ಲಿ ಹಣ ಖರ್ಚು ಮಾಡುವುದಕ್ಕೆ ನೀವು ಧಾರಾಳತನ ತೋರಬೇಕು ಅನವಶ್ಯಕ ವೆಚ್ಚಗಳನ್ನು ಮಾಡುತ್ತಿರುವ ಖರ್ಚು ಇದಕ್ಕೆ ಕೊಡಿ

ಇನ್ನು ಇಂಧನ, ವಿದ್ಯುತ್ ಉತ್ಪಾದನೆ ಬಗ್ಗೆ ಹೇಳುವುದಾದರೆ ಒಂದು ಮೆಗಾವ್ಯಾಟ್ ಉತ್ಪಾದಿಸಲೂ ಹಣ ತೆಗೆದಿಟ್ಟಿಲ್ಲ ಇದೇ ರೀತಿಯಾದರೆ the state is going to collapse ಯಾವ ಅಭಿವೃದ್ಧಿಯೂ ಆಗುವುದಿಲ್ಲ, ರೈತರಿಗೆ ಕೊಡುತ್ತಿರುವ ವಿದ್ಯುತ್ ವಿಷಯ ಬಿಡಿ ಕೈಗಾರಿಕ ರಾಜ್ಯ ಮಾಡಬೇಕೆಂದು ಕನಸು ನನಸಾಗಲು ಸಾಧ್ಯವಿಲ್ಲ ನಿಮ್ಮ load shedding and distribution system ನಿಂದಾಗಿ ಯಾವ ರೈತರೂ ಬೆಳೆ ಇಡುವ ಸ್ಥಿತಿಯಲ್ಲಿಲ್ಲ ಬೋರ್‌ವೆಲ್‌ನಲ್ಲಿ ನೀರಿದ್ದರೂ ಅದನ್ನು ಹೊರಗಡೆ ತೆಗೆಯುವುದಕ್ಕೆ ಕರೆಂಟ್ ಇಲ್ಲ ಅಂಥ ಸ್ಥಿತಿ ನಿರ್ಮಾಣವಾಗಿದೆ ಹಾಗಾಗಿ ಆ ಉತ್ಪಾದನೆ ಮಾಡಲಿಕ್ಕೆ ಬೇಕಾಗಿರತಕ್ಕ ಅಂಶವನ್ನು ನೀವು ತೆಗೆದುಕೊಳ್ಳಬೇಕಾಗುತ್ತದೆ ಅದಕ್ಕೆ ಹಣವನ್ನು ಖರ್ಚು ಮಾಡಬೇಕಾಗುತ್ತದೆ ಇಲ್ಲವೆಂದರೆ ನೀವು ಯಾವುದೇ ಉತ್ಪಾದನೆಯನ್ನು ಮಾಡುವುದಕ್ಕೂ ಸಾಧ್ಯವಿಲ್ಲ ಮತ್ತೆ ಆದಾಯವನ್ನು ಹೆಚ್ಚಿಸಿಕೊಳ್ಳುವುದಕ್ಕೆ ಹಣಕಾಸಿನ ಆಯವ್ಯಯದಲ್ಲಿ ನೀವು taxation system ಅನ್ನು widen ಮಾಡುವುದಕ್ಕೆ ಹೋಗಿಲ್ಲ ಇದ್ದುದರಲ್ಲೇ ಹಾಕಿದವರ ಮೇಲೆ ಹಾಕುತ್ತೇವೆ ಎಂದು ನೀವು ಆದಾಯ ಮಾಡುವುದಕ್ಕೆ ತಯಾರು ಮಾಡುತ್ತಿದ್ದೀರಿಯೇ ಹೊರತು you have not widened the taxation system ಸುಮಾರು ಜನ ಎರಡು ವಲಯದಿಂದ ತಪ್ಪಿಸಿಕೊಂಡಿದ್ದಾರೆ ಆದಾಯ ಇರುವವರನ್ನು ನೀವು taxation system purview ಗೆ ತನ್ನಿ ಆಗ ಇನ್ನು ನಿಮ್ಮ ಆದಾಯ ಹೆಚ್ಚಾಗುತ್ತದೆ ಹಾಕಿದವರ ಮೇಲೆ ಹಾಕುವುದು, ಹಾಕುತ್ತಿರುವವರ ಮೇಲೆಯೇ ಹಾಕುವುದು ಕೆಲವರಿಗೆ ಕಡಿಮೆ ಮಾಡುವುದು, ಕೆಲವರಿಗೆ ಜಾಸ್ತಿ ಮಾಡುವುದು, ಅದರ ಬದಲಿಗೆ ನಿಮ್ಮ taxation system ಅನ್ನು widen ಮಾಡಿ ಎರಡನೆಯದು ಮುಖ್ಯವಾಗಿ ಇವತ್ತು ತಾವು Hindu paper ಅನ್ನು ಓದಿರಬಹುದು ಮಾನ್ಯ ಯಡಿಯೂರಪ್ಪನವರೇ, ನಿಮ್ಮ ಇಲಾಖೆಯೇ ನಿಮ್ಮ

Commercial Tax ಇಲಾಖೆಯ ಅಧಿಕಾರಿಗಳು 20 ಸಾವಿರ ಕೋಟಿ ರೂಪಾಯಿಗಳ ಒಂದು ದಂಧೆಯನ್ನು ಹೊರಗಡೆ ತೆಗೆದಿದ್ದಾರೆ ಇವತ್ತು Hindu Paper ನಲ್ಲಿ ಸುದ್ದಿ ಇದೆ ಓದಿ ನೋಡಿ ಯಾವುದು ಅದು ಗೊತ್ತೆ? Airtel Company ಒಂದೇ ಕಂಪನಿ 26 ಕೋಟಿ ರೂ ಗಳ tax ಅನ್ನು evastion ಮಾಡುತ್ತಿದೆ ಆ transmission system ನಲ್ಲಿ artificial lighting system arrange ಮಾಡಿ ಬೇರೆ ಬೇರೆ ದೇಶಗಳಿಗೆ message ಕೊಡತಕ್ಕ ಸಂದರ್ಭದಲ್ಲಿ tax ಅನ್ನು ತಪ್ಪಿಸಿಕೊಳ್ಳತಕ್ಕಂಥ ಮಾಯಾ ಜಾಲವನ್ನು ಸೃಷ್ಟಿ ಮಾಡಿ ಇವತ್ತು ಅವರು ಹಾಕಿರುವ ಒಟ್ಟು ಲೆಕ್ಕ 20 ಸಾವಿರ ಕೋಟಿ ರಾಜ್ಯಸರ್ಕಾರಕ್ಕೆ ತೆರಿಗೆ ವಂಚನೆಯಾಗುತ್ತಿದೆ ಅದು hi-tech ಕಳ್ಳತನ ಅದನ್ನು ನಿಮ್ಮ ಅಧಿಕಾರಿಗಳೇ ಹೊರಗಡೆ ತೆಗೆದಿದ್ದಾರೆ ಆ ಅಧಿಕಾರಿಗಳನ್ನು appreciate ಮಾಡಬೇಕು ಅವರಿಗೆ ಶಹಭಾಷ್‌ಗಿರಿಯನ್ನು ಕೊಡಬೇಕು ನಿಮ್ಮ ಕಮರ್ಷಿಯಲ್ ಇಲಾಖೆಯ ಅಧಿಕಾರಿಗಳು ಅದನ್ನು ಹೊರಗಡೆ ತೆಗೆದಿದ್ದಾರೆ ಅದು ಇವತ್ತಿನ ಪತ್ರಿಕೆಯಲ್ಲಿ ಬಂದಿದೆ 20 ಸಾವಿರ ಕೋಟಿ ರೂ ಗಳ ಕಳ್ಳತನವನ್ನು ಹಿಡಿದಿದ್ದಾರೆ ಮೊದಲು ಅದನ್ನು ಭದ್ರ ಮಾಡಲಿಕ್ಕೆ ಕ್ರಮ ತೆಗೆದುಕೊಳ್ಳಿ

ಶ್ರೀ ಕೆ ಆರ್ ರಮೇಶ್ – Board band services ಅನ್ನು tax ಕಟ್ಟದೇ ಉಪಯೋಗಿಸುತ್ತಿದ್ದರು Airtel company ಅವರದು ಇವರು assessment ಮಾಡಿ 26 ಕೋಟಿ ಎಂದು ಹೇಳಿದ್ದಾರೆ ಇತರೆಯವರು ಯಾರ್ಯಾರೆಲ್ಲ ಉಪಯೋಗಿಸುತ್ತಿದ್ದಾರೆ, ಇದೆಲ್ಲ ಸೇರಿ ಅಂದಾಜು ಇಷ್ಟು ಆಗುತ್ತದೆ ಎಂದು ಹೇಳಿ ಈ ಮಧ್ಯೆ Board band services ಅವರು High Court ಗೆ ಹೋದರು High Court ನಲ್ಲಿ Advocate General ಅವರು appear ಆಗಲಿಲ್ಲ ಕೆಲಸಕ್ಕೆ ಬಾರದ ಕೇಸುಗಳಿಗೆಲ್ಲ ಇಲ್ಲಿಂದ phone ಹೋಗುತ್ತೆ ನೀವೇ appear ಆಗಬೇಕೆಂದು ಹೇಳಿ Advocate General ಅವರು ಅಲ್ಲಿ ಕುಳಿತಿರುತ್ತಾರೆ ಈ ಕೇಸ್‌ಗೆ Government pleader ಅವರು appear ಆಗುತ್ತಿದ್ದರು Judge ಅವರು ಗಲಾಟೆ ಮಾಡಿದ ಮೇಲೆ ಇಲ್ಲಿ House Committee Meeting ನಲ್ಲಿ ನಮ್ಮ ಸಹೋದ್ಯೋಗಿಗಳು ಯಾರೋ ಆ ವಿಚಾರವನ್ನು ಪ್ರಸ್ತಾಪ ಮಾಡಿದ ಮೇಲೆ

Advocate General ಅವರಿಗೆ ತಾಕೀತು ಮಾಡಿದ ಮೇಲೆ Advocate General ಅವರು appear ಆದರು High Court ನಲ್ಲಿ ಅವರು ಯಾರು ಈ board band services ನವರು ಹಾಕಿಕೊಂಡಿರತಕ್ಕ petition notice dismiss ಆಗಿದೆ ಶ್ರೀರಾಮರೆಡ್ಡಿಯವರು ಹೇಳತಕ್ಕದ್ದು ಇವತ್ತು ಪತ್ರಿಕೆಯಲ್ಲಿ ಬಂದಿರುವುದನ್ನು ನಾವು ನೋಡಿದ್ದೇವೆ ನಾವು ಮಾತನಾಡುವಾಗ ಇದರ ಬಗ್ಗೆ ಪ್ರಸ್ತಾಪ ಮಾಡೋಣವೆಂದಿದ್ದೆ ಸುಮಾರು 24 ಸಾವಿರ ಕೋಟಿ ರೂಪಾಯಿ ಇವತ್ತು ಹೆಚ್ಚು ಆದಾಯ ನಮಗೆ ಬರಬೇಕು ಆ ಅಧಿಕಾರಿಗಳು ಯಾರು ಇದ್ದಾರೆ,

ಶ್ರೀ ಬಿ ಎಸ್ ಯಡಿಯೂರಪ್ಪ (ಮಾನ್ಯ ಉಪ ಮುಖ್ಯಮಂತ್ರಿಗಳು) – ಅದು ನಮ್ಮ ಗಮನಕ್ಕೆ ಬಂದಿದೆ ಅದಕ್ಕೆ ಏನು ಬೇಕೋ ಅದನ್ನು ಸೂಕ್ಷ್ಮವಾಗಿ ಬಿಗಿ ಮಾಡುತ್ತಿದ್ದೇನೆ ನಾನು I will come back to you

ಶ್ರೀ ಜಿ ವಿ ಶ್ರೀರಾಮರೆಡ್ಡಿ – ಆ ರೀತಿಯಲ್ಲಿ ಏನೇನು ಈ hi-tech ಕಳ್ಳತನಗಳು ಜಾಸ್ತಿಯಾಗುತ್ತಿವೆ ಸಾಮಾನ್ಯ ಜನರು ತೆರಿಗೆ ಕಳ್ಳತನ ಮಾಡತಕ್ಕವರೂ ಇದ್ದಾರೆ ಆದರೆ ಈ hi-tech ಕಳ್ಳರು ಇದ್ದಾರಲ್ಲ, ಇವರು ಭಾರೀ ದೊಡ್ಡ ಖದೀಮರು ಇವರನ್ನು ಮೊದಲು ಹಿಡಿಯಿರಿ ಒಳ್ಳೆಯ ಅಧಿಕಾರಿಗಳು ಈಗ ಅಲ್ಲಿ ಸದ್ಯಕ್ಕೆ ಕೆಲಸ ಮಾಡುತ್ತಿದ್ದಾರೆ, ಅವರನ್ನು ಹಿಡಿದಿದ್ದಾರೆ ಕೋರ್ಟ್‌ನಲ್ಲಿ ಕೇಸ್ ನಡೆಯುತ್ತಿದೆ ಸರಿಯಾದ ರೀತಿಯಲ್ಲಿ ಆ ಕೇಸ್‌ನ್ನು ನಡೆಸತಕ್ಕ ವ್ಯವಸ್ಥೆಯನ್ನು ಮಾಡಿ ಆ ಕಳ್ಳರನ್ನೆಲ್ಲ ಹಿಡಿದು ರಾಜ್ಯದ ಆದಾಯದ ವರಮಾನವನ್ನು ನೀವು ಹೆಚ್ಚು ಮಾಡಿಕೊಳ್ಳಿ ಚಿಟಗುಪ್ಪಿ ಮತ್ತು ಹರೀಶ್‌ಗೌಡ ಇಬ್ಬರು ಅದನ್ನು ಹಿಡಿದಿದ್ದಾರೆ ಆ ಅಧಿಕಾರಿಗಳ ಪೂರ್ತಿ ಹೆಸರು ನನಗೆ ಗೊತ್ತಿಲ್ಲ ಎಲ್ಲ ಅಧಿಕಾರಿಗಳದ್ದೂ ಅದರಲ್ಲಿ ಪಾತ್ರ ಇರುತ್ತದೆ ಒಬ್ಬರು ಇಬ್ಬರು ಅದನ್ನು ಮಾಡುವುದಕ್ಕಾಗುವುದಿಲ್ಲ ಎಲ್ಲರೂ ಅದರಲ್ಲಿ ಪಾತ್ರವನ್ನು ವಹಿಸಿರುತ್ತಾರೆ

ಶ್ರೀ ಎನ್ ಯೋಗೀಶ್ ಭಟ್ – ಮಾನ್ಯ ಅಧ್ಯಕ್ಷರೇ, ಇದರಲ್ಲಿ optic fibre cable ಮೂಲಕ ಈ artificially created light energy ಇದನ್ನು ಪಾಸ್ ಮಾಡುತ್ತದೆ ಪಾಸ್ ಮಾಡುವ ಸಂದರ್ಭದಲ್ಲಿ data ಯಾವುದು ಇದೆ,

data ಒಂದು ಕಡೆ reach ಆದ ತಕ್ಷಣ ಆ energy drop ಆಗುತ್ತದೆ ಇದರಲ್ಲಿ content, container ಮತ್ತೆ continue ಆಗಿ ಹೇಗೆ act ಆಗುತ್ತೆ ಎಂದು ಹೇಳುವಂಥದ್ದು ಮುಖ್ಯ ಈ artificially created light energy ಯಾವುದು ಇದೆ, ಅದು actually goods ಆಗಿ consider ಆಗುತ್ತೆ ಅದರ ಮೇಲೆ ಹನ್ನೆರಡೂವರೆ ಪರ್‌ಸೆಂಟ್ ಟ್ಯಾಕ್ಸ್ ಬೀಳುತ್ತೆ ಎಂದು ಹೇಳುವ ಹಿನ್ನೆಲೆಯಲ್ಲಿ ಸಮಗ್ರವಾಗಿ ಸಮಿತಿಯಲ್ಲಿ ಚರ್ಚೆಯಾಗಿ ಬಹುಶಃ ಇನ್ನು 10–15 ನಿಮಿಷದಲ್ಲಿ ಅದರ ಸಮಗ್ರ ವರದಿಯನ್ನು ಇಲ್ಲಿ ಮಂಡನೆ ಮಾಡುವುದಕ್ಕೆ ತಾವು ಅವಕಾಶವನ್ನು ಮಾಡಿಕೊಡಬೇಕು ಬಹಳಷ್ಟು ಇದರಿಂದ ನಮ್ಮ ಕರ್ನಾಟಕ ರಾಜ್ಯದ ಬೊಕ್ಕಸಕ್ಕೆ ಲಾಭವಾಗುತ್ತದೆ ಆದರೆ ಇದರಲ್ಲಿ 26 ಕೋಟಿ ಎಂದು ಹೇಳಿ ಏನು assess ಮಾಡಿದ್ದಾರೆ, ಅದು ಒಂದು ವರ್ಷಕ್ಕೆ ನಮಗೆ 30ನೇ ತಾರೀಖಿನೊಳಗೆ ನೋಟೀಸ್‌ನ್ನು ಕೊಡಲಿಕ್ಕೆ ಸಾಧ್ಯವಾದಲ್ಲಿ ಅನುಕೂಲವಾಗುತ್ತದೆ ಅಂದರೆ 30ನೇ ತಾರೀಖು ಎಂದು ಹೇಳಿದ ತಕ್ಷಣ ಸುಮಾರು 200 ಕೋಟಿ ರೂಪಾಯಿ ಈ recovery taxation notice ಅನ್ನು ಕೊಡಲಿಕ್ಕೆ ಬರುತ್ತದೆ 10–15 ಕಂಪನಿಗಳು ಇದೆ ಹತ್ತಿರ ಹತ್ತಿರ ಎರಡೂವರೆ–ಮೂರು ಸಾವಿರ ಕೋಟಿ ತಾವು ಏನು ಹೇಳಿದಿರಿ, ಇಪ್ಪತ್ತು ಸಾವಿರ ಕೋಟಿ, ಅದು ಇಡೀ ದೇಶಕ್ಕೆ ಸಂಬಂಧಪಟ್ಟಿರುವುದು ಆದರೆ ನಮ್ಮ ಕರ್ನಾಟಕ ರಾಜ್ಯದಲ್ಲಿ ಉಪಯೋಗವಾಗಿರುವುದು ಹತ್ತಿರ ಹತ್ತಿರ ಎರಡು ಸಾವಿರ ಕೋಟಿಗಿಂತ ನಾವು tax collection ಮಾಡಲಿಕ್ಕೆ ಬರುತ್ತದೆ ಇದರ ಬಗ್ಗೆ ತಮ್ಮ ಗಮನಕ್ಕೆ ನೀಡಲಿಕ್ಕೆ ಇಚ್ಛಿಸುತ್ತಿರುವಂಥದ್ದು ಅಧೀನ ಶಾಸನ ರಚನಾ ಸಮಿತಿಯಲ್ಲಿ ಇದರ ಬಗ್ಗೆ serious ಆಗಿ ತೆಗೆದುಕೊಂಡ ನಂತರವೇ ಒಂದು ವೇಗ ಸಿಕ್ಕಿತ್ತು ಅಲ್ಲಿಯತನಕ ಇದಕ್ಕೆ ಹೈಕೋರ್ಟ್‌ನಲ್ಲಿ ಸಂಬಂಧಪಟ್ಟಂಥ Advocate General ಅವರೂ ಸಹಾ ಹೋಗಲಿಕ್ಕೆ ಅವಕಾಶವಾಗಿರಲಿಲ್ಲ ಎಲ್ಲಿಯತನಕ ಎಂದರೆ ಸಮಿತಿಯ ಮೀಟಿಂಗ್ ಅನ್ನು ಕೂಡ adjourn ಮಾಡಲಿಕ್ಕೆ ಕೂಡ ಒತ್ತಾಯ ಬಂತು, ಮೀಟಿಂಗ್ ಅನ್ನು ಮಾಡುವ ಅವಶ್ಯಕತೆ ಇಲ್ಲ, ಏಕೆಂದರೆ sub-judice ಆಗುತ್ತದೆ ಎಂದು ಹೇಳಿ ತಮ್ಮ ಗಮನಕ್ಕೆ ನೀಡಲಿಕ್ಕೆ ಇಚ್ಛಿಸುತ್ತೇನೆ, sub-judice ಬಿಟ್ಟು ಅಲ್ಲಿ ನೇರವಾಗಿ ಚರ್ಚೆಯನ್ನು ಆರಂಭ ಮಾಡಿದಾಗ

ಕೇಸ್ ಅಡ್ಮಿಟ್ ಆಗಿರಲಿಲ್ಲ ನಮ್ಮಲ್ಲಿರುವ Law Secretary ಅವರು ಬಂದು ಹೇಳಿದರು, ಕೇಸ್ ಅಡ್ಮಿಟ್ ಆಗಿಲ್ಲ, ಇದು sub-judice ಆಗುತ್ತೆ, ನೀವು ಸಭೆಯನ್ನು ಮಾಡುವುದು ಬೇಡ ಎಂದು ಹೇಳುವಂಥದ್ದಕ್ಕೂ ಹೋಗಿದ್ದರು. ಅಂದರೆ ಇಲ್ಲಿ ವ್ಯವಸ್ಥಿತವಾಗಿರತಕ್ಕ ಒಂದು ಜಾಲ ಇದು ಇದು hi-tech level ನಲ್ಲಿ tax ಬರಬಾರದು ಎಂದು ಹೇಳುವಂಥ ನಿಟ್ಟಿನಲ್ಲಿ ಬಹಳಷ್ಟು ಪ್ರಯತ್ನಗಳು ಆಗುತ್ತಿದೆ ಈ ನಿಟ್ಟಿನಲ್ಲಿ ಸನ್ಮಾನ್ಯ ಉಪ ಮುಖ್ಯಮಂತ್ರಿಗಳು, ಅರ್ಥ ಸಚಿವರಿಗೂ ಹಾಗೂ ನಮ್ಮ ಅಧಿಕಾರಿಗಳಿಗೆ ನಾನು ನೇರವಾಗಿ ಸೂಚನೆಯನ್ನು ಕೊಡುವಂಥದ್ದು, ಸೂಚನೆ ಎಂದರೆ ಒಬ್ಬ ಅಧ್ಯಕ್ಷನಾಗಿ ಅಧೀನ ಶಾಸನ ರಚನಾ ಸಮಿತಿಯ ಅಧ್ಯಕ್ಷನಾಗಿ ತಕ್ಷಣ 30ನೇ ತಾರೀಖಿನೊಳಗೆ ಒಂದು ನೋಟೀಸ್‌ನ್ನು ಕೊಡುವಂಥದ್ದನ್ನು ಜಾರಿ ಮಾಡಿದಲ್ಲಿ ಕಳೆದ ಎಂಟು ವರ್ಷಗಳಿಗೆ ಸಂಬಂಧಪಟ್ಟ taxation ಅನ್ನು ಮಾಡಲಿಕ್ಕಾಗುತ್ತದೆ 30ನೇ ತಾರೀಖು ದಾಟಿದ ನಂತರ ಒಂದು ವರ್ಷ ನಾವು ಕಳೆದುಕೊಳ್ಳುತ್ತೇವೆ ಹಿಂದಿನದು ನಮಗೆ recovery ಮಾಡುವುದಕ್ಕೆ ಬರುವುದಿಲ್ಲ, ಸೆಕ್ಷನ್ 12 (a) ಪ್ರಕಾರ

ಶ್ರೀ ಜಿ ವಿ ಶ್ರೀರಾಮರೆಡ್ಡಿ – ಮಾನ್ಯ ಅಧ್ಯಕ್ಷರೇ, ನಾನು ಹೇಳಿದ್ದು ಇಡೀ ದೇಶದ್ದು ಲೆಕ್ಕ ಹಾಕಿದರೆ 40 ಸಾವಿರ ಕೋಟಿಯಾಗುತ್ತೆ ಎಂದು ಅವರು ಹೇಳಿದ್ದಾರೆ ನಮ್ಮ ದೇಶದ್ದು ಹೇಳಲಿಲ್ಲ ನಮ್ಮ ರಾಜ್ಯದ್ದು ಮಾತ್ರ ಅಷ್ಟೇ ನಾನು ಹೇಳಿರುವುದು ಅಂದರೆ ನಮ್ಮ ಸದಸ್ಯರು ಹೇಳಿದ ರೀತಿಯಲ್ಲಿ ಆ ಅಧೀನ ಶಾಸನ ರಚನಾ ಸಮಿತಿಯಲ್ಲಿ ಚರ್ಚೆಯನ್ನೇ ಮಾಡಬಾರದು, ಅದನ್ನು ಮುಂದಕ್ಕೆ ಹಾಕಿ ಎಂದು ಹೇಳಿ ಒತ್ತಾಯ ಬಂದಿದೆ ಎಂದು ಹೇಳಿದರೆ ಮಾನ್ಯ ಯಡಿಯೂರಪ್ಪನವರು ಅರ್ಥ ಮಾಡಿಕೊಳ್ಳಿ ಇದರ ಹಿಂದೆ ಯಾವ ರೀತಿ ಜಾಲ ಇದೆ, ಯಾರ್ಯಾರ ಕೈವಾಡಗಳು ಇದೆ ಎನ್ನುವುದನ್ನು ಅರ್ಥ ಮಾಡಿಕೊಳ್ಳಿ ನಮ್ಮ ಸದಸ್ಯರು ಹೇಳಿದಂತೆ 30ನೇ ತಾರೀಖಿನೊಳಗಡೆ ಕ್ರಮ ತೆಗೆದುಕೊಳ್ಳದಿದ್ದರೆ ನಮ್ಮ ಕೈಮೀರಿ ಹೋಗಿಬಿಡುತ್ತೆ ದಯವಿಟ್ಟು ಇದನ್ನು ಗಮನಿಸಿ ಇದು ಸಾವಿರಾರು ಕೋಟಿ ರೂ ಗಳ ವ್ಯವಹಾರ ಮತ್ತೆ ನೀವು major irrigation ಗೆ ಹಣವನ್ನು ಕೊಟ್ಟಿಲ್ಲ ಕೋಲಾರ ಜಿಲ್ಲೆಗೆ ನೀರಿಲ್ಲ ಪರಮಶಿವಯ್ಯ ಎಂದು ಹೇಳಿ ಒಂದು ವರದಿಯನ್ನು ಕೊಟ್ಟಿದ್ದಾರೆ

ಸರ್ವೆ ಮಾಡುವುದಕ್ಕೆ ಹಿಂದಿನ ಸರ್ಕಾರ ಹಣವನ್ನು ಕೊಟ್ಟಿತ್ತು ಒಂದೂವರೆ ಕೋಟಿ ರೂಗಳನ್ನು ಕೊಟ್ಟು ಉಳಿದದ್ದು ಕೊಡಲಿಲ್ಲ ಸರ್ವೆ 80% ಪೂರ್ತಿಯಾಗಿದೆ ಇನ್ನು ನೀವು ಬಾಕಿ ಹಣ ಕೊಟ್ಟುಬಿಟ್ಟರೆ ಅವರು ಸರ್ವೆ ರಿಪೋರ್ಟ್‌ನ್ನು ಕೊಡುತ್ತಾರೆ ಸರ್ವೆ ರಿಪೋರ್ಟ್ ಕೊಟ್ಟಮೇಲೆ feasibility ಇದೆಯೋ ಇಲ್ಲವೋ ಎನ್ನುವುದನ್ನು ತೀರ್ಮಾನ ಮಾಡಿ ನಮ್ಮದೇನೂ ಅಭ್ಯಂತರವಿಲ್ಲ ನಾವು ಅದನ್ನು ಜಾರಿ ಮಾಡಿ ಎಂದು ಕೇಳುತ್ತಿಲ್ಲ ಅವರು 12 ಕೋಟಿ ಕೊಡಬೇಕು ಈಗಾಗಲೇ ಎರಡೂವರೆ ಕೋಟಿ ರೂಗಳನ್ನು ಕೊಟ್ಟಿದ್ದೀರಿ ಉಳಿದದ್ದು ಕೊಟ್ಟಿಲ್ಲ ಈಗ ಹಣಕಾಸು ಇಲಾಖೆ ಮುಂದೆ file ಇದೆ ನೀವು ಆ ವರದಿ feasibility ಹೌದೋ ಅಲ್ಲವೋ ಎಂದು ತೀರ್ಮಾನ ಮಾಡಬೇಕಾದರೆ ಆ ವರದಿಯನ್ನು ಸರ್ಕಾರಕ್ಕೆ submit ಮಾಡಿದಮೇಲೆ ಅದನ್ನು ಅಭ್ಯಾಸ ಮಾಡಿ ಆಮೇಲೆ ತೀರ್ಮಾನವನ್ನು ತೆಗೆದುಕೊಳ್ಳಿ, Feasibility ಹೌದೂ ಅಲ್ಲವೋ ಎಂದು ಏಕೆಂದರೆ ನಮಗೆ ಇರುವ ಒಂದೇ ಒಂದು ಆಶಾಕಿರಣ ಕೋಲಾರ ಜಿಲ್ಲೆ, ಬೆಂಗಳೂರು ಗ್ರಾಮಾಂತರ, ತುಮಕೂರಿನವರಿಗೆ ಒಂದೇ ಒಂದು ಆಶಾಕಿರಣ ಇರತಕ್ಕದ್ದು ಆ ವರದಿ ಆ ವರದಿ ಇಲ್ಲವೆಂದರೆ ನಮಗೆ ನೀರಿಲ್ಲ ಅದೊಂದು ನಮಗೆ ಆಶಾಕಿರಣ ಇದೆ ನಾವೇನು ಪರಿಣಿತರು ಅಲ್ಲ ಆ ವರದಿಯನ್ನು ಓದಿದ ಮೇಲೆ ತೀರ್ಮಾನವನ್ನು ತೆಗೆದುಕೊಳ್ಳಿ ದಯವಿಟ್ಟು ಅದನ್ನು ಪೂರ್ತಿ ಮಾಡಲಿಕ್ಕೆ ಬಾಕಿ ಇರುವ ಹಣಕಾಸನ್ನು ಬಿಡುಗಡೆ ಮಾಡಿ ಅವರಿಗೆ ಅದನ್ನು ಕೊಟ್ಟರೆ, ಆ ವರದಿ 80% complete ಮಾಡಿದ್ದಾರೆ Ground Survey ಪೂರ್ತಿ ಮಾಡಿದ್ದಾರೆ ಅವರು ಇನ್ನು data collection ಮಾಡಿ ನಿಮಗೆ ವರದಿ ಕೊಡಬೇಕು ಅದನ್ನು ಕೊಡುತ್ತಾರೆ ಅಷ್ಟಾದರೂ ಕೋಲಾರ ಜಿಲ್ಲೆಯವರಿಗೆ ಸಹಾಯ ಮಾಡಿ ಎಂದು ಹೇಳುತ್ತೇನೆ ಹೈದರಾಬಾದ್ ISRO ಅವರೇ ಅದನ್ನು ಮಾಡಿರತಕ್ಕದ್ದು ಅದನ್ನು ಹೇಳಿದರೆ ನಮ್ಮ ಜಿಲ್ಲೆಯವರಿಗೆ ಒಂದು ಸಹಾಯವಾದರೂ ಆಗುತ್ತದೆ

ಶ್ರೀ ಬಿ ಎಸ್ ಯಡಿಯೂರಪ್ಪ – ಎಲ್ಲಿ ಬಾಕಿ ಇದೆ, ಎಲ್ಲ ತೀರಿಸಿದ್ದೇವೆ ಇಲ್ಲಿಯೂ ತೀರಿಸುತ್ತೇವೆ

ಶ್ರೀ ಜಿ ವಿ ಶ್ರೀರಾಮರೆಡ್ಡಿ – Thanks

ಶ್ರೀ ಜಿ ವಿ ಶ್ರೀರಾಮರೆಡ್ಡಿ – Major Irrigation ಗೆ ಮತ್ತು PWD ಗೆ ನೀವೇನು ಹಣ ಕೊಟ್ಟಿದ್ದೀರಿ

ಶ್ರೀ ಆರ್ ವಿ ದೇಶಪಾಂಡೆ – ಇಷ್ಟು liberal Finance Minister ಅನ್ನು ನಾನು ನೋಡಿಲ್ಲ ನಾನು ಸುಮಾರು 25 ವರ್ಷಗಳಿಂದ ಈ ಸದನದಲ್ಲಿ ಕೆಲಸ ಮಾಡುತ್ತಿದ್ದೇನೆ ಏನು ಬೇಕೋ ತೆಗೆದುಕೋ ಎಂದು

ಶ್ರೀ ಜಿ ವಿ ಶ್ರೀರಾಮರೆಡ್ಡಿ – ಅದು ಅವರ ಉದಾರತೆ

ಶ್ರೀ ಕೆ ಶ್ರೀನಿವಾಸಗೌಡ – ನಾನು ಮೊನ್ನೆ ಹೇಳಿದೆ" "ಜೈ ಪಾತಾಳ ಭೈರವಿ" ಸಿನಿಮಾ ನೋಡಿದ ನಂತರ, ಅದು ಬಿಟ್ಟ ನಂತರ ನಾನು ನಿಮ್ಮನ್ನೇ ನೋಡುತ್ತಿರುವುದು

ಶ್ರೀ ಬಿ ಎಸ್ ಯಡಿಯೂರಪ್ಪ – ಹಣಕಾಸು ಇಲಾಖೆಯಲ್ಲಿ ಚರ್ಚೆ ಮಾಡಿ ಏನು ನಿಷ್ಕರ್ಷೆಗೆ ಬಂದಿದ್ದೇವೆಂದರೆ, ಈ ಆಯವ್ಯಯವನ್ನು ಮಂಡನೆ ಮಾಡಿ ಇದು approve ಆಗುವ ಕಾಲಕ್ಕೆ ಯಾವುದೇ ಹಿಂದಿನ ಬಾಕಿ ಅದು 2–3–4 ವರ್ಷದ್ದೇ ಇರಲಿ, LOC ಬಿಡುಗಡೆ ಮಾಡಿ, ಮುಂದಿನ ವ್ಯವಸ್ಥೆ ಮಾಡುವುದಕ್ಕೆ ಇದೆಲ್ಲವನ್ನೂ ಮುಕ್ತವಾಗಿ ಮಾಡಬೇಕು ಈಗ ಅದೊಂದು report ಇನ್ನೊಂದು ಸ್ವಲ್ಪ ಹಣ ಕೊಟ್ಟರೆ ಅದು ವಾಪಸ್ ಬರುತ್ತದೆ ಅನಂತರ, ಆ ಯೋಜನೆಯನ್ನು ತೆಗೆದುಕೊಳ್ಳಬೇಕೋ? ಬೇಡವೇ? ಆ report ಆಧಾರದ ಮೇಲೆ ನಾವು ಮಾಡುವುದಕ್ಕೆ ಬರುತ್ತದೆ ಅದು ಪೆಂಡಿಂಗ್ ಇರುವುದರಿಂದ ನಾವು ಕ್ಲಿಯರ್ ಮಾಡೋಣವೆಂದು ಹೇಳಿದೆ ಆ ರೀತಿ ಯಾವುದೇ ಇದ್ದರೂ ರಾಜ್ಯದ ಹಿತದೃಷ್ಟಿಯಿಂದ ಹಿಂದಿನವರು ಮಾಡಲಿಲ್ಲವೆಂದು, ನಾವು ಅದನ್ನು ಇಟ್ಟುಕೊಂಡು ಕುಳಿತುಕೊಳ್ಳುವುದಕ್ಕಾಗುತ್ತದೆಯೇ? ಅದನ್ನು ಕ್ಲಿಯರ್ ಮಾಡುವುದಕ್ಕೆ ರೆಡಿಯಿದ್ದೇವೆ, ಮಾಡುತ್ತೇವೆಂದು ಹೇಳಿದೆ

ಶ್ರೀ ಜಿ ವಿ ಶ್ರೀರಾಮರೆಡ್ಡಿ – ನಮ್ಮ ಕೋಲಾರ ಜಿಲ್ಲೆಯ ಜನತೆಯ ಪರವಾಗಿ ನಿಮಗೆ ಅಭಿನಂದನೆಗಳು, ಧನ್ಯವಾದಗಳು

ಶ್ರೀ ಜಿ ಚಂದ್ರಣ್ಣ – ನೀವು ಬೆಂಗಳೂರು ಗ್ರಾಮಾಂತರವೆಂದು ಹೇಳಿ ಅದನ್ನು ಬಿಟ್ಟು ಬರೀ ಕೋಲಾರ, ಕೋಲಾರ ಎಂದು ಹೇಳುತ್ತಿದ್ದೀರಲ್ಲ

ಶ್ರೀ ಜಿ ವಿ ಶ್ರೀರಾಮರೆಡ್ಡಿ – ಬೆಂಗಳೂರು ಗ್ರಾಮಾಂತರವೆಂದು ಹೇಳಿದ್ದೇನಲ್ಲ

ಶ್ರೀ ಜಿ ಚಂದ್ರಣ್ಣ – ಬೆಂಗಳೂರು ಗ್ರಾಮಾಂತರವೆಂದು ಹೇಳಿ ತುಮಕೂರು ಎಂದು ಹೇಳಿ ನೋಡಿ, ಕೋಲಾರ ಒಂದೇ ನಿಮ್ಮ ತಲೆಗೆ ಬರುವುದು

ಶ್ರೀ ಜಿ ವಿ ಶ್ರೀರಾಮರೆಡ್ಡಿ – ನೋಡಿ, ನೀವು ಕೇಳಿಸಿಕೊಳ್ಳಲಿಲ್ಲ ಬೆಂಗಳೂರು ಗ್ರಾಮಾಂತರ, ಕೋಲಾರ, ತುಮಕೂರು ಎಂದು ಹೇಳಿದೆ

ಶ್ರೀ ಜೆ ಸಿ ಮಾಧುಸ್ವಾಮಿ – ಏನೋ ನೀರು ಬಂತೇನೋ ಎಂಬಂತೆ ಆಡುತ್ತಿದ್ದಾರಲ್ಲ

ಶ್ರೀ ಬಿ ಶಿವರಾಮು – ಬಾಕಿ ದುಡ್ಡಿ ಕೇಳಿದರೆ, ಇವರು ನೀರು ಬಂದಂತೆ ಆಡುತ್ತಿದ್ದಾರೆ ಆ ಪ್ರಾಜೆಕ್ಟ್‌ಗೆ ಚಾಲನೆ ಏನಾದರೂ ಕೊಡುವುದಕ್ಕಾಗುತ್ತದೆಯೇ? ನೋಡಿ

ಶ್ರೀ ಜಿ ವಿ ಶ್ರೀರಾಮರೆಡ್ಡಿ – ಮಾನ್ಯ ಅಧ್ಯಕ್ಷರೆ, ಈಗ ಲೋಕೋಪಯೋಗಿ ಇಲಾಖೆಗೆ ಮತ್ತು Major Irrigation ಗೆ, ಭಾರಿ ನೀರಾವರಿಗೆ ಹಣ ಜಾಸ್ತಿ ಮಾಡಿದ್ದೇವೆಂದು ಹೇಳುತ್ತಿದ್ದಾರೆ ನಾನು ಬಹಳ ನಮ್ರತೆಯಿಂದ Finance Minister ಗೆ ಹೇಳುತ್ತಿದ್ದೇನೆ ನೀವು ಜಾಸ್ತಿ ಮಾಡಿಲ್ಲ, ಕಡಿಮೆ ಮಾಡಿದ್ದೀರಿ ನೀವು ಎರಡನ್ನೂ ಲೆಕ್ಕ ಹಾಕಿಲ್ಲವೆಂದು ಕಾಣುತ್ತದೆ ಒಂದು, ನಿಮ್ಮ S R Rates S R Rates ಎಷ್ಟು ಜಾಸ್ತಿಯಾಗಿದೆ Inflation Rate ಏನು? 6 8% Inflation S R Rate 3 ಪಟ್ಟು ಜಾಸ್ತಿಯಾಗಿದೆ ನಿಮ್ಮ S R Rate ಜಾಸ್ತಿಯಾಗಿರತಕ್ಕಂಥಾದಕ್ಕೂ inflation ಎಲ್ಲವನ್ನೂ calculation ಹಾಕಿ ನೀವು ಕೊಟ್ಟಿರತಕ್ಕಂಥ ಹಣ ಹಿಂದಿನ ವರ್ಷಕ್ಕಿಂಥಲೂ ಜಾಸ್ತಿಯೇ? ಕಡಿಮೆಯೇ? ಎಂದು ಹೇಳತಕ್ಕಂಥಾದ್ದು ನಿಮಗೆ ಅರ್ಥವಾಗುತ್ತದೆ ಆ ಲೆಕ್ಕದಲ್ಲಿ ನೀವು ಎಲ್ಲಾ ಇಲಾಖೆಗಳಿಗೂ ಏನೇನು ಹೆಚ್ಚು ಮಾಡುತ್ತೇವೆಂದು ಹೇಳಿದ್ದೀರೋ, ಅದೆಲ್ಲವೂ ಕೂಡ ಹಿಂದಿನ ವರ್ಷಕ್ಕಿಂತಲೂ ಕಡಿಮೆಯೇ ಈಗ ಲೋಕೋಪಯೋಗಿ

ಇಲಾಖೆಗೆ ಸಂಬಂಧಿಸಿದಂತೆ ನಮ್ಮ ರಸ್ತೆಗಳನ್ನು ಏನು ಮಾಡಬೇಕೆಂದಿದ್ದೀರಿ, ಹೇಳಿ? ಈಗ CMGY ನಲ್ಲಿ ಜಿಲ್ಲಾ ಪಂಚಾಯಿತಿಗೆ ಹಣ ಕೊಟ್ಟಿದ್ದೀರಿ ನಾನು ಬಹಳ ಕಳಕಳಿಯಿಂದ ಕೇಳಿಕೊಳ್ಳುತ್ತಿದ್ದೇನೆ Evaluation ಮಾಡಿಸಿ ನಮಗೆ de-centralisation ಬಗ್ಗೆ ವಿರೋಧವಿಲ್ಲ ಒಂದು ಕಿಲೋಮೀಟರ್‌ನಷ್ಟು ರಸ್ತೆ ಮಾಡಬೇಕಾದರೆ, ನಿಮ್ಮ norms ಪ್ರಕಾರ ಕನಿಷ್ಠ ಇವತ್ತು 12 ರಿಂದ 15 ಲಕ್ಷ ರೂಪಾಯಿಗಳು ಬೇಕು, ನೀವು ಕೊಡುತ್ತಿರತಕ್ಕಂತ link document ಹೆಸರಿನಲ್ಲಿ ಸೇರಿಸಿ 50,000, 1 ಲಕ್ಷಕ್ಕೆ ಅವರು ಕಾರ್ಯಕ್ರಮ ಹಾಕಿಕೊಂಡು ಒಂದು ಕಿಲೋಮೀಟರ್ ರಸ್ತೆ ಕೂಡ ಆಗದಂತೆ ಮಾಡಿಬಿಟ್ಟಿದ್ದಾರೆ ಮಾನ್ಯ ಉದಾಸಿಯವರೆ, ದಯವಿಟ್ಟು ಕೇಳಿ, link document ಅನ್ನು 31ನೇ ತಾರೀಖಿನೊಳಗೆ ಏನಾದರೂ ತೆಗೆಸದೇ ಹೋದರೆ, ಅದು ಮತ್ತೆ ಹಾಗೇ ಹೋಗುತ್ತದೆ ನಿಮ್ಮ ಹತ್ತಿರ ನಾನು ಹಾಗೂ ಮಾಧುಸ್ವಾಮಿಯವರು ಸುಮಾರು ಸಲ ಕೇಳಿಕೊಂಡಿದ್ದೇವೆ ಆದುದರಿಂದ, ಅದನ್ನು link - document ನಿಂದ ತೆಗೆಯಿರಿ ಇಲ್ಲದಿದ್ದರೆ, ರಸ್ತೆ ಮಾಡತಕ್ಕಂಥ ಜವಾಬ್ದಾರಿಯನ್ನು ನೀವೇ ನೇರವಾಗಿ ತೆಗೆದುಕೊಳ್ಳಿ ನಮಗೆ ರಸ್ತೆ ಆಗಬೇಕು, ದುಡ್ಡು ಹಾಳು ಮಾಡುವುದಕ್ಕೆ ನಾವು ತಯಾರಿಲ್ಲ, ದುಡ್ಡನ್ನು ಪೋಲು ಮಾಡುವುದಕ್ಕೆ ತಯಾರಿಲ್ಲ ಶಾಸಕರಿಗೆ ನೀಡುತ್ತಿರುವ ಅನುದಾನವನ್ನು ಅಷ್ಟೇ ಮುಂದುವರೆಸುತ್ತೇವೆಂದು ಹೇಳಿದ್ದೀರಿ S R Rate ಜಾಸ್ತಿಯಾಗಿದೆ, Inflation ಜಾಸ್ತಿಯಾಗಿದೆ ಮತ್ತೆ 50 ಲಕ್ಷ ಕೊಟ್ಟರು ಯಡಿಯೂರಪ್ಪನವರೆ, 50 ಲಕ್ಷ ರೂಪಾಯಿಗಳಲ್ಲಿ 5 ಕಿಲೋಮೀಟರ್‌ಗಳಷ್ಟು ರಸ್ತೆ ಮಾಡುವುದಕ್ಕಾಗುವುದಿಲ್ಲ ರಸ್ತೆಗೆ 50 ಲಕ್ಷ ಕೊಟ್ಟಿದ್ದೀರಿ ಶಾಸಕರ ಅನುದಾನಕ್ಕೆ 50 ಲಕ್ಷ, ರಸ್ತೆಗಳಿಗೆ ನೀವೇನು 50 ಲಕ್ಷ ಕೊಟ್ಟಿದ್ದೀರಿ, ಸರಿಯಾದ ರಸ್ತೆ ಮಾಡಿದರೆ 5 ಕಿಲೋಮೀಟರ್‌ಗೂ ಅದು ಸಾಕಾಗುವುದಿಲ್ಲ Minimum ಒಂದು ಕಿಲೋಮೀಟರ್ ರಸ್ತೆಗೆ 12 ಲಕ್ಷ ಬೇಕು ನೀವು 50 ಲಕ್ಷ ಕೊಟ್ಟರೆ, ಎಷ್ಟು ಕಿಲೋಮೀಟರ್ ರಸ್ತೆ ನಾವು ಮಾಡಬಹುದು, ಹೇಳಿ? ದಯವಿಟ್ಟು ನೀವು ಹಣವನ್ನು ಹೆಚ್ಚು ಮಾಡಬೇಕು ಕನಿಷ್ಠ ನಮ್ಮ ಗೌರವವನ್ನಾದರೂ ಕಾಪಾಡಿ ಏಕೆಂದರೆ, 'ಈ ಶಾಸಕನಿಗೆ ಎರಡು ಕಿಲೋಮೀಟರ್‌ಗಳಷ್ಟು ರಸ್ತೆ ಮಾಡಿಸುವುದಕ್ಕಾಗಲಿಲ್ಲ'ವೆಂದು ಹಳ್ಳಿಗಳಲ್ಲಿ ನಮಗೆ

ಬೈಯುತ್ತಾರೆ ನೀವು ಕೊಟ್ಟ ಹಣ ಸಾಕಾಗುವುದಿಲ್ಲ ಇಲ್ಲವೇ, ಕಿಲೋಮೀಟರ್‌ಗೆ 12 ಲಕ್ಷ, 15 ಲಕ್ಷ, ಈ ಪ್ರಕಾರ ನಿಗದಿಪಡಿಸಿ ಇಷ್ಟು ಕಿಲೋಮೀಟರ್‌ಗೆ ಇಂತಿಷ್ಟು ದುಡ್ಡು ಎಂದು ನಮಗೆ ಕೊಡಿ ಶಾಸಕರ ನಿಧಿಗೆ ಅಷ್ಟೇ ಕೊಡುತ್ತೇವೆಂದು ಹೇಳಿದರೆ ಪ್ರಯೋಜನವಿಲ್ಲ ಇನ್ನು ಸ್ತ್ರೀಶಕ್ತಿ ಗುಂಪುಗಳ ಬಗ್ಗೆ ಹೇಳುವುದಾದರೆ, ಸ್ತ್ರೀಶಕ್ತಿ ಗುಂಪುಗಳಿಗೆ ನೀವು ಒಕ್ಕೂಟಗಳನ್ನು ಮಾಡಿದ್ದೀರಿ ಅಧಿಕಾರ ಕೊಡಲಿಲ್ಲ, ಬ್ಯಾಂಕುಗಳಿಂದ ಸಾಲ ಕೊಡುತ್ತಿಲ್ಲ ಒಂದು ತಾಲ್ಲೂಕಿಗೆ ಒಂದು ವರ್ಷದಲ್ಲಿ 2–3 ಸ್ತ್ರೀಶಕ್ತಿ ಗುಂಪುಗಳಿಗೆ ಮಾತ್ರ ಸಾಲ ಸಿಗುತ್ತದೆ

ಶ್ರೀ ವಾಟಾಳ್ ನಾಗರಾಜ್ – ಮಾನ್ಯ ಅಧ್ಯಕ್ಷರೆ, ಇದಕ್ಕೆ ನನ್ನ ಕ್ರಿಯಾಲೋಪವಿದೆ ಸ್ತ್ರೀಶಕ್ತಿ ಸಂಘದ ಬಗ್ಗೆ ಮಾತನಾಡುವುದಕ್ಕೆ ಇವರಿಗೆ ಏನು ಅಧಿಕಾರವಿದೆ? ಇವರು ಸ್ತ್ರೀಶಕ್ತಿ ಸಂಘಗಳು, ಮಹಿಳೆಯರ ಮತ್ತು ಮಕ್ಕಳ ಬಗ್ಗೆ ಸ್ವಲ್ಪವಾದರೂ ಇವರಿಗೆ ಅಧಿಕಾರವಿದ್ದರೆ ಮಾತನಾಡಲಿ ಬೇಕಾದರೆ, ಕಾರ್ಮಿಕರ ಬಗ್ಗೆ ಮಾತನಾಡಲಿ, ಹಣಕಾಸಿನ ಬಗ್ಗೆ ಮಾತನಾಡಲಿ, ಏನು ಬೇಕಾದರೂ ಮಾತನಾಡಲಿ ಅವರಿಗೆ ಸ್ತ್ರೀಶಕ್ತಿ ಸಂಘಗಳ ಬಗ್ಗೆ ಮಾತನಾಡುವುದಕ್ಕೆ ಅಧಿಕಾರವಿಲ್ಲ ಅಧ್ಯಕ್ಷರು ತಾವು ಏನು ತೀರ್ಮ ಕೊಡುತ್ತೀರೋ, ಕೊಡಬೇಕು ಇಲ್ಲದಿದ್ದರೆ, ಈ ತರಹವಾದರೆ, ಇದೊಂದು ಅಪಾಯಕಾರಿ ಬೆಳವಣಿಗೆ ಇದೇನಿದು?

ಶ್ರೀ ಕೆ ಶ್ರೀನಿವಾಸಗೌಡ – ವಾಟಾಳ್ ನಾಗರಾಜ್‌ರವರು ಹೇಳುವುದು ನೋಡಿದರೆ, ಕನಿಷ್ಠ ಚಪಲಕ್ಕಾದರೂ ಅದನ್ನು ಹೇಳೋಣವೆಂದರೆ, ನೀವು ಅದನ್ನೂ ಬೇಡವೆಂದರೆ ಹೇಗೆ?

ಶ್ರೀ ಜೆ ಸಿ ಮಾಧುಸ್ವಾಮಿ – Major portion ಅಂಗನವಾಡಿ ಕಾರ್ಯಕರ್ತರಿಗೆ ಹೋಯಿತು ಅನಂತರ, Women and Children Welfare ಗೆ ಬಂತು ಈಗ ಸ್ತ್ರೀಶಕ್ತಿಗಳದ್ದು ಇದೆ He has a right to ask ನೀವು ಏನು ರೂಲಿಂಗ್ ಕೊಡುತ್ತೀರೋ, ಕೊಡಬೇಕು

ಉಪಾಧ್ಯಕ್ಷರು – ಮಾಧುಸ್ವಾಮಿಯವರೆ, ಅವರು ಅನುಭವದ ಮೇಲೆ ಮಾತನಾಡುತ್ತಿದ್ದಾರೆ ಅವರಿಗೆ ಯಾವುದೋ ಒಂದು ಅನುಭವವಿದೆ ಅವರನ್ನು ಏಕೆ ಅಡ್ಡಿಪಡಿಸುತ್ತೀರಿ?

ಶ್ರೀ ಹೆಚ್ ಎಸ್ ಮಹದೇವ ಪ್ರಸಾದ್ – ಸನ್ಮಾನ್ಯ ವಾಟಾಳ್ ನಾಗರಾಜ್‌ರವರಿಗೆ ಸ್ತ್ರೀಶಕ್ತಿ ಬಗ್ಗೆ ಅವರೊಬ್ಬರನ್ನು ಬಿಟ್ಟು ಇನ್ನು ಯಾರೇ ಮಾತನಾಡಿದರೂ ಅವರಿಗೆ ಹಿಡಿಸುವುದಿಲ್ಲ ಹಾಗಾಗಿ, ಅವರೊಬ್ಬರೇ ಅದರ ಬಗ್ಗೆ ಮಾತನಾಡಬೇಕು ಮೊನ್ನೆ ನಮ್ಮ ಚಾಮರಾಜನಗರದಲ್ಲಿ ಅದರ ಬಗ್ಗೆ ನಮಗ್ಯಾರಿಗೂ ಮಾತನಾಡುವುದಕ್ಕೆ ಅವಕಾಶ ಕೊಡದೇ

ಶ್ರೀ ವಾಟಾಳ್ ನಾಗರಾಜ್ – ಪ್ರಸಾದ್, ಇವರಿಗೆ ಅಧಿಕಾರವಿಲ್ಲ, ನೀವು, ಯಾರು ಬೇಕಾದರೂ ಮಾತನಾಡಿ ಈ ಸದನದಲ್ಲಿ ಶ್ರೀರಾಮರೆಡ್ಡಿಯವರಿಗೆ ಖಂಡಿತವಾಗಿಯೂ ಅಧಿಕಾರವಿಲ್ಲ, ಕಷ್ಟ

ಶ್ರೀ ಬಿ ಕೆ ಗೋಪಾಲಕೃಷ್ಣ ಬೇಳೂರು – ಅವರ್ಯಾರಿಗೂ ಬೇಡ ಮಾತನಾಡುವುದಕ್ಕೆ ನಮಗಾದರೂ ಅವಕಾಶ ಕೊಡಿ ಸ್ವಾಮಿ ಅವರು ಮೊದಲಿನಿಂದಲೂ, ಒಂದು ವರ್ಷದಿಂದಲೂ ಮಾತನಾಡಿ, ಸಾಕಾಗಿ ಹೋಗಿದೆ ನಮಗೂ ಮಾತನಾಡುವುದಕ್ಕೆ ಒಂದು ಸ್ವಲ್ಪ ಅವಕಾಶ ಮಾಡಿಕೊಡಿ

ಶ್ರೀ ಜಿ ಎ ಶ್ರೀರಾಮರೆಡ್ಡಿ – ಮಹಿಳೆಯರ ಪರವಾಗಿ ಮಾತನಾಡುವುದಕ್ಕೆ ಇವರಿಗೆ attorney ಕೊಟ್ಟುಬಿಟ್ಟಿದ್ದೇನೆಂದು ನೀವು ತೀರ್ಮ ಕೊಡುವುದಾದರೆ, ನನ್ನದೇನೂ ಅಭ್ಯಂತರವೇನೂ ಇಲ್ಲ, ತೀರ್ಮ ಕೊಡಿ ಇರಲಿ ಹಾಗಾಗಿ, ಅವರಿಗೆ ಬ್ಯಾಂಕುಗಳಲ್ಲಿ ಲೋನ್ ಕೊಡುತ್ತಿಲ್ಲ ಸ್ತ್ರೀಶಕ್ತಿ ಒಕ್ಕೂಟಗಳಿಗೆ ಹೆಚ್ಚು ಅಧಿಕಾರ ಕೊಡಬೇಕು ಲೋನ್ ಕೊಡುವುದಕ್ಕೆ ಎಲ್ಲಾ ಬ್ಯಾಂಕುಗಳಿಗೂ ಕಡ್ಡಾಯವಾಗಿ ನಿರ್ದೇಶನ ಕೊಡಬೇಕು ಏಕೆಂದರೆ, ಒಂದೊಂದು ತಾಲ್ಲೂಕಿನಲ್ಲಿ 100 ರಿಂದ 150 ಸೊಸೈಟಿಗಳಿದ್ದು, ಶೇಕಡ 4ರ ಬಡ್ಡಿದರದಲ್ಲಿ ಕೊಡುತ್ತಿದ್ದೀರಿ ಆದರೆ, ಅದು ಪ್ರಯೋಜನವಾಗುವುದಿಲ್ಲ ಹಾಗಾಗಿ, ನೀವು ನಿಜವಾಗಿಯೂ Gender Budget ಮಂಡಿಸಿರುವುದು ಸಾರ್ಥಕವಾಗಬೇಕೆಂದರೆ, ಈ ವಲಯದಲ್ಲಿ ಕೆಲಸ ಮಾಡಬೇಕು ಮತ್ತು ನೀವು ಶಾಸಕರಿಗೆ ಕೊಟ್ಟಿರುವ ಗ್ರಾಂಟ್ ಅನ್ನು ಹೆಚ್ಚು ಮಾಡಬೇಕು ಹಾಗೂ ಬಯಲು ಸೀಮೆ ಪ್ರದೇಶಾಭಿವೃದ್ಧಿ ಮಂಡಳಿಗೆ 20 ಕೋಟಿ ಕೊಟ್ಟಿದ್ದೀರಿ ಯಡಿಯೂರಪ್ಪನವರೆ, ಈ ಮಂಡಳಿ ವ್ಯಾಪ್ತಿಗೆ 74 ತಾಲ್ಲೂಕುಗಳು

ಬರುತ್ತವೆ ಎಷ್ಟಾಗುತ್ತದೆಂಬುದನ್ನು ಲೆಕ್ಕ ಹಾಕಿ ಹೇಳಿ ನಿಮ್ಮ ತಾಲ್ಲೂಕು ಸೇರಿ 74 ತಾಲ್ಲೂಕುಗಳಿಗೆ 20 ಕೋಟಿ Hyderabad-Karnataka Development Board ವ್ಯಾಪ್ತಿಗೆ ಎಷ್ಟು ಜಿಲ್ಲೆಗಳು ಬರುತ್ತವೆ? ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ ವ್ಯಾಪ್ತಿಗೆ ಎಷ್ಟು ಜಿಲ್ಲೆಗಳು ಬರುತ್ತವೆ? ಅದಕ್ಕೆ ಎಷ್ಟು ಕೊಡುತ್ತೀರಿ? ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿ ವ್ಯಾಪ್ತಿಗೆ 74 ತಾಲ್ಲೂಕುಗಳು ಬರುತ್ತವೆ ನಾವು ಏನು ಪಾಪ ಮಾಡಿದ್ದೇವೆ? 74 ತಾಲ್ಲೂಕುಗಳು ಬರತಕ್ಕಂಥ ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿಗೆ 20 ಕೋಟಿ ಕೊಡುತ್ತೀರಲ್ಲ, 74 ತಾಲ್ಲೂಕುಗಳವರಾದ ನಾವು ಏನು ಪಾಪ ಮಾಡಿದ್ದೇವೆ? ನೀವು ಜಾಸ್ತಿ ಕೊಟ್ಟಿದ್ದೀರಿ ಹಿಂದೆ 7 ಕೋಟಿ ಇತ್ತು, ಈಗ 20 ಕೋಟಿ ಮಾಡಿದ್ದೀರಿ ಇದಕ್ಕಾಗಿ ತಮಗೆ ಅಭಿನಂದನೆ ಸಲ್ಲಿಸುತ್ತೇವೆ ಆದರೆ, ಅದು ಸಾಕಾಗುವುದಿಲ್ಲ ನಮಗೆ ಇನ್ನೂ ಹೆಚ್ಚು ಕೊಡಬೇಕು ಒಂದೊಂದು ತಾಲ್ಲೂಕಿಗೆ, ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿಗೆ ಕನಿಷ್ಠವೆಂದರೂ 50 ಲಕ್ಷ ರೂಪಾಯಿಗಳನ್ನಾದರೂ ನೀವು ನಿಗದಿ ಮಾಡಿಕೊಳ್ಳಬೇಕು 50 ಲಕ್ಷ ಕೊಟ್ಟರೆ, 35 ಕೋಟಿ ಆಗುತ್ತದೆ ದಯವಿಟ್ಟು ನಮಗೆ ಅಷ್ಟನ್ನು ಕೊಡಲೇಬೇಕು ಈ ಮಂಡಳಿ ವ್ಯಾಪ್ತಿಗೆ 74 ತಾಲ್ಲೂಕುಗಳು ಬರುತ್ತವೆ ಒಂದೊಂದು ತಾಲ್ಲೂಕಿಗೆ 50 ಲಕ್ಷ ನಾವು ಜಾಸ್ತಿ ಕೇಳುತ್ತಿಲ್ಲ ಅಷ್ಟನ್ನಾದರೂ ಕೊಡಬೇಕೆಂದು ವಿನಂತಿಸುತ್ತಾ, ಇಷ್ಟು ಹೊತ್ತು ನನಗೆ ಮಾತನಾಡಲು ಅವಕಾಶ ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ